College with Potential for Excellence

Education to Excel

SBRR MAHAJANA FIRST GRADE COLLEGE (Autonomous)

Jayalakshmipuram, Mysore - 12

2022 - 23

MAHAJANA IN THE EYES OF THE PRESS.....

16

SIXTEENTH VOLUME


THE HINDU

Wednesday, December 21, 2022

SBRR Mahajana FGC clinches overall title


ಮೈಸೂರು ಮಿತ್ರ

ಗುರುವಾರ 27 ಏಪ್ರಿಲ್ 2023


ಕನ್ನಡಪ್ರಭ

ಶನಿವಾರ 21.1.2023

ಪ್ರಜಾವಾಣಿ

ಗುರುವಾರ, ಜೂನ್ 29, 2023

ಮಾನವೀಯ ಮೌಲ್ಯದಿಂದ ಸಮಾಜ ಸುಧಾರಣೆ

ವಿಜಯವಾಣಿ

ಕನ್ನಡಿಗರ ಧ್ವನಿ

ಸೋಮವಾರ 14 ನವೆಂಬರ್ 2022

ಸಂಶೋಧನೆಗಳಿಂದ ದೂರ ಉಳಿದ ವಿವಿಗಳು


ಆರೋಹಣ

ದಿನಪತ್ರಿಕೆ

ಶನಿವಾರ, 21 ಜನವರಿ 2023

ರಾಷ್ಟ್ರಮಟ್ಟದ ವಿಚಾರಸಂಕಿರಣ ಉದ್ಘಾಟನೆ

ವಿಜಯ ಕರ್ನಾಟಕ

ಶನಿವಾರ,21 ಜನವರಿ 2023

ಪ್ರಭುತ್ವದಿಂದ ಸ್ವಾಯತ್ತತೆ ಹತ್ತಿಕ್ಕುವ ಯತ್ನ

MAHAJANA IN THE EYES OF THE PRESS.....

MAHAJANA EDUCATION SOCIETY (R.)

ಮುನ್ನುಡಿ

ಸಾಂಸ್ಕೃತಿಕ ನಗರ ಮೈಸೂರು ವೈವಿಧ್ಯಮಯ ರತ್ನಗಳಿಂದ ಶೋಭಿಸುತ್ತಿರುವ ದೊಡ್ಡ ಕಿರೀಟ. ಆ ಕಿರೀಟದಲ್ಲಿನ ಒಂದು ಮುತ್ತು ನಮ್ಮ ಮಹಾಜನ ವಿದ್ಯಾಸಂಸ್ಥೆ. ಸಮಾಜದಲ್ಲಿ ಶೈಕ್ಷಣಿಕವಾಗಿ ಸಹಾಯ ಮಾಡಬೇಕು ಎಂಬ ಸದುದ್ದೇಶದಿಂದ ಆರಂಭಗೊಂಡ ಸಂಸ್ಥೆ ನಮ್ಮದು. SBRR ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸದಾ ತುಡಿಯುತ್ತಾ, ಕಲಿಕೆಯ ಪ್ರಕ್ರಿಯೆಯನ್ನು ನಿರಂತರವಾಗಿ ಆರೋಗ್ಯ ಹಾಗೂ ಕ್ರಿಯಾಶೀಲವಾಗಿರಿಸಲು ಪಠ್ಯದ ಜೊತೆಗೆ ಪಠ್ಯ ಪೂರಕ, ಪಠ್ಯೇತರ ಮತ್ತು ಕೌಶಲ್ಯವರ್ಧಿತ ಚಟುವಟಿಕೆಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇಂಥ ಯಾವುದೇ ಕಾರ್ಯಕ್ರಮ ಕಾಲೇಜಿನಲ್ಲಿ ನಡೆದರೂ ಮರುದಿನ ಪತ್ರಿಕೆಯಲ್ಲಿ ಅದರ ಮಾಹಿತಿ ಮತ್ತು ಛಾಯಚಿತ್ರವನ್ನು ನೋಡುವುದು ಅತ್ಯಂತ ಸಂತೋಷ ಮತ್ತು ತೃಪ್ತಿದಾಯಕವಾದುದು. ಅದಷ್ಟೇ ಅಲ್ಲ ಕಾಲೇಜಿನ ಮತ್ತು ಸಮಾಜದ ದೃಷ್ಟಿಯಿಂದ ಮಹತ್ವವಾದದ್ದೂ ಕೂಡ. ಇದರಿಂದ ಕಾಲೇಜು ಸಮಾಜದೊಂದಿಗೆ ನೇರ ಸಂಪರ್ಕ ಸಾಧಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ. ನಮ್ಮ ಸಾಧನೆಗಳನ್ನು, ಘಟನೆಗಳನ್ನು, ಕಾರ್ಯಕ್ರಮಗಳನ್ನು, ಸಮಾಜದೊಂದಿಗೆ ಹಂಚಿಕೊಳ್ಳಲು ನಮಗೆ ಹೆಮ್ಮೆ ಎನಿಸುತ್ತದೆ. ಅಧ್ಯಾಪಕರ, ಅಧ್ಯಾಪಕೇತರರ, ವಿದ್ಯಾರ್ಥಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಂಸ್ಕೃತಿಕೇತರ ಸಾಧನೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ.

ಈ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಡಿಜಿಟಲ್ ರೂಪದಲ್ಲಿ ಸಂಕಲಿಸಿ ಅದನ್ನು ಪುಸ್ತಕ ರೂಪದಲ್ಲಿ ತಂದು ದಾಖಲಿಸಿ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಎಂಬ ಶೀರ್ಷಿಕೆಯೊಂದಿಗೆ ಕೃತಿ ರೂಪ ತಾಳಿದೆ. ಈ ಕೃತಿ ನಮ್ಮ ಕಾಲೇಜಿನ ಇತಿಹಾಸದ ಮೈಲಿಗಲ್ಲು. ಮುಂದಿನವರಿಗೆ ಮಾಹಿತಿಯ ಮೂಲವೂ ಆಗಿದೆ. ಪ್ರತಿದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಗಳನ್ನು ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ನಮ್ಮ ಗ್ರಂಥಾಲಯ ವಿಭಾಗ ಅತ್ಯಂತ ಬದ್ಧತೆಯಿಂದ ನಿರ್ವಹಿಸಿಕೊಂಡು ಬರುತ್ತಿದೆ.

ಮುಖ್ಯ ಗ್ರಂಥಪಾಲಕಿಯಾದ ಶ್ರೀಮತಿ ವೀಣಾ ಎಂ ಅವರಿಂದ ಗ್ರಂಥಾಲಯಕ್ಕೆ ಹೊಸ ಚೈತನ್ಯ ಬಂದಿದೆ. ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಗ್ರಂಥಾಲಯದೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಲೈಬ್ರರಿ ಕೇವಲ ಪುಸ್ತಕ ಸಂಗ್ರಹಿಸುವ ಕೇಂದ್ರವಾಗಿಲ್ಲ. ಸರಸ್ವತಿಯ ಮಂದಿರವಾಗಿದೆ. ಈ ಮಂದಿರಕ್ಕೆ ಗೌರವ ತರುವ ರೀತಿಯಲ್ಲಿ ಶ್ರೀ ಮಹೇಶ್ ಎಂ ಮತ್ತು ಶ್ರೀಮತಿ ಪುಷ್ಪ ಎಲ್ ಅವರು ಸಂಕಲ್ಪ ಸಿದ್ಧರಾಗಿ ದುಡಿಯುತ್ತಿದ್ದಾರೆ. ಗ್ರಂಥಾಲಯ ವಿಭಾಗದ ಎಲ್ಲಾ ಸದಸ್ಯರು ಇವರೊಂದಿಗೆ ಕೈ ಜೋಡಿಸಿ ಮುನ್ನಡೆಸುತ್ತಿದ್ದಾರೆ. ಈ ದುಡಿಮೆಯ ಫಲ **'ಪತ್ರಿಕೆಯ ಕಣ್ಣುಗಳಲ್ಲಿ ಮಹಾಜನ'** ಸಂಪುಟಗಳು ಹೊರಬಂದಿವೆ. ಇವರೆಲ್ಲರಿಗೂ ವಿಶೇಷ ಅಭಿನಂದನೆಗಳು. ಈ ಕೃತಿಗಾಗಿ ಪರಿಶ್ರಮದಿಂದ ಕಾರ್ಯನಿರ್ವಹಿಸಿದ ಅಧ್ಯಾಪಕರು, ಅಧ್ಯಾಪಕೇತರರಿಗೆ ವಿಶೇಷವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಕಾಲೇಜಿನ ಇತಿಹಾಸ ಹಸಿರಾಗಿ ಉಳಿಯಬೇಕಾದರೆ ಈ ಕೆಲಸ ನಿರಂತರವಾಗಿ ಸಾಗಲೆಂದು ಆಶಿಸುತ್ತೇನೆ.

(ಡಾ. ಬಿ.ಆರ್ ಜಯಕುಮಾರಿ)

ದಿನಾಂಕ: 30–06–2023

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 22.7.2022

ಕಾರ್ಯಾಗಾರ ಕೇಂದ್ರದ ಆಂಥ್ರಪೊಲಜಿಕಲ್ ಸರ್ವೇ ಆಫ್ ಇಂಡಿಯಾದ ಜಂಟಿ ಕಾರ್ಯದರ್ಶಿ ಪ್ರೊ.ಎಂ.ಸಸಿಕುಮಾರ್ ಹೇಳಿಕೆ

ಬುಡಕಟ್ಟು ಸಮಾಜದ ಅಭಿವೃದ್ಧಿಗೆ ಪ್ರತ್ಯೇಕ ಯೋಜನೆ ಅಗತ್ಯ

• ಕನ್ನಡಪ್ರಭ ವಾರ್ತೆ ಮೈಸೂರು

ದೇಶದಲ್ಲಿನ ನೂರಾರು ಬುಡಕಟ್ಟು ಸಮುದಾಯಗಳಿಗೆ ಆಯಾ ಸಮುದಾಯ ಆಧಾರಿತ ಯೋಜನೆಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಸಮರ್ಪಕ ಅನುಷ್ಠಾನಗೊಳಿಸುವ ಅನಿವಾರ್ಯತೆ ಇದೆ ಎಂದು ಕೇಂದ್ರ ಸರ್ಕಾರದ ಆಂಥ್ರಪೊಲಜಿಕಲ್ ಸರ್ವೇ ಆಫ್ ಇಂಡಿಯಾದ ಜಂಟಿ ಕಾರ್ಯದರ್ಶಿ ಪ್ರೊ. ಎಂ.ಸಸಿಕುಮಾರ್ ಅಭಿಪ್ರಾಯಪಟ್ಟರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ನಡೆದ ಆತ್ಮನಿರ್ಭರ ಭಾರತ- ಸಾಮಾಜಿಕ ಮತ್ತು ಸಂವರ್ಧಿತ ಆರ್ಥಿಕತೆ ಮತ್ತು ಆದಿವಾಸಿಗಳ ಅಭಿವೃದ್ಧಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ದೇಶದಲ್ಲಿ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಬರುವ ಸುಮಾರು 705 ಬುಡಕಟ್ಟು ಸಮುದಾಯಗಳಿವೆ. ಆದರೂ ಅವರ ಜೀವನಕ್ರಮ, ಸಂಸ್ಕೃತಿ ಬೇರೆ ಬೇರೆಯಾಗಿರುತ್ತದೆ. ಭಾಷೆಯಲ್ಲಿಯೂ ಅವರದ್ದೇ ಆನನ್ಯತೆ ಇದೆ. ಅಲೆಮಾರಿ ಪಂಗಡಗಳು ತಮ್ಮದೇ ಆದ ಜೀವನಶೈಲಿಯನ್ನು ಹೊಂದಿವೆ. ಕೆಲವರು ತಿಂಗಳಾನುಗಟ್ಟಲೆ ನಾಗರಿಕ ಸಮುದಾಯದಿಂದ ದೂರ ಉಳಿದು, ದುರ್ಗಮ ಪ್ರದೇಶದಲ್ಲಿ ನೆಲೆಸಿ ಜೀವನ ನಡೆಸುತ್ತಾರೆ ಎಂದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ನಡೆದ ಆತ್ಮನಿರ್ಭರ ಭಾರತ- ಸಾಮಾಜಿಕ ಮತ್ತು ಸಂವರ್ಧಿತ ಆರ್ಥಿಕತೆ ಮತ್ತು ಆದಿವಾಸಿಗಳ ಅಭಿವೃದ್ಧಿ ಕಾರ್ಯಾಗಾರದಲ್ಲಿ ಪ್ರೊ.ಎಂ. ಸಸಿಕುಮಾರ್ ಮಾತನಾಡಿದರು.

ಅರಣ್ಯವಾಸಿಗಳು ಬೇಟೆಯಾಡಿ, ಕಾಡು ಉತ್ಪನ್ನ ಸಂಗ್ರಹಿಸಿ, ಮಾರಾಟ ಮಾಡಿ ಜೀವನ ಸಾಗಿಸುತ್ತಾರೆ. ಇವರ ಪ್ರಗತಿಗೆ, ಮಕ್ಕಳ ಶಿಕ್ಷಣಕ್ಕೆ ಒಂದೇ ವಿಧಾನ ಅಳವಡಿಸುವ ಬದಲಿಗೆ, ಆಯಾ ಸಮುದಾಯ ಆಧಾರಿತ ಯೋಜನೆ ಸಿದ್ಧಪಡಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಅನಿವಾರ್ಯತೆ ಇದೆ. ಬುಡಕಟ್ಟು ಜನರಿಗೆ ಅವರ ಸಂಸ್ಕೃತಿ, ಜೀವನಕ್ರಮ ಆಧಾರಿತ ಶಿಕ್ಷಣ, ಸೌಲಭ್ಯ ನೀಡಿದರೆ ಅವರ ಏಳಿಗೆ, ಸ್ವಾವಲಂಬನೆ ಸಾಧ್ಯವಾಗುತ್ತದೆ ಎಂದರು.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ರಾಜೇಶ್ ಜಿ.ಗೌಡ ಮಾತನಾಡಿ, ಬೇಟೆ, ಕಾಡು ಉತ್ಪನ್ನಗಳ ಸಂಗ್ರಹದಿಂದ ಜೀವನ ನಡೆಸುವ ಅರಣ್ಯವಾಸಿಗಳಿಗೆ ಕೃಷಿ ಭೂಮಿ ಕೊಡುವುದರಿಂದ ಪ್ರಯೋಜನವಾಗದು. ಜೇನುಕುರುಬ ಸಮುದಾಯಕ್ಕೆ ಅವರದ್ದೇ ಪ್ರತ್ಯೇಕ ಭಾಷೆಯಲ್ಲಿ ಅವರ ಜಾಗದಲ್ಲಿಯೇ ಶಿಕ್ಷಣ ಕೊಡಿಸಬೇಕು. ಅವರಿಗೆ ದೊಡ್ಡ ಬಂಗಲೆ ನೀಡಿ, ಕಾರು, ಫೋನ್ ನೀಡುವುದು ಅಭಿವೃದ್ಧಿ ಆಗುವುದಿಲ್ಲ ಎಂದರು.

ಮಹಾಜನ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುಳೀಧರ ಕಾರ್ಯಾಗಾರ ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಡಿ.ಸಿ. ನಂಜುಂಡ ಅಧ್ಯಕ್ಷತೆ ವಹಿಸಿದ್ದರು. ಬಿಳಿಗಿರಿರಂಗನ ಬೆಟ್ಟದ ಆಶೋಕ ಟ್ರಸ್ಟ್ ಆಫ್ ಎಕಾಲಾಜಿಕಲ್ ಅಂಡ್ ಎನ್ವೈರ್ನಮೆಂಟ್‌ನ ಹಿರಿಯ ಸಹ ಸಂಶೋಧಕ ಡಾ.ಸಿ. ಮಾದೇಗೌಡ, ಕಾಲೇಜಿನ ಸಿಇಒ ಪ್ರೊ.ಎಸ್.ಆರ್. ರಮೇಶ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಇದ್ದರು.

MFGE In the Eyes of the Press.....

ಅಂಕೋಲ
ದಿನ ಪತ್ರಿಕೆ

ಮಂಗಳವಾರ, 12 ಜುಲೈ 2022

'ಎನ್‌ಇಪಿ ಆಧರಿಸಿ ಡಾ.ಶ್ರೀಧರ್ ಪುಸ್ತಕ ರಚಿಸಿದ್ದಾರೆ'

'ಪ್ರಾಚೀನ ಭಾರತದ ಇತಿಹಾಸ', 'ಆಧುನಿಕ ಭಾರತದ ಇತಿಹಾಸ' ಪುಸ್ತಕಗಳ ಬಿಡುಗಡೆ



ಮೈಸೂರು: 2020ರ ರಾಷ್ಟ್ರೀಯ ಶಿಕ್ಷಣ ನೀತಿಗೆ ಸಂಬಂಧಿಸಿದ ಪಠ್ಯಕ್ರಮದ ಆಧಾರವಾಗಿ ಡಾ.ಶ್ರೀಧರ್ ಅವರು 'ಹಿಸ್ಟರಿ ಆಫ್ ಏನ್ಶಿಯಂಟ್ ಇಂಡಿಯಾ' ಮತ್ತು 'ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ' ಎಂಬ ಎರಡು ಕೃತಿಗಳನ್ನು ಉತ್ತಮ ರೀತಿಯಲ್ಲಿ ರಚಿಸಿ ಮಾಡಿದ್ದಾರೆ. ಈ ಪುಸ್ತಕಗಳನ್ನು ಇತಿಹಾಸದ ವಿದ್ಯಾರ್ಥಿಗಳು ಓದಬೇಕು ಎಂದು ಇತಿಹಾಸ ವಿಭಾಗದ ಪ್ರಾಧ್ಯಾಪಕ ಡಾ.ಕೆ.ಸದಾಶಿವ ಅವರು ತಿಳಿಸಿದರು.

ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಸಂಜೆ ನಡೆದ ಶ್ರೀಧರ್ ಅವರ 'ಪ್ರಾಚೀನ ಭಾರತದ ಇತಿಹಾಸ' ,'ಆಧುನಿಕ ಭಾರತದ ಇತಿಹಾಸ' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇತ್ತೀಚೆಗೆ ಮೈಸೂರು ವಿವಿಗೆ ನ್ಯಾಕ್ ಕಮಿಟಿ ಭೇಟಿ ನೀಡಿದಾಗ ಕಡಿಮೆ ಅಂಕಗಳನ್ನು ನೀಡಿತು. ಅದನ್ನು ಅವಲೋಕನ ಮಾಡಿದಾಗ, ಬೇರೆ ವಿವಿಯವರು ಅಲ್ಲಿ ಪ್ರತಿ ಒಂದೂವರೆ ವರ್ಷಕ್ಕೆ ಪಠ್ಯ ಪರಿಷ್ಕರಣೆ ಮಾಡುತ್ತಾರೆ. ಹಾಗಾಗಿ ಅವುಗಳು ಉತ್ತಮ ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದರು.

ಪದವಿಯ ಪಠ್ಯ 31 ವರ್ಷಗಳಿಂದ ಪರಿಷ್ಕರಣೆಯಾಗಿರಲಿಲ್ಲ. ಪ್ರತಿ ಮೂರು ವರ್ಷಕ್ಕೆ ಪಠ್ಯ ಬದಲಾಗಬೇಕು ಎಂದು ನಿಯಮವಿದೆ. ಅದನ್ನು ಅನುಕರಣೆ ಮಾಡಬೇಕು. ಪಠ್ಯ ಬದಲಾವಣೆ ಎಂಬುದು ನ್ಯಾಕ್ ಸಮಿತಿಗೆ ಪ್ರಮುಖವಾಗುತ್ತವೆ. ನಾವು ಮೈವಿವಿಯಲ್ಲಿ ಇತಿಹಾಸದ ಪಠ್ಯ ಪರಿಷ್ಕರಣೆ ಮಾಡಿದಾಗ ಪ್ರಾಧ್ಯಾಪಕರೇ ವಿರೋಧ ಮಾಡಿದರು. ನಾನು ಡೆಮೋ ನೀಡಿದಾಗ ಎಲ್ಲ ಪ್ರಾಧ್ಯಾಪಕರೂ ಒಪ್ಪಿಕೊಂಡರು. ಕಾಲಕಾಲಕ್ಕೆ ಪ್ರಾಧ್ಯಾಪಕರು ಹೊಸ ನೀತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಟಿ.ಮುರಳೀಧರ್ ಭಾಗವತ್, ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ, ಕಾರ್ಯನಿರ್ವಣಾಧಿಕಾರಿ ಡಾ.ಎಸ್.ಆರ್. ರಮೇಶ್ ಮತ್ತಿತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಮಂಗಳವಾರ 12.7.2022

ಇತಿಹಾಸದ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸಲು ಶ್ರಮಿಸಿ

ಉಪನ್ಯಾಸಕರಿಗೆ ಮೈಸೂರು ವಿವಿ ಇತಿಹಾಸ ವಿಭಾಗದ ಅಧ್ಯಕ್ಷ ಡಾ.ಕೆ. ಸದಾಶಿವ ಸಲಹೆ | ಎರಡು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ

• ಕನ್ನಡಪ್ರಭ ವಾರ್ತೆ ಮೈಸೂರು

ಇಂದು ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸಲು ಉಪನ್ಯಾಸಕರು ಶ್ರಮ ವಹಿಸಬೇಕಾಗಿದೆ. ಇಂದಿನ ಬದಲಾದ ಯುಗದಲ್ಲಿ, ಅಧ್ಯಾಪಕರು ಸಹಕ್ರಿಯಾಶೀಲರಾಗಬೇಕು ಎಂದು ಮೈಸೂರು ವಿವಿ ಇತಿಹಾಸ ವಿಭಾಗದ ಅಧ್ಯಕ್ಷ ಡಾ. ಕೆ. ಸದಾಶಿವ ಸಲಹೆ ನೀಡಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರು ಪದವಿ ವಿದ್ಯಾರ್ಥಿಗಳಿಗಾಗಿ ಬರೆದಿರುವ ಆಂಗ್ಲ ಭಾಷೆಯ 'ಪ್ರಾಚೀನ ಭಾರತದ ಇತಿಹಾಸ' ಮತ್ತು 'ಆಧುನಿಕ ಭಾರತದ ಇತಿಹಾಸ' ಎಂಬ ಎರಡು ಪಠ್ಯ ಪುಸ್ತಕಗಳನ್ನು ಅವರು ಸೋಮವಾರ ಬಿಡುಗಡೆಗೊಳಿಸಿ ಮಾತನಾಡಿದರು.



ಮೈಸೂರಿನ ಮಹಾಜನ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರು ಪದವಿ ವಿದ್ಯಾರ್ಥಿಗಳಿಗಾಗಿ ಬರೆದಿರುವ ಆಂಗ್ಲ ಭಾಷೆಯ ಎರಡು ಪಠ್ಯಪುಸ್ತಕಗಳನ್ನು ಮೈಸೂರು ವಿವಿ ಇತಿಹಾಸ ವಿಭಾಗದ ಅಧ್ಯಕ್ಷ ಡಾ.ಕೆ. ಸದಾಶಿವ ಬಿಡುಗಡೆಗೊಳಿಸಿದರು.

ಇತಿಹಾಸ ಎಂಬುದು ನಿಂತ ನೀರಲ್ಲ, ವಿವಿಧ ಕಾಲಘಟ್ಟಗಳಲ್ಲಿ ಹಲವಾರು ಘಟನಾವಳಿಗಳನ್ನು ಜೀವಂತವಾಗಿಸುವ ಮತ್ತು ಸದಾ ಕಾಲ ಹರಿಯುವ ಸಾಗರದಂತೆ ಎಂದು ಅವರು ಹೇಳಿದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಮಾತನಾಡಿ, ಸತ್ಯ ತಿಳಿಸುವುದೇ ಇತಿಹಾಸವು ಆಳವಾದ ಸಂಶೋಧನೆಯ ಮೂಲಕ ಅನಾವರಣವಾಗಬೇಕು. ಈ ನಿಟ್ಟಿನಲ್ಲಿ ಹೊಸ ಹೊಸ ಸಂಶೋಧನೆಗಳಾಗಬೇಕು ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಶ್ರೀಧರ ಅವರು ಬರೆದಿರುವ ಪುಸ್ತಕಗಳು ರಾಷ್ಟ್ರೀಯ ಶಿಕ್ಷಣ ನೀತಿಯ ಇಂದಿನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಈ ಕಾರ್ಯ ಶ್ಲಾಘನೀಯ. ವಿದ್ಯಾರ್ಥಿಗಳು ಹೆಚ್ಚಾಗಿ ತಮ್ಮ ವಿಷಯಕ್ಕೆ ಅನುಸಾರವಾಗಿ ಪ್ರಶ್ನೆಗಳನ್ನು ಕೇಳಲು ಮುಂದಾಗಬೇಕು. ಇದರಿಂದ ಪ್ರಾಧ್ಯಾಪಕರುಗಳು ಇನ್ನೂ ಹೆಚ್ಚು ಹೆಚ್ಚು ಅರಿಯುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಪರೀಕ್ಷಾಂಗ ನಿಯಂತ್ರಣಾಧಿಕಾರಿ ಆರ್. ಮಂಜುನಾಥ್, ಎಸ್.ಜೆ. ಪುನೀತ, ಪ್ರೊ. ಮೃತ್ಯುಂಜಯ, ಡಾ.ಜೆ.ಸಿ. ರವೀಂದ್ರ, ಮಹದೇವ್, ಡಾ. ಪ್ರಕಾಶ್ ಇದ್ದರು. ಸೃಷ್ಟಿ ಆರ್. ಜೋಯಿಸ್ ಪ್ರಾರ್ಥಿಸಿದರು. ಡಾ.ಎಚ್. ಶ್ರೀಧರ ಸ್ವಾಗತಿಸಿದರು. ಎ.ಆರ್. ನಂದೀಶ್ ವಂದಿಸಿದರು. ಎಂ. ನಾಗೇಶ್ ನಿರೂಪಿಸಿದರು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಂಗಳವಾರ 12 ಜುಲೈ 2022

ಎನ್‌ಇಪಿ ಅನ್ವಯ ಪಠ್ಯ ಪುಸ್ತಕ ರಚನೆಯಿಂದ ಹೊಸ ಮನ್ವಂತರಕ್ಕೆ ನಾಂದಿ

ಮೈಸೂರು ವಿವಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸದಾಶಿವ ಅಭಿಮತ



ಮೈಸೂರು, ಜು.11(ಎಸ್‌ಪಿಎನ್)– ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020(ಎನ್‌ಇಪಿ) ಅಳವಡಿಕೆ ಫಲವಾಗಿ 31 ವರ್ಷಗಳ ನಂತರ ಮೈಸೂರು ವಿವಿ ಇತಿಹಾಸ ವಿಭಾಗವೂ ಸೇರಿದಂತೆ ಇತರೆ ಎಲ್ಲಾ ವಿಭಾಗಗಳ ಪಠ್ಯ ಬದಲಾವಣೆ ಮಾಡಲಾಗಿದ್ದು, ಇದು ಶೈಕ್ಷಣಿಕ ವಲಯದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಎಂದು ಮೈಸೂರು ವಿವಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸದಾಶಿವ ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಎವಿಸಿ–3 ಸಭಾಂಗಣದಲ್ಲಿ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಹೆಚ್.ಶ್ರೀಧರ್ ರಚಿತ 'ಪ್ರಾಚೀನ ಭಾರತದ ಇತಿಹಾಸ' ಮತ್ತು 'ಆಧುನಿಕ ಭಾರತ ಇತಿಹಾಸ' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರತಿ ವರ್ಷ ನ್ಯಾಕ್ ಕಮಿಟಿ ಬಂದಾಗ ಎಲ್ಲಾ ವಿಷಯದಲ್ಲೂ ನಮಗೆ ಉತ್ತಮ ಅಭಿಪ್ರಾಯ ಬರುತ್ತಿತ್ತು. ಆದರೆ, ಪಠ್ಯ ಬದಲಾವಣೆ ವಿಚಾರದಲ್ಲಿ ನಮಗೆ ಹಿನ್ನಡೆಯಾಗುತ್ತಿತ್ತು. ಇದರಿಂದ ಇತರೆ ಸೌಲಭ್ಯಗಳಿಗೂ ಕತ್ತರಿ ಬೀಳುತ್ತಿತ್ತು. ನ್ಯಾಕ್ ಸಮಿತಿ ಕಲಂನಲ್ಲಿ ಒಂದೂವರೆ ವರ್ಷಕ್ಕೆ ಬದಲಾವಣೆ ಮಾಡಬೇಕೆಂಬ ಯುಜಿಸಿ ಅಂಶ ಸೇರಿಸಿದೆ. ಮೊದಲು ಇದಕ್ಕೆ ಯಾರೂ ಅಷ್ಟೊಂದು ಮಹತ್ವ ನೀಡಿರಲಿಲ್ಲ ಇದೀಗ ಎನ್‌ಇಪಿ ಅಳವಡಿಸಿಕೊಂಡ ನಂತರ ಮಾನವಿಕ ವಿಭಾಗದ ಎಲ್ಲಾ ವಿಷಯಗಳಿಗೂ ಬದಲಾವಣೆ ತಂದಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ದೆಹಲಿ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಜಗತ್ತಿನ ಯಾವುದೇ ವಿವಿಗಳಲ್ಲೂ ಅವರಿಗೆ ಹೆಚ್ಚಿನ ಆದ್ಯತೆಯಿದೆ. ಏಕೆಂದರೆ ದೆಹಲಿ ವಿವಿ ಇತಿಹಾಸ ವಿಭಾಗ ಸಾಕಷ್ಟು ಸುಧಾರಣೆಗೊಂಡಿದೆ. ಒಂದು ಕಾಲಕ್ಕೆ ಮಾನವಿಕ ವಿಭಾಗದ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಿದರೆ ಕೆಲಸ ಸಿಗುವುದಿಲ್ಲ ಎಂಬ ಅಭಿಪ್ರಾಯವಿತ್ತು. ಇದೀಗ ಕ್ರಮೇಣ ಈ ಅಭಿಪ್ರಾಯ ಬದಲಾಗುತ್ತಿರುವುದು ಮೆಚ್ಚುಗೆಯ ಸಂಗತಿ ಎಂದು ತಿಳಿಸಿದರು.

ಸಹ ಪ್ರಾಧ್ಯಾಪಕ ಡಾ.ಹೆಚ್.ಶ್ರೀಧರ ರಚಿತ 'ಪ್ರಾಚೀನ ಭಾರತ ಇತಿಹಾಸ' ಮತ್ತು 'ಆಧುನಿಕ ಭಾರತ ಇತಿಹಾಸ' ಪುಸ್ತಕಗಳನ್ನು ಎನ್‌ಇಪಿ ನೀತಿಗೆ ಅನುಗುಣವಾಗಿ ರಚಿಸಿದ್ದಾರೆ. ಇದು ಪ್ರಸ್ತುತ ಆಂಗ್ಲ ಮಾಧ್ಯಮದಲ್ಲಿ ಇತಿಹಾಸ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಮೈಸೂರು ವಿವಿ ಸೇರಿದಂತೆ ರಾಜ್ಯದ ಎಲ್ಲಾ ವಿವಿಗಳಲ್ಲೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಂಡಿದೆ. ಆದರೆ, ಪಠ್ಯ ಬದಲಾವಣೆ ವಿಚಾರದಲ್ಲಿ ತಮ್ಮ ವಿವಿ ತಜ್ಞರ ನೇತೃತ್ವದಲ್ಲೇ ಸಮಿತಿ ರಚಿಸಲಾಗಿತ್ತು. ಇದನ್ನು ಸಮರ್ಥಿಸಿ ಕೇಂದ್ರ ಸಮಿತಿಗೂ ವಿವಿಯಿಂದ ಪತ್ರ ಮುಖೇನ ಸಮರ್ಥಿಸಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ಪ್ರಸ್ತುತ ದೆಹಲಿ ವಿವಿ ಇತಿಹಾಸ ವಿಭಾಗದಲ್ಲಿ 13 ಮಂದಿ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾತಿಗೆ ಅವಕಾಶವಿದೆ. ಇಲ್ಲಿಗೆ ಪ್ರವೇಶಾತಿ ಪಡೆಯಲು ಪ್ರತಿ ವರ್ಷ ಸಿಇಟಿ ಮೂಲಕ ಆಯ್ಕೆಯಾಗಲು ಪದವಿಯಲ್ಲಿ ಶೇ.99 ರಷ್ಟು ಅಂಕ ಗಳಿಸಿದರೂ ಪ್ರವೇಶಾತಿ ಸಿಗುವುದು ಕಷ್ಟದ ಸಂಗತಿ. ಹಾಗಾಗಿ ಈಗಿನ ಪಠ್ಯದಲ್ಲಿ ಸಾಧ್ಯವಾದಷ್ಟು ಎನ್‌ಸಿಇಆರ್‌ಟಿ ಮಾರ್ಗದರ್ಶನದಂತೆ ಪಠ್ಯ ಅಳವಡಿಕೆ ಸೂಕ್ತ ಎಂದರು.

ಈ ಹಿಂದೆ ವಿದ್ಯಾರ್ಥಿಗಳಿಗೆ ಗುರುಗಳು ಹೇಳಿಕೊಟ್ಟ ಪಾಠವೇ ವೇದ ವಾಕ್ಯದಂತಿತ್ತು. ಆದರೆ, ಇದೀಗ ವಿದ್ಯಾರ್ಥಿಗಳಲ್ಲಿ ಮೂಡುವ ಹೊಸ ಹೊಸ ಆಲೋಚನೆಗಳಿಂದ ಕಲಿಯುವುದು ಸಾಕಷ್ಟಿದೆ. ಉದಾಹರಣೆಗೆ ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಪುತ್ರಿ ಉಪಿಂದರ್ ಸಿಂಗ್ ದೆಹಲಿ ವಿವಿ ಇತಿಹಾಸ ವಿಭಾಗದಲ್ಲಿ ಕೆಲಸ ಮಾಡಿದ್ದು, ಅವರು ಬರೆದಿರುವ ಇತಿಹಾಸದ ಪುಸ್ತಕವೊಂದು ಜಗತ್ತಿನ ಎಲ್ಲಾ ಭಾಷೆಗೂ ಅನುವಾದವಾಗಿದೆ. ಇದು ಇತಿಹಾಸ ವಿದ್ಯಾರ್ಥಿಗಳಾದ ನಾವೆಲ್ಲ ಅಭಿಮಾನದಿಂದ ಹೇಳಿಕೊಳ್ಳುವ ಸಂಗತಿ. ಆದ್ದರಿಂದ ಇತಿಹಾಸ ವಿಭಾಗದ ಎಲ್ಲಾ ಅಧ್ಯಾಪಕರು ಇತಿಹಾಸ ವಿಷಯದಲ್ಲಿ ಹೊಸಹೊಸ ಆವಿಷ್ಕಾರವಾಗಿಸಲು ತಮ್ಮತಮ್ಮ ವ್ಯಾಪ್ತಿಯಲ್ಲಿ ಶ್ರಮಿಸುವಂತೆ ಮನವಿ ಮಾಡಿದರು.

ಈ ವೇಳೆ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳಿಧರ್ ಭಾಗವತ್, ಕಾರ್ಯದರ್ಶಿ ಟಿ.ವಿಜಯಲಕ್ಷ್ಮೀ ಮುರಳಿಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್ ಉಪಸ್ಥಿತರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಬುಧವಾರ • ಜುಲೈ 6, 2022



ಮೈಸೂರಿನ ಅಮೃತಾ ಕಲಾ ಮತ್ತು ವಾಣಿಜ್ಯ ಕಾಲೇಜು ಆಯೋಜಿಸಿದ್ದ ರಾಜ್ಯ ಮಟ್ಟದ ಅಂತರ ಕಾಲೇಜು ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಯಶಸ್ವಿನಿ, ಚಿನ್ಮಯಿ, ಕುಶಾಲ್, ಆರ್ಷಫ್, ಶಾರದಾ, ಮೇಘನಾ, ಹಿಂದೂಪ್ರಿಯಾ, ಪ್ರಭುನಾರಾಯಣ ಸಿಂಗ್, ಮಾಹ್ಯ, ಅತುಲ್ ಸಿಂಗ್ ಅವರೊಂದಿಗೆ ಪೂಜಾ ಗೌಡ, ಡಾ.ಎಚ್.ಶ್ರೀಧರ, ಡಾ.ಎಸ್.ಆರ್.ರಮೇಶ್, ಡಾ.ವಿಜಯಲಕ್ಷ್ಮಿ ಟಿ.ಮುರಳೀಧರ್, ಡಾ.ಬಿ.ಆರ್. ಜಯಕುಮಾರಿ, ಡಾ.ಬಿ.ಆರ್.ರೇಖಾ, ರಾಧಿಕಾ ರಾಣಿ ಇದ್ದಾರೆ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 20.7.2022

ಸಣ್ ಸುದ್ದಿ

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು: ಹಾಸನದ ಸಂತ ಜೋಸೆಫರ ಕಾಲೇಜು ಆಯೋಜಿಸಿದ್ದ ಎಕ್ಸ್‌ಪ್ರೋರಿಕ-2022 ರಾಜ್ಯಮಟ್ಟದ ಅಂತರ ಕಾಲೇಜು ಉತ್ಸವದಲ್ಲಿ ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಬಿ.ಕಾಂ. (ವಾಣಿಜ್ಯ) ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಉತ್ಸವದ ಹಲವು ಸ್ಪರ್ಧೆಗಳಲ್ಲಿ ವಿವಿಧ 15 ಕಾಲೇಜುಗಳ 300 ವಿದ್ಯಾರ್ಥಿಗಳು ಭಾಗವಹಿಸಿದ್ದು, ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚಿನ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಾಗೂ ಗೆಲ್ಲುವುದರ ಮೂಲಕ ಸಮಗ್ರ ಪ್ರಶಸ್ತಿ ಗಳಿಸಿದ್ದಾರೆ. ಎಸ್. ಗಾಯತ್ರಿ ಮತ್ತು ವಚನ್ ಕಡ್ಲಿ - ಅಕೌಂಟಿಂಗ್ ಆಲ್ಫಾ (ಫೈನಾನ್ಸ್) ಸ್ಪರ್ಧೆಯಲ್ಲಿ (ಪ್ರಥಮ). ಗ್ರೀಷ್ಮ ಸದಾಶಿವ್ ಮತ್ತು ಎ. ರಾಹುಲ್ ಕುಮಾರ್- ಬಿಜ್ ವಿಜರಿ (ಹ್ಯೂಮನ್ ರಿಸೋರ್ಸ್) ಸ್ಪರ್ಧೆಯಲ್ಲಿ (ಪ್ರಥಮ). ಲಲಿತ್ ಲಾಲೆ ಮತ್ತು ಎಸ್. ಸಿಂಚನ ತಿಂಕ್ ಟ್ಯಾಂಕ್ (ಮಾರ್ಕೆಟಿಂಗ್) ಸ್ಪರ್ಧೆಯಲ್ಲಿ (ದ್ವಿತೀಯ). ಕುಶಾಲ್‌ಗೌಡ ಮತ್ತು ಶಾರದ, ವಿಜ್‌ಕಿಡ್ (ಬೆಸ್ಟ್ ಆನ್‌ಟ್ರಪ್ರಿನರ್) ಸ್ಪರ್ಧೆಯಲ್ಲಿ (ದ್ವಿತೀಯ). ಋತ್ವಿಕ್- ಲೆನ್ಸ್‌ಸೆಷನ್ (ಫೋಟೋಗ್ರಾಫಿ) ಸ್ಪರ್ಧೆಯಲ್ಲಿ (ಪ್ರಥಮ) ಗಳಿಸಿದ್ದಾರೆ. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವೈ.ಎಂ. ಪೂಜಗೌಡ, ಪ್ರಾಂಶುಪಾಲೆ ಡಾ. ಜಯಕುಮಾರಿ, ಕ್ಯಾಪ್ಟನ್ ನಿಖಿಲ್, ಸಹಾಯಕ ಪ್ರಾಧ್ಯಾಪಕಿ ಎಂ.ಎಸ್. ಸಂಚಿತ ವಿಜೇತರನ್ನು ಅಭಿನಂದಿಸಿದ್ದಾರೆ.

MFGE In the Eyes of the Press.....

ವಿಜಯ ಕರ್ನಾಟಕ

ಶನಿವಾರ,2 ಜುಲೈ 2022

ಸಂಘರ್ಷದಲ್ಲಿ ವೈಚಾರಿಕತೆ ಇರಬೇಕು

ಮೈಸೂರು: ಸಂಘರ್ಷದಲ್ಲಿ ವೈಚಾರಿಕತೆ ಇರಬೇಕು ಎಂದು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಅಭಿಪ್ರಾಯಪಟ್ಟರು.



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಹಾಗೂ ರಾಜ್ಯ ಆನಿಕೇತನ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಕುವೆಂಪು ಅವರ ವಿಶ್ವ ಮಾನವ ಸಂದೇಶ ಪ್ರಚಾರದ ಪ್ರಯುಕ್ತ ಕಾಲೇಜಿನ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣ, ಕವಿ ಗೋಷ್ಠಿ ಹಾಗೂ ರಾಜ್ಯ ಆನಿಕೇತನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಘರ್ಷಕ್ಕೂ ಒಂದು ಪ್ರಬುದ್ಧವಾದ ವಿಧಾನವಿರಬೇಕು. ವೈಚಾರಿಕ ಭಿನ್ನಾಭಿಪ್ರಾಯವಿದ್ದರೂ ಆಲಿಸುವ ಸೌಜನ್ಯವಿರಬೇಕು ಎಂದು ಸಲಹೆ ನೀಡಿದರು.

ಸಂವಾದದಲ್ಲಿ ಮತ್ತೊಬ್ಬರ ಮಾತನ್ನು ಆಲಿಸುವ ಮತ್ತು ಪ್ರತಿಕ್ರಿಯಿಸುವ ರೀತಿಯಲ್ಲಿ ಗೌರವವಿರಬೇಕು. ಮನುಷ್ಯ ಸುಸಂಸ್ಕೃತರಾದರೆ ಯಾವುದನ್ನು ಮತ್ತೊಬ್ಬರ ಮೇಲೆ ಹೇರುವ ಅಗತ್ಯವಿರುವುದಿಲ್ಲ. ಹೇಳುವುದನ್ನು ತಣ್ಣನೆಯ ಧ್ವನಿಯ ಮೂಲಕ ಹೇಳಬಹುದು. ಇದಕ್ಕೆ ಸಂಯಮ ಮುಖ್ಯ. ಸಂಘರ್ಷ ಎಂಬುದು ಸಾಕಷ್ಟು ನಕಾರಾತ್ಮಕ ಅಂಶಗಳ ಹುಟ್ಟಿಗೂ ಕಾರಣವಾಗುತ್ತದೆ ಎಂದರು.

ವಿಮರ್ಶಕ ಪ್ರೊ.ಬೋರಲಿಂಗಯ್ಯ ಮಾತನಾಡಿ, ಕೆಲವು ಪ್ರಸಿದ್ಧ ಸಾಹಿತಿಗಳು ಬರೆದಂತೆ ಬದುಕಲು ಸಾಧ್ಯವಾಗಲಿಲ್ಲ. ಆದರೆ, ಕುವೆಂಪು ನುಡಿದಂತೆ ನಡೆದವರ ಸಾಲಿಗೆ ಸೇರುತ್ತಾರೆ. ಪಠ್ಯದಲ್ಲಿ ಕುವೆಂಪು ಸೇರಿದಂತೆ ಮಹನೀಯರಿಗೆ ಆಗಿರುವ ಅಪಮಾನ ಸರಿಯಲ್ಲ ಎಂದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಹಾಯಕ ಪ್ರಾಧ್ಯಾಪಕಿ ಡಾ.ನಾಗರತ್ನಮ್ಮ, ಎಂ. ಶೆಲ್ವಿಬಾಲಕೃಷ್ಣನ್, ಚಿಂತಕ ಪ್ರೊ.ವಿ.ಗಂಗಾ ರಾಂಚಂಡಾಳ, ಉಪನ್ಯಾಸಕರಾದ ಎನ್.ವನಿತಾ, ಸಿದ್ದರಾಮ ಹೊನ್ಕಲ್, ಡಾ.ಮುನಿರತ್ನ, ಉಮನಾಬಾದ್ ಸಹಾಯಕ ಜೈಲರ್ ಡಿ. ಬಸವರಾಜ ದಯಾಸಾಗರ್, ಅಂತಾರಾಷ್ಟ್ರೀಯ ಕ್ರೀಡಾಪಟು ಬಸವರಾಜ ನಂದಪ್ಪ, ಸಾಹಿತಿಗಳಾದ ಗುಬ್ಬಗೂಡು ರಮೇಶ್, ಸುನಿತಾ, ಎನ್.ಕೆ. ಇಬ್ಬನಿ ನಡಂಪಲ್ಲಿ, ಪತ್ರಕರ್ತ ಡಿ.ಎನ್. ಕೃಷ್ಣಮೂರ್ತಿ, ರಂಗಭೂಮಿ ಕಲಾವಿದ ಎಚ್.ಕೆ. ಕುಳ್ಳೇಗೌಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಆನಿಕೇತನ ಸಾಂಸ್ಕೃತಿಕ ವೇದಿಕೆ ರಾಜ್ಯಾಧ್ಯಕ್ಷ ಕೆ. ಮುನಿಕೃಷ್ಣಪ್ಪ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷೆ ಹೇಮಗಂಗಾ ಇದ್ದರು.

MFGE In the Eyes of the Press.....

ಆಂದೋಲನ
ದಿನಪತ್ರಿಕೆ

ಮಂಗಳವಾರ, 26 ಜುಲೈ 2022

ಮಹಾಜನ ಕಾಲೇಜಿನಲ್ಲಿ ಪೆಮಾಕೊ ಅಂತರ ತರಗತಿ ಸ್ಪರ್ಧೆ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ, ಭೌತಶಾಸ್ತ್ರ, ಗಣಕ ವಿಜ್ಞಾನ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ಪೆಮಾಕೊ-2022' ಅಂತರ ತರಗತಿ ಸ್ಪರ್ಧೆಗಳನ್ನು ನಡೆಸಲಾಯಿತು.

ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಬೆಂಗಳೂರು ಇನ್ಫೋಸಿಸ್ ಘಟಕದ ಸಿಸ್ಟಮ್ ಇಂಜಿನಿಯರ್ ಜಿ.ಎಂ. ಮಹೇಂದ್ರ, ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಪ್ರಜ್ವಲಿಸಬೇಕಾದರೆ ಇಂದು ಸಹನೆಯಿಂದ, ಆಸಕ್ತಿಯಿಂದ ಓದಿನೆಡೆಗೆ ಗಮನ ಕೊಡಬೇಕು. ಕಾಲೇಜಿನ ನಿಯಮಗಳನ್ನು ಅನುಸರಿಸುವುದರ ಜೊತೆಗೆ ಪಠ್ಯಪೂರಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೌಶಲಗಳನ್ನು ವೃದ್ಧಿಸಿಕೊಳ್ಳಬೇಕು. ಇದು ಮುಂದೆ ಜೀವನಕ್ಕೆ ಕೈಗನ್ನಡಿ ಇದ್ದಂತೆ. ಸಮಯವನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು ವಿದ್ಯಾಭ್ಯಾಸದೆಡೆಗೆ ಹೆಚ್ಚಿನ ಗಮನ ಹರಿಸಿ ಎಂದು ಹೇಳಿದರು.



ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾಲೇಜಿನ ಶೈಕ್ಷಣಿಕ ಸಲಹೆಗಾರರೂ ಆದ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಡಾ.ಎಚ್.ಶ್ರೀಧರ, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಆರ್.ಮಂಜುನಾಥ್, ಗಣಕಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಸುಮತಿ, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರುತಿ ಪೂಣಚ್ಚ, ಮನೋಜ್ಞ ಭಾಗವಹಿಸಿದ್ದರು. ಸಂದೀಪ್‌ಕುಮಾರ್ ಪ್ರಾರ್ಥಿಸಿದರು, ನಿಲಿಮ್ ಕಾವೇರಮ್ಮ ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕಿ ಎಂ.ಕೆ.ಚಂದನ ಮುಂತಾದವರು ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 11 ಜುಲೈ 2022



ಮೈಸೂರಿನ ಮಹಾಜನ ವಿದ್ಯಾಸಂಸ್ಥೆಯಲ್ಲಿ ನೌಕರರಾಗಿ 50 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಡಿ.ಆರ್.ನಾಗರಾಜ್ ಅವರನ್ನು ಸಂಸ್ಥೆಯ ಪರವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಮುರಳೀಧರ್ ಭಾಗವತ್, ಪ್ರಾಂಶುಪಾಲರಾದ ಜಯಕುಮಾರಿ, ಉಪನ್ಯಾಸಕ ತಿಮ್ಮೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 26.7.2022

ಪೆಮಾಕೊ-2022 ಅಂತರ ತರಗತಿ ಸ್ಪರ್ಧೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗಣಿತಶಾಸ್ತ್ರ ಭೌತಶಾಸ್ತ್ರ, ಗಣಕ ವಿಜ್ಞಾನ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಪೆಮಾಕೊ-2022 ಅಂತರ ತರಗತಿ ಸ್ಪರ್ಧೆಯನ್ನು ಬೆಂಗಳೂರಿನ ಇಂಫೋಸಿಸ್ ಫೌಂಡೇಶನ್ ಸಿಸ್ಟಮ್ ಎಂಜಿನಿಯರ್ ಜಿ.ಎಂ. ಮಹೇಂದ್ರ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ, ನಾನು ಸಹ ಮಹಾಜನ ಕಾಲೇಜಿನ ಹಳೆಯ ವಿದ್ಯಾರ್ಥಿ. ನನ್ನ ಕಲಿಕೆಗೆ, ಕೌಶಲ್ಯಕ್ಕೆ ಕಾಲೇಜು ಬಹಳಷ್ಟು ಕೊಡುಗೆ ನೀಡಿದೆ. ಇದರ ಫಲವಾಗಿ ನಾನು ಇಂದು ಉನ್ನತ ಹುದ್ದೆಯಲ್ಲಿದ್ದೇನೆ. ನಿಮ್ಮ ಮುಂದಿನ ಭವಿಷ್ಯ ಪ್ರಜ್ವಲಿಸಬೇಕಾದರೆ ಇಂದು ಸಹನೆಯಿಂದ, ಆಸಕ್ತಿಯಿಂದ ಓದಿನೆಡೆಗೆ ಗಮನಕೊಡಬೇಕು. ಕಾಲೇಜಿನ ನಿಯಮಗಳನ್ನು ಅನುಸರಿಸುವುದರ ಜೊತೆಗೆ ಪಠ್ಯಪೂರಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಬೇಕು. ಇದು ಮುಂದೆ ನಿಮ್ಮ ಜೀವನಕ್ಕೆ ಕೈಗನ್ನಡಿ ಇದ್ದಂತೆ. ಸಮಯವನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಂಡು ವಿದ್ಯಾಭ್ಯಾಸದೆಡೆಗೆ ಹೆಚ್ಚಿನ ಗಮನ ಹರಿಸಿ ಎಂದು ಎಲ್ಲರಿಗೂ ಶುಭ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್.ಜಯ ಕುಮಾರಿ ಮಾತನಾಡಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ, ತರಗತಿಯ ಮಟ್ಟದಲ್ಲಿ ಈ ರೀತಿ ಸ್ಪರ್ಧೆಗಳನ್ನು ಆಯೋಜಿಸುವುದು ವಿದ್ಯಾರ್ಥಿಗಳನ್ನು ಪೂರ್ಣವಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದ್ದು, ಪ್ರತಿಭಾನ್ವಿತರನ್ನು ಗುರುತಿಸಲು ಹಾಗೂ ಉತ್ತೇಜಿಸಲು ಸಾಧ್ಯವಾಗುತ್ತದೆ ಎಂದರು.

ಕಾಲೇಜಿನ ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್ ಅವರು ವಿಜ್ಞಾನ ವಿಷಯಗಳಲ್ಲಿ ಇರುವ ಅವಕಾಶಗಳನ್ನು ತಿಳಿಸಿಕೊಟ್ಟರು ಹಾಗೂ ವಿದ್ಯಾರ್ಥಿಗಳು ಓದಿನ ಜೊತೆಗೆ ಶಿಸ್ತಿನ ಗುಣಗಳನ್ನು ಮೈಗೂಡಿಸಿಕೊಂಡು ದೇಶಕ್ಕೆ ಆಸ್ತಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಆರ್. ಮಂಜುನಾಥ್, ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಸುಮತಿ, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥೆ ಶ್ರುತಿ ಪೂಣಚ್ಚ ಇದ್ದರು.

ಮನೋಜ್ಞ ಮತ್ತು ಸಂದೀಪ್‌ಕುಮಾರ್ ಪ್ರಾರ್ಥಿಸಿದರು. ನಿಲಿಮ್ ಕಾವೇರಮ್ಮ ಸ್ವಾಗತಿಸಿದರು. ಸಂಯೋಜಕಿ ಎಂ.ಕೆ. ಚಂದನ, ಅಧ್ಯಾಪಕ, ಅಧ್ಯಾಪಕೇತರ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಪೆಮಾಕೊ-2022 ಅಂತರ ತರಗತಿ ಸ್ಪರ್ಧೆಯನ್ನು ಬೆಂಗಳೂರಿನ ಇಂಫೋಸಿಸ್ ಫೌಂಡೇಶನ್ ಸಿಸ್ಟಮ್ ಎಂಜಿನಿಯರ್ ಜಿ.ಎಂ. ಮಹೇಂದ್ರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಲವರಿದ್ದರು.

MFGE In the Eyes of the Press.....

ಪ್ರಜಾವಾಣಿ
ಆತ್ಮಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಜುಲೈ 28, 2022



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಆಯೋಜಿಸಿದ್ದ ಅಂತರ ತರಗತಿ ಸ್ಪರ್ಧೆಗಳನ್ನು ಗಣ್ಯರು ಉದ್ಘಾಟಿಸಿದರು

ಕೌಶಲ ವೃದ್ಧಿ: ವಿದ್ಯಾರ್ಥಿಗಳಿಗೆ ಕಿವಿಮಾತು

ಮೈಸೂರು: 'ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕೌಶಲಗಳನ್ನೂ ವೃದ್ಧಿಸಿಕೊಳ್ಳಬೇಕು' ಎಂದು ಬೆಂಗಳೂರು ಇನ್ಫೊಸಿಸ್‌ನ ಸಿಸ್ಟಂ ಎಂಜಿನಿಯರ್ ಮಹೇಂದ್ರ ಜಿ.ಎಂ. ಸಲಹೆ ನೀಡಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ನಡೆದ 'ಪೆಮಾಕೊ-2020 ಅಂತರ ತರಗತಿ ಸ್ಪರ್ಧೆ' ಉದ್ಘಾಟಿಸಿದ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಭವಿಷ್ಯ ಉಜ್ವಲಗೊಳಿಸಿಕೊಳ್ಳುವುದಕ್ಕಾಗಿ ಓದಿನೆಡೆಗೆ ಗಮನ ಕೊಡಬೇಕು. ಸಮಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು' ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಆರ್. ಜಯಕುಮಾರಿ 'ವಿದ್ಯಾರ್ಥಿಗಳು ನಾಯಕತ್ವ ಬೆಳೆಸಿಕೊಳ್ಳಬೇಕು' ಎಂದರು.

ಕಾಲೇಜಿನ ಶೈಕ್ಷಣಿಕ ಸಲಹೆಗಾರ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ಶೈಕ್ಷಣಿಕ ಡೀನ್ ಡಾ.ಶ್ರೀಧರ ಎಚ್., ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಆರ್. ಮಂಜುನಾಥ್, ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಸುಮತಿ, ಶ್ರುತಿ ಪೂಣಚ್ಚ ಇದ್ದರು.

ಮನೋಜ್ಞ, ಸಂದೀಪ್‌ಕುಮಾರ್ ಪ್ರಾರ್ಥಿಸಿದರು. ನಿಲಿಮ್ ಕಾವೇರಮ್ಮ ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕಿ ಚಂದನ ಎಂ.ಕೆ. ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, 2 ಜುಲೈ 2022



ಮಹಾಜನ ಕಾಲೇಜು ಪ್ರಾಧ್ಯಾಪಕ ಪ್ರಕಾಶ್ ಅವರಿಗೆ ಬೀಳ್ಕೊಡುಗೆ

ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಲ್ಲಿ 31 ವರ್ಷಗಳ ಕಾಲ ಸೇವೆ ಸಲ್ಲಿಸಿದ ಸಹಾಯಕ ಪ್ರಾಧ್ಯಾಪಕ ಪ್ರಕಾಶ್ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಮಹಾಜನ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾರ್ಯನಿರ್ವಾಹಣಾಧಿಕಾರಿಗಳಾದ ಡಾ.ಎಸ್.ಆರ್.ರಮೇಶ್, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಜಯಲಕ್ಷ್ಮಿ ಟಿ.ಮುರಳೀಧರ್, ಮಹಾಜನ ಸ್ನಾತಕೋತ್ತರ ನಿರ್ದೇಶಕರಾದ ಡಾ.ಸಿ.ಕೆ. ರೇಣುಕಾರ್ಯ, ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷರಾದ ಎ. ಹೇಮಗಂಗಾ, ಡಾ.ನೋದಮ್ಮ, ಡಾ.ಎಚ್. ಆರ್.ತಿಮ್ಮೇಗೌಡ ಚಿತ್ರದಲ್ಲಿದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 7 ಜುಲೈ 2022



ಮಹಾಜನ ವಿದ್ಯಾಸಂಸ್ಥೆಯ ಹಿಂದಿನ ಅಧ್ಯಕ್ಷರಾಗಿದ್ದ ಆರ್.ವಾಸುದೇವಮೂರ್ತಿ ಅವರಿಗೆ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ವೇಳೆ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಕಾಲೇಜಿನ ಡೀನ್ ಡಾ.ಶ್ರೀಧರ, ಹಿರಿಯ ಅಧ್ಯಾಪಕರಾದ ಡಾ.ಎಚ್.ಆರ್.ತಿಮ್ಮೇಗೌಡ, ಡಾ.ದೊಡ್ಡ ರಸಯ್ಯ, ಡಾ.ವಿನೋದಮ್ಮ, ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ, ಗ್ರಂಥಾಲಯ ವಿಭಾಗದ ವೀಣಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

STAR OF MYSORE

Monday 4th July 2022

Overall Champions of State-level Multi Fest 'Sathgamaya-2022'



The students of SBRR Mahajana First Grade College, who won the Overall Championship at State-level Multi Fest 'Sathgamaya-2022,' receiving the trophy from renowned musician and theatre artiste Vasuki Vaibhav, who was the chief guest for the valedictory. Amrita Mysuru Director Br. Anantananda Chaithanya and Correspondent Br. Muktidamrta Chaithanya are also seen.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಜುಲೈ 22, 2022

ಸೇಪಿಯಂಟ್ ಕಾಲೇಜು ರನ್ನರ್ ಅಪ್

ಫುಟ್‌ಬಾಲ್: 'ಮಹಾಜನ' ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ತಂಡವು ಗುರುವಾರ ನಡೆದ ಮೈಸೂರು ವಿಶ್ವವಿದ್ಯಾಲಯದ ಚಾಮುಂಡಿ ವಲಯ ಅಂತರ ಕಾಲೇಜು ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಸೇಪಿಯಂಟ್ ಕಾಲೇಜು ತಂಡವನ್ನು 5-4ರಿಂದ ಮಣಿಸಿ ಪ್ರಶಸ್ತಿ ಜಯಿಸಿತು.

ಇಲ್ಲಿನ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ಮಹಾಜನ ಕಾಲೇಜು ವಿದ್ಯಾರ್ಥಿಗಳು ಕೌಶಲ ಮೆರೆದರು. 90 ನಿಮಿಷದ ಆಟದಲ್ಲಿ ಎರಡೂ ತಂಡಗಳು ಸಮಬಲ ಸಾಧಿಸಿದ್ದವು.

ಎರಡೂ ತಂಡಗಳ ಆಟಗಾರರು ಗೋಲು ಗಳಿಸದಂತೆ ನೋಡಿ ಕೊಂಡರು.

ಅಂತಿಮವಾಗಿ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ 5-4 ಗೋಲುಗಳ ಅಂತರದಲ್ಲಿ ಸೇಪಿಯಂಟ್ ಮಣಿಯಬೇಕಾಯಿತು. ಮಹಾಜನ ಕಾಲೇಜಿನ ಸಬಿತ್, ದಿವಾನ್, ಆಕರ್ಷ್, ಜೇಸನ್ ಹಾಗೂ ಮೆಧೋ ಚೆಂಡಮ್ಮ ನೆಟ್‌ಗೆ ತಳ್ಳುವಲ್ಲಿ ಯಶಸ್ವಿಯಾದರು.

ಸೇಪಿಯಂಟ್ ಪರ ಜೆ.ಗೋಕುಲ್, ಸಚ್ಚಿದಾನಂದ, ಶರಣ್, ಸಮಿತ್ ಹೆಗಡೆ ಗೋಲು ಗಳಿಸಿಕೊಟ್ಟರು. ಆದರೆ, ಒಂದೇ ಗೋಲಿನ ಅಂತರದಲ್ಲಿ ಟೂರ್ನಿಯ ಆಯೋಜಕ ತಂಡ ರನ್ನರ್‌ಅಪ್ ಆಯಿತು.

ಮೂರನೇ ಸ್ಥಾನಕ್ಕಾಗಿ ಫಿಲೋಮಿನಾ ಹಾಗೂ ಮೈಕಾ ಕಾಲೇಜು ನಡುವೆ ನಡೆದ ಪಂದ್ಯದಲ್ಲಿ ಫಿಲೋಮಿನಾ 2-0 ಗೋಲುಗಳ ಅಂತರದಲ್ಲಿ ಜಯಗಳಿಸಿತು. ಅಮಾಲ್, ಸುಶೀಲ್ ಗೋಲು ಗಳಿಸಿದರು.

ವಿಜೇತ ತಂಡಗಳಿಗೆ ಮೈಸೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಕಾರ್ಯದರ್ಶಿ ಮಂಜುನಾಥ್, ಸೇಪಿಯಂಟ್ ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಗಣೇಶ, ದೈಹಿಕ ಶಿಕ್ಷಣ ನಿರ್ದೇಶಕ ಪ್ರಶಾಂತ್, ಟೂರ್ನಿಯ ನಿರ್ವಾಹಕ ಕ್ರಾಂತಿರಾಜ್ ಒಡೆಯರ್ ಟ್ರೋಫಿ ವಿತರಿಸಿದರು.



ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ತಂಡದ ಆಟಗಾರರು ಗುರುವಾರ ನಡೆದ ಮೈಸೂರು ವಿಶ್ವವಿದ್ಯಾಲಯದ ಚಾಮುಂಡಿ ವಲಯ ಅಂತರ ಕಾಲೇಜು ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಗೆದ್ದು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಮುಖ್ಯಾಂಶಗಳು

- ಪೆನಾಲ್ಟಿ ಶೂಟೌಟ್‌ನಲ್ಲಿ ಒಲಿದ ಜಯ
- 90 ನಿಮಿಷ ನಡೆದ ಪೈಪೋಟಿ ಆಟ
- ಫಿಲೋಮಿನಾ ಕಾಲೇಜಿಗೆ 3ನೇ ಸ್ಥಾನ

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಗುರುವಾರ, 21 ಜುಲೈ 2022

ಹ್ಯಾಂಡ್‌ಬಾಲ್ ಸ್ಪರ್ಧೆ ವಿಜೇತರಿಗೆ ಅಭಿನಂದನೆ



ಮೈಸೂರು: ನಗರದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಮಹಿಳೆಯರ ಅಂತರ ಕಾಲೇಜು ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಟೆರಿಷಿಯನ್ ಕಾಲೇಜು ತಂಡವನ್ನು 15-2 ಅಂತರದಲ್ಲಿ ಮಣಿಸಿ ಭರ್ಜರಿ ಜಯ ಸಾಧಿಸಿದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ, ಡಾ.ಎಚ್.ಎನ್.ಭಾಸ್ಕರ್, ತಂಡದ ನಾಯಕಿ ಎಂ.ಪಿ.ಗಾನವಿ, ಸೋಮಶೇಖರ್, ಛಾಯಾ, ಆಗ್ನೇಷ್, ರಕ್ಷಿತಾ, ಐಶ್ವರ್ಯ, ನಿಜಿಮೊಲ್, ಸುಪ್ರೀತ, ಹರ್ಷಿಣಿ, ನೀಸೀಮೊಲ್, ದೀಕ್ಷಿತ, ಭವಾನಿ ಹಾಗೂ ನೀಸಿ ಪಿಲಿಫ್ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 20.7.2022

ಮಹಿಳೆಯರ ಹ್ಯಾಂಡ್‌ಬಾಲ್: ಮಹಾಜನ ಕಾಲೇಜಿಗೆ ಪ್ರಥಮ



• **ಕನ್ನಡಪ್ರಭ ವಾರ್ತೆ** ಮೈಸೂರು

ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಹ್ಯಾಂಡ್‌ಬಾಲ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಹ್ಯಾಂಡ್‌ಬಾಲ್ ತಂಡವು ಟೆರಿಷಿಯನ್ ಕಾಲೇಜಿನ ವಿರುದ್ಧ 15-2 ಅಂತರದಲ್ಲಿ ಜಯಶೀಲರಾಗಿ ಪ್ರಥಮ ಸ್ಥಾನ ಗಳಿಸಿದ್ದಾರೆ.

ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯ ಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ರಾದ ಡಾ.ಎಚ್.ಎನ್. ಭಾಸ್ಕರ್, ತಂಡದ ನಾಯಕಿ ಎಂ.ಪಿ. ಗಾನವಿ, ಸೋಮಶೇಖರ್, ಛಾಯಾ, ಆಗ್ನೇಷ್, ರಕ್ಷಿತ, ಐಶ್ವರ್ಯ, ನಿಜಿಮೊಲ್, ಸುಪ್ರಿತ, ಹರ್ಷಿಣಿ, ನೀಸೀಮೊಲ್, ದಿಕ್ಷಿತ, ಭವಾನಿ, ಹಾಗೂ ನೀಸಿಪಿಲಿಪ್ ಇದ್ದರು.

MFGE In the Eyes of the Press.....

ಅಂಚೋಲನ
ದಿನ ಪತ್ರಿಕೆ

ಬುಧವಾರ, 13 ಜುಲೈ 2022

ಅಂತರ ಕಾಲೇಜು ಕುಸ್ತಿ; ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ನಡೆದ ಅಂತರ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ) ಸಮಗ್ರ ಪ್ರಶಸ್ತಿ ಪಡೆದುಕೊಂಡಿದೆ.

ವಿಜೇತರಾದ ಕುಸ್ತಿ ತಂಡದ ನಾಯಕ ಎಂ.ಮನೋಜ್, ಸೋಮಶೇಖರ್, ಡಿ.ಮೋಹನ್ ಕುಮಾರ್, ಜೆ.ಲಿಖಿತ್, ಸದಾತ್ ಪಾಷಾ, ಮಂಚಣ್ಣ, ಪ್ರಜ್ವಲ್, ಎಂ.ಕೆ.ಸಾಗರ್ ಮತ್ತು ಸಚ್ಚಿನ್ ಅವರನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ್, ಡಾ.ಎಚ್.ಎನ್. ಭಾಸ್ಕರ್ ಮತ್ತು ಕಾಲೇಜಿನ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 13.7.2022



ಮೈಸೂರು ವಿಶ್ವವಿದ್ಯಾನಿಲಯದಿಂದ ಆಯೋಜಿಸಿದ್ದ ಅಂತರ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿ ವಿದ್ಯಾರ್ಥಿಗಳು ಭಾಗವಹಿಸಿ ಸಮಗ್ರ ಪ್ರಶಸ್ತಿ ವಿಜೇತರಾಗಿದ್ದಾರೆ. ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಎಚ್.ಎನ್. ಭಾಸ್ಕರ್, ನಾಯಕ ಎಂ. ಮನೋಜ್, ಸೋಮಶೇಖರ್, ಡಿ. ಮೋಹನ್‌ಕುಮಾರ್, ಜೆ. ಲಿಖಿತ್, ಸದಾತ್ ಪಾಶಾ, ಮಂಚಣ್ಣ, ಪ್ರಜ್ವಲ್, ಎಂ.ಕೆ. ಸಾಗರ್ ಮತ್ತು ಸಚ್ಚಿನ್ ಇದ್ದಾರೆ.

ಆಂದೋಲನ
ದಿನ ಪತ್ರಿಕೆ

ಸೋಮವಾರ, 18 ಜುಲೈ 2022



ವಾಲಿಬಾಲ್‌ನಲ್ಲಿ ಪ್ರಥಮ... ಮೈಸೂರಿನ ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ (ಚಾಮುಂಡಿ ವಲಯ) ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು ಪ್ರಥಮ ಸ್ಥಾನ ಪಡೆಯಿತು. ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಟಿ.ಮುರಳೀಧರ್, ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪಿ.ಎಸ್. ಮಧಸೂದನ, ಡಾ.ಎಚ್.ಎನ್. ಭಾಸ್ಕರ್, ಡಾ.ಕೆ.ಕೆ.ಸೋಮಶೇಖರ್, ಯಶ್‌ವಂತ್, ಸೋಮಶೇಖರ್, ಧನುಷ್, ಫರ್‌ದಿನ್‌ಖಾದಿನ್, ಮೋಹಿತ್, ಪ್ರಜ್ವಲ್, ಆದರ್ಶ್, ರಾಕೇಶ್, ಸ್ವರೂಪ್, ಶ್ರೀನಿವಾಸ್ ಚಿತ್ರದಲ್ಲಿದ್ದಾರೆ.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾನುವಾರ 17.7.2022



ಮೈಸೂರಿನ ಸಿದ್ಧಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಆಯೋಜಿಸಿದ್ದ ಪುರುಷರ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಲಿಬಾಲ್ ತಂಡವು ಪ್ರಥಮ ಸ್ಥಾನ ಗಳಿಸಿದೆ. ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಕಾರ್ಯನಿರ್ವಾಹಣಾಧಿಕಾರಿಗಳು ಡಾ. ಎಸ್.ಆರ್. ರಮೇಶ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ, ಟಿ. ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್. ಎನ್. ಭಾಸ್ಕರ್, ಕಾಲೇಜಿನ ಕ್ರೀಡಾ ಮಂಡಳಿಯ ಸದಸ್ಯರಾದ ಡಾ.ಕೆ.ಕೆ. ಸೋಮಶೇಖರ್, ತಂಡದ ನಾಯಕ ಯಶ್‌ವಂತ್, ಸೋಮಶೇಖರ್, ಧನುಷ್, ಫರ್‌ದಿನ್‌ಖಾದಿನ್, ಮೋಹಿತ್, ಪ್ರಜ್ವಲ್, ಆದರ್ಶ್, ರಾಕೇಶ್, ಸ್ವರೂಪ್ ಹಾಗೂ ಶ್ರೀನಿವಾಸ್ ಇದ್ದಾರೆ.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 16.7.2022

ಸಮತೋಲಿತ ಸಮಾಜಕ್ಕೆ ಮಹಿಳೆ ಸಬಲೀಕರಣ ಅಗತ್ಯ

ಸಿಎಫ್‌ಟಿಆರ್‌ಐ ಸಂಸ್ಥೆಯ ಮಾಜಿ ಮುಖ್ಯ ವಿಜ್ಞಾನಿ ಡಾ. ರೇಣು ಅಗರ್‌ವಾಲ್ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಅಸಮಾನತೆ ಮತ್ತು ಕೌಟುಂಬಿಕ ಹಿಂಸೆಯನ್ನು ಮಹಿಳೆ ಹಿಂದಿನ ಕಾಲದಿಂದಲು ಎದುರಿಸುತ್ತಾ ಬಂದಿರುವುದು ಶೋಚನೀಯ ಎಂದು ಮೈಸೂರಿನ ಸಿಎಫ್‌ಟಿಆರ್‌ಐ ಸಂಸ್ಥೆಯ ಮಾಜಿ ಮುಖ್ಯ ವಿಜ್ಞಾನಿ ಡಾ. ರೇಣು ಅಗರ್‌ವಾಲ್ ಅಭಿಪ್ರಾಯಪಟ್ಟರು.

ಮಹಾಜನಪ್ರಥಮದರ್ಜೆ ಕಾಲೇಜಿನ ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರ ವಿಭಾಗಗಳು ಆಂತರಿಕ ಗುಣಮಟ್ಟ ಕೋಶದ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಿಳಾ ಸಬಲೀಕರಣ ಕುರಿತು ಮಾತನಾಡಿದ ಅವರು, ಸಾಮಾಜಿಕ ಮತ್ತು ಆರ್ಥಿಕ ಆಯಾಮದಿಂದ ಮಹಿಳೆಯರ ಸ್ಥಿತಿಯನ್ನು ವಿಶ್ಲೇಷಿಸಿದರು.



ವಿಶ್ವಸಂಸ್ಥೆಯ ಘೋಷಣೆಯೊಂದಿಗೆ ಮಹಿಳೆಯ ಸ್ಥಾನಮಾನ ಮತ್ತು ಹಕ್ಕುಗಳ ಕುರಿತು ಸಾಕಷ್ಟು ಸುಧಾರಣೆಯಾಗಿದ್ದರೂ ಆಗಬೇಕಾಗಿರುವುದು ಬಹಳಷ್ಟು ಇದೆ. ಸಬಲೀಕೃತ ಮಹಿಳೆಯ ಶಕ್ತಿ ಅಪಾರವಾಗಿದ್ದು, ಆದರ ಸೌಂದರ್ಯ ಮಾತುಗಳಿಗೂ ಮಿಗಿಲಾಗಿದೆ ಎಂದು ಅವರು ತಿಳಿಸಿದರು.

ಸಮಾಜದಲ್ಲಿ ಮಹಿಳೆಯು ಎಷ್ಟೇ ಉನ್ನತ ಸ್ಥಾನಕ್ಕೆ ಹೋಗಿ ಸಾಧನೆ ಮಾಡಿದರು, ಉನ್ನತ ಸ್ಥಾನಕ್ಕೆ ಏರಿದರೂ ಆವಳ ನಾಯಕತ್ವದ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಕುರಿತು ಅಪನಂಬಿಕೆ ವ್ಯಕ್ತವಾಗುವುದು ವಿಷಾದನೀಯ. ಸರ್ಕಾರ ಮಹಿಳೆಯರ ಪರವಾಗಿ ಎಷ್ಟೇ ವಿಶೇಷ ಸೌಲಭ್ಯ, ಕಾನೂನು ರೂಪಿಸಿದರೂ ಅವುಗಳನ್ನು ಪರಿಣಾಮ ಕಾರಿಯಾಗಿ ಅಳವಡಿಸುವುದರಲ್ಲಿ ವಿಫಲಗೊಂಡಿದೆ. ಸಮಾಜದಲ್ಲಿ ಸ್ತ್ರೀ ಹಾಗೂ ಪುರುಷ ಇಬ್ಬರ ಪಾತ್ರ ಹಾಗೂ ಪ್ರಾಮುಖ್ಯತೆ ಇದ್ದೆ ಇರುತ್ತದೆ. ಕೌಟುಂಬಿಕ ನೆಲೆಯಲ್ಲಿ ಸ್ತ್ರೀ ಮತ್ತು ಪುರುಷರಿಬ್ಬರೂ ಸಮಾನರು. ಹಾಗೆಯೇ ಮಹಿಳೆಯು ಕೌಟುಂಬಿಕ ಅಥವಾ ತಾನು ಕಾರ್ಯ ನಿರ್ವಹಿಸುವ ಕಚೇರಿಗಳಲ್ಲಿ ಅನುಭವಿಸುವ ಕಿರುಕುಳ, ಬೇಧ ಭಾವದಂತ ಸವಾಲುಗಳ ವಿರುದ್ಧ ಧೈರ್ಯವಾಗಿ ಧ್ವನಿ ಎತ್ತಬೇಕು ಎಂದು ಅವರು ಕಿವಿಮಾತು ಹೇಳಿದರು.

ಬಳಿಕ ವಿದ್ಯಾರ್ಥಿಗಳೊನಡೆ ಮುಕ್ತವಾಗಿ ಸಂವಾದ ನಡೆಸಿದರು ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ರಾಧಾ ಅತಿಥಿಗಳನ್ನು ಪರಿಚಯಿಸಿದರು. ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಚಲುವೇಗೌಡ ವಂದಿಸಿದರು. ಪ್ರಭಾರ ಪ್ರಾಂಶುಪಾಲೆ ಡಾ.ಪಿ.ಜಿ. ಪುಷ್ಪರಾಣಿ ಇದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಜುಲೈ 16, 2022

'ಮಹಿಳಾ ಸಬಲೀಕರಣ ಅವಶ್ಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಮಾಜದಲ್ಲಿ ಸಮ ತೋಲನ ಕಾಪಾಡಿಕೊಳ್ಳಲು ಮಹಿಳಾ ಸಬಲೀಕರಣ ಅವಶ್ಯವಾಗಿದೆ' ಎಂದು ಸಿಎಫ್‌ಟಿಆರ್‌ಐ ಮಾಜಿ ಮುಖ್ಯ ವಿಜ್ಞಾನಿ ಡಾ.ರೇಣು ಅಗರ್‌ವಾಲ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಮತ್ತು ಸಮಾಜವಿಜ್ಞಾನ ವಿಭಾಗಗಳು ಆಂತರಿಕ ಗುಣಮಟ್ಟ ಕೋಶದ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಸಮಾನತೆ ಮತ್ತು ಕೌಟುಂಬಿಕ ಹಿಂಸೆಯನ್ನು ಮಹಿಳೆಯು ಹಿಂದಿನಿಂದಲೂ ಎದುರಿಸುತ್ತಾ ಬಂದಿರುವುದು ಶೋಚನೀಯ' ಎಂದರು.

'ಮಹಿಳಾ ಸಬಲೀಕರಣ ವಿಷಯ ಬಂದಾಗ ಸಾಮಾಜಿಕ ಮತ್ತು ಆರ್ಥಿಕ ಆಯಾಮದಿಂದ ಪ್ರಸ್ತುತ ಸ್ಥಿತಿಯನ್ನು ವಿಶ್ಲೇಷಿಸಬೇಕಾಗುತ್ತದೆ. ಮಹಿಳೆಯ ಸ್ಥಾನಮಾನ ಮತ್ತು ಹಕ್ಕುಗಳ ವಿಷಯದಲ್ಲಿ ಸಾಕಷ್ಟು ಸುಧಾರಣೆಯಾಗಿದ್ದರೂ ಆಗಬೇಕಾಗಿರುವುದು ಬಹಳಷ್ಟಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

'ಮಹಿಳೆಯ ಶಕ್ತಿ ಅಪಾರವಾದುದು. ಸಮಾಜದಲ್ಲಿ ಮಹಿಳೆಯು ಎಷ್ಟೇ ಉನ್ನತ ಸ್ಥಾನಕ್ಕೆ ಏರಿದರೂ, ಸಾಧಿಸಿದರೂ ಸ್ಥಾನ ಕೊಡಬೇಕಾದರೆ ಅವಳ ನಾಯಕತ್ವದ ಸಾಮರ್ಥ್ಯ, ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಕುರಿತು ಅಪನಂಬಿಕೆ ವ್ಯಕ್ತವಾಗುವುದು ವಿಷಾದನೀಯ' ಎಂದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಪುಷ್ಪರಾಣಿ ಪಿ.ಜಿ., ಡಾ.ರೇಣು ಅಗರ್‌ವಾಲ್, ರಾಧಾ ಪಾಲ್ಗೊಂಡಿದ್ದಾರೆ

'ಸರ್ಕಾರವು ಮಹಿಳೆಯರ ಪರವಾಗಿ ಎಷ್ಟೇ ವಿಶೇಷ ಸೌಲಭ್ಯ ಕಲ್ಪಿಸಿದರೂ, ಕಾನೂನುಗಳನ್ನು ರೂಪಿಸಿದರೂ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಸೋತಿದ್ದೇವೆ. ಸಮ ಸಮಾಜದಲ್ಲಿ ಸ್ತ್ರೀ ಹಾಗೂ ಪುರುಷರಿಬ್ಬರ ಪಾತ್ರ ಹಾಗೂ ಪ್ರಾಮುಖ್ಯತೆ ಇದ್ದೇ ಇರುತ್ತದೆ. ಕೌಟುಂಬಿಕ ನೆಲೆಯಲ್ಲಿ ಮಹಿಳೆ-ಪುರುಷರಿಬ್ಬರೂ ಸಮಾನವಾಗಿ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದು ಅವಶ್ಯ' ಎಂದು ತಿಳಿಸಿದರು.

'ಮಹಿಳೆಯು ಕೌಟುಂಬಿಕ ಅಥವಾ ತಾನು ಕಾರ್ಯನಿರ್ವಹಿಸುವ ಕಚೇರಿಗಳಲ್ಲಿ ಅನುಭವಿಸುವ ಕಿರುಕುಳ, ತಾರತಮ್ಯದಂತಹ ಸವಾಲುಗಳ ವಿರುದ್ಧ ಧೈರ್ಯವಾಗಿ ಧ್ವನಿ ಎತ್ತಬೇಕು' ಎಂದು ಹೇಳಿದರು.

ಪ್ರಭಾರ ಪ್ರಾಂಶುಪಾಲೆ ಡಾ.ಪುಷ್ಪರಾಣಿ ಪಿ.ಜಿ. ಉಪಸ್ಥಿತರಿದ್ದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ರಾಧಾ ಸ್ವಾಗತಿಸಿದರು. ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಚಲುವೇಗೌಡ ವಂದಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 22 ಜುಲೈ 2022

ಮಹಾಜನ ಕಾಲೇಜಿನಲ್ಲಿ ಐಕ್ಯೂಎಸಿ ಕಾರ್ಯಾಗಾರ

ಮೈಸೂರು: ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆಗಳು ಹಾಗೂ ಶ್ರೇಯಾಂಕಗಳ ಬಗ್ಗೆ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನ ಐಕ್ಯೂಎಸಿ ಸಂಚಾಲಕರಾದ ಡಾ.ಮನೋಹರ್ ಮಾತನಾಡಿ, ರಾಷ್ಟ್ರೀಯ ಮೌಲೀಕರಣ ಮತ್ತು ಮಾನ್ಯತಾ ಪರಿಷತ್ (ನ್ಯಾಕ್)ನ್ನು 1994ರಲ್ಲಿ ಬೆಂಗಳೂರಿನ ವಿವಿ ಅನುದಾನ ಆಯೋಗದ ಒಂದು ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ನ್ಯಾಕ್ ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಿಗೆ ಗುಣಮಟ್ಟದ ಭರವಸೆಯ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ತಿಳಿಸಿದರು.

ಶಿಕ್ಷಣ ಸಂಸ್ಥೆಯೊಂದು ತನ್ನ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳನ್ನು, ನ್ಯಾಕ್ ಪ್ರಮುಖ ಮೌಲ್ಯಗಳಾದ ರಾಷ್ಟ್ರೀಯ ಅಭಿವೃದ್ಧಿ, ಜಾಗತಿಕ



ಸಾಮರ್ಥ್ಯ, ಮೌಲ್ಯಗಳ ಅಳವಡಿಕೆ, ತಂತ್ರಜ್ಞಾನ ಬಳಕೆ ಮತ್ತು ಶ್ರೇಷ್ಠತೆಯ ಅನ್ವೇಷಣೆ ಇವುಗಳಿಗೆ ಅನುಗುಣವಾಗಿ ರೂಪಿಸಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ವಿಮರ್ಶಾತ್ಮಕ ಮೌಲ್ಯಮಾಪನ ಹಾಗೂ ಇತರೆ ಮಾನದಂಡಗಳ ಬಗ್ಗೆ ಪಿಪಿಟಿ ಮೂಲಕ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಉನ್ನತ ಶಿಕ್ಷಣ ವ್ಯವಸ್ಥೆ, ಪಾಸಗೀಕರಣ, ಶಿಕ್ಷಣದ ಗುಣಮಟ್ಟದ ಮತ್ತು ಶ್ರೇಷ್ಠತೆ ಮತ್ತು ವಸ್ತುಸ್ಥಿತಿಗಳ ಬಗ್ಗೆ ಅರಿಯಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ನ್ಯಾಕ್‌ನ ಏಳು ಮಾನದಂಡಗಳನ್ನು ಅರಿತು, ಎಲ್ಲ ಅಧ್ಯಾಪಕರು ಕ್ರಿಯಾಶೀಲರಾಗಿ ಐಕ್ಯೂಎಸಿ ಚಟುವಟಿಕೆಗಳನ್ನು ಬಲಪಡಿಸಬೇಕು ಎಂದು ತಿಳಿಸಿದರು.

ಆಂಗ್ಲ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ನ್ಯಾಕ್ ಸಮಿತಿಯ ಸಂಚಾಲಕರಾದ ಗೀತಾ, ಅಧ್ಯಾಪಕರು ಹಾಜರಿದ್ದರು.

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಶುಕ್ರವಾರ 22.7.2022

ಮಹಾಜನ ಕಾಲೇಜಲ್ಲಿ ನ್ಯಾಕ್ ಮಾನ್ಯತೆ, ಶ್ರೇಯಾಂಕಗಳ ಕುರಿತು ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್ ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆಗಳು ಹಾಗೂ ಶ್ರೇಯಾಂಕಗಳ ಬಗ್ಗೆ ಕಾರ್ಯಾಗಾರ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂನ ಐಕ್ಯೂಎಸಿ ಸಂಚಾಲಕ ಡಾ. ಮನೋಹರ್ ಮಾತನಾಡಿ, ರಾಷ್ಟ್ರೀಯ ಮೌಲೀಕರಣ ಮತ್ತು ಮಾನ್ಯತಾ ಪರಿಷತ್ (ನ್ಯಾಕ್) ನ್ನು 1994ರಲ್ಲಿ ಬೆಂಗಳೂರಿನ ವಿಶ್ವವಿದ್ಯಾಲಯ ಅನುದಾನ ಆಯೋಗದ ಒಂದು ಸ್ವಾಯತ್ತ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ನ್ಯಾಕ್ ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯ ಚಟುವಟಿಕೆಗೆ ಗುಣಮಟ್ಟದ ಭರವಸೆಯ ಒಂದು ಅವಿಭಾಜ್ಯ ಅಂಗವಾಗಿದೆ ಎಂದರು.

ಶಿಕ್ಷಣ ಸಂಸ್ಥೆಯೊಂದು ತನ್ನ ಶೈಕ್ಷಣಿಕ ಮತ್ತು ಪಠ್ಯೇತರ ಚಟುವಟಿಕೆಗಳನ್ನು, ನ್ಯಾಕ್ ಪ್ರಮುಖ ಮೌಲ್ಯಗಳಾದ ರಾಷ್ಟ್ರೀಯ ಅಭಿವೃದ್ಧಿ, ಜಾಗತಿಕ ಸಾಮರ್ಥ್ಯ, ಮೌಲ್ಯಗಳ ಆಳವಡಿಕೆ, ತಂತ್ರಜ್ಞಾನ ಬಳಕೆ ಮತ್ತು ಶ್ರೇಷ್ಠತೆಯ ಅನ್ವೇಷಣೆ ಇವುಗಳ ಅನುಗುಣವಾಗಿ ರೂಪಿಸಿಕೊಳ್ಳುವುದು ಸೂಕ್ತ ಎಂದರು.

ನಂತರ, ನ್ಯಾಕ್ ಆಡಳಿತ ಮಂಡಳಿಗಳು, ನೀತಿ ನಿರೂಪಕರು ಮತ್ತು ಹಿರಿಯ ಶಿಕ್ಷಣ ತಜ್ಞರು ಒಳಗೊಂಡು ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯ ಒಂದು ಭಾಗವಾಗಿ ಕಾರ್ಯ ನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಲಯದ ಅನುದಾನ ಆಯೋಗದ ಅಧ್ಯಕ್ಷರು ನ್ಯಾಕ್‌ನ ಅಧ್ಯಕ್ಷರಾಗಿರುತ್ತಾರೆ.ಸಾಂಸ್ಥಿಕಶ್ರೇಣೀಕರಣ, ಮೌಲ್ಯಮಾಪನ ಪ್ರಕ್ರಿಯೆ, ಶ್ರೇಣಿಯ ಅರ್ಹತೆಗಳು, ಸಂಚಿತ ಶ್ರೇಣೀಕೃತ ಸರಾಸರಿ, ಪರಿಮಾಣಾತ್ಮಕ ಮತ್ತು ಗುಣಾತ್ಮಕ ಅಂಕಗಳು, ವಿದ್ಯಾರ್ಥಿ ತೃಪ್ತಿ ಸಮೀಕ್ಷೆ, ವಿಮರ್ಶಾತ್ಮಕ ಮೌಲ್ಯಮಾಪನ ಹಾಗೂ ಇತರ ಮಾನದಂಡಗಳ ಬಗ್ಗೆ ಪಿಪಿಟಿ ಮೂಲಕ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಆರ್. ಜಯಕುಮಾರಿ ಮಾತನಾಡಿ, ಉನ್ನತ ಶಿಕ್ಷಣ ವ್ಯವಸ್ಥೆ, ಖಾಸಗೀಕರಣ, ಶಿಕ್ಷಣದ ಗುಣಮಟ್ಟ ಮತ್ತು ಶ್ರೇಷ್ಠತೆ ಮತ್ತು ವಸ್ತುಸ್ಥಿತಿಗಳ ಬಗ್ಗೆ ಅರಿಯಲು ಈ ಕಾರ್ಯಾಗಾರವನ್ನು ಆಯೋಜಿಸಿದೆ. ನ್ಯಾಕ್‌ನ ಏಳು ಮಾನದಂಡಗಳನ್ನು ಅರಿತು, ಎಲ್ಲ ಅಧ್ಯಾಪಕರು ಕ್ರಿಯಾಶೀಲರಾಗಿ ಐಕ್ಯೂಎಸಿ ಚಟುವಟಿಕೆಯನ್ನು ಬಲಪಡಿಸಬೇಕು. ಕಾಲೇಜು ಮಟ್ಟದ ಆಂತರಿಕ ಭರವಸೆಯ ಕೋಶದಲ್ಲಿ ತೊಡಗಿಸಿಕೊಳ್ಳಬೇಕು. ಇದು ಅಧ್ಯಾಪಕರಲ್ಲಿ ಜವಾಬ್ದಾರಿ ಹೆಚ್ಚಿಸಿದೆ. ನಮ್ಮ ಕಾಲೇಜು ಮುಂದೆ ೦+, ೦++ ಶ್ರೇಣಿಯನ್ನು ಪಡೆಯಲು ಎಲ್ಲ ಅಧ್ಯಾಪಕರು ಸಹಕಾರ ಕೊಡಬೇಕು ಎಂದರು.

ಆಂಗ್ಲ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ನ್ಯಾಕ್ ಸಮಿತಿಯ ಸಂಚಾಲಕಿ ತಿ ಗೀತಾ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿ ಕಾಲೇಜಿನ ಪದವಿ ಹಾಗೂ ಸ್ನಾತಕ ಪದವಿಯ ಅಧ್ಯಾಪಕರೊಂದಿಗೆ ಸಂವಾದ ನಡೆಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಭಾನುವಾರ, 14 ಆಗಸ್ಟ್ 2022

ಮಹಾಜನ ಕಾಲೇಜಿನಲ್ಲಿ ಭಿತ್ತಿ ಚಿತ್ರಗಳ ಪ್ರದರ್ಶನ



ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ(ಸ್ವಾಯತ್ತ) ಗ್ರಂಥಾಲಯ ಅಧ್ಯಯನ ವಿಭಾಗದಲ್ಲಿ ಕಾಲೇಜಿನ ಇತಿಹಾಸ ವಿಭಾಗ, ಗ್ರಂಥಾಲಯ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಶುಕ್ರವಾರ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನ ಕಾರ್ಯಕ್ರಮ ನಡೆಯಿತು.

ಕಾಲೇಜು ಶಿಕ್ಷಣ ಇಲಾಖೆಯ ವಿಶೇಷಾಧಿಕಾರಿ ಡಾ.ಬಿ.ಕೆ.ಕೆಂಪೇಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ತಮ್ಮ ತನು, ಮನಗಳನ್ನು ಪಣಕ್ಕಿಟ್ಟು ಹೋರಾಡಿದಂತಹ ಮಹನೀಯರನ್ನು ನೆನಪಿಸುವಂತಹ ಅಪರೂಪದ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ಈ ಕಾರ್ಯಕ್ರಮ ಆಯೋಜನೆಗೆ, ಭಿತ್ತಿ ಚಿತ್ರಗಳನ್ನು ರಚಿಸುವಲ್ಲಿ ವಿದ್ಯಾರ್ಥಿಗಳ ಪರಿಶ್ರಮ ಎದ್ದು ಕಾಣುತ್ತಿದೆ ಎಂದು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿಗಳಾದ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಪ್ರದರ್ಶನವನ್ನು ವೀಕ್ಷಿಸಿ, ವಿದ್ಯಾರ್ಥಿಗಳ ಕಾರ್ಯವನ್ನು ಪ್ರಶಂಸಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಗ್ರಂಥಪಾಲಕರಾದ ವೀಣಾ ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 25.8.2022

ಮಹಾಜನ ಕಾಲೇಜಲ್ಲಿ ಭಿತ್ತಿ ಚಿತ್ರ ಪ್ರದರ್ಶನ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ರಚಿಸಿದ ಪತ್ರಿಕೋದ್ಯಮ, ಸಂವಹನ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ಭಿತ್ತಿ ಚಿತ್ರಗಳ ಪ್ರದರ್ಶನ ನಡೆಯಿಯಿತು.

ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಇದೊಂದು ಕೌಶಲ್ಯಾಧಾರಿತ ತರಬೇತಿಯಾಗಿದ್ದು, ಇಂದಿನ ಜಾಗತಿಕ, ಕಂಪ್ಯೂಟರೀಕರಣ ಯುಗದಲ್ಲಿ ಈ ರೀತಿಯ ಪ್ರದರ್ಶನಗಳು ಅತಿ ಮುಖ್ಯವಾಗುತ್ತದೆ. ತರಗತಿ ಯಲ್ಲಿನ ಪುಸ್ತಕಧಾರಿತ ಕಲಿಕೆಯಿಂದ ಏನೂ ಪ್ರಯೋಜನವಿಲ್ಲ, ನ್ಯೂಸ್ ರೂಂನಲ್ಲಿ ಮಾಧ್ಯಮಕ್ಕೆ ಬೇಕಾಗುವುದು ಕೌಶಲ್ಯ ಎಂದರು.

ಸಮಾಜದಲ್ಲಿ ಹುದುಗಿರುವ ವಿಷಯಗಳ ಸಂಶೋಧನೆಯಲ್ಲಿ ತೊಡಗಿ, ಹೊಸತನ್ನು ಬೆಳಕಿಗೆ ತರುವ ಪ್ರಯತ್ನವನ್ನು ಪತ್ರಿಕೋದ್ಯಮ ವಿದ್ಯಾರ್ಥಿಗಳು ಮಾಡಬೇಕು. ಇದಕ್ಕೆ ಅನುಗುಣವಾಗಿ ಕ್ಷೇತ್ರಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದರು.

ಇಂದು ಮುದ್ರಣ, ದೃಶ್ಯ ಹಾಗೂ ಪ್ರಸಾರ ಮಾಧ್ಯಮಗಳಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಬಹಳಷ್ಟು ಅವಕಾಶಗಳಿವೆ. ಆದರೆ, ಸರಿಯಾದ ಮಾರ್ಗದರ್ಶನ, ಕೌಶಲ್ಯ ಕಲಿಕೆ ಇಲ್ಲದೆ ಇರುವುದು ವಿಪರ್ಯಾಸ. ಆದರೆ, ಮಹಾಜನ ಕಾಲೇಜು ಈ ಮಾಧ್ಯಮ ಕ್ಷೇತ್ರಕ್ಕೆ ಬೇಕಾಗುವ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿದೆ. ಇಲ್ಲಿನ ಪ್ರಾಧ್ಯಾಪಕರು ಹೆಚ್ಚಿನ ಆಸಕ್ತಿ ವಹಿಸಿ, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ತೊಡಗಿರುವುದು ಸಂತೋಷದ ವಿಷಯ ಎಂದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಈ ಕಾರ್ಯಕ್ರಮ ಆಯೋಜನೆಗೆ, ಭಿತ್ತಿಚಿತ್ರಗಳನ್ನು ರಚಿಸುವಲ್ಲಿ ವಿದ್ಯಾರ್ಥಿಗಳ ಪರಿಶ್ರಮ ಎದ್ದು ಕಾಣತ್ತಿದೆ ಎಂದು ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಹೆಚ್, ಕನ್ನಡ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಎಚ್. ಆರ್. ತಿಮ್ಮೇಗೌಡ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎಲ್. ರವಿ ಅಯ್ಯರ್ ಇದ್ದರು.

MFGE In the Eyes of the Press.....

ಉದಯವಾಣಿ
ದಿನ ಪತ್ರಿಕೆ

ಗುರುವಾರ, 25 ಆಗಸ್ಟ್ 2022



ಅಂತರ ವರ್ಗ ವಿಜ್ಞಾನ ಸ್ಪರ್ಧಾತ್ಮಕ ಘಟನೆ ಉದ್ಘಾಟನೆ... ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಟಿಬಿಎಂ ವಿಭಾಗದ ವತಿಯಿಂದ 'ಬಯೊ-ಎಂ 2022' ಒಂದು ದಿನದ ಅಂತರ ವರ್ಗ ವಿಜ್ಞಾನ ಸ್ಪರ್ಧಾತ್ಮಕ ಘಟನೆಗಳ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಕಾಲೇಜಿನ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಡಾ.ರಾಮಚಂದ್ರ ಕಿನಿ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕಾಲೇಜಿನ ಡೀನ್ ಡಾ.ಎಚ್.ಶ್ರೀಧರ, ಭಾನುಪ್ರಕಾಶ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಉದಯವಾಣಿ
ದಿನ ಪತ್ರಿಕೆ

ಶುಕ್ರವಾರ, 12 ಆಗಸ್ಟ್ 2022

● ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿ ಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನ

ಬೆಳಿಗ್ಗೆ 10.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಉದ್ಘಾಟನೆ-ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ವಿಶೇಷಾಧಿಕಾರಿ ಡಾ.ಬಿ.ಕೆ.ಕೆಂಪೇಗೌಡ, ಸ್ಥಳ-ಗ್ರಂಥಾಲಯ ಅಧ್ಯಯನ ವಿಭಾಗ, ಎರಡನೇ ಮಹಡಿ, ಕಾಲೇಜಿನ ಆವರಣ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 24.8.2022

ವಿಜ್ಞಾನವನ್ನು ಕಲಿತು ಆನಂದಿಸಿ

ವಿದ್ಯಾರ್ಥಿಗಳಿಗೆ ಡಾ.ರಾಮಚಂದ್ರ ಕಿಣಿ ಸಲಹೆ



• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳು ವಿಜ್ಞಾನವನ್ನು ಕಲಿತು ಆನಂದಿಸಬೇಕು ಎಂದು ಮೈಸೂರು ವಿವಿಯ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದ ಡಾ. ರಾಮಚಂದ್ರ ಕಿಣಿ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಟಿಬಿಎಂ ವಿಭಾಗದ ವತಿಯಿಂದ ನಡೆದ ಬಯೋ-ಎಂ 2022 ಒಂದು ದಿನದ ಅಂತರ ವರ್ಗ ವಿಜ್ಞಾನ ಸ್ಪರ್ಧಾತ್ಮಕ ಘಟನೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ವಿಜ್ಞಾನವನ್ನು ಸುಲಭ ಮತ್ತು ಮೋಜಿನ ರೀತಿ ಕಲಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿರುವುದಕ್ಕೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಶ್ಲಾಘಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಲೇಜಿನ ಡೀನ್ ಡಾ.ಎಚ್. ಶ್ರೀಧರ ಮಾತನಾಡಿದರು.

ಬಯೋ-ಎಂ 2022 ಕಾರ್ಯಕ್ರಮ (ಫೆಸ್ಟ್) ವಿವಿಧ ವಿಜ್ಞಾನ ಸ್ಪರ್ಧಾತ್ಮಕ ಘಟನೆಗಳನ್ನು ನೀಡಿತ್ತು. ಇದರಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿತಮ್ಮ ಜ್ಞಾನ.ಪ್ರಾಯೋಗಿಕ ಕೌಶಲ್ಯಗಳನ್ನು ಪ್ರದರ್ಶಿಸಿ, ಸ್ಫೂರ್ತಿ ಪಡೆದರು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಭಾಗವಹಿಸಿದ್ದರು.

ಮೊದಲ ಮತ್ತು ಎರಡನೆ ವರ್ಷದ ಬಿಟಿಬಿಎಂ ವಿದ್ಯಾರ್ಥಿಗಳು, ವಿಜ್ಞಾನೇತರ ವಿದ್ಯಾರ್ಥಿಗಳು ಈವೆಂಟ್‌ನಲ್ಲಿ ಭಾಗವಹಿಸಿ ಅನೇಕ ಬಹುಮಾನ ಗಳಿಸಿದರು.

ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರಕೃತಿ ಪ್ರಾರ್ಥಿಸಿದರು.

ಗಾಯನ ಸ್ವಾಗತಿಸಿದರು. ಸುಮಂತ್ ಪರಿಚಯಿಸಿದರು. ಭಾನುಪ್ರಕಾಶ್ ವಂದಿಸಿದರು. ವರ್ಷಿಣಿ, ಶ್ರಾವ್ಯ ಧರ್ಮರಾಜ್ ನಿರೂಪಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 23.8.2022



ಬೂಸ್ಟರ್ ಅಭಿಯಾನ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಘಟಕಗಳು ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳ ಸಹಯೋ ಗದಲ್ಲಿ ಕೋವಿಡ್ ಬೂಸ್ಟರ್ ಡೋಸ್ ಲಸಿಕೆ ನೀಡಲಾಯಿತು. ವಿದ್ಯಾರ್ಥಿಗಳು, ವಿದ್ಯಾರ್ಥಿ ನಿಯರು, ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗದವರು ಸದುಪಯೋಗ ಪಡೆದುಕೊಂಡರು. ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯ ಕುಮಾರಿ, ಡಿಸ್ಟ್ರಿಕ್ಟ್ ಕೋವಿಡ್ ವ್ಯಾಕ್ಸಿನೇಷನ್ ನೋಡಲ್ ಆಫೀಸರ್ ಡಾ.ಎಲ್. ರವಿ, ಇಮ್ಯು ನೈಜೇಷನ್ ಸೂಪರ್‌ವೈಸರ್ ಕಿರಣ್ ಹಾಗೂ ರಾಷ್ಟ್ರೀ ಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್ ಮತ್ತು ಮಧುಸೂದನ್ ಇದ್ದರು.

MFGE In the Eyes of the Press.....

ಅಂಚೋಲನ
ದಿನ ಪತ್ರಿಕೆ

ಬುಧವಾರ, 17 ಆಗಸ್ಟ್ 2022

ವಿವಿಧೆಡೆ ಸ್ವಾತಂತ್ರ್ಯೋತ್ಸವ



ಮಹಾಜನ ವಿದ್ಯಾಸಂಸ್ಥೆ... ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಲಾಯಿತು. ಮೈಸೂರು ಎನ್‌ಸಿಸಿಯ ಒಂದನೇ ಕರ್ನಾಟಕ ಆರ್ಟಿಲರಿ ಬ್ಯಾಟರಿಯ ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ಶ್ರೀನಿಧಿ, ಸಂಸ್ಥೆಯ ಅಧ್ಯಕ್ಷ ಮುರಳೀಧರ್ ಭಾಗವತ್, ಆಡಳಿತಾಧಿಕಾರಿಗಳಾದ ಡಾ.ಪಿ.ಸರೋಜಮ್ಮ, ಪೂಜಾಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್. ಉಮಾರಾಣಿ, ಕಾನೂನು ಕಾಲೇಜಿನ ಪ್ರಾಂಶುಪಾಲ ಎಂ.ಎಂ.ಪ್ರಭುಸ್ವಾಮಿ, ಪ್ರೌಢಶಾಲೆಯ ಪ್ರಾಂಶುಪಾಲರಾದ ಡಾ.ರಾಜೇಶ್ವರಿ, ರಘುರಾಂ, ಫ್ರಾನ್ಸಿಸ್, ಪ್ರಾಧ್ಯಾಪಕ ಡಾ.ಎಚ್. ಆರ್.ತಿಮ್ಮೇಗೌಡ ಇತರರು ಹಾಜರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಆಗಸ್ಟ್ 13, 2022

'ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣ ತ್ಯಾಗ ಮಾಡಿದವರನ್ನು ಸ್ಮರಿಸಬೇಕು' ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿಯ ವಿಶೇಷಾಧಿಕಾರಿ ಡಾ.ಬಿ.ಕೆ.ಕೆಂಪೇಗೌಡ ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

'ಸ್ವಾತಂತ್ರ್ಯ ಸೇನಾನಿಗಳನ್ನು ಸ್ಮರಿಸುವ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು' ಎಂದು ಆಶಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳು ಸಿದ್ಧಪಡಿಸಿದ, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಚಳವಳಿಗಳನ್ನು ಬಿಂಬಿಸುವ ಭಿತ್ತಿಚಿತ್ರಗಳನ್ನು ಪ್ರದರ್ಶಿಸಲಾಯಿತು. ಫೋಟೊಗಳು, ಸ್ವಾತಂತ್ರ್ಯ ಸಂಗ್ರಾಮದ ಕೃತಿಗಳು, ಅಪರೂಪದ ನಾಣ್ಯಗಳು ಇದ್ದವು.

ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಗ್ರಂಥಪಾಲಕಿ ವೀಣಾ, ಕನ್ನಡ ವಿಭಾಗದ ಮುಖ್ಯಸ್ಥ ಎಚ್. ಆರ್.ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಎಚ್., ನಂದೀಶ್ ಎ.ಆರ್. ಪಾಲ್ಗೊಂಡಿದ್ದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯ ಅಧ್ಯಯನ ವಿಭಾಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನವನ್ನು ಅತಿಥಿಗಳು ವೀಕ್ಷಿಸಿದರು

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 12.8.2022

ಮಹಾಜನ ಕಾಲೇಜಿನಲ್ಲಿ ಸಾಂಸ್ಕೃತಿಕ ಸ್ಪರ್ಧೆ



ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 75ನೇ ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆ ಅಂಗವಾಗಿ ಪ್ರತಿಭಾ ವೇದಿಕೆ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ದೇಶಭಕ್ತಿಗೀತೆ ಮತ್ತು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಈ ವೇಳೆ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪ್ರತಿಭಾ ವೇದಿಕೆಯ ಸಂಚಾಲಕ ಎಂ. ನಾಗೇಶ್, ಸಹ ಸಂಚಾಲಕಿ ಎನ್.ಸಿ. ಹಂಸವೇಣಿ ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 17.8.2022



ಮೈಸೂರಿನ ಮಹಾಜನ ಎಜುಕೇಶನ್ ಸೊಸೈಟಿ ಹಾಗೂ ಮಹಾಜನ ಅಂಗ ಸಂಸ್ಥೆ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಎನ್‌ಸಿಸಿಯ ಲೆಫ್ಟಿನೆಂಟ್ ಕರ್ನಲ್ ಸಿ.ಜೆ. ಶ್ರೀನಿಧಿ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಸಂಸ್ಥೆ ಅಧ್ಯಕ್ಷ ಮುರಳೀಧರ ಭಾಗವತ್, ಆಡಳಿತಾಧಿಕಾರಿ ಡಾ.ಪಿ. ಸರೋಜಮ್ಮ, ನಿರ್ದೇಶಕ ಡಾ.ಸಿ.ಕೆ. ರೇಣುಕಾರ್ಯ, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಎಂ.ಎಂ. ಪ್ರಭುಸ್ವಾಮಿ, ಡಾ.ಎಸ್. ಉಮಾರಾಣಿ, ಡಾ. ರಾಜೇಶ್ವರಿ, ಆರ್.ವಿ. ರಘುರಾಂ, ಡಾ.ಎಚ್.ಆರ್. ತಿಮ್ಮೇಗೌಡ ಮೊದಲಾದವರು ಇದ್ದರು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 12 ಆಗಸ್ಟ್ 2022

■ **ಮಹಾಜನ ಪ್ರಥಮ ದರ್ಜೆ ಕಾಲೇಜು:** ಸ್ವಾತಂತ್ರ್ಯೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಭಿತ್ತಿಚಿತ್ರಗಳು ಹಾಗೂ ಪುಸ್ತಕ ಪ್ರದರ್ಶನ, ಉದ್ಘಾಟನೆ: ಕಾಲೇಜು ಶಿಕ್ಷಣ ಇಲಾಖೆ ವಿಶೇಷ ಅಧಿಕಾರಿ ಡಾ.ಕೆಂಪೇಗೌಡ. ವಿಶೇಷ ಆಹ್ವಾನಿತರು: ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ, ಸ್ಥಳ: ಗ್ರಂಥಾಲಯ ಅಧ್ಯಯನ ವಿಭಾಗ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ • ಆಗಸ್ಟ್ 14, 2022

ಸ್ವಾತಂತ್ರ್ಯದ ಅಮೃತ ಮಹೋತ್ಸವ; ಓಟದ ಸ್ಪರ್ಧೆ

ದಕ್ಷತ್, ತುಳಸಿ ಪ್ರಥಮ

ಪ್ರಜಾವಾಣಿ ವಾರ್ತೆ

ಮೈಸೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಗರದ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ, ಎನ್‌ಸಿಸಿ, ಎನ್‌ಎಸ್‌ಎಸ್ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಓಟದ ಸ್ಪರ್ಧೆ ನಡೆಸಲಾಯಿತು.

ಸೋಮಾನಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಸದಾಶಿವ ಭಟ್ ತ್ರಿವರ್ಣ ಧ್ವಜ ಹಾರಿಸುವ ಮೂಲಕ ಓಟಕ್ಕೆ ಚಾಲನೆ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ.ಭಾಸ್ಕರ್, ಮಧುಸೂದನ್, ಎನ್‌ಸಿಸಿ ಅಧಿಕಾರಿಗಳಾದ ಕ್ಯಾಪ್ಟನ್ ನಿಖಿಲ್ ಬಿ.ಆರ್., ಲೆಫ್ಟಿನೆಂಟ್ ಎಂ.ಆರ್. ಇಂದ್ರಾಣಿ, ಎನ್‌ಎಸ್‌ಎಸ್ ಯೋಜನೆ ಘಟಕ 1, 2ರ ಸಂಚಾಲಕ ಡಾ.ಜಿ. ದೊಡ್ಡರಸಯ್ಯ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ. ಕೆ.ಸೋಮಶೇಖರ್ ಪಾಲ್ಗೊಂಡಿದ್ದರು.



ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಂಗವಾಗಿ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಿಂದ ಓಟದ ಸ್ಪರ್ಧೆ ನಡೆಯಿತು

ಫಲಿತಾಂಶ: ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಗಳಿಸಿದವರು.

ಮಹಾಜನ ಪ್ರೌಢಶಾಲೆ ಕಿರಿಯ ವಿದ್ಯಾರ್ಥಿಗಳ ವಿಭಾಗ: ದಕ್ಷತ್ ಪಿ., ಹಿತೇಶ್ ಬಿ.ಎಲ್., ದುರ್ಗಪ್ರಸಾದ್ ಎಚ್.ಪಿ.

ಮಹಾಜನ ಪ್ರೌಢಶಾಲೆ ಕಿರಿಯ ವಿದ್ಯಾರ್ಥಿನಿಯರ ವಿಭಾಗ: ತುಳಸಿ ಕೆ.ಆರ್., ವಿನುತಾ ಸಿ., ಸಂಗೀತಾ ಕೆ.ಟಿ.

ಕಾಲೇಜು ವಿದ್ಯಾರ್ಥಿಗಳ ವಿಭಾಗ: ಮಿಲಿಂದ್ ಎಸ್.ಪ್ರಸಾದ್, ಸಾಗರ್ ಎಂ.ಕೆ., ಹೇಮಂತ್ ಎಂ.ಎಸ್.

ಕಾಲೇಜು ವಿದ್ಯಾರ್ಥಿನಿಯರ ವಿಭಾಗ: ನಿಸ್ಸಿ ಮೋಲ್, ಹರ್ಷಿನಿ ಚಿತಿಯಾರ್ ಆರ್., ನಿಸ್ಸಿ ಫಿಲಿಪ್.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಆಗಸ್ಟ್ 24, 2022



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೋಸ್ಟರ್ ಪ್ರದರ್ಶನದಲ್ಲಿ ವಿದ್ಯಾರ್ಥಿನಿಯೊಬ್ಬರು ವಿವರಣೆ ನೀಡಿದರು. ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಎಚ್.ಆರ್.ತಿಮ್ಮೇಗೌಡ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಚ್.ಶ್ರೀಧರ್ ಇದ್ದಾರೆ

'ಕ್ಷಿಪ್ರ ಬದಲಾವಣೆ ನಡುವೆ ಪತ್ರಿಕೋದ್ಯಮ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜಾಗತಿಕ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ಪತ್ರಿಕೋದ್ಯಮವೂ ಕ್ಷಿಪ್ರಗತಿಯಲ್ಲಿ ಬದಲಾಗುತ್ತಿದೆ. ಅದಕ್ಕೆ ತಕ್ಕಂತೆ ಪತ್ರಿಕೋದ್ಯಮದ ಪಠ್ಯಕ್ರಮವನ್ನು ನಿರಂತರವಾಗಿ ಪರಿಷ್ಕರಿಸಲಾಗುತ್ತಿದೆ' ಎಂದು ಮಹಾಜನ ವಿದ್ಯಾ ಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಸ್ವಾಯತ್ತ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ವಿಭಾಗದ ವಿದ್ಯಾರ್ಥಿಗಳು ತಯಾರಿಸಿದ ಪೋಸ್ಟರ್‌ಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ತರಗತಿಯೊಳಗಿನ ಕಲಿಕೆಯ ಜೊತೆಗೆ ಮಾಧ್ಯಮ ಕಚೇರಿಗಳ ಭೇಟಿಯಿಂದಲೂ ವಿದ್ಯಾರ್ಥಿಗಳು ಕಲಿಯುವುದು ಸಾಕಷ್ಟಿದೆ. ಆ ನಿಟ್ಟಿನಲ್ಲಿ ಪ್ರಯೋಗ ಪಾಠಗಳನ್ನೂ ಕಾಲೇಜಿನಲ್ಲಿ ನಿರಂತರವಾಗಿ ಕಲಿಸಲಾಗುತ್ತಿದೆ. ಕಾಲೇಜು ವಿದ್ಯಾರ್ಥಿಗಳು ಎಲ್ಲೆಡೆ ಉತ್ತಮ ಸಾಧನೆ ತೋರುತ್ತಿದ್ದಾರೆ' ಎಂದರು.

'ಪ್ರಜಾವಾಣಿ' ಮೈಸೂರು ಬ್ಯೂರೋ ಮುಖ್ಯಸ್ಥ ಕೆ.ನರಸಿಂಹಮೂರ್ತಿ ಪೋಸ್ಟರ್ ಪ್ರದರ್ಶನಕ್ಕೆ ಚಾಲನೆ ನೀಡಿದರು. ಪ್ರಾಂಶುಪಾಲರಾದ ಡಾ. ಬಿ. ಆರ್. ಜಯಕುಮಾರಿ, ಶೈಕ್ಷಣಿಕ ವಿಭಾಗದ ಡೀನ್ ಡಾ. ಶ್ರೀಧರ ಹೆಚ್, ಪ್ರೊ.ಎಚ್.ಆರ್.ತಿಮ್ಮೇಗೌಡ, ವಿಭಾಗದ ಮುಖ್ಯಸ್ಥ ಎಲ್. ರವಿ ಅಯ್ಯರ್, ಪ್ರಯೋಗಾಲಯದ ತಂತ್ರಜ್ಞ ರಾಜೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

ವಿಭಾಗದ ವಿದ್ಯಾರ್ಥಿಗಳಾದ ಸಿಂಚನ, ಸುಪ್ರೀತ್ ಎಸ್.ಭಾರದ್ವಾಜ್, ವೃಷಾಂಕ್ ಅನಿಸಿಕೆಗಳನ್ನು ಹಂಚಿಕೊಂಡರು. ನಂತರ ವಿದ್ಯಾಸಂಸ್ಥೆಯ ಸಹೋದರ ಸಂಸ್ಥೆಗಳ ವಿದ್ಯಾರ್ಥಿಗಳು ಪೋಸ್ಟರ್‌ಗಳನ್ನು ವೀಕ್ಷಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 14.8.2022

ಎನ್ನೆಸ್ಸೆಸ್ ಸಹಯೋಗದಲ್ಲಿ ಮ್ಯಾರಾಥಾನ್ ಓಟದ ಸ್ಪರ್ಧೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತದ 75ನೇ ವರ್ಷದ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ನಗರದ ಜಯಲಕ್ಷ್ಮೀಪುರಂ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ, ಎನ್ ಸಿಸಿ ಮತ್ತು ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಮ್ಯಾರಾಥಾನ್ ಓಟವನ್ನು ಹಮ್ಮಿಕೊಳ್ಳಲಾಯಿತು.

• ನಿವೃತ್ತ ಪ್ರಾಂಶುಪಾಲ ಡಾ. ಸದಾಶಿವ ಭಟ್ ಅವರು ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ಮ್ಯಾರಾಥಾನ್ ಓಟಕ್ಕೆ ಚಾಲನೆ ನೀಡಿದರು.

ಈ ಸ್ಪರ್ಧೆಯಲ್ಲಿ ಎಸ್.ಎಂ. ಚೆಲುವೇಗೌಡ ಪ್ರಥಮ ಸ್ಥಾನ ಪಡೆದರು.



ಮಹಾಜನ ಪ್ರೌಢಶಾಲೆ ಕಿರಿಯ ವಿದ್ಯಾರ್ಥಿಗಳ ವಿಭಾಗದಲ್ಲಿ ದಕ್ಷತ್ ಪಿ, ಹಿತೇಷ್ ಬಿ.ಎಲ್ ಮತ್ತು ದುರ್ಗಪ್ರಸಾದ್ ಎಚ್.ಪಿ, ಕಿರಿಯ ವಿದ್ಯಾರ್ಥಿನಿಯರ ವಿಭಾಗದಲ್ಲಿ ತುಳಸಿ ಕೆ.ಆರ್, ವಿನೂತ ಸಿ ಮತ್ತು ಸಂಗೀತ ಕೆ.ಟಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು.

ಪುರುಷರ ವಿಭಾಗದಲ್ಲಿ ಮಿಲಿಂದ್ ಎಸ್. ಪ್ರಸಾದ್, ಸಾಗರ್ ಎಂ.ಕೆ. ಮತ್ತು ಹೇಮಂತ್ ಎಂ.ಎಸ್., ಮಹಿಳಾ ವಿಭಾಗದಲ್ಲಿ ನಿಸ್ಸಿ ಮೊಲ್, ಹರ್ಷಿನಿ ಚಿತಿಯಾರ್ ಆರ್. ಮತ್ತು ನಿಸ್ಸಿ ಫಿಲಿಪ್ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಭಾಸ್ಕರ್, ಮಧುಸೂದನ್, ಎನ್‌ಸಿಸಿ ಅಧಿಕಾರಿ ಗಳಾದ ಕ್ಯಾಪ್ಟನ್ ನಿಖಿಲ್ ಬಿ.ಆರ್., ಲೆಫ್ಟಿನೆಂಟ್ ಎಂ.ಆರ್. ಇಂದ್ರಾಣಿ, ಎನ್‌ಎಸ್‌ಎಸ್ ಸಂಚಾಲಕರಾದ ಡಾ. ದೊಡ್ಡರಸಯ್ಯ, ಡಾ. ಸೋಮಶೇಖರ್ ಮೊದಲಾದವರು ಇದ್ದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 19.8.2022

ಮಹಾಜನ ಕಾಲೇಜಿನಲ್ಲಿ ಸದ್ಭಾವನಾ ದಿವಸ್



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ವತಿಯಿಂದ ಸದ್ಭಾವನಾ ದಿವಸ್ ಆಚರಿಸಿತು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಕಾರ್ಯಕ್ರಮದ ಮಹತ್ವವನ್ನು ಕುರಿತು ಮಾತನಾಡಿ, ಎಲ್ಲ ಧರ್ಮಗಳು, ಭಾಷೆಗಳು ಮತ್ತು ಪ್ರದೇಶಗಳ ಜನರಲ್ಲಿ ರಾಷ್ಟ್ರೀಯ ಏಕೀಕರಣ ಹಾಗೂ ಕೋಮು ಸೌಹಾರ್ದತೆಯನ್ನು ಉತ್ತೇಜಿಸುವುದು ಈ ದಿನದ ವಿಶೇಷತೆಯಾಗಿದೆ. ಕೇವಲ ಭಾರತ ದೇಶದಲ್ಲಿಯೇ ಅಲ್ಲದೆ ಇಡೀ ವಿಶ್ವದಲ್ಲೂ ಶಾಂತಿ ಹಾಗೂ ಸಾಮರಸ್ಯವನ್ನು ಸಾರಲು ಶ್ರಮಿಸಿದ ಮಹಾನ್ ಪ್ರಧಾನಿ ದಿ. ರಾಜೀವ್‌ಗಾಂಧಿ ಅವರಾಗಿದ್ದರು ಎಂದು ಮನವರಿಕೆ ಮಾಡುತ್ತಾ ಸದ್ಭಾವನಾ ದಿನಾಚರಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಎನ್ನೆಸ್ಸೆಸ್ ಘಟಕಗಳ ಕಾರ್ಯಕ್ರಮಾಧಿಕಾರಿ ಡಾ.ಜೆ. ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 18 ಆಗಸ್ಟ್ 2022

ಅಪಾರ ಜ್ಞಾನ ಭಂಡಾರ ಹೊಂದಿರುವ ಸಂಸ್ಕೃತ ಅಧ್ಯಯನ ಮಾಡುವವರ ಸಂಖ್ಯೆ ವಿರಳ

ಸಂಸ್ಕೃತೋತ್ಸವದಲ್ಲಿ ಪ್ರೊ.ಡಾ.ಗುರುಪಾದ ಕೆ.ಹೆಗಡೆ ಬೇಸರ

ಮೈಸೂರು, ಆ.17(ಆರ್‌ಕೆಬಿ)– ಅಗಾಧ ಜ್ಞಾನ ಭಂಡಾರ ಹೊಂದಿರುವ ಸಂಸ್ಕೃತ ಭಾಷೆ ಎಲ್ಲಾ ಭಾರತೀಯ ಭಾಷೆಗಳ ಮಾತೃ ಸ್ಥಾನ ಹೊಂದಿರುವ ಸಂಸ್ಕೃತ ಭಾಷೆ ಅಗಾಧ ಜ್ಞಾನ ಭಂಡಾರ ವಾಗಿದೆ ಎಂದು ಪ್ರೊ.ಡಾ.ಗುರುಪಾದ ಕೆ.ಹೆಗಡೆ ತಿಳಿಸಿದರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ, ಸಂಸ್ಕೃತ ವಿಭಾಗ, ಸಂಸ್ಕೃತ ಭಾರತೀ ಸಹಯೋಗದಲ್ಲಿ ನಡೆದ ಸಂಸ್ಕೃತೋತ್ಸವದದಲ್ಲಿ ಅವರು ಮಾತನಾಡಿದರು.

ಸಂಸ್ಕೃತ ಭಾಷೆ ಯಾವುದೇ ಒಂದು ಜನಾಂಗಕ್ಕೆ ಸೀಮಿತವಾಗಿರದೆ ವಿಶ್ವದಾದ್ಯಂತ ಪಸರಿಸಿದೆ. ನಮ್ಮ ಜೀವನದ ದಿಕ್ಕನ್ನು ಬದಲಿಸುವಂತಹ ಅನೇಕ ವಿಚಾರಧಾರೆಗಳು ಸಂಸ್ಕೃತ ಸಾಹಿತ್ಯದಲ್ಲಿ ಇದ್ದರೂ ಇದನ್ನು ಅಧ್ಯಯನ ಮಾಡುವವರ ಸಂಖ್ಯೆ ಬಹಳ ವಿರಳವಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಭಾರತದ ಪ್ರಾಚೀನ ಭಾಷೆಯೂ ಧಾರ್ಮಿಕ ಮಹತ್ವವನ್ನೂ ಹೊಂದಿರುವಂತಹ ಸಂಸ್ಕೃತ ಭಾಷೆಯ ಉಳಿವಿಗಾಗಿ ಎಲ್ಲರೂ ಪ್ರಯತ್ನಿಸಬೇಕಾಗಿದೆ



ಎಂದರು. ಮಹಾಜನ ಸಂಸ್ಥೆಯ ಸ್ನಾತಕೋತ್ತರ ವಿಭಾಗದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾ ಚಾರ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 1.8.2022

■ ಮಹಾಜನ ಪ್ರಥಮ ದರ್ಜೆ ಕಾಲೇಜು: ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಾಗಾರ ಉದ್ಘಾಟನೆ- ಎಸ್ಪಿ ಆರ್, ಚೇತನ್, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತಿ- ಡಾ.ಬಿ.ಆರ್. ಜಯಕುಮಾರಿ, ಡಾ. ಎಸ್.ಆರ್. ರಮೇಶ್, ಜಯಲಕ್ಷ್ಮೀಪುರಂ, ಬೆಳಗ್ಗೆ 10.15.

ಸಂಯೋಜನ

ದಿನ ಪತ್ರಿಕೆ

ಸೋಮವಾರ, 1 ಆಗಸ್ಟ್ 2022

● ಕೌಶಲಾಭಿವೃದ್ಧಿ

ಬೆಳಿಗ್ಗೆ 10.15ಕ್ಕೆ, ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ), ಉದ್ಘಾಟನೆ-ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಅತಿಥಿಗಳು-ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ-ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ-ಎ.ವಿ.ಸಿ.-3 ಸಭಾಂಗಣ.

ಸಂಯೋಜನ

ದಿನ ಪತ್ರಿಕೆ

ಶನಿವಾರ, 13 ಆಗಸ್ಟ್ 2022

● ಮ್ಯಾರಥಾನ್

ಬೆಳಿಗ್ಗೆ 7.30ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ, ಎಸ್‌ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳು ಹಾಗೂ ಐಕ್ಯೂಎಸಿ, ಮುಖ್ಯಅತಿಥಿ-ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ಸದಾಶಿವ ಭಟ್, ಸ್ಥಳ-ಕಾಲೇಜು ಆವರಣ.

MFGE In the Eyes of the Press.....

ಆಂಪೋಲ
ದಿನ ಪತ್ರಿಕೆ

ಮಂಗಳವಾರ, 2 ಆಗಸ್ಟ್ 2022

ವಿದ್ಯಾರ್ಥಿಗಳಿಗೆ ನಿರಂತರ ಓದು ಅಗತ್ಯ: ಎಸ್ಪಿ

ಮಹಾಜನ ಕಾಲೇಜಿನಲ್ಲಿ 'ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲಾಭಿವೃದ್ಧಿ' ಕುರಿತ ಕಾರ್ಯಾಗಾರ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಎಂಟ್ರಿ ಟು ಸರ್ವಿಸ್ ಹಾಗೂ ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ 'ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲಾಭಿವೃದ್ಧಿ' ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ಪರಿಷ್ಠಾಧಿಕಾರಿ ಆರ್.ಚೇತನ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯ, ಸಮಯ ನಿರ್ವಹಣೆ, ಯೋಜನೆ, ನಿರಂತರ ಓದು, ಪರಿಶ್ರಮ ಮತ್ತು ಮುಂದಿನ ಏಳಿಗೆಗಾಗಿ ಕನಸನ್ನು ಕಾಣುವ ಹವ್ಯಾಸ, ಕನಸನ್ನು ನನಸಾಗಿಸುವ ಪ್ರವೃತ್ತಿ ಮೈಗೂಡಿಸಿಕೊಳ್ಳಬೇಕು ಎಂದರು.

ಕಾರ್ಯಾಗಾರದಲ್ಲಿ ಮೂರು ತಾಂತ್ರಿಕ ಅಧಿವೇಶನಗಳು ನಡೆದವು. ಮೊದಲನೇ ಅಧಿವೇಶನದ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರಿನ ಹರಿಪ್ರಸಾದ್ ಮತ್ತು ಐಎಎಸ್-ಕೆಎಎಸ್ ತರಬೇತಿ ಸಂಸ್ಥೆಯ ನಿರ್ದೇಶಕ ಜಿ.ಹರಿಪ್ರಸಾದ್ ಅವರು 'ನಾಗರೀಕ ಸೇವಾ ಪರೀಕ್ಷೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ' ವಿಷಯ ಕುರಿತು ವಿಚಾರ ಮಂಡಿಸಿದರು.

ಎರಡನೇ ಅಧಿವೇಶನದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದ ಹುಣಸೂರಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕ ಎಚ್.ಎನ್.ಗಿರೀಶ್ ಅವರು 'ನಾಗರಿಕ ಸೇವಾ



ಪರೀಕ್ಷೆಗಳ ನಿಯಮಗಳು ಮತ್ತು ಪೂರ್ವ ಸಿದ್ಧತೆ' ಕುರಿತು ಮಾತನಾಡಿದರು. ಮೂರನೇ ಅಧಿವೇಶನದಲ್ಲಿ ಧಾರವಾಡದ ಮಾಸ್ಟರ್ ಟ್ರೈನರ್-ಸ್ಕಿಲ್ ಡೆವಲಪ್ ಮೆಂಟ್ ಪ್ರೋಗ್ರಾಂ ಪಾರ್ಶ್ವನಾಥ್ ಡಿ.ಪಾಲಾಭಾವಿ ಅವರು 'ಬ್ಯಾಂಕಿಂಗ್ ಪರೀಕ್ಷೆಗಳು ಮತ್ತು ಕೌಶಲಾಭಿವೃದ್ಧಿ' ವಿಷಯ ಕುರಿತು ಮಾತನಾಡಿದರು.

ಕಾಲೇಜಿನ ಪರೀಕ್ಷಾ ವಿಭಾಗದ ನಿಯಂತ್ರಣಾಧಿಕಾರಿ ಆರ್.ಮಂಜುನಾಥ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ತುಮಕೂರು ಜಿಲ್ಲೆಯ ತಾಲ್ಲೂಕು ತಹಸಿಲ್ದಾರ್ ಮಹೇಂದರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್.ರಮೇಶ್ ಹಾಜರಿದ್ದರು. ಡಾ.ಎಚ್. ಶ್ರೀಧರ ಸ್ವಾಗತಿಸಿದರು. ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್.ರವಿ ಅಯ್ಯರ್ ವಂದಿಸಿದರು. ವಿದ್ಯಾರ್ಥಿನಿ ವಿಜಯಪ್ರಮೋದಿನಿ ನಿರೂಪಿಸಿದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಮಂಗಳವಾರ,2 ಆಗಸ್ಟ್ 2022

ಯಶಸ್ಸಿನ ಸೂತ್ರ ತಿಳಿಸಿದ ಎಸ್ಪಿ ಚೇತನ್

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ತರಬೇತಿ ಕಾರ್ಯಾಗಾರ

■ **ವಿಕ ಸುದ್ದಿಲೋಕ** ಮೈಸೂರು

ವಿದ್ಯಾರ್ಥಿಗಳ ಯಶಸ್ಸಿಗೆ ನಿರಂತರ ಓದು-ಪರಿಶ್ರಮ ಅಗತ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಭಾಗ, ಎಂಟ್ರಿ ಟು ಸರ್ವಿಸ್ ಹಾಗೂ ಐಕ್ಯೂಎಸಿ ಘಟಕಗಳ ಸಂಯುಕ್ತಾಶ್ರಯದಲ್ಲಿ ನಡೆದ ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲ್ಯಾಭಿವೃದ್ಧಿ' ಕುರಿತ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಹಳ್ಳಿಯಿಂದ ಬಂದ ನಾನು ಇಂದು ಒಳ್ಳೆಯ ಗೌರವಾನ್ವಿತ ಹುದ್ದೆಯಲ್ಲಿದ್ದೇನೆ. ನನ್ನ ಓದು, ವಿಷಯಾಸಕ್ತಿ, ಪರಿಶ್ರಮ ಮತ್ತು ಕುಟುಂಬಸ್ಥರ ಪ್ರೋತ್ಸಾಹ ಕೇಂದ್ರ ಲೋಕ ಸೇವಾ ಆಯೋಗ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ರ‍್ಯಾಂಕ್‌ಗಳಿಸಿ, ಐಪಿಎಸ್ ಹುದ್ದೆ ಅಲಂಕರಿಸಿ ಜನಸೇವೆ ಮಾಡಲು ಅವಕಾಶ ಒದಗಿ ಬಂದಿತು ಎಂದರು.

ಕೇಂದ್ರ ಲೋಕ ಸೇವಾ ಆಯೋಗ ಪ್ರತಿ ವರ್ಷವು ಐಎಎಸ್, ಐಪಿಎಸ್, ಐಎಫ್‌ಎಸ್, ಐಆರ್‌ಎಸ್ ಹಾಗೂ ಇನ್ನಿತರ ಹುದ್ದೆಗಳಿಗೆ ಅರ್ಜಿ ಕರೆಯುತ್ತದೆ. ಆಯೋಗ ನಡೆಸುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯ, ಸಮಯ ನಿರ್ವಹಣೆ, ಯೋಜನೆ, ನಿರಂತರ ಓದು, ಪರಿಶ್ರಮ ಮತ್ತು ಮುಂದಿನ ಏಳಿಗೆಗಾಗಿ ಕನಸನ್ನು ಕಾಣುವ ಹವ್ಯಾಸ, ಕನಸನ್ನು ನನಸಾಗಿಸುವ ಪ್ರವೃತ್ತಿ ಮೈಗೂಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಸಾಧಕರ ಅನುಭವದ ಮಾರ್ಗಸೂಚಿಯನ್ನು ವಿದ್ಯಾರ್ಥಿಗಳು ಪಾಲಿಸಿದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿ ಎಂದರು.

ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿದ್ಯಾರ್ಥಿಗಳು ನಡೆಸಿದ ಸಾಧಕರೊಂದಿಗಿನ ಸಂದರ್ಶನದ ವಿಡಿಯೋ ತುಣುಕು ಹಾಗೂ ಮಹಾಜನ ಕಾಲೇಜಿನ 'ಅಚೀವರ್' ವಾರ ಪತ್ರಿಕೆಯನ್ನು ಎಸ್ಪಿ ಆರ್.ಚೇತನ್ ಬಿಡುಗಡೆ ಗೊಳಿಸಿದರು. ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಐಎಎಸ್-ಕೆಎಎಸ್ ತರಬೇತಿ ಸಂಸ್ಥೆ ನಿರ್ದೇಶಕ ಜಿ. ಹರಿಪ್ರಸಾದ್, ಹುಣಸೂರಿನ ಸರಕಾರಿ ಬಾಲಕಿಯರ ಪಿಯು ಕಾಲೇಜಿನ ಎಚ್. ಎನ್. ಗಿರೀಶ್, ಶೈಕ್ಷಣಿಕ ಡೀನ್ ಡಾ. ಶ್ರೀಧರ, ಕಾಲೇಜಿನ ಪರೀಕ್ಷಾ ವಿಭಾಗದ ನಿಯಂತ್ರಣಾಧಿಕಾರಿ ಮಂಜುನಾಥ್, ಡಾ. ಎಚ್.ಆರ್. ತಿಮ್ಮೇಗೌಡ, ತಹಸೀಲ್ದಾರ್ ಮಹೇಂದರ್ ಇತರರು ಇದ್ದರು.



ನಗರದ ಎಸ್.ಬಿ.ಆರ್.ಆರ್.ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ರಾಜ್ಯಮಟ್ಟದ ಕಾರ್ಯಾಗಾರವನ್ನು ಎಸ್ಪಿ ಆರ್.ಚೇತನ್ ಉದ್ಘಾಟಿಸಿದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 4.8.2022



ಮೈಕಾ ಪ್ರಥಮ ದರ್ಜೆ ಕಾಲೇಜಿನಿಂದ ಆಯೋಜಿಸಿದ್ದ, ಮಹಿಳೆಯರ ಆಂತರ ಕಾಲೇಜು ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಾಫ್ಟ್‌ಬಾಲ್ ತಂಡವು ಎಟಿಎಂಇ ಕಾಲೇಜಿನ ವಿರುದ್ಧ 9-2 ಅಂತರದಲ್ಲಿ ಜಯಶೀಲರಾಗಿ ಪ್ರಥಮ ಸ್ಥಾನ ಪಡೆದಿದ್ದಾರೆ. ತಂಡದ ತರಬೇತುದಾರ ಕಾರ್ತಿಕ್, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ. ಎಚ್.ಎನ್. ಭಾಸ್ಕರ್, ತಂಡದ ನಾಯಕಿ ಸುಪ್ರಿತ ಸೋಮಶೇಖರ್, ಆಗ್ನೇಷ್, ಧಾಯಾ, ನಿಜಿಮೊಲ್, ಹರ್ಷಿಣಿ, ಲವ್ಯ, ಭವಾನಿ, ಅನುಷ, ಲಿನಿಟ, ನಿಸಿಪಿಲಿಪ್ ಇದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಆಗಸ್ಟ್ 4, 2022



ಮೈಸೂರು ಇನ್‌ಸ್ಟಿಟ್ಯೂಟ್ ಕಾಮರ್ಸ್ ಆ್ಯಂಡ್ ಆರ್ಟ್ಸ್ ಕಾಲೇಜು ಆಯೋಜಿಸಿದ್ದ ಸಾಫ್ಟ್‌ಬಾಲ್ ಟೂರ್ನಿಯಲ್ಲಿ ಎಟಿಎಂಇ ಎಂಜಿನಿಯರಿಂಗ್ ಕಾಲೇಜು ಮಣಿಸಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿತು. (ಎಡದಿಂದ ಬಲಕ್ಕೆ) ಕೋಚ್ ಕಾರ್ತಿಕ್, ಮಧುಸೂದನ ಪಿ.ಎಸ್, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಸಂಸ್ಥೆ ಕಾರ್ಯದರ್ಶಿ ಡಾ.ಬಿ.ಆರ್.ವಿಜಯಕುಮಾರಿ, ಪ್ರಾಂಶುಪಾಲ ಡಾ. ಭಾಸ್ಕರ್ ಎಚ್.ಎನ್. ತಂಡದ ನಾಯಕಿ ಸುಪ್ರೀತಾ ಮತ್ತು ವಿಜೇತರು

ಆಂದೋಲನ
ದಿನ ಪತ್ರಿಕೆ

ಬುಧವಾರ, 24 ಆಗಸ್ಟ್ 2022



ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ಮತ್ತು ಹೊಳೆನರಸೀಪುರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ನಡೆದ ಮಹಿಳೆಯರ ಅಂತರಕಾಲೇಜು ಅಂತರ ವಲಯ ಮಟ್ಟದ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದ್ದು, ಕ್ರೀಡಾಪಟುಗಳನ್ನು ಕಾಲೇಜಿನ ಆಡಳಿತ ಮಂಡಳಿ ಅಭಿನಂದಿಸಿದೆ. ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲ ರಾದ ಡಾ.ಬಿ. ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂದನ, ಡಾ.ಎಚ್.ಎನ್.ಭಾಸ್ಕರ್, ತಂಡದ ನಾಯಕರಾದ ನಿಜಿ ಮೋಲ್, ಎಂ.ಪಿ. ಗಾನವಿ, ನಿಸಿ ಮೋಲ್ ಮುಂತಾದವರು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 24.8.2022



ಹಾಸನ ಜಿಲ್ಲೆಯ ಹೊಳೆನರಸೀಪುರದ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ಮತ್ತು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ನಡೆದ ಮಹಿಳೆಯರ ಅಂತರಕಾಲೇಜು ಅಂತರ ವಲಯ ಮಟ್ಟದ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು ಸಮಗ್ರ ತಂಡ ಪ್ರಶಸ್ತಿ ಗಳಿಸಿದೆ. ತಂಡದ ನಾಯಕಿ ನಿಜಿ ಮೋಲ್, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್, ಸಿಇಒ ಡಾ. ಎಸ್.ಆರ್. ರಮೇಶ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ತಂಡದ ನಾಯಕಿ ಎಂ.ಪಿ. ಗಾನಾವಿ, ನಿಸಿಮೋಲ್ ಇದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಆಗಸ್ಟ್ 31, 2022



ಹೊಳೆನರಸೀಪುರದಲ್ಲಿ ಇತ್ತೀಚೆಗೆ ನಡೆದ ಮಹಿಳೆಯರ ಅಂತರಕಾಲೇಜು ಅಂತರ ವಲಯ ಮಟ್ಟದ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು ಸಮಗ್ರ ತಂಡ ಪ್ರಶಸ್ತಿ ಗಳಿಸಿತು. ಎಡದಿಂದ ಬಲಕ್ಕೆ: ನಿಜಿ ಮೋಲ್, ತಂಡದ ನಾಯಕಿ, ಪಿ.ಎಸ್. ಮಧುಸೂದನ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಸ್.ಆರ್.ರಮೇಶ್, ಸಿಇಒ ಡಾ. ಬಿ.ಆರ್.ಜಯಕುಮಾರಿ, ಪ್ರಾಂಶುಪಾಲ ಡಾ. ಎಚ್. ಎನ್.ಭಾಸ್ಕರ್ ಇದ್ದಾರೆ

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 5.8.2022

ಮಹಾಜನ ಕಾಲೇಜಿನಲ್ಲಿ ಸಾಂಸ್ಕೃತಿಕ ಸಂಜೆ ಸಂಭ್ರಮ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ವೇದಿಕೆಮತ್ತು ಐಕ್ಯೂಎಸಿಸಹಯೋಗದಲ್ಲಿ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರತಿಭಾನ್ವಿತ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿಪಾಲ್ಗೊಂಡು ಚಿತ್ರಕಲೆ, ಸಂಗೀತ, ನೃತ್ಯ, ಏಕಪಾತ್ರಾ ಭಿನಯ ಸೇರಿದಂತೆಹಲವು ಪ್ರತಿಭೆಪ್ರದರ್ಶಿಸಿದರು. ಈಸಂದರ್ಭದಲ್ಲಿಕಾಲೇಜಿನಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಪ್ರತಿಭಾ ವೇದಿಕೆಯ ಲೋಗೋ ಬಿಡುಗಡೆಗೊಳಿಸಿದರು.

ಈ ವೇಳೆ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥಡಾ.ಎಚ್.ಆರ್. ತಿಮ್ಮೇಗೌಡ, ಪ್ರತಿಭಾ ವೇದಿಕೆ ಸಂಚಾಲಕ ಎಂ. ನಾಗೇಶ, ಸಹ ಸಂಚಾಲಕ ಎನ್.ಸಿ. ಹಂಸವೇಣಿ ಮತ್ತು ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 26.8.2022

■ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪ, ಭಾಷಣ– ಡಾ.ಸುಚೇತನ್ ರಂಗಸ್ವಾಮಿ, ಡಾ,ಕೆ.ಸಿ. ಲತಾ, ಅಧ್ಯಕ್ಷತೆ– ಸಮ್ಯಕ್ ಎ. ಭರ್ತೂರ್, ಉಪಸ್ಥಿತರು– ಟಿ. ಮುರಳೀಧರ ಭಾಗವತ್, ಟಿ. ವಿಜಯಲಕ್ಷ್ಮೀ ಮುರಳೀಧರ್, ಪಿ. ಸರೋಜಮ್ಮ, ಎಸ್.ಆರ್. ರಮೇಶ್, ಜಯಲಕ್ಷ್ಮೀಪುರಂ, ಬೆಳಗ್ಗೆ 11.

ಸಂಯೋಜನ

ದಿನ ಪತ್ರಿಕೆ

ಶುಕ್ರವಾರ, 26 ಆಗಸ್ಟ್ 2022

● ಸಮಾರೋಪ ಸಮಾರಂಭ

ಬೆಳಿಗ್ಗೆ 11ಕ್ಕೆ, ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಪ್ರತಿಭಾ ವೇದಿಕೆ ಸಮಾರೋಪ ಭಾಷಣ–ಕರ್ನಾಟಕ ಶಾಸ್ತ್ರೀಯ ಸಂಗೀತಗಾರ ಡಾ.ಸುಚೇತನ್ ರಂಗಸ್ವಾಮಿ, ಬೆಂಗಳೂರು ದಕ್ಷಿಣ–ಪಶ್ಚಿಮ ಪ್ರಾದೇಶಿಕ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗ ಶೈಕ್ಷಣಿಕ ಅಧಿಕಾರಿ ಡಾ.ಕೆ.ಸಿ.ಲತಾ, ಅಧ್ಯಕ್ಷತೆ–ಅಂತಿಮ ಬಿ.ಎ. ವಿದ್ಯಾರ್ಥಿ ಸುಮ್ಯಕ್ ಎ.ಭರ್ತೂರ್, ಸ್ಥಳ–ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣ.

MFGE In the Eyes of the Press.....



ಪ್ರಜಾವಾಣಿ

ಸೋಮವಾರ • ಆಗಸ್ಟ್ 1, 2022

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಕೌಶಲಾಭಿವೃದ್ಧಿ ಕಾರ್ಯಾಗಾರ. ಉದ್ಘಾಟಕರು- ಎಸ್‌ಪಿ ಚೇತನ್ ಆರ್., ಅಧ್ಯಕ್ಷತೆ- ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಎವಿಸಿ-3 ಸಭಾಂಗಣ. ಬೆಳಿಗ್ಗೆ 10.15.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 1 ಆಗಸ್ಟ್ 2022

■ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಎಂಟ್ರಿ ಟು ಸರ್ವಿಸ್ ಮತ್ತು ಐಕ್ಯೂ ಎಸಿ ಘಟಕ : ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲ್ಯಾಭಿವೃದ್ಧಿ ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ, ಉದ್ಘಾಟನೆ: ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಸ್ಥಳ: ಎವಿಸಿ-3 ಸಭಾಂಗಣ, ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಬೆಳಗ್ಗೆ 10.15ಕ್ಕೆ.

ಪ್ರಜಾವಾಣಿ

ಶುಕ್ರವಾರ • ಆಗಸ್ಟ್ 26, 2022

ಮಹಾಜನ ವಿದ್ಯಾಸಂಸ್ಥೆ: ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಸಮಾರೋಪ, ಸ್ಥಳ-ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಬೆಳಿಗ್ಗೆ 11


ಆಂದೋಲನ
ದಿನ ಪತ್ರಿಕೆ

ಗುರುವಾರ, 22 ಸೆಪ್ಟೆಂಬರ್ 2022

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore & Re-accredited by NAAC with 'A' Grade, College with Potential for Excellence
Jayalakshmipuram, Mysuru – 570 012
Ph: 0821-2512065 Email: principal.fgc@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Subject	No.of Post	Post Vacant	Eligibility
01.	BCA	06	Full Time	The minimum qualification for the post of Assistant Professor is Postgraduate degree from any recognized university in the concerned subject, with a minimum of 55% aggregate marks with NET/SLET/Ph.D and preferably have teaching experience in Degree Colleges.
02.	Kannada	01	Full Time	
03.	History (Proficiency in English is must)	01	Part Time	
04.	Journalism & Mass Communication	01	Part Time	

Non - Teaching

Sl. No.	Post Name	No.of Post	Qualification
01.	System Administrator / Instructor	01	Any degree/diploma with Hardware Networking & MCP certification. 2 years of work experience in hardware & Networking
02.	Accounts Assistant	01	B.Com with Tally 9.0 and 2 years of work experience

For more details contact: 0821-2512065.

SBRR MAHAJANA LAW COLLEGE

Jayalakshmipuram, Mysuru-12
Ph: 0821-2511921 /2414670, Email: mes@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Name of the Post	No.of Post	Eligibility
1.	Principal	01	LLM degree from recognized University with a minimum of 55% aggregate marks and with NET/SLET/Ph.D. and 10 years of Teaching Experience.
2.	Assistant Professor	04	LLM degree from recognized University with a minimum of 55% aggregate marks and with NET/SLET/Ph.D.

Good Salary as per Mahajana Education Society's rules

Application along with supportive documents, Curriculum Vitae with a passport Photograph mentioning therein the email ID and contact Phone Number should be sent to **the Hon.Secretary, Mahajana Education Society (R), Jayalakshmipuram, Mysuru - 12,** so as to reach **on or before 29-09-2022.** The soft copy of the applications may be sent to **mes@mahajana.edu.in**

Sd/-	Sd/-	Sd/-	Sd/-
(Dr. B.R. Jayakumari)	(Sri.Prabhuswamy M.M)	(Dr. T. Vijayalakshmi Muralidhar)	(Sri. T. Muralidhar Bhagavat)
Principal - MFGC	Principal - Law	Hon. Secretary	President

THE TIMES OF INDIA

THURSDAY, SEPTEMBER 22, 2022

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore & Re-accredited by NAAC with 'A' Grade, College with Potential for Excellence
Jayalakshmipuram, Mysuru – 570 012
Ph: 0821-2512065 Email: principal.fgc@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Subject	No.of Post	Post Vacant	Eligibility
01.	BCA	06	Full Time	The minimum qualification for the post of Assistant Professor is Postgraduate degree from any recognized university in the concerned subject, with a minimum of 55% aggregate marks with NET/SLET/Ph.D and preferably have teaching experience in Degree Colleges.
02.	Kannada	01	Full Time	
03.	History (Proficiency in English is must)	01	Part Time	
04.	Journalism & Mass Communication	01	Part Time	

Non - Teaching

Sl. No.	Post Name	No.of Post	Qualification
01.	System Administrator / Instructor	01	Any degree/diploma with Hardware Networking & MCP certification. 2 years of work experience in hardware & Networking
02.	Accounts Assistant	01	B.Com with Tally 9.0 and 2 years of work experience

For more details contact: 0821-2512065.

SBRR MAHAJANA LAW COLLEGE

Jayalakshmipuram, Mysuru-12
Ph: 0821-2511921 /2414670, Email: mes@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Name of the Post	No.of Post	Eligibility
1.	Principal	01	LLM degree from recognized University with a minimum of 55% aggregate marks and with NET/SLET/Ph.D. and 10 years of Teaching Experience.
2.	Assistant Professor	04	LLM degree from recognized University with a minimum of 55% aggregate marks and with NET/SLET/Ph.D.
Good Salary as per Mahajana Education Society's rules			

Application along with supportive documents, Curriculum Vitae with a passport Photograph mentioning therein the email ID and contact Phone Number should be sent to **the Hon.Secretary, Mahajana Education Society (R), Jayalakshmipuram, Mysuru - 12,** so as to reach **on or before 29-09-2022.** The soft copy of the applications may be sent to **mes@mahajana.edu.in**

Sd/-	Sd/-	Sd/-	Sd/-
(Dr. B.R. Jayakumari)	(Sri.Prabhuswamy M.M)	(Dr. T. Vijayalakshmi Muralidhar)	(Sri. T. Muralidhar Bhagavat)
Principal - MFGC	Principal - Law	Hon. Secretary	President

ವಿಜಯ ಕರ್ನಾಟಕ
ಗುರುವಾರ,22 ಸೆಪ್ಟೆಂಬರ್ 2022

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore & Re-accredited by NAAC with 'A' Grade, College with Potential for Excellence
Jayalakshmipuram, Mysuru – 570 012
Ph: 0821-2512065 Email: principal.fgc@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Subject	No.of Post	Post Vacant	Eligibility
01.	BCA	06	Full Time	The minimum qualification for the post of Assistant Professor is Postgraduate degree from any recognized university in the concerned subject, with a minimum of 55% aggregate marks with NET/SLET/Ph.D and preferably have teaching experience in Degree Colleges.
02.	Kannada	01	Full Time	
03.	History (Proficiency in English is must)	01	Part Time	
04.	Journalism & Mass Communication	01	Part Time	

Non - Teaching

Sl. No.	Post Name	No.of Post	Qualification
01.	System Administrator / Instructor	01	Any degree/diploma with Hardware Networking & MCP certification. 2 years of work experience in hardware & Networking
02.	Accounts Assistant	01	B.Com with Tally 9.0 and 2 years of work experience

For more details contact: 0821-2512065.

SBRR MAHAJANA LAW COLLEGE

Jayalakshmipuram, Mysuru-12
Ph: 0821-2511921 /2414670, Email: mes@mahajana.edu.in

APPOINTMENT NOTIFICATION

Applications are invited from the qualified candidates for the following posts.

Sl. No.	Name of the Post	No.of Post	Eligibility
1.	Principal	01	LLM degree from recognized University with a minimum of 55% aggregate marks and with NET/SLET/Ph.D. and 10 years of Teaching Experience.
2.	Assistant Professor	04	LLM degree from recognized University with a minimum of 55% aggregate marks and with NET/SLET/Ph.D.

Good Salary as per Mahajana Education Society's rules

Application along with supportive documents, Curriculum Vitae with a passport Photograph mentioning therein the email ID and contact Phone Number should be sent to **the Hon.Secretary, Mahajana Education Society (R), Jayalakshmipuram, Mysuru - 12,** so as to reach **on or before 29-09-2022.** The soft copy of the applications may be sent to **mes@mahajana.edu.in**

Sd/-	Sd/-	Sd/-	Sd/-
(Dr. B.R. Jayakumari)	(Sri.Prabhuswamy M.M)	(Dr. T. Vijayalakshmi Muralidhar)	(Sri. T. Muralidhar Bhagavat)
Principal - MFGC	Principal - Law	Hon. Secretary	President

ಆಂದೋಲನ
ದಿನ ಪತ್ರಿಕೆ

ಗುರುವಾರ, 15 ಸೆಪ್ಟೆಂಬರ್ 2022

ತ್ರಿಭಾಷೆ ಕಲಿಕೆ ಅನಿವಾರ್ಯ: ಚಂದ್ರಶೇಖರ್



ಮೈಸೂರು: ತ್ರಿಭಾಷಾ ಸೂತ್ರದ ಅನ್ವಯ ಮಾತೃಭಾಷೆ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳನ್ನು ಕಲಿಯುವುದು ಅನಿವಾರ್ಯವಾಗಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಭಾಷೆ ಕಲಿತರೆ ಮುಂದೆ ಬದುಕು ರೂಪಿಸಿಕೊಳ್ಳಲು ನೆರವಾಗುತ್ತದೆ ಎಂದು ನಿವೃತ್ತ ಹಿಂದಿ ಪ್ರಾಧ್ಯಾಪಕ ಪ್ರೊ.ಜಿ.ಚಂದ್ರಶೇಖರ್ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ 'ಹಿಂದಿ ದಿವಸ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದಿ ರಾಷ್ಟ್ರಭಾಷೆಯಾಗಿ ಆಯ್ಕೆಯಾದ ಪ್ರಕ್ರಿಯೆಯನ್ನು ಸಂವಿಧಾನ ಸಭೆಯಲ್ಲಿ ಮುಂಶಿ ಹಾಗೂ ಅಯ್ಯರ್ ಅವರು ಮಂಡಿಸಿದ್ದಾರೆ. ಹದಿನೆಂಟು ಸಾಂವಿಧಾನಿಕ ಭಾಷೆಗಳಿಗೆ ನೀಡುವ ಏಕ ರೀತಿಯ ಗೌರವವನ್ನು ಹಿಂದಿ ಭಾಷೆಗೂ ನೀಡಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 13.9.2022

ಮಹಾಜನ ಪ್ರಥಮ ದರ್ಜೆ ಕಾಲೇಜು ನೂತನ ವಿದ್ಯಾರ್ಥಿಗಳ ಪರಿಚಯ



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪೂರ್ವ ಪರಿಚಯ ಕಾರ್ಯಕ್ರಮವನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪೂರ್ವ ಪರಿಚಯ ಕಾರ್ಯಕ್ರಮವನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಅತ್ಯುನ್ನತ ಶೈಕ್ಷಣಿಕ ಗುಣಮಟ್ಟದ ಕಾರಣಕ್ಕಾಗಿ ನಮ್ಮ ಕಾಲೇಜಿಗೆ ನ್ಯಾಕ್‌ನಿಂದ ಎ ಮಾನ್ಯತೆ ಹಾಗೂ ಸ್ವಾಯತ್ತತೆ ದೊರಕಿದೆ. ಇದಕ್ಕೆ ಪೂರಕವಾಗಿ ವಿದ್ಯಾಸಂಸ್ಥೆಯು ಎಲ್ಲಾ ಸವಲತ್ತುಗಳನ್ನು ಒದಗಿಸುತ್ತಿದೆ. ಅತ್ಯುನ್ನತ ಶ್ರೇಣಿಯಲ್ಲಿ (ಶೇ.95) ಪಾಸಾದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನಮ್ಮ ಸಂಸ್ಥೆ ನೀಡುತ್ತಿದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಸ್ನಾತಕ, ಸ್ನಾತಕೋತ್ತರ ಹಾಗೂ ಸಂಶೋಧನೆಯವರೆಗೂ ವಿಸ್ತರಿಸಿ ನ್ಯಾಕ್‌ನಿಂದ ಎ ಗ್ರೇಡ್ ಪಡೆದು ಸ್ವಾಯತ್ತತೆಯಿಂದ ಸಾಗಿದೆ. ಸಾಮಾಜಿಕ ಜವಾಬ್ದಾರಿಯಿಂದ, ಸಾಂಸ್ಕೃತಿಕ ಮನಸ್ಸಿನಿಂದ ಕೂಡಿ ಮೌಲ್ಯಗಳನ್ನು ಮೈಗೂಡಿಸಿಕೊಂಡು ಈ ದೇಶದ ಉತ್ತಮ ನಾಗರೀಕರಾಗಲು ಎಲ್ಲಾ ರೀತಿಯಿಂದಲೂ ನಾವು ನಿಮ್ಮೊಡನಿದ್ದೇವೆ ಎಂದು ಹೇಳಿದರು.

ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಸಹಾಯಕ ಪ್ರಾಧ್ಯಾಪಕಿ ಗೀತಾ, ಪೂರ್ಣಿಮಾ, ಸುನಿಲ್ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 14.9.2022

ಶಿಕ್ಷಕ, ವಿದ್ಯಾರ್ಥಿಗಳ ನಡುವಿನ ಬಂಧ ಚೆನ್ನಾಗಿರಲಿ

ಪೋಷಕರ ಸಮಾವೇಶದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್. ಶಿವಪ್ಪ ಸಲಹೆ

• ಕನ್ನಡಪ್ರಭ ವಾರ್ತೆ ಮೈಸೂರು



ಒಳ್ಳೆಯ ಮೇಷ್ಟು ಒಳ್ಳೆಯ ವಿದ್ಯಾರ್ಥಿಯಾಗಿರಬೇಕು. ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಒಡನಾಟ, ಲವಲವಿಕೆ ಮುಖ್ಯವಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್. ಶಿವಪ್ಪ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ 2022-23ನೇ ಸಾಲಿನ ಪೋಷಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಂದೆ ತಾಯಿಗಳಿಗೆ ಮಕ್ಕಳೇ ಜೀವ, ಅವರ ಭವಿಷ್ಯಕ್ಕಾಗಿ ಜೀವನವನ್ನೇ ಧಾರೆ ಎರೆಯುತ್ತಿದ್ದಾರೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು, ತಾಯಿಗೆ ಪರ್ಯಾಯ ಯಾವುದು ಇಲ್ಲ ಎಂದು ಹೇಳಿದರು.

ಮಕ್ಕಳಿಗೆ ಆದರ್ಶ, ನಡವಳಿಕೆ, ವ್ಯಕ್ತಿತ್ವ ವಿಕಸನ, ಕೌಶಲ್ಯ ಹೆಚ್ಚಾಗಿ ವಿದ್ಯಾಸಂಸ್ಥೆಗಳಿಂದ ದೊರಕುತ್ತದೆ. ಜವಾಬ್ದಾರಿಯುತವಾದ ಮಕ್ಕಳಲ್ಲಿ ಹೆಚ್ಚಾಗಿ ವಿದ್ಯೆಯ ಪರೋಮೋದೇಶವನ್ನು ತಿಳಿಸಿ ಅವರ ಮುಂದಿನ ಭವಿಷ್ಯವನ್ನು ನೆಲೆಗೊಳಿಸುವಲ್ಲಿ ಗುರುಗಳ ಪಾತ್ರ ಹೆಚ್ಚಾಗಿರುತ್ತದೆ ಎಂದರು.

ಮಕ್ಕಳ ಜೀವನದಲ್ಲಿ ಪೋಷಕರ ಪಾತ್ರ ಅಗಾಧ. ಯಾವುದೇ ವ್ಯಕ್ತಿಯ ವ್ಯಕ್ತಿತ್ವ ಅವನ ಬಾಲ್ಯದ ಅನುಭವಗಳ ಮೇಲೆ ನಿರ್ಮಿತವಾಗಿರುತ್ತದೆ. ಹೀಗಾಗಿ, ಪೋಷಕರು ಮನೆಯ ಹಾಗೂ ಸುತ್ತಮುತ್ತಲಿನ ಪರಿಸರವನ್ನು ನಿರ್ಮಲವಾಗಿಟ್ಟು, ಮಕ್ಕಳ ಮನಸ್ಸಿಗೆ ಯಾವುದೇ ಘಾಸಿಯಾಗದಂತೆ ನೋಡಿಕೊಳ್ಳಬೇಕು. ಇಂದಿನ ಜಾಗತೀಕರಣ ಯುಗದಲ್ಲಿ ಅಂತರ್ಜಾಲ, ಮೊಬೈಲ್ ಮತ್ತು ಇತರ ಸಾಮಾಜಿಕ ಜಾಲತಾಣಗಳು ಮಕ್ಕಳಮನಸ್ಸನ್ನುಕೆಡಿಸುವಲ್ಲಿಮುಖ್ಯ ಪಾತ್ರವಹಿಸುತ್ತಿದೆ. ಪೋಷಕರು ಇದರ ಬಗ್ಗೆ ಗಮನಹರಿಸಿ ಸಮಯವನ್ನು ಓದಿನ ಕಡೆ ಆಸಕ್ತಿವಹಿಸುವಂತೆ ಎಚ್ಚರಿಕೆ ವಹಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ನೂತನ ಶಿಕ್ಷಣ ನೀತಿಯು ಇಂದಿನ ಜಾಗತೀಕರಣ, ಕಂಪ್ಯೂಟರೀಕರಣ ಹಾಗೂ ಡಿಜಿಟಲೀಕರಣ ಯುಗದಲ್ಲಿ ಮಕ್ಕಳನ್ನು ಕೌಶಲ್ಯಯುತ ತರಬೇತಿ ಪಡೆಯಲು ಮತ್ತು ಮೌಲ್ಯಗಳನ್ನು ವೃದ್ಧಿಸಲು ಸಹಕಾರಿಯಾಗಿದೆ ಎಂದರು. ಇದೇ ವೇಳೆ ಪೋಷಕರ ಕಾರ್ಯಕಾರಿ ಮಂಡಳಿಯ 2022-23ನೇ ಸಾಲಿಗೆ ಅಧ್ಯಕ್ಷರಾಗಿ ಪಿ. ಸುಮಲತಾ, ಕಾರ್ಯದರ್ಶಿ ಕೆ.ಎಸ್. ವಿನಿತಾ ಹಾಗೂ ಸದಸ್ಯರಾಗಿ ಮಂಜುಳಾ ರಾವ್, ರೂಪಶ್ರೀ, ರಾಜು ಆಯ್ಕೆಗೊಂಡರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪೋಷಕರ ಸಂಘದ ಅಧ್ಯಕ್ಷೆ ಮನೆಯಪಂಡ ಶೀಲಾ ಬೋಪಣ್ಣ, ಕಾರ್ಯದರ್ಶಿ ಪಿ.ಎ. ವೇಣುಗೋಪಾಲ್, ಮಹಾಜನ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ರವಿಕುಮಾರ್ ಇದ್ದರು. ಡಾ. ವಿನೋದಮ್ಮ ಸ್ವಾಗತಿಸಿದರು. ಡಾ.ಬಿ.ಆರ್. ಅನಿತಾ ವಂದಿಸಿದರು. ಡಾ.ಎಚ್.ಆರ್. ತಿಮ್ಮೇಗೌಡ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 2.9.2022

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಪುರುಷರ ಅಂತರ ಕಾಲೇಜು ಅಂತರ ವಲ ಯ ಮಟ್ಟದ ಪಂದ್ಯಾವಳಿಯಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ತಂಡವು 29 ಅಂಕಗಳೊಂದಿಗೆ ಸಮಗ್ರ ತಂಡ ಪ್ರಶಸ್ತಿ ಗಳಿಸಿರುತ್ತದೆ. ಶೆಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಚೆಸ್, ಸಾಫ್ಟ್ ಬಾಲ್ (ಪ್ರಥಮ), ಬ್ಯಾಸ್ಕೆಟ್ ಬಾಲ್, ವಾಲಿಬಾಲ್, ಫುಟ್‌ಬಾಲ್ (ದ್ವಿತೀಯ). ತಂಡದ ಉಪನಾಯಕ ಮೋಹಿತ್‌ಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್, ತರಬೇತುದಾರ ಕಾರ್ತಿಕ್, ತಂಡದ ನಾಯಕ ಯಶ್‌ವಂತ್ ಹಾಗೂ ಕ್ರೀಡಾ ವಿದ್ಯಾರ್ಥಿಗಳನ್ನು ಇದ್ದಾರೆ.

MFGE In the Eyes of the Press.....

ಆಂಚೋಲನ
ದಿನ ಪತ್ರಿಕೆ

ಶುಕ್ರವಾರ, 2 ಸೆಪ್ಟೆಂಬರ್ 2022



ಮೈಕಾ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಸಾಫ್ಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಾಫ್ಟ್‌ಬಾಲ್ ತಂಡವು ಎಟಿಎಂಇ ಕಾಲೇಜಿನ ವಿರುದ್ಧ 9-2 ಅಂತರದಲ್ಲಿ ಜಯಶೀಲರಾಗಿ ಪ್ರಥಮ ಸ್ಥಾನ ಪಡೆದುಕೊಂಡಿತು.ತಂಡದ ತರಬೇತುದಾರ ಕಾರ್ತಿಕ್, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂಧನ ಮಾರ್ಗದರ್ಶನದಲ್ಲಿ ತಂಡದ ನಾಯಕಿ ಸುಪ್ರೀತ, ಸೋಮಶೇಖರ್, ಆಗ್ನೇಷ್, ಛಾಯಾ, ನಿಜಿಮೊಲ್, ಹರ್ಷಿಣಿ, ಲವ್ಯ, ಭವಾನಿ, ಅನುಷ, ಲಿನಿಟ, ನಿಸಿಪಿಲಿಪ್ ಈ ಸಾಧನೆ ಮಾಡಿದರು. ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್ ತಂಡವನ್ನು ಅಭಿನಂದಿಸಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 30.9.2022

ಎನ್‌ಇಪಿ 2020 ಕುರಿತು ಕಾರ್ಯಾಗಾರ

ಮಹಾಜನ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜನೆ

• ಕನ್ನಡಪ್ರಭ ವಾರ್ತೆ ಮೈಸೂರು

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರಲಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಜಾರಿ ಗೊಳಿಸುವಿಕೆ ಕುರಿತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಾಗಿ ಪುನಶ್ಚೇತನ ಕಾರ್ಯಕ್ರಮ ನಡೆಯಿತು. ಇತಿಹಾಸ ವಿಭಾಗ, ಭೂಗೋಳಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಮಹಾರಾಣಿ ಸ್ನಾತಕೋತ್ತರ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಹಾಗೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ವಿಶೇಷ ಅಧಿಕಾರಿಗಳಾದ ಡಾ. ಹೇಮಚಂದ್ರ ಅವರು ಎನ್‌ಇಪಿ 2020 ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳಿಗೆ ಆಗುವ ಅನುಕೂಲತೆ ಮತ್ತು ಅವಶ್ಯಕತೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ವಿಸ್ತಾರವಾಗಿ ತಿಳಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.



ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಳಪಡುವ ಹಾಗೂ ಸ್ವಾಯತ್ತ ಕಾಲೇಜುಗಳನ್ನು ಒಳಗೊಂಡಂತೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಹಾಗೂ ಉನ್ನತ ಮಟ್ಟದ ಬೋಧನೆ ಹಾಗೂ ಸಂಶೋಧನೆ ನಡೆಸುವ ಸಲುವಾಗಿ ಮತ್ತು ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿಯನ್ನು ಹಾಗೂ ಮೌಲ್ಯಾಧಾರಿತ ಪಠ್ಯಕ್ರಮವನ್ನು ಗಮನದಲ್ಲಿಟ್ಟುಕೊಂಡು ಅನುಮೋದನೆಗೊಳಿಸಲಾಗಿದೆ. ವಿದ್ಯಾರ್ಥಿಗಳ ಆಲೋಚನಾ ಶಕ್ತಿ, ಜ್ಞಾನ, ಸ್ಫೂರ್ತಿ, ಚೈತನ್ಯ, ಕೌಶಲ್ಯಾಭಿವೃದ್ಧಿ, ಮೌಲ್ಯ ಮತ್ತು ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ಹೊಸ ಶಿಕ್ಷಣ ನೀತಿಯು ಹೊಂದಿದೆ ಎಂದರು.

ಪೂಜಾ ಭಾಗವತ್ ಸ್ನಾತಕೋತ್ತರ ಕೇಂದ್ರದ ಎಂಬಿಎ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕ ಹರೀಶ್ ಮಾಚಯ್ಯ ಕೊದಂಡೇರ ಅವರು ಮಾನವರನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳುವಲ್ಲಿ ಮಾನವೀಯತೆಯ ಪಾತ್ರ, ಈ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಆಕರ್ಷಕವಾಗಿ ಉಪನ್ಯಾಸ ನೀಡಿದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವೃತ್ತಿಪರ ಶಿಕ್ಷಣ ಮತ್ತು ಕಟ್ಟು ನಿಟ್ಟಿನ ಪಠ್ಯಕ್ರಮಕ್ಕೆ ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ ಮೂಲಕ ಮಾರ್ಗದರ್ಶನ ನೀಡಲಾಗುವುದು. ಇದರಿಂದ ಪರಿಣಾಮಕಾರಿ ಬೋಧನಾಕ್ರಮದ ಅಭ್ಯಾಸದ ಮೂಲಕ ಕಲಿಕೆಯನ್ನು ಅನುಭವಗಳನ್ನು ಉತ್ತೇಜಿಸುವುದು ಎಂದರು.

ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಿ.ಎಸ್. ಸಿದ್ದರಾಜು ಸ್ವಾಗತಿಸಿದರು. ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ.ಆರ್. ನಂದೀಶ ವಂದಿಸಿದರು. ಭೂಗೋಳಶಾಸ್ತ್ರ ಸಹಾಯಕ ಡಾ.ಜಿ. ದೊಡ್ಡರಸಯ್ಯ, ಡಾ.ಕೆ.ಕೆ. ಸೋಮಶೇಖರ್, ಪತ್ರಿಕೋದ್ಯಮ ವಿಭಾಗದ ಎಲ್. ರವಿ, ಕಾಲೇಜಿನ ಮಾನವಿಕ ವಿಭಾಗದ ಎಲ್ಲ ಉಪನ್ಯಾಸಕರು ಹಾಗೂ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿ ರಾಜೀಕ್ ರಶೀದ್ ಕಾರ್ಯಕ್ರಮ ನಿರೂಪಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 1.10.2022

ಬಿಸಿಎ ಕೋರ್ಸ್‌ನಿಂದ ಕೌಶಲ್ಯ ಅಭಿವೃದ್ಧಿಪಡಿಸಿ: ಡಾ. ಶೋಭಾರಾಣಿ ಸಲಹೆ



ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜು ವತಿಯಿಂದ ಸ್ವಾಮಿ ವಿವೇಕಾನಂದ ಹಾಲ್‌ನಲ್ಲಿ ಬಿಸಿಎ ವಿದ್ಯಾರ್ಥಿಗಳಿಗಾಗಿ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅಮೃತ ಸ್ಕೂಲ್ ಆಫ್ ಆರ್ಟ್ಸ್ ಅಂಡ್ ಸೈನ್ಸ್‌ನ ಸಹ ಪ್ರಾಧ್ಯಾಪಕಿ ಡಾ. ಶೋಭರಾಣಿ ಮಾತನಾಡಿ, ಬಿಸಿಎ ಕೋರ್ಸ್‌ನ ಪಠ್ಯಕ್ರಮದ ವಿನ್ಯಾಸ ತಿಳಿಸುತ್ತ ಬಿಸಿಎ ಏಕೆ? ಮತ್ತು ತಂತ್ರಜ್ಞಾನಗಳ ಪ್ರಯೋಜನಗಳ ಬಗ್ಗೆ ತಿಳಿಸಿದರು. ಬಿಸಿಎ ಮತ್ತು ಬಿಎಸ್ಸಿಯ ಪಠ್ಯಕ್ರಮ ವಿಧಾನದ ಬಗೆಗೆ ಇರುವ ವ್ಯತ್ಯಾಸವನ್ನು ವಿವರವಾಗಿ ಹೇಳುತ್ತ, ಸಾಧಾರಣವಾಗಿ ಕಲಿಯುವ ಬದಲು ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸಿದರು. ವಿದ್ಯಾರ್ಥಿಗಳನ್ನು ಕಾರ್ಯಕ್ರಮ ಕೌಶಲ್ಯದೊಡನೆ ಸಜ್ಜುಗೊಳಿಸುವಂತೆ ಸೂಚಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಇದ್ದರು. ಸಹಾಯಕ ಪ್ರಾಧ್ಯಾಪಕಿ ಲಕ್ಷ್ಮೀಬಾಯಿ ನಿರೂಪಿಸಿದರು. ಹೇಮಲತಾಸಿಂಗ್ ಸಹಾಯಕ ಪ್ರಾಧ್ಯಾಪಕಿ ವಂದಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶನಿವಾರ, 29 ಅಕ್ಟೋಬರ್ 2022

ಕೋಟಿ ಕಂಠ ಗಾಯನ...



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜುನಲ್ಲಿ 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕೋಟಿ ಕಂಠ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಪ್ರಾಧ್ಯಾಪಕ ಎಂ.ನಾಗೇಶ್, ಸುನಿಲ್, ಕಾಲೇಜಿನ ಅಧ್ಯಾಪಕ, ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಜರಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶನಿವಾರ • ಅಕ್ಟೋಬರ್ 29, 2022



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಕೋಟಿ ಕಂಠ ಕನ್ನಡ ಗೀತ ಗಾಯನ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗೀತೆಗಳನ್ನು ಹಾಡಿದರು

ಕೋಟಿ ಕಂಠ ಕನ್ನಡ ಗೀತ ಗಾಯನ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಎಸ್.ಬಿ.ಆರ್. ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಹಮ್ಮಿಕೊಂಡಿದ್ದ 'ಕೋಟಿ ಕಂಠ ಕನ್ನಡ ಗೀತ ಗಾಯನ' ಕಾರ್ಯಕ್ರಮವನ್ನು ಕನ್ನಡ ವಿಭಾಗದಿಂದ ನಡೆಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ 'ಕನ್ನಡದ ನೆಲ, ಜಲ ಉಳಿಸಬೇಕು. ಆ ಮೂಲಕ ಕನ್ನಡವನ್ನು ಗೌರವಿಸುವ ಹಾಗೂ ಪ್ರೀತಿಸುವ ಮನೋಧರ್ಮವನ್ನು ನಾಡಿನ ಎಲ್ಲೆಡೆ ಪಸರಿಸಬೇಕು' ಎಂದು ಹೇಳಿದರು.

'ಸರ್ಕಾರದ ಈ ಕಾರ್ಯಕ್ರಮ ಕನ್ನಡ ಭಾಷೆಯ ಸ್ವಾಭಿಮಾನ ಮೆರೆಸುವ ಮತ್ತು ನಾಡು ನುಡಿಯ ಬೆಳವಣಿಗೆಗೆ ಯುವಜನತೆಯಲ್ಲಿ ಜಾಗೃತಿ ಮೂಡಿಸುವ ಅಭಿಯಾನವಾಗಿದೆ' ಎಂದು ಶ್ಲಾಘಿಸಿದರು.

ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 15.10.2022

ಕೌಶಲ್ಯಾಧಾರಿತ ತರಬೇತಿಗೆ ನೂತನ ಶಿಕ್ಷಣ ನೀತಿಯಿಂದ ಹೆಚ್ಚು ಸಹಕಾರಿ

ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಎನ್.ಕೆ. ಲೋಕನಾಥ್

• **ಕನ್ನಡಪ್ರಭ ವಾರ್ತೆ** ಮೈಸೂರು

ನೂತನ ಶಿಕ್ಷಣ ನೀತಿ ಪದವಿ ವಿದ್ಯಾರ್ಥಿಗಳಿಗೆ ವಿಷಯಾನುಸಾರ ಆಯ್ಕೆ ಮಾಡುವ ಹಕ್ಕನ್ನು ಕೊಟ್ಟಿದೆ ಮತ್ತು ಕೌಶಲ್ಯಧಾರಿತ ತರಬೇತಿ ಪಡೆಯಲು ಅನುಕೂಲಕಲ್ಪಿಸಿದೆ ಎಂದು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ. ಎನ್.ಕೆ. ಲೋಕನಾಥ್ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ಹಾಗೂ ಐಕ್ಯೂಎಸಿ ವಿಭಾಗದ ಆಯೋಜಿಸಿದ್ದ ನೂತನ ಶಿಕ್ಷಣ ನೀತಿ ಒಂದು ಅವಲೋಕನ ಮತ್ತು ಇದರ ಪ್ರಯೋಜನ ಕುರಿತು ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪದವಿ ಪ್ರವೇಶಾತಿಯಲ್ಲಿ ಮೊದಲ ವರ್ಷದಿಂದ ಯಾವುದಾ



ದರೂ ಎರಡು ವಿಷಯಗಳನ್ನು ಆಂತರ್ ಶಿಸ್ತಿಯ ಹಾಗೂ ಒಂದು ವಿಷಯವನ್ನು ಮುಕ್ತ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.

ನೂತನ ಶಿಕ್ಷಣನೀತಿಯ ಧ್ಯೇಯ ಕೌಶಲ್ಯ ತರಬೇತಿ ಮತ್ತು ಸಂಶೋಧನಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಲು ಪ್ರಯೋಜನವಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ನೂತನಶಿಕ್ಷಣನೀತಿಯುವಿದ್ಯಾರ್ಥಿಗಳಿಗೆ ಸಾಮರ್ಥ್ಯಶೀಲತೆ, ಕೌಶಲ್ಯ ಶೀಲತೆ ಯನ್ನುವೃದ್ಧಿಸುವ ಉದ್ದೇಶ ಹೊಂದಿದ್ದು, ವಿದ್ಯಾರ್ಥಿಗಳಿಗೆ ಆಸಕ್ತಿ ಇದ್ದ ವಿಷಯ ಗಳನ್ನು ಆಯ್ಕೆ ಮಾಡುವ ಅಧಿಕಾರ ಕೊಟ್ಟಿದೆ. ಇದನ್ನು ಸದುಪಯೋಗಪಡಿಸಿ ಕೊಂಡು ಮುಂದೆ ಒಳ್ಳೆಯ ಜೀವನ ರೂಪಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಬಿಸಿಎ ವಿಭಾಗದ ಮುಖ್ಯಸ್ಥ ಕೆ.ಎಸ್. ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಆರ್. ಮಂಜುನಾಥ್ ಹಾಗೂ ವಿಜ್ಞಾನ ವಿಭಾಗದ ಉಪನ್ಯಾಸಕರು ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ವಿ. ರಮ್ಯಾ ವಂದಿಸಿದರು ಹಾಗೂ ಬಿಸಿಎ ವಿಭಾಗದ ಸಹಾಯಕ ಪ್ರಾಧ್ಯಾಪಕಿ ನಯನ ಎನ್. ಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿಗಳು, ಬೋಧಕರು, ಬೋಧಕೇತರರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಬುಧವಾರ, 12 ಅಕ್ಟೋಬರ್ 2022

ಮಹಾಜನ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಣೆ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಕಾಲೇಜಿನ ಪ್ರಾಂಶು ಪಾಲರಾದ ಡಾ.ಬಿ.ಆರ್. ಜಯಕು ಮಾರಿ ಮಾತನಾಡಿ, ಬೇಡನಾಗಿ ಹುಟ್ಟಿದರೂ ಪರಿವರ್ತನೆದು ಕುಲು ಮೆಯಲ್ಲಿ ಉರಿದು ಜ್ಞಾನದಗ್ನಿಯಲ್ಲಿ ಮಿಂದು ಜ್ಞಾನಶಾಸ್ತ್ರದಿಂದ ಜಗತ್ತನ್ನೇ ಗೆದ್ದ ಮಹರ್ಷಿ ವಾಲ್ಮೀಕಿ ಅವರು ಶ್ರಮ, ಪರಿಶ್ರಮ ಹಾಗೂ ಅಚಲ ಸಾಧನೆಯಿಂದ ಈ ಜಗತ್ತಿಗೆ ಮಾದರಿ ಯಾಗಿದ್ದಾರೆ ಎಂದು ತಿಳಿಸಿದರು.

ರಾಮಾಯಣದಲ್ಲಿ ಅನುಕಂಪ, ಆದರ್ಶ ಸಮಾಜದ ನಿರ್ಮಾಣ, ತ್ಯಾಗ, ಸಹೋದರತೆ, ಅಸಮಾನತೆ ನಿರ್ಮೂಲನೆ, ಉತ್ತಮ ನಡೆ ಇರುವುದರಿಂದ ನಾವೆಲ್ಲರೂ ರಾಮಾ ಯಣದಲ್ಲಿ ವಾಲ್ಮೀಕಿ ಕೊಟ್ಟಿರುವ ಈ ಮೌಲ್ಯಗಳನ್ನು ರೂಪಿಸಿಕೊಳ್ಳಬೇಕು. ಪ್ರಪಂಚದಲ್ಲಿ ಬಂದಿರುವ ಮಹಾ ಕಾವ್ಯಗಳಿಗೆ ಹೋಲಿಕೆ ಮಾಡಿದರೆ ರಾಮಾಯಣ ಬಹಳ ಭಿನ್ನವಾಗಿದೆ. ಇಡೀ ಜಗತ್ತಿಗೆ ರಾಮಾಯಣದ ಮೂಲಕ ಸಂಸ್ಕೃತಿಯನ್ನು ಸಾರಿದ್ದಾರೆ ಎಂದು ಹೇಳಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇ ಗೌಡ, ಅಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 16.11.2022

ಅವಲೋಕನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಭಿಮತ |ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಪತ್ರಿಕೋದ್ಯಮ ವಿಭಾಗದಿಂದ ಕಾರ್ಯಾಗಾರ

ಸ್ವಾತಂತ್ರ್ಯ ಹೋರಾಟದಲ್ಲಿ ವೃತ್ತಪತ್ರಿಕೆಗಳ ಪಾತ್ರ ಪ್ರಮುಖ

• ಕನ್ನಡಪ್ರಭ ವಾರ್ತೆ ಮೈಸೂರು

ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿದ್ದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ವೃತ್ತಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿದ್ದವು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹೇಳಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸಮತ್ತುಪತ್ರಿಕೋದ್ಯಮವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತಪತ್ರಿಕೆಗಳ ಪಾತ್ರ' ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಕ್ಕೆ ಪತ್ರಿಕೆಗಳು ಒಗ್ಗಟ್ಟಾಗಿ ಕೈಜೋಡಿಸಿದವು. ಲೇಖನಗಳು, ಸುದ್ದಿ, ಸಂಪಾದಕೀಯ ಮತ್ತು ಘಟನಾವಳಿಗಳ ಚಿತ್ರಣಗಳನ್ನು ಜನರಿಗೆ ಮನಮುಟ್ಟುವ ರೀತಿಯಲ್ಲಿ ತಲುಪಿಸಿ ಹೋರಾಟದ ಮನೋಭಾವವನ್ನು ಮತ್ತು ದೇಶಪ್ರೇಮದ ಬಗ್ಗೆ ಕಿಚ್ಚನ್ನು ಹಚ್ಚಲು ಪತ್ರಿಕೆಗಳು ಮುನ್ನುಡಿ ಬರೆದವು ಎಂದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತಪತ್ರಿಕೆಗಳ ಪಾತ್ರ ಕುರಿತು ಕಾರ್ಯಾಗಾರವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಡಾ.ಸುಕನ್ಯಾ, ಡಾ.ಎಚ್. ಆರ್. ತಿಮ್ಮೇಗೌಡ, ಎಲ್. ರವಿ ಅಯ್ಯರ್, ಡಾ.ಎಚ್. ಶ್ರೀಧರ್, ಎ.ಆರ್. ನಂದೀಶ ಇದ್ದಾರೆ.

ದೇಶದ ಮೂಲೆಮೂಲೆಗಳಲ್ಲಿನಡೆಯುವ ಮಾಹಿತಿಗಳನ್ನು ಜನರಿಗೆ ತಲುಪಿಸುವುದು ಅಂದಿನಪತ್ರಿಕೆಗಳಮೂಲಉದ್ದೇಶವಾಗಿತ್ತು. ಬಹಳಷ್ಟು ಸ್ವಾತಂತ್ರ್ಯ ಹೋರಾಟಗಾರರು ತಮ್ಮದೇ ಆದ ಪತ್ರಿಕೆಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಗುರಿ ಇಟ್ಟುಕೊಂಡು ಹೊರತಂದರು. ಇವರಲ್ಲಿ ಪ್ರಮುಖರಾಗಿ ರಾಜರಾಮ್ ಮೋಹನ್ ರಾಯ್, ಮಹಾತ್ಮಗಾಂಧಿ, ಬಾಲಗಂಗಾಧರ ತಿಲಕ್, ಡಾ. ಬಿ.ಆರ್. ಅಂಬೇಡ್ಕರ್, ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಮೊದಲಾದವರು ಸೇರಿದ್ದಾರೆ ಎಂದು ಸ್ಮರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಪತ್ರಿಕೆಗಳು ಎಂದೆಂದಿಗೂ ನಿರಂತರ. ವಿದ್ಯಾರ್ಥಿಗಳು ಪತ್ರಿಕೆಗಳನ್ನು ನಿಯತಕಾಲಿಕೆಗಳನ್ನು ಪ್ರತಿದಿನ ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಾಗೂ ಜ್ಞಾನವನ್ನು ವೃದ್ಧಿಸಲು ಸಹಕಾರಿಯಾಗಿವೆ. ಇಂದು ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಮೊರೆಹೋಗಿದ್ದಾರೆ. ಇದರಿಂದ ಅನಾನೂಕೂಲಗಳೇ ಹೆಚ್ಚು ಎಂದರು.

ನಂತರ ನಡೆದ ತಾಂತ್ರಿಕ ಅಧಿವೇಶನದಲ್ಲಿ 'ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತ ಪತ್ರಿಕೆಗಳ ಬೆಳವಣಿಗೆ' ಕುರಿತು ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಡೀನ್, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಪ್ರಾಧ್ಯಾಪಕ ಡಾ. ಸುಕನ್ಯಾ. 'ಕರ್ನಾಟಕ ಸ್ವಾತಂತ್ರ್ಯ ಚಳುವಳಿಯಲ್ಲಿ ಪತ್ರಿಕೆಗಳ ಪಾತ್ರ' ಎಂಬ ಕುರಿತು ಜೆಎಸ್‌ಎಸ್ ಮಹಿಳಾ ಕಾಲೇಜಿನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ನರೇಂದ್ರಪ್ರಸಾದ್ ಉಪನ್ಯಾಸ ನೀಡಿದರು. ಈ ಎರಡು ಅಧಿವೇಶನಗಳು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ಹಾಗೂ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಯೋಜನಕಾರಿಯಾಗಿತ್ತು.

ಕಾಲೇಜಿನ ಶೈಕ್ಷಣಿಕ ಸಲಹೆಗಾರ ಹಾಗೂ ಕಾರ್ಯನಿರ್ವಾಹಣಾಧಿಕಾರಿ ಡಾ. ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿದ್ದರು.

ವಿದ್ಯಾರ್ಥಿ ಸುಪ್ರೀತ್ ಎಸ್. ಭಾರದ್ವಾಜ್ ಪ್ರಾರ್ಥಿಸಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ.ಆರ್. ನಂದೀಶ ಎ.ಆರ್. ವಂದಿಸಿದರು. ವಿದ್ಯಾರ್ಥಿನಿ ಸೃಷ್ಟಿ ಆರ್. ಜೋಯಿಸ್ ನಿರೂಪಿಸಿದರು.

ಕಾರ್ಯಾಗಾರದಲ್ಲಿ ಇತಿಹಾಸ ಹಾಗೂ ಪತ್ರಿಕೋದ್ಯಮವಿಭಾಗಗಳವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಕಾಲೇಜಿನ ವಿವಿಧ ವಿಭಾಗಗಳ ಉಪನ್ಯಾಸಕರು ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಬುಧವಾರ 16 ನವೆಂಬರ್ 2022

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವೃತ್ತಪತ್ರಿಕೆಗಳ ಪಾತ್ರ ಪ್ರಮುಖವಾದುದು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಪತ್ರಿಕೋದ್ಯಮ ವಿಭಾಗದಿಂದ ಕಾರ್ಯಾಗಾರ

ಮೈಸೂರು, ನ.15– ಬ್ರಿಟಿಷರ ದಾಸ್ಯದ ಸಂಕೋಲೆಯಲ್ಲಿದ್ದ ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ವೃತ್ತಪತ್ರಿಕೆಗಳು ಪ್ರಮುಖ ಪಾತ್ರ ವಹಿಸಿದ್ದವು ಎಂದು ಹಿರಿಯ ಪತ್ರಕರ್ತ ಅಂಕಿ ಪ್ರಸನ್ನಕುಮಾರ್ ಹೇಳಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಮತ್ತು ಪತ್ರಿಕೋದ್ಯಮ ವಿಭಾಗಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ 'ಸ್ವಾತಂತ್ರ್ಯ ಪೂರ್ವದಲ್ಲಿ ವೃತ್ತ ಪತ್ರಿಕೆಗಳ ಪಾತ್ರ' ಕುರಿತ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಕ್ಕೆ ಪತ್ರಿಕೆಗಳು ಒಟ್ಟಾಗಿ ಕೈಜೋಡಿಸಿದವು. ಲೇಖನಿಗಳು, ಸುದ್ದಿ, ಸಂಪಾದಕೀಯ ಮತ್ತು ಘಟನಾವಳಿಗಳ ಚಿತ್ರಣಗಳನ್ನು ಜನರಿಗೆ ಮನಮುಟ್ಟುವ ರೀತಿಯಲ್ಲಿ ತಲುಪಿಸಿ ಹೋರಾಟದ ಮನೋಭಾವವನ್ನು ಮತ್ತು ದೇಶಪ್ರೇಮದ ಬಗ್ಗೆ ಕಿಚ್ಚನ್ನು ಹಚ್ಚಲು ಪತ್ರಿಕೆಗಳು ಮುನ್ನುಡಿ ಬರೆದವು ಎಂದರು.

ದೇಶದ ಮೂಲೆ ಮೂಲೆಗಳಲ್ಲಿ ನಡೆಯುವ ಮಾಹಿತಿಗಳನ್ನು ಜನರಿಗೆ ತಲುಪಿಸುವುದು ಅಂದಿನ ಪತ್ರಿಕೆಗಳ ಮೂಲ ಉದ್ದೇಶವಾಗಿತ್ತು. ಬಹಳಷ್ಟು ಸ್ವಾತಂತ್ರ್ಯ ಹೋರಾಟಗಾರರು ತಮ್ಮದೇ ಆದ ಪತ್ರಿಕೆಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಹೊರತಂದರು. ಇವರಲ್ಲಿ ಪ್ರಮುಖರಾಗಿ ರಾಜರಾಮ್ ಮೋಹನ್‌ರಾಯ್, ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಡಾ. ಬಿ.ಆರ್. ಅಂಬೇಡ್ಕರ್, ಎಂ. ವೆಂಕಟಕೃಷ್ಣಯ್ಯ (ತಾತಯ್ಯ) ಮೊದಲಾದವರು ಸೇರಿದ್ದಾರೆ ನಂಜನಗೂಡಿನ ತಿರುಮಲಾಂಬ ರಾಜ್ಯದ ಮೊದಲ ಮಹಿಳಾ ಪತ್ರಕರ್ತೆ ಎನಿಸಿಕೊಂಡಿದ್ದರು ಎಂದರು. ಮಾಧ್ಯಮ ಎಂದರೆ ಪ್ರಜಾ ಪ್ರಭುತ್ವದ ಕಾವಲು ನಾಯಿ. ಪ್ರಜೆಗಳಿಗೆ ತಿಳಿಹೇಳುವ ಮೂಲಕ ಎಚ್ಚರಿಕೆಯ ಗಂಟೆಯನ್ನು ಬಾರಿಸಬೇಕು. ಜನರಿಗೂ ಸರ್ಕಾರಕ್ಕೂ ಸೇತುವೆಯಾಗಿ ನಿಲ್ಲಬೇಕು. ಆದರೆ ಇಂದು ಮಾಧ್ಯಮದಲ್ಲಿ ನೈತಿಕತೆ ಕುಗ್ಗುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, ವಿದ್ಯಾರ್ಥಿಗಳು ಪತ್ರಿಕೆಗಳು, ನಿಯತಕಾಲಿಕೆಗಳನ್ನು ಪ್ರತಿದಿನ ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಹಾಗೂ ಜ್ಞಾನವನ್ನು ವೃದ್ಧಿಸಲು ಸಹಕಾರಿಯಾಗಲಿದೆ. ಇಂದು ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಮೊರೆ ಹೋಗಿದ್ದಾರೆ. ಇದರಿಂದ ಅನಾನುಕೂಲಗಳೇ ಹೆಚ್ಚು ಎಂದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ವೃತ್ತಪತ್ರಿಕೆಗಳ ಪಾತ್ರ ಕುರಿತ ಕಾರ್ಯಾಗಾರವನ್ನು ಹಿರಿಯ ಪತ್ರಕರ್ತ ಅಂಕಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ಡಾ.ಸುಕನ್ಯಾ, ಡಾ.ಎಚ್.ಆರ್. ತಿಮ್ಮೇಗೌಡ, ಎಲ್. ರವಿ ಅಯ್ಯರ್, ಡಾ.ಎಚ್. ಶ್ರೀಧರ್, ಎ.ಆರ್. ನಂದೀಶ್ ಇದ್ದಾರೆ.

ಕಾಲೇಜಿನ ಶೈಕ್ಷಣಿಕ ಸಲಹೆಗಾರ ಹಾಗೂ ಕಾರ್ಯನಿರ್ವಾಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಮತ್ತು ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಉಪಸ್ಥಿತರಿದ್ದರು. ವಿದ್ಯಾರ್ಥಿ ಸುಪ್ರೀತ್ ಎಸ್. ಭಾರದ್ವಾಜ್ ಪ್ರಾರ್ಥಿಸಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್.ರವಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಎ.ಆರ್. ನಂದೀಶ ಎ.ಆರ್. ವಂದಿಸಿದರು. ವಿದ್ಯಾರ್ಥಿನಿ ಸೃಷ್ಟಿ ಆರ್. ಜೋಯಿಸ್ ಕಾರ್ಯಕ್ರಮ ನಿರೂಪಿಸಿದರು.

MFGE In the Eyes of the Press.....

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಗುರುವಾರ 24.11.2022

ಬಜಾಜ್ ಫಿನ್‌ಸರ್ವ್‌ನಿಂದ ಉದ್ಯೋಗಾವಕಾಶ ಕಾರ್ಯಕ್ರಮ



ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮತ್ತು ಪ್ಲೇಸ್‌ಮೆಂಟ್ ಹಾಗೂ ಕೆರಿಯರ್ ಗೈಡೆನ್ಸ್ ಸೆಲ್ ಸಹಯೋಗದಲ್ಲಿ ಬಿಯಾಂಡ್ ಸಿಪಿಬಿಎಫ್‌ಐ ಪುನಶ್ಚೇತನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ರಶ್ಮಿ ಮನ್ಸುಖಾನಿ ಆಗಮಿಸಿದ್ದರು. ಈ ಕಾರ್ಯಕ್ರಮವು ಬ್ಯಾಂಕುಗಳು, ಹಣಕಾಸು ಕಂಪನಿಗಳು ಮತ್ತು ವಿಮಾ ಕಂಪನಿಗಳ ಚಿಲ್ಲರೆ ವ್ಯಾಪಾರದ ಮೇಲೆ ಕೇಂದ್ರೀಕೃತವಾಗಿದೆ. ಕಾರ್ಪೊರೇಟ್ ವ್ಯವಹಾರಕ್ಕೆ ಹೋಲಿಸಿದರೆ ಪದವೀಧರರ ಅವಶ್ಯಕತೆ ಹೆಚ್ಚಿರುತ್ತದೆ. ಉದ್ಯೋಗಾಧಾರಿತ ಕಾರ್ಯಕ್ರಮವು ಒಂದು ಅವಧಿಗೆ ತರಬೇತಿ ಕಾರ್ಯಕ್ರಮ ನೀಡುವ ಸಿಎಸ್‌ಆರ್ ಉಪಕ್ರಮವಾಗಿದೆ. 96 ಗಂಟೆಗಳ ಬಿಕಾಂ ವಿದ್ಯಾರ್ಥಿಗಳಿಗೆ 4 ಕೋರ್ಸ್‌ಗಳಾಗಿ ವಿಂಗಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ 130 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಯೋಜನೆ ಮುಖ್ಯಸ್ಥೆ ರಶ್ಮಿ ಮನ್ಸುಖಾನಿ, ವಾಲ್ಚಂದ್ ಪ್ಲಸ್‌ನ ಜಿ.ಪಿ. ರಾಜೀವ್, ಸಹಾಯಕ ಪ್ರಾಧ್ಯಾಪಕಿ ಎಚ್.ಎಲ್. ಸೌಮ್ಯಾ, ರಜಿನಿ ಮೊದಲಾದವರು ಇದ್ದರು.

ಅಂಚೋಲನ
ದಿನ ಪತ್ರಿಕೆ

ಶುಕ್ರವಾರ, 18 ನವೆಂಬರ್ 2022

ಮಹಾಜನ ಕಾಲೇಜಿನಲ್ಲಿ ರಕ್ತದಾನ ಶಿಬಿರ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ, ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತು ರೆಡ್‌ಕ್ರಾಸ್ ಹಾಗೂ ಮೈಸೂರಿನ ಒನ್ನಿಮಂಟಪದ ಸೇಂಟ್ ಜೋಸೆಫ್ ಆಸ್ಪತ್ರೆ ಸಹಯೋಗದಲ್ಲಿ 'ರಕ್ತದಾನ' ಶಿಬಿರ ನಡೆಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 101 ವಿದ್ಯಾರ್ಥಿಗಳು ಸೇಂಟ್ ಜೋಸೆಫ್ ಆಸ್ಪತ್ರೆ ಸಿಬ್ಬಂದಿ ನಡೆಸಿದ ಎಲ್ಲ ಅಗತ್ಯ ಪರೀಕ್ಷೆಗಳೊಂದಿಗೆ ರಕ್ತದಾನ ಮಾಡಿದರು. ಸೇಂಟ್ ಜೋಸೆಫ್ ಆಸ್ಪತ್ರೆ ರಕ್ತನಿಧಿ ಕೇಂದ್ರದ ಆಡಳಿತಾಧಿಕಾರಿ ಎಚ್.ಕೆ.ರಜನಿ, ಪ್ರಭಾರ ತಂತ್ರಜ್ಞ ಮಹಮ್ಮದ್ ಇಬ್ರಾಹಿಂ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್.ಭಾಸ್ಕರ್, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಡಾ.ಜಿ.ದೊಡ್ಡರಸಯ್ಯ, ರೆಡ್‌ಕ್ರಾಸ್ ಅಧಿಕಾರಿ ಎಂ.ಎಸ್.ರಾಧಾ, ಹವಾಲ್ದಾರ್ ಆರ್. ಸಿದ್ದಲಿಂಗಯ್ಯ , 13 ಕರ್ನಾಟಕ ಬೆಟಾಲಿಯನ್ ಮತ್ತು ಆಸ್ಪತ್ರೆಯ ನಾಲ್ವರು ಕಾರ್ಯನಿರತ ಸಿಬ್ಬಂದಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.



MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 18.11.2022

ಸಂಘಸಂಸ್ಥೆಗಳ ಸಹಯೋಗದಲ್ಲಿ ಮಹಾಜನ ಕಾಲೇಜಲ್ಲಿ ರಕ್ತದಾನ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗ, ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತು ರೆಡ್‌ಕ್ರಾಸ್ ಹಾಗೂ ಬನ್ನಿಮಂಟಪದ ಸೆಂಟ್ ಜೋಸೆಫ್ ಆಸ್ಪತ್ರೆಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸುಮಾರು 101 ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಸೆಂಟ್ ಜೋಸೆಫ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಪ್ರಭಾರಿ ತಂತ್ರಜ್ಞ ಮಹಮ್ಮದ್ ಇಬ್ರಾಹಿಂ ಅವರು, ರಕ್ತದ ಮಹತ್ವದ ಸಂಗತಿಗಳು, ರಕ್ತದ ಮಹತ್ವ, ರಕ್ತದ ಘಟಕಗಳು, ರಕ್ತದಾನದ ವಿಧಾನ, ರಕ್ತದಾನದ ಅರ್ಹತೆ ಮತ್ತು ರಕ್ತದಾನದ ಆರೋಗ್ಯ ಪ್ರಯೋಜನಗಳ ಕುರಿತು ಅರಿವು ಮೂಡಿಸಿದರು.

ಸೆಂಟ್ ಜೋಸೆಫ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಆಡಳಿತಾಧಿಕಾರಿ ಎಚ್.ಕೆ. ರಜನಿ, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ, ರೆಡ್‌ಕ್ರಾಸ್ ಅಧಿಕಾರಿ ಎಂ.ಎಸ್. ರಾಧಾ, 13 ಕರ್ನಾಟಕ ಬೆಟಾಲಿಯನ್ ನ ಸುಬೇದಾರ್ ರಾಮ್ ನಿವಾಸ್, ಹವಾಲ್ದಾರ್ ಆರ್. ಸಿದ್ದಲಿಂಗಯ್ಯ, ಆಸ್ಪತ್ರೆಯ ಸಿಬ್ಬಂದಿ ಇದ್ದರು.



ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 25.11.2022

ಉದ್ಯಮಶೀಲತೆ ಕುರಿತು ವಿಶೇಷ ಉಪನ್ಯಾಸ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗವು ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಒಳನೋಟಗಳು ಮತ್ತು ವಿಧಾನಗಳು ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಉದ್ಯಮಿ ಟ್ರೂಲಿ ಎಸೆನ್ಷಿಯಲ್ಸ್‌ನ ಸಂಸ್ಥಾಪಕ ಅಕ್ಷರಕುಮಾರ್ ಉಪನ್ಯಾಸ ನೀಡಿ, ಭವಿಷ್ಯವನ್ನು ರೂಪಿಸಿಕೊಳ್ಳಲು ಉದ್ಯಮಿಗಳಾಗುವುದು ಉತ್ತಮ ಮಾರ್ಗ ಎಂದು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಅಷ್ಟೇ ಅಲ್ಲದೆ ಟ್ರೂಲಿ ಎಸೆನ್ಷಿಯಲ್ಸ್‌ನ ಉತ್ಪಾದನೆಗಳು ದೇಶ ವಿದೇಶಗಳಲ್ಲಿ ಮಾರಾಟವಾಗುತ್ತಿರುವುದು ನಮ್ಮ ಸಂಸ್ಥೆಗೆ ಹೆಮ್ಮೆ ತಂದಿದೆ ಎಂದು ಅವರು ಹೇಳಿದರು.

ಉದ್ಯಮಿಗಳಾಗುವುದರಿಂದ ದೇಶದ ನಿರುದ್ಯೋಗ ಸಮಸ್ಯೆ ಬಗೆಹರಿಸಬಹುದು. ದೇಶದ ಘನತೆಯನ್ನು ಹೆಚ್ಚಿಸಬಹುದು, ದೇಶದ ಯಾವುದೇ ಮೂಲೆಯಲ್ಲಿ ಕುಳಿತು ನಾವು ತಯಾರಿಸುವ ಉತ್ಪಾದನೆಯನ್ನು ಪ್ರಪಂಚದ್ಯಾಂತ ಪ್ರಚಾರಪಡಿಸಲು ಡಿಜಿಟಲಿಕರಣದಿಂದ ಸಹಕಾರಿಯಾಗಿದೆ ಎಂದು ಅವರು ಮನವರಿಕೆ ಮಾಡಿದರು. ಕಾರ್ಯಕ್ರಮದಲ್ಲಿ ಸುಮಾರು 150 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 30.11.2022

ಮಹಾಜನ ಕಾಲೇಜಿನಲ್ಲಿ ಸಂವಿಧಾನ ದಿನಾಚರಣೆ

• ಕನ್ನಡಪ್ರಭ ವಾರ್ತೆ ಮೈಸೂರು

ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 73ನೇ ಭಾರತ ಸಂವಿಧಾನ ದಿನ ಆಯೋಜಿಸಲಾಗಿತ್ತು.

ಭಾರತ ಸಂವಿಧಾನ ಕುರಿತು ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಅವರು ಸಂವಿಧಾನದ ಪ್ರಾಮುಖ್ಯತೆ ಹಾಗೂ ಪ್ರಸ್ತಾವನೆಯ ಪ್ರಮುಖ ಅಂಶವನ್ನು ತಿಳಿಸಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯ ಕುರುಹಾಗಿ ಪ್ರತಿವರ್ಷ ನ. 26ನ್ನು ಭಾರತದ ಸಂವಿಧಾನದ ದಿನವನ್ನಾಗಿ ಆಚರಿಸಲಾಗುತ್ತದೆ. ಭಾರತದ ಸಂವಿಧಾನ ರಚನೆಗೆ ಶ್ರಮಿಸಿದ ಎಲ್ಲಾ ಮಹನೀಯರನ್ನು ಸ್ಮರಿಸುವ ಸುವರ್ಣವಿದು ಎಂದರು.

ವಿಶ್ವದ ಎಲ್ಲಾ ಸಂವಿಧಾನಗಳಿಗಿಂತ ಅತಿ ದೊಡ್ಡ ಲಿಖಿತ ಸಂವಿಧಾನವನ್ನು ನಾವು ಹೊಂದಿದ್ದೇವೆ.

ಸಂವಿಧಾನ ರಚನೆಯಾಗದಿದ್ದರೆ ದೇಶದಲ್ಲಿ ಅರಾಜಕತೆ ತಾಂಡವವಾಡುತ್ತಿತ್ತು. ಈ ಸಂವಿಧಾನವು ಭಾರತವನ್ನು ಸಾರ್ವಭೌಮ ಸಮಾಜವಾದಿ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸುತ್ತದೆ.

ಎಲ್ಲಾ ನಾಗರಿಕರಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು



ರಾಷ್ಟ್ರದ ಏಕತೆ ಮತ್ತು ಸಮಗ್ರತೆ ಕಾಪಾಡಿಕೊಳ್ಳುವ ಭ್ರಾತೃತ್ವವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಮಾನವನಿಗೆ ಹೃದಯ ಕೇಂದ್ರವಾಗಿರುವ ಭಾರತ ದೇಶಕ್ಕೆ ಸಂವಿಧಾನ ಹೃದಯದಂತೆ ಕೆಲಸ ಮಾಡುತ್ತದೆ. ದೇಶದ ಪ್ರಜೆಗಳೆಲ್ಲರೂ ಇದನ್ನು ಗೌರವಿಸುವುದು ಆದ್ಯ ಕರ್ತವ್ಯವಾಗಿದೆ ಎಂದು ಹೇಳಿ, ಸಂವಿಧಾನ ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನವನ್ನು ಬೋಧಿಸಿದರು. ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಪ್ರಮಾಣ ವಚನ ಸ್ವೀಕರಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 15.11.2022



ಮೈಸೂರಿನ ಹೆಬ್ಬಾಳಿನಲ್ಲಿರುವ ಕೆಎನ್‌ಸಿ ಇನ್ನೋವೇಟಿವ್ ಗ್ಲೋಬಲ್ ಸ್ಕೂಲ್ ಮತ್ತು ಕಾಲೇಜಿನ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಆಯೋಜಿಸಲಾಗಿತ್ತು. ಶಾಲೆಯ ಅಧ್ಯಕ್ಷ ಡಾ.ಕೆ.ಎನ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಮಹಾಜನ ಕಾಲೇಜಿನ ಪ್ರಾಧ್ಯಾಪಕ ಡಾ.ಎಚ್. ಆರ್. ತಿಮ್ಮೇಗೌಡ ಅತಿಥಿಯಾಗಿದ್ದರು. ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಇತರರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 6.11.2022



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜಾಗೃತಿ ಅರಿವು ಸಪ್ತಾಹವನ್ನು ಆಚರಿಸಿತು. ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಅವರು ಭ್ರಷ್ಟಾಚಾರ ನಿರ್ಮೂಲನಾ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 13.11.2022

ಸ್ಮರಣೆ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಪ್ರಾಂಶುಪಾಲರಾದ ಡಾ. ಜಯಕುಮಾರಿ ಅಭಿಮತ

ಭಕ್ತಿಪಂಥದ ಜಾಗೃತಿ ಮೂಡಿಸಿದ ದಾಸ ಶ್ರೇಷ್ಠ ಕನಕದಾಸರು

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಿಂದ ದಾಸ ಶ್ರೇಷ್ಠರಾದ ಕನಕದಾಸರ 535ನೇ ಜನ್ಮ ದಿನವನ್ನು ಸರಳವಾಗಿ ಆಚರಿಸಿತು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ಹಾಗೂ ಕಾಲೇಜಿನ ಬೋಧಕಮತ್ತುಬೋಧೇತರವರ್ಗದವರು ಹಾಗೂ ವಿದ್ಯಾರ್ಥಿಗಳು ಕನಕದಾಸರಿಗೆ ಪುಷ್ಪನಮನ ಸಲ್ಲಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ. ಬಿ. ಆರ್. ಜಯಕುಮಾರಿ ಮಾತನಾಡಿ, ಕನಕದಾಸರು ಕರ್ನಾಟಕದ ಹರಿದಾಸ ಸಾಹಿತ್ಯದ ಶ್ರೇಷ್ಠ ಕವಿಪುಂಗವರೆಂದೇ ಪ್ರಸಿದ್ಧರಾಗಿರುವ ದಾಸವೇಣ್ಯರು. ಕರ್ನಾಟಕ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿನ ಕುರುಬ ಜನಾಂಗದಲ್ಲಿ ಹುಟ್ಟಿದ ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಸೈನಿಕ ವೃತ್ತಿಯನ್ನು ತೊರೆದು, ಜೀವನದಲ್ಲಿ ವೈರಾಗ್ಯವನ್ನು



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಿಂದ ದಾಸ ಶ್ರೇಷ್ಠರಾದ ಕನಕದಾಸರ 535ನೇ ಜನ್ಮ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಲವರು ಇದ್ದರು.

ಹೊಂದಿ, ಭಕ್ತಿ ಪಥವನ್ನು ಅನುಸರಿಸಿ, ಕಾಗಿನೆಲೆ ಆದಿಕೇಶವನನ್ನು ತಮ್ಮ ಆರಾಧ್ಯ ದೈವವಾಗಿ ಸ್ವೀಕರಿಸಿದವರು. ಭಕ್ತಿ ಸಾಧನೆಗಾಗಿ ಊರೂರು ಅಲೆಯುತ್ತಾ, ಹಲವಾರು ಕೀರ್ತನೆಗಳನ್ನು, ಭಜನೆಗಳನ್ನು ರಚಿಸಿ, ಹಾಡುತ್ತಾ ಜನತೆಯಲ್ಲಿ ಭಕ್ತಿಪಂಥದ ಜಾಗೃತಿಯನ್ನು ಉಂಟು ಮಾಡಿದವರು ಎಂದು ತಿಳಿಸಿದರು.

ಹಂಪಿಯ ವ್ಯಾಸರಾಜರನ್ನು ಗುರುವಾಗಿ ಸ್ವೀಕರಿಸಿ, ವೇದ, ಉಪನಿಷತ್ತುಗಳ ಜ್ಞಾನ ಸಂಪಾದಿಸಿದರು. ನಾಡಿನದಾದ್ಯಂತ ಸಂಚರಿಸಿ, ತಾವು ಸಂಪಾದಿಸಿದ ಕೀರ್ತನೆಗಳು, ಉಗಾಬೋಗಗಳು ಮತ್ತು ಮಂಡಿಗೆಗಳನ್ನು ಹಾಡುತ್ತಾ, ಜಾತಿಯ ಮೇಲುಕೀಳುಗಳನ್ನು ಹೋಗಲಾಡಿಸುವ ನಿಟ್ಟನಲ್ಲಿ ಜನತೆಗೆ ಸಾಮಾಜಿಕ ಚಿಂತನೆಗಳನ್ನು ತಮ್ಮ ದಾಸಸಾಹಿತ್ಯ ಮತ್ತು ಸಂಗೀತದ ಮೂಲಕ ಮಹತ್ತರ ಕಾಣಿಕೆ ಸಲ್ಲಿಸಿದವರು ಎಂದು ಹೇಳಿದರು.

ಕಾಲೇಜಿನ ಎಲ್ಲ ವಿಭಾಗಗಳ ಬೋಧಕ ಮತ್ತು ಬೋಧೇತರ ವರ್ಗ ಹಾಗೂ ವಿದ್ಯಾರ್ಥಿಗಳು ಇದ್ದರು.

ಸಂಜೆವಾಣಿ
ದಿನಪತ್ರಿಕೆ
ಸೋಮವಾರ, 14 ನವೆಂಬರ್ 2022

'ಸಾಹಿತ್ಯ-ಸಂಸ್ಕೃತಿಯಿಂದ ಸಮಾಜದ ರಕ್ಷಣೆ'

ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿ ಬಿಡುಗಡೆ ಮಾಡಿದ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ

ಮೈಸೂರು: ರಾಜಕೀಯ ಮತ್ತು ಧರ್ಮ ಭ್ರಷ್ಟವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಮಾತ್ರ ಸಮಾಜವನ್ನು ರಕ್ಷಿಸಬಲ್ಲವು ಎಂದು ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ) ಮತ್ತು ಪದವಿ ಕನ್ನಡ ಅಧ್ಯಾಪಕರ ಸಂಘದ ಸಹಯೋಗದಲ್ಲಿ ನಡೆದ ಲೇಖಕಿ ಡಾ.ಬಿ.ಆರ್. ಜಯಕುಮಾರಿ ಅವರ ಡಾ.ಎಚ್.ಜೆ.ಲಕ್ಷಪ್ಪಗೌಡರ ಬದುಕು ಮತ್ತು ಬರಹ ಕುರಿತ 'ಬೇರಿಗಿಳಿದ ನೀರು' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪ್ರಸ್ತುತ ವಿದ್ಯಾರ್ಥಿಗಳು ಮತ್ತು ಸಾಹಿತಿಗಳು, ಲೇಖಕರಿಂದ ಗುಣಮಟ್ಟದ ಸಂಶೋಧನೆಗಳು ಹೊರ ಬರುತ್ತಿಲ್ಲ. ವಿಶ್ವವಿದ್ಯಾನಿಲಯಗಳಂತೂ ಸಂಶೋಧನೆಗಳಿಂದ ದೂರ ಉಳಿದಿವೆ. ಕುವೆಂಪು, ಬೇಂದ್ರೆ, ಅಡಿಗರು ಹೀಗೆ ವಿದ್ವಾಂಸರ ಸಾಹಿತ್ಯ ಗಳನ್ನು ಸಮಗ್ರವಾಗಿ ಓದದೆ, ಅಲ್ಪ ಓದಿ ಅವರ ಬಗ್ಗೆ ಮಾತನಾಡುವ ಸಂಪ್ರದಾಯ ಇತ್ತೀಚೆಗೆ ಬೆಳೆದುಕೊಂಡಿದೆ. ಅಧ್ಯಯನ ಹಿಂದೆ ಸರಿಯುತ್ತಿದೆ. ಹೀಗಾಗಿ ಸಮೃದ್ಧ ಸಾಹಿತ್ಯದ ಅಧ್ಯಯನ ಮಾಡ ಬೇಕು ಎಂದು ಸಲಹೆ ನೀಡಿದರು.

ರಾಜಕಾರಣಿಗಳು ಪುಸ್ತಕಗಳ ದ್ವೇಷಿಗಳಾಗಿ



ಮೈಸೂರು ಎಎ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೇಖಕ ಡಾ.ಬಿ.ಆರ್.ಜಯಕುಮಾರಿ ಅವರ ಡಾ.ಎಚ್.ಜೆ.ಲಕ್ಷಪ್ಪಗೌಡರ ಬದುಕು ಮತ್ತು ಬರಹ ಕುರಿತ 'ಬೇರಿಗಿಳಿದ ನೀರು' ಕೃತಿಯನ್ನು ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಶಾಸಕ ಸಿ.ಎಸ್. ಪುಟ್ಟರಾಜು ಮುಂತಾದವರು ಹಾಜರಿದ್ದರು.

ದ್ದಾರೆ. ಹೀಗಾಗಿ ರಾಜಕೀಯ ಮತ್ತು ಧರ್ಮ ಎರಡೂ ಭ್ರಷ್ಟವಾಗಿವೆ. ಇಂತಹ ಸಂದರ್ಭದಲ್ಲಿ ಲೇಖಕರು ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲಕ ಸಮಾಜವನ್ನು ರಕ್ಷಿಸಬಲ್ಲರು. ಇದಕ್ಕಾಗಿ ಅಧ್ಯಯನ ಮತ್ತು ಬರವಣಿಗೆಯ ಅಗತ್ಯವಿದೆ. ಗ್ರಾಮೀಣ ಸಂಸ್ಕೃತಿಯನ್ನು ತಮ್ಮ ಸಾಹಿತ್ಯದಲ್ಲಿ ಪಸರಿಸುವ ಮೂಲಕ ಕೂಡಿ ಬಾಳುವ ಸಂಸ್ಕೃತಿಯನ್ನು ಸಾರಬೇಕು. ಒತ್ತಡದ ಕಾರಣದಿಂದ ಲೇಖಕರು ಬರವಣಿಗೆ ನಿಲ್ಲಿಸಬಾರದು ಎಂದು ಕಿವಿಮಾತು ಹೇಳಿದರು.

ಕೃತಿ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತಕುಮಾರ್ ಮಾತನಾಡಿ, ಒತ್ತಡದ ನಡುವೆಯೂ ಕೃತಿ ಬರೆಯಲು ಸಾಧ್ಯವಿರುವ ಲೇಖಕರಲ್ಲಿ ಎಚ್.ಕೆ.ಲಕ್ಷಪ್ಪಗೌಡರೂ ಒಬ್ಬರಾಗಿದ್ದರು. ಜಯಕುಮಾರಿ ಅವರು ರಚಿಸಿದ ಬೇರಿಗಿಳಿದ ನೀರು ಕೃತಿಯ ಅಧ್ಯಯನ ಸಮಗ್ರವಾಗಿ, ಸತ್ಪಪೂರ್ಣವಾಗಿದೆ. ಯಾಂತ್ರಿಕ ಬದುಕಿಗಾಗಿ ಮಾಡದೆ ಜೀವನಕ್ಕೆ ಮಾಡಿದಂತಿದೆ. ಲೀಲಾಜಾಲವಾಗಿ ಓದಿಸಿಕೊಳ್ಳುವ ಹಾಗೆಯೇ ಈ ಕೃತಿಯನ್ನು ರಚಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಪಾಂಡವಪುರದ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ ವಿದ್ವಾಂಸರ ಬಗ್ಗೆ ಅರಿವು

> ನವೋದಯ ಪರಂಪರೆಗೆ ಸೇರಿದವರು ಲಕ್ಷಪ್ಪಗೌಡರು. ಆಧುನಿಕ ಅನುಕೂಲದ ಜಾಡಿಗೆ ಕೈಕೊಡುವುದು ಹೆಚ್ಚುತ್ತಿದೆ. ಲಕ್ಷಪ್ಪಗೌಡರು ಸಾಹಿತ್ಯದ ಎಲ್ಲ ಕ್ಷೇತ್ರಗಳಿಗೂ ಸೇರಿದವರು. ಜಾನಪದ, ವಿಮರ್ಶೆ, ಕಾವ್ಯ ಮೀಮಾಂಸೆ ಮುಂತಾದವುಗಳಲ್ಲಿ ಸಮಗ್ರವಾಗಿ ಓದಿ ಪಾಂಡಿತ್ಯವನ್ನು ಹೊಂದಿದವರು. ಲಕ್ಷಪ್ಪಗೌಡರ ಸಾಹಿತ್ಯವನ್ನು ಜಯಕುಮಾರಿ ಅವರು ಸಮಗ್ರವಾಗಿ ಓದಿ ಬೇರಿಗಿಳಿದ ನೀರು ಕೃತಿಯನ್ನು ರಚಿಸಿದ್ದಾರೆ.
> -ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ

ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇನೆ ಎಂದು ಹೇಳಿದರು.

ಜಾನಪದ ವಿದ್ವಾಂಸ ಡಾ.ಹಿ.ಶಿ. ರಾಮಚಂದ್ರೇಗೌಡ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಕನ್ನಡ ಪ್ರಾಧ್ಯಾಪಕ ಡಾ.ಎ.ರಂಗಸ್ವಾಮಿ, ಮಣಿ ಪ್ರಕಾಶನದ ಎಚ್.ಕೆ.ಮಂಜೇಗೌಡ, ಮಹಾಜನ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಕೃಷ್ಣಮೂರ್ತಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಸೋಮವಾರ 14.11.2022

ಬಿಡುಗಡೆ | ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಮತ | ಡಾ.ಬಿ.ಆರ್. ಜಯಕುಮಾರಿ ಅವರ ಬೇರಿಗಿಳಿದ ನೀರು ಕೃತಿ ಲೋಕಾರ್ಪಣೆ

ಮನುಷ್ಯನ ಭಾವನೆ ಅಭಿವ್ಯಕ್ತಿಗೆ ಬರವಣಿಗೆ ಸಾಧನ

• ಕನ್ನಡಪ್ರಭ ವಾರ್ತೆ ಮೈಸೂರು

ಬರವಣಿಗೆ ಮನುಷ್ಯನ ಭಾವನೆಗಳನ್ನು ಅಭಿವ್ಯಕ್ತಪಡಿಸಲು ಇರುವ ಏಕೈಕ ಸಾಧನ ಎಂದು ವಿಮರ್ಶಕ ಡಾ. ನರಹಳ್ಳಿ ಬಾಲ ಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು.

ಮಾನಸಗಂಗೋತ್ರಿಯವಿಜ್ಞಾನಭವನದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿ ಕನ್ನಡ ಅಧ್ಯಾಪಕರ ಸಂಘದ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರ ಬೇರಿಗಿಳಿದ ನೀರು (ಡಾ.ಎಚ್.ಜೆ. ಲಕ್ಕಪ್ಪ ಗೌಡರ ಬದುಕು ಮತ್ತು ಬರಹ) ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಬೆಳವಣಿಗೆಗೆ ಅದಕ್ಕೇ ಆದ ಮೌಲ್ಯ ಗೌರವವಿದೆ ಎಲ್ಲರಿಗೂ ತಲುಪಲು ಸಾಧ್ಯವಾಗದ ಗುಣವೇ ಈ ಬರವಣಿಗೆ. ಬರವಣಿಗೆ ಮನುಷ್ಯನ ಭಾವನೆ ವ್ಯಕ್ತಪಡಿಸಲು ಇರುವ ಏಕೈಕ ಸಾಧನ. ಇಂದಿನ ಯುಗದ ರಾಜಕೀಯದ ಜನರು ಸಾಹಿತ್ಯದಿಂದ ದೂರ ಇರುವುದು ಆತಂಕಕಾರಿ ಸಂಗತಿ ಎಂದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮಹಾರಾಜ ಪ್ರಥಮ ದರ್ಜೆ ಕಾಲೇಜು ಮತ್ತು ಕನ್ನಡ ಅಧ್ಯಾಪಕರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಜಯಕುಮಾರಿ ಅವರ ಬೇರಿಗಿಳಿದ ನೀರು ಕೃತಿಯನ್ನು ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಪ್ರೊ.ಬಿ.ವಿ. ವಸಂತಕುಮಾರ್, ಶಾಸಕ ಸಿ.ಎಸ್. ಪುಟ್ಟರಾಜು, ಡಾ.ಎಚ್. ಆರ್. ತಿಮ್ಮೇಗೌಡ, ಟಿ.ಮುರಳೀಧರ ಭಾಗವತ್, ಪ್ರಕಾಶ್ ಚಿಕ್ಕಪಾಳ್ಯ ಇದ್ದರು.

ಲಕ್ಕಪ್ಪಗೌಡರ ನವೋದಯ ಪರಂಪರೆಗೆ ಸೇರಿದವರು. ಅವರು ಸಾಹಿತ್ಯದ ಎಲ್ಲಾ ಕ್ಷೇತ್ರಕ್ಕೂ ಸೇರಿದವರು. ಜಾನಪದ, ವಿಮರ್ಶೆ, ಕಾವ್ಯಮೀಮಾಂಸೆ ಮುಂತಾದಗಳಲ್ಲಿ ಸಮಗ್ರವಾಗಿ ಓದಿ ಪಾಂಡಿತ್ಯ ಹೊಂದಿದ್ದಾರೆ. ಜಯಕುಮಾರಿ ಅವರ ಅಧ್ಯಯನ ಕೇವಲ ಲಕ್ಕಪ್ಪ ಗೌಡರ ಸಾಹಿತ್ಯದ ಮೇಲಾದರೂ ಗ್ರಾಮೀಣ ಸೊಗಡನ್ನು ಸೂಚಿಸುತ್ತದೆ. 12 ಹಾಗೂ 15ನೇ ಶತಮಾನದ ವಚನಕಾರರ ವಚನಗಳನ್ನು, ಕೃಷಿ ಸಂಸ್ಕೃತಿಯ ಬಗ್ಗೆ ಇರುವ ವರ್ಣನೆಯ ಕುರಿತು

> ರಾಜಕಾರಣಿಗಳು ನೋಟೆನ ಆವಕಾಶವಾದಿಗಳಾಗಿ ಇರುವುದರಿಂದ ಪುಸ್ತಕಗಳ ದ್ವೇಷಿಗಳಾಗಿದ್ದಾರೆ. ಹೀಗಾಗಿ ರಾಜಕೀಯ ಮತ್ತು ಧರ್ಮ ಎರಡು ಭ್ರಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ಲೇಖಕರು ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲಕ ಸಮಾಜವನ್ನು ರಕ್ಷಿಸಬಲ್ಲದು.
>
> • ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
> ವಿಮರ್ಶಕರು

ಸ್ಮರಿಸಿದರು. ಲಕ್ಕಪ್ಪಗೌಡರ ಸಾಹಿತ್ಯದ ಮೌಲ್ಯವನ್ನು ವಿಮರ್ಶಿಸಿ ಅಧ್ಯಯನ ಮಾಡಿರುವ ಜಯಕುಮಾರಿ ಅವರನ್ನು ಪ್ರಶಂಸಿದರು.

ಕೃತಿಯ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಬಿ.ವಿ. ವಸಂತ ಕುಮಾರ್ ಮಾತನಾಡಿ, ಒಕ್ಕಡದ ನಡುವೆಯೂ ಕೃತಿಯನ್ನು ಬರೆಯಲು ಸಾಧ್ಯವಿರುವ ಲೇಖಕರಲ್ಲಿ ಎಚ್.ಕೆ. ಲಕ್ಕಪ್ಪಗೌಡರು ಒಬ್ಬರು. ಜಯಕುಮಾರಿ ಅವರು ರಚಿಸಿದ ಬೇರಿಗಿಳಿದ ನೀರು ಕೃತಿಯ ಅಧ್ಯಯನ ಸಮಗ್ರವಾಗಿ, ಸತ್ವಪೂರ್ಣವಾಗಿದೆ. ಯಾಂತ್ರಿಕ ಬದುಕಿಗಾಗಿ ಮಾಡದೆ ಜೀವನಕ್ಕೆ ಮಾಡಿದಂತಿದೆ. ಲೀಲಾಜಾಲವಾಗಿ ಓದಿಸಿಕೊಳ್ಳುವ ಹಾಗೆ ಈ ಕೃತಿಯನ್ನು ರಚಿಸಿದ್ದಾರೆ ಎಂದರು.

ಮೇಲುಕೋಟೆ ಶಾಸಕ ಸಿ.ಎಸ್. ಪುಟ್ಟರಾಜು ಮಾತನಾಡಿ, ಪಾಂಡವಪುರದ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ ವಿದ್ವಾಂಸರ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇನೆ ಎಂದು ಆಶ್ವಾಸನೆ ನೀಡಿ ಶುಭ ಕೋರಿದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ ಭಾಗವತ್ ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ವಂದಿಸಿದರು, ಡಾ. ಮೈಸೂರು ಕೃಷ್ಣಮೂರ್ತಿ ನಿರೂಪಿಸಿದರು.ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 23.11.2022

ಬೇರಿಗಿಳಿದ ನೀರು: ಲಕ್ಕಪ್ಪಗೌಡರ ಸಮಗ್ರ ಸಾಹಿತ್ಯದ ಪ್ರತಿಬಿಂಬ

• ಕನ್ನಡಪ್ರಭ ವಾರ್ತೆ ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅವರ 'ಬೇರಿಗಿಳಿದ ನೀರು' ಹಿರಿಯ ವಿದ್ವಾಂಸ ಡಾ.ಎಚ್.ಎಲ್. ಲಕ್ಕಪ್ಪಗೌಡರ ಸಮಗ್ರ ಸಾಹಿತ್ಯದ ಪ್ರತಿಬಿಂಬವಾಗಿದೆ.

ಡಾ.ಜಯಕುಮಾರಿ ಅವರ ಸಂಶೋಧನಾ ಗ್ರಂಥ ಇದಾಗಿದ್ದು, ಮಣಿ ಪ್ರಕಾಶನ ಪ್ರಕಟಿಸಿದೆ. ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ ಲಕ್ಕಪ್ಪಗೌಡರು ಚಿಂತನಾಶೀಲತೆ, ವಾಸ್ತವಿಕತೆಯನ್ನು ಮೈಗೂಡಿಸಿಕೊಂಡ ಸಂಶೋಧಕರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಕಾನೂನು, ಆಡಳಿತ, ಸಂಘಟನೆಯಲ್ಲಿ ತಮ್ಮದೇ ಆದ ವಿಶೇಷ ಸಾಮರ್ಥ್ಯವನ್ನು ತೋರಿದವರು. ಶಿಷ್ಟ ಹಾಗೂ ಜಾನಪದ- ಎರಡಲ್ಲೂ ಪಾಂಡಿತ್ಯ ಪಡೆದಿದ್ದರು. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ'' ಮಹಾಕಾವ್ಯ ಕುರಿತು ಪ್ರೊ.ದೇಜಗೌ ಅವರ ಮಾರ್ಗದರ್ಶನದಲ್ಲಿ ಹದಿನೆಂಟು ವರ್ಷಗಳ ಕಾಲ ಸುದೀರ್ಘ ಅಧ್ಯಯನ, ಸಂಶೋಧನೆ ನಡೆಸಿ, ಪಿಎಚ್.ಡಿ ಪಡೆದಿದ್ದರು. ಮೈಸೂರು ವಿವಿ ವ್ಯಾಪ್ತಿಯಲ್ಲಿದ್ದ ಶಿವಮೊಗ್ಗ ಬಿ.ಆರ್. ಪ್ರಾಜೆಕ್ಟ್ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ನಂತರ ಆ ವಿಭಾಗಕ್ಕೆ ಕುವೆಂಪು ವಿವಿ ಕನ್ನಡ ಭಾರತಿ ಕೇಂದ್ರ ಎಂದು ಮರು ನಾಮಕರಣವಾದಾಗ ನಿರ್ದೇಶಕರಾದರು. ಮೈಸೂರು ವಿವಿಯಿಂದ ಬೇರ್ಪಟ್ಟು ಕುವೆಂಪು ವಿಶ್ವವಿದ್ಯಾಲಯವಾದ ನಂತರ ,ಅದರ ಕುಲಸಚಿವರಾಗಿ, ಹಂಪಿ ಕನ್ನಡ ವಿವಿಯ ಕುಲಪತಿಯಾಗಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

ಇಂತಹವರ ಬಗ್ಗೆ ಸಮಗ್ರವಾದ ಅಧ್ಯಯನ ಈವರೆಗೆ ಆಗಿಲ್ಲ ಎಂಬ ಕೊರತೆಯನ್ನು ಬಿ.ಆರ್. ಜಯಕುಮಾರಿ ಅವರು ನೀಗಿಸಿದ್ದಾರೆ.

ಎಚ್.ಜೆ. ಲಕ್ಕಪ್ಪಗೌಡರ ಬದುಕು ಮತ್ತು ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ನಂತರ ಕಾವ್ಯ, ಸಣ್ಣ ಕತೆ, ನಾಟಕ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ ಮತ್ತು ವ್ಯಕ್ತಿ ಚಿತ್ರಣಗಳನ್ನು ವಿಮರ್ಶಿಸಿದ್ದಾರೆ. ಜಾನಪದ ಕೃತಿಗಳ





ವಿಶ್ಲೇಷಣೆ, ಸಂಶೋಧನೆ ಮತ್ತು ಸಾಹಿತ್ಯ ವಿಮರ್ಶೆ, ಸಂಪಾದಿತಕೃತಿಗಳು, ಸಂಕೀರಣ ಬರಹಗಳನ್ನು ವಿಶ್ಲೇಷಿಸಿದ್ದಾರೆ. ಸಾಹಿತ್ಯ ಮತ್ತು ಸಮಾಜಕ್ಕೆ ಲಕ್ಕಪ್ಪಗೌಡರ ಕೊಡುಗೆಯನ್ನು ದಾಖಲಿಸಿದ್ದಾರೆ. ಅಲ್ಲದೇ ಲಕ್ಕಪ್ಪಗೌಡರೊಂದಿಗೆ ಸಂದರ್ಶನ ನಡೆಸಿದ್ದನ್ನು ದಾಖಲಿಸಿದ್ದಾರೆ. ಲಕ್ಕಪ್ಪಗೌಡರು ನಿರ್ವಹಿಸಿದ ಹುದ್ದೆಗಳು ಹಾಗೂ ಪಡೆದ ಪ್ರಶಸ್ತಿಗಳ ವಿವರಗಳು ಕೂಡ ಇವೆ.

ಖ್ಯಾತ ಕಥೆಗಾರ ಮೊಗಳ್ಳಿ ಗಣೇಶ್ ಅವರ ಮುನ್ನುಡಿ, ಸಂಶೋಧನೆಗೆ ಮಾರ್ಗದರ್ಶಕರಾಗಿದ್ದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಡಾ.ಎ. ರಂಗಸ್ವಾಮಿ, ಸಂಶೋಧನಾ ಪ್ರಬಂಧದ ಮೌಲ್ಯಮಾಪಕರಾಗಿದ್ದ ಹಾಸನ ಹೇಮಗಂಗೋತ್ರಿ ಕನ್ನಡ ಪ್ರಾಧ್ಯಾಪಕ ಡಾ. ಪುಟ್ಟಸ್ವಾಮಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ನಿರ್ದೇಶಕ ಪ್ರೊ.ಎಂ.ಜಿ. ಮಂಜುನಾಥ ಅವರ ವಿದ್ವತ್‌ಪೂರ್ಣ ಅಭಿಪ್ರಾಯಗಳವೆ, ಬಹುಮುಖ್ಯವಾಗಿ ಖ್ಯಾತ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಬೆನ್ನುಡಿ ಇದೆ. ಲೇಖಕರು ತಮ್ಮ ಮಾತಿಗೆ 'ಎದ್ದೊಂದು ಗಳಿಗೆ ನೆನೆದೇನು...' ಎಂಬ ಆಕರ್ಷಕ ಶೀರ್ಷಿಕೆ ನೀಡಿ, ಈ ಸಂಶೋದನಾ ಗ್ರಂಥ ರೂಪುಗೊಂಡ ಬಗ್ಗೆ, ಸಲಹೆ- ಸಹಕಾರ ನೀಡಿದವರ ಬಗ್ಗೆ ಪ್ರಸ್ತಾಪಿಸಿ, ಕೃತಜ್ಞತೆ ಸಲ್ಲಿಸಿದ್ದಾರೆ. ಆಸಕ್ತರು ಮಣಿ ಪ್ರಕಾಶನ, ಮೊ.96865 35465 ಸಂಪರ್ಕಿಸಬಹುದು.

MFGE In the Eyes of the Press.....

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 14 ನವೆಂಬರ್ 2022

ಡಾ.ಎಚ್.ಜೆ.ಲಕ್ಕಪ್ಪಗೌಡರ 'ಬೇರಿಗಿಳಿದ ನೀರು' ಕೃತಿ ಬಿಡುಗಡೆ

ಮೈಸೂರು, ನ.13(ಆರ್‌ಕೆಬಿ)– ಪ್ರೊ.ಲಕ್ಕಪ್ಪಗೌಡರನ್ನು ಅಧ್ಯಯನ ಮಾಡುವುದು ಅಷ್ಟು ಸುಲಭವಲ್ಲ. ಡಾ.ಎಚ್.ಜೆ. ಲಕ್ಕಪ್ಪಗೌಡರ ಬದುಕು ಮತ್ತು ಬರಹ ಕುರಿತು ಡಾ.ಬಿ.ಆರ್.ಜಯಕುಮಾರಿ ಅವರು 'ಬೇರಿಗಿಳಿದ ನೀರು' ಕೃತಿಯ ಮೂಲಕ ಅವರ ಬದುಕು ಮತ್ತು ಬರಹವನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ ಎಂದು ಶ್ರೇಷ್ಠ ವಿಮರ್ಶಕ, ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ಮೈಸೂರಿನ ವಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿವಿ ಅಧ್ಯಾಪಕರ ಸಂಘ ಜಂಟಿಯಾಗಿ ಭಾನುವಾರ ಏರ್ಪಡಿಸಿದ್ದ ಡಾ.ಬಿ.ಆರ್.ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.

ವಿಶ್ರಾಂತ ಕುಲಪತಿ, ಸಾಹಿತಿ, ಬರಹಗಾರ ಡಾ.ಎಚ್.ಜೆ.ಲಕ್ಕಪ್ಪಗೌಡರು ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಅವರನ್ನು ಕುರಿತು ಬರೆಯುವಾಗ ಜಯಕುಮಾರಿ ಅವರು ಲಕ್ಕಪ್ಪಗೌಡರನ್ನು ಸುಲಭವಾಗಿ, ಪ್ರೀತಿಯಿಂದ ಅಧ್ಯಯನ ಮಾಡಿದ್ದಾರೆ. ಶ್ರಮ ಹಾಗೂ ಶ್ರದ್ಧೆ, ವಿನಯ, ಅಧ್ಯಯನ ಹಾಗೂ ಮೌಲ್ಯ ಈ ಕೃತಿಯಲ್ಲಿ ಕಾಣಬಹುದು. ಲಕ್ಕಪ್ಪಗೌಡರ ಇಡೀಯಾದ ಸಾಹಿತ್ಯವನ್ನು ಈ ಕೃತಿ ನೀಡಿದೆ ಎಂದರು.



ವಿಶ್ರಾಂತ ಕುಲಪತಿ, ಸಾಹಿತಿ, ಬರಹಗಾರ ಡಾ.ಎಚ್.ಜೆ.ಲಕ್ಕಪ್ಪಗೌಡರ ಬದುಕು-ಬರಹ ಕುರಿತು ಡಾ.ಬಿ.ಆರ್.ಜಯಕುಮಾರಿ ಬರೆದ 'ಬೇರಿಗಿಳಿದ ನೀರು' ಕೃತಿಯನ್ನು ಶ್ರೇಷ್ಠ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬಿಡುಗಡೆ ಮಾಡಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಮೈಸೂರು ಕೃಷ್ಣಮೂರ್ತಿ, ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಬಿ.ಆರ್.ವಿಜಯಕುಮಾರಿ, ಡಾ.ಬಿ.ವಿ.ವಸಂತಕುಮಾರ್, ಮುರಳೀಧರ್ ಭಾಗವತ್, ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಎ.ರಂಗಸ್ವಾಮಿ, ಪ್ರಕಾಶ್ ಚಿಕ್ಕಪಾಳ್ಯ ಅವರನ್ನು ಕಾಣಬಹುದು.

ನಾವಿಂದು ಸಾಹಿತ್ಯವನ್ನು ಇಡೀಯಾಗಿ ಓದುವ ಬದಲು ಕೇವಲ ಒಂದು ಭಾಗ ವನ್ನಷ್ಟೇ ಓದಿ ಅದರ ಬಗ್ಗೆ ಮಾತನಾಡುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಸಮಾಜದಲ್ಲಿಂದು ಬರಿ ದ್ವೇಷ ಅಸೂಯೆಗಳೇ ತುಂಬಿವೆ ವಿನಯ ಎಂಬುದು ದೌರ್ಬಲ್ಯವಲ್ಲ ಗ್ರಾಮೀಣ ಸಂವೇದನೆಯನ್ನು ಪರಿಚಯಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಆಧುನಿಕತೆಯ ಅನುಕೂಲಗಳು ಇದ್ದಷ್ಟೂ ತೊಂದರೆಗಳು ಇರುತ್ತವೆ ಎಂದು ಹೇಳಿದರು.

ಒತ್ತಡದ ಕಾರಣದಿಂದ ಸಾಹಿತ್ಯ ರಚನೆಗೆ ಸಮಯ ಸಾಕಾಗುತ್ತಿಲ್ಲ ಎಂಬ ಮಾತುಗಳನ್ನು ಹೇಳಲಾಗುತ್ತಿದೆ. ಬರವಣಿಗೆಗೆ ಸಮಯ ಇಲ್ಲ ಎನ್ನಬಾರದು, ಸಮಯ ಮಾಡಿಕೊಳ್ಳಬೇಕು. ಸಾಹಿತ್ಯದ ಕಡೆಗೆ ಸಮಯದ ಒದಗಿಸಿಕೊಳ್ಳಬೇಕು. ಆಗಲೇ ಉತ್ತಮ ಸಾಹಿತ್ಯಗಳು ಹೊರ ಹೊಮ್ಮಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

> ಇಂದಿನ ರಾಜಕಾರಣಿಗಳು ಪುಸ್ತಕ ದ್ವೇಷಿಗಳು. ರಾಜಕೀಯ ಮತ್ತು ಧರ್ಮ ಧ್ರುವವಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಮಾತ್ರ ನಮ್ಮ ಸಮಾಜವನ್ನು ರಕ್ಷಿಸಬಲ್ಲದು.
> -ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ವಿಮರ್ಶಕ

ಮೇಲುಕೋಟೆ ಕ್ಷೇತ್ರದ ಶಾಸಕ ಸಿ.ಎಸ್. ಪುಟ್ಟರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಡಾ.ಬಿ.ವಿ.ವಸಂತಕುಮಾರ್, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಸಾಹಿತಿ ಡಾ.ಎ.ರಂಗಸ್ವಾಮಿ, ಪ್ರಕಾಶ್ ಚಿಕ್ಕಪಾಳ್ಯ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ನವೆಂಬರ್ 14, 2022



ಮೈಸೂರನಲ್ಲಿ ಭಾನುವಾರ ಡಾ.ಬಿ.ಆರ್. ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿಯನ್ನು ಸಾಹಿತ್ಯ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಲೋಕಾರ್ಪಣೆ ಮಾಡಿದರು. ಪ್ರಾಧ್ಯಾಪಕ ಡಾ.ಎಚ್.ಆರ್. ತಿಮ್ಮೇಗೌಡ, ಡಾ.ಬಿ.ಆರ್. ಜಯಕುಮಾರಿ, ಡಾ.ಬಿ.ವಿ.ವಸಂತಕುಮಾರ್, ಟಿ.ಮುರಳೀಧರ ಭಾಗವತ್, ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಎ.ರಂಗಸ್ವಾಮಿ ಇದ್ದರು

'ವಿ.ವಿ.ಗಳಲ್ಲಿ ಸಂಶೋಧನೆ ಕಣ್ಮರೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಶ್ವವಿದ್ಯಾಲಯ ಹಾಗೂ ಸಂಶೋಧನಾರ್ಥಿಗಳಲ್ಲಿ ಅರ್ಥಪೂರ್ಣ ಸಂಶೋಧನಾ ಮನೋಭಾವ ಕಣ್ಮರೆಯಾಗಿದೆ' ಎಂದು ಸಾಹಿತ್ಯ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ವಿಷಾದಿಸಿದರು.

ನಗರದಲ್ಲಿ ಭಾನುವಾರ ಡಾ.ಬಿ. ಆರ್. ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿ ಲೋಕಾರ್ಪಣೆ ಮಾಡಿ ಅನಿಸಿಕೆ ವ್ಯಕ್ತಪಡಿಸಿದರು.

'ಯಾವೊಂದು ವಿಷಯವನ್ನೂ ಸಮಗ್ರ ಹಾಗೂ ಆಳವಾಗಿ ಅಧ್ಯಯನ ಮಾಡುವ ಪ್ರವೃತ್ತಿ ಸಂಶೋಧನಾರ್ಥಿಗಳಲ್ಲಿ ಕಾಣಿಸುತ್ತಿಲ್ಲ. ಅಭ್ಯರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಮಾರ್ಗದರ್ಶಕರೂ ಆ ಕೆಲಸದಲ್ಲಿ ಶ್ರದ್ಧೆ ಹೊಂದಿಲ್ಲ. ವಿಶ್ವವಿದ್ಯಾಲಗಳೂ ಇತ್ತ ಗಂಭೀರವಾಗಿ ಗಮನಹರಿಸುತ್ತಿಲ್ಲ. ಗಹನ ವಿಷಯ ಆಧಾರಿತ ಸಂಶೋಧನಾ ಕೃತಿಗಳೂ ಹೊರಬರುತ್ತಿಲ್ಲ' ಎಂದು ವಿಶ್ಲೇಷಿಸಿದರು.

'ಡಾ.ಎಚ್.ಜಿ.ಲಕ್ಕಪ್ಪಗೌಡ ಅವರ ಬದುಕು-ಬರಹ ಅಧ್ಯಯನದ ಸಂಶೋಧನಾ ಕೃತಿ 'ಬೇರಿಗಿಳಿದ ನೀರು' ಸ್ವಲ್ಪ ವಿಭಿನ್ನತೆ ಹೊಂದಿದೆ. ವಿಷಯದಲ್ಲಿ ಸಮಗ್ರತೆ, ಅಧ್ಯಯನ, ಶ್ರದ್ಧೆ ಹೊಂದಿ ವಿಷಯಕ್ಕೆ ನ್ಯಾಯ ಒದಗಿಸಿದೆ' ಎಂದರು.

'ಪಿಎಚ್‌ಡಿ ಮಾರ್ಗದರ್ಶಕರಿಗೆ 5-6 ಸಂಶೋಧನಾರ್ಥಿಗಳ ಹೊಣೆಯನ್ನಷ್ಟೇ ನೀಡುತ್ತಿದ್ದ ಪರಿಸ್ಥಿತಿ ಬದಲಾಗಿ 30ಕ್ಕೂ ಹೆಚ್ಚು ಮಂದಿಗೆ ಮಾರ್ಗದರ್ಶನ ಮಾಡುವ ಹಂತದಲ್ಲಿ ನಾವಿದ್ದೇವೆ. ಅಭ್ಯರ್ಥಿಗಳು ಕೂಡ ವಿಷಯಗಳ ಭಾಗಶಃ ವಿಷಯ ಗ್ರಹಿಸಿ, ವಿಷಯ ಮಂಡಿಸುವ ಸ್ಥಿತಿ ಇದೆ. ಹಳಗನ್ನಡದಂಥ ವ್ಯಾಪಕತೆ ಹೊಂದಿದ ಕವಿ-ಕಾವ್ಯಗಳ ಸಮಗ್ರ ಓದಿನ ಪರಿಕಲ್ಪನೆ ಕೈಬಿಟ್ಟು, ಭಾಗಶಃ ಕಲಿಕೆಯ ಪಠ್ಯಕ್ರಮ ಪದ್ಧತಿ ಆಳವಡಿಸಿದ ನಮ್ಮ ಕ್ರಮವೂ ಇದಕ್ಕೆ ಕಾರಣ' ಎಂದು ವಿವರಿಸಿದರು.

'ರಾಜಕೀಯದ ಭ್ರಷ್ಟತೆ ಹೆಚ್ಚುತ್ತಿರುವ, ಧಾರ್ಮಿಕತೆಯೂ ಭ್ರಷ್ಟವಾಗುತ್ತಿರುವ ಸಂದರ್ಭದಲ್ಲಿ ರಾಜಕಾರಣಿಗಳಲ್ಲೂ ಸಾಹಿತ್ಯ ಪ್ರೀತಿ ಇಳಿಮುಖವಾಗುತ್ತಿದೆ' ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ. ವಿ.ವಸಂತಕುಮಾರ್, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಪ್ರಾಧ್ಯಾಪಕ ಡಾ.ಎ.ರಂಗ ಸ್ವಾಮಿ, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ಲೇಖಕಿ ಡಾ.ಬಿ.ಆರ್. ಜಯಕುಮಾರಿ ಇದ್ದರು. ಪ್ರಾಧ್ಯಾಪಕ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಿಸ್ಮೆ
ಸೋಮವಾರ,14 ನವೆಂಬರ್ 2022,

ರಾಜಕೀಯ, ಧರ್ಮದ ಹಿಡಿತಕ್ಕೆ ಸಿಲುಕಿದ ಸಾಹಿತ್ಯ, ಸಂಸ್ಕೃತಿ

ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಆತಂಕ । 'ಬೇರಿಗಿಳಿದ ನೀರು' ಕೃತಿ ಲೋಕಾರ್ಪಣೆ

■ ವಿಕ ಸುದ್ದಿಲೋಕ ಮೈಸೂರು

ಸಾಹಿತ್ಯ ಹಾಗೂ ಸಂಸ್ಕೃತಿಯೂ ರಾಜಕೀಯ ಮತ್ತು ಧರ್ಮದ ಹಿಡಿತಕ್ಕೆ ಸಿಲುಕಿಕೊಂಡಿದೆ ಎಂದು ಸಾಹಿತಿ ಮತ್ತು ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಆತಂಕ ವ್ಯಕ್ತಪಡಿಸಿದರು.

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಮತ್ತು ಪದವಿ ಕನ್ನಡ ಅಧ್ಯಾಪಕ ಸಂಘದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಜಯಕುಮಾರಿ ಅವರ ಡಾ.ಎಚ್.ಜೆ.ಲಕ್ಕಪ್ಪಗೌಡ ಬದುಕು ಮತ್ತು ಬರಹ ಕುರಿತ 'ಬೇರಿಗಿಳಿದನೀರು' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

''ಬದುಕನ್ನು ರೂಪಿಸುವ ಪ್ರಬಲ ಶಕ್ತಿಗಳೆಂದರೆ ರಾಜಕೀಯ ಮತ್ತು ಧರ್ಮ ಎನ್ನುವಂತಾಗಿದೆ. ರಾಜಕೀಯ ಮತ್ತು ಧರ್ಮವನ್ನು ಓಲೈಸುವ ಹಂತಕ್ಕೆ ಬಂದಿದ್ದೇವೆ. ಒಂದು ಕಾಲದಲ್ಲಿ ಕುವೆಂಪು ಅವರ ಮಾತಿಗೆ ಎಷ್ಟು ಶಕ್ತಿ ಇತ್ತೆಂದರೆ ಮಂತ್ರಿಗಳೇ ಕುವೆಂಪು ಅವರ ಮನೆಗೆ ಹೋಗಿದ್ದರು. ಆದರೆ, ಕುವೆಂಪು ಅವರು ಯಾರ ಮನೆಗೂ ಹೋಗಿರಲಿಲ್ಲ. ನಮ್ಮ ಲೇಖಕರು ರಾಜಕೀಯ ಹಾಗೂ ಧಾರ್ಮಿಕ ವ್ಯಕ್ತಿಗಳ ಹಿಂದೆ ಬಿದ್ದಿದ್ದಾರೆಯೇ ಎಂಬ ಪ್ರಶ್ನೆ ಮೂಡಿದೆ,'' ಎಂದರು.

''ಆಧುನಿಕ ತಂತ್ರಜ್ಞಾನದಿಂದ ಅನುಕೂಲ ಹಾಗೂ ಅನಾನುಕೂಲ ಎರಡು ಇದೆ. ಅದನ್ನು ಹೇಗೆ ನಾವು ಬಳಸಿಕೊಳ್ಳುತ್ತೇವೆ ಎನ್ನುವುದು ಮುಖ್ಯ. ಭಾರತದಲ್ಲಿ ಸಂಶೋಧನೆ ದೂರ ಸರಿಯುತ್ತಿದೆ. ನನ್ನ ಗುರುಗಳಾದ ಜಿ.ಎಸ್.ಶಿವರುದ್ರಪ್ಪ ಅವರ ಬಗ್ಗೆ ಪಿಎಚ್‌ಡಿ ಆಗಿಲ್ಲ. ಒಳ್ಳೆಯ ಸಂಶೋಧನೆಗಳಿಂದ ನಾವು ಹಿಂದೆ ಸರಿಯುತ್ತಿದ್ದೇವೆ. ರಾಜದಾರಿಗಿಂತ, ಅಡ್ಡದಾರಿಯಲ್ಲಿ ಅಧಿಕಾರ ಪಡೆಯುವ

> ಪುಸ್ತಕಗಳ ಬಗ್ಗೆ ರಾಜಕಾರಣಿಗಳಿಗೆ ಆಸಕ್ತಿ ಇಲ್ಲ, ರಾಜಕಾರಣಿಗಳಿಗೆ ಪುಸ್ತಕವೆಂದರೆ ಆಗುವುದಿಲ್ಲ, ನೋಟಿನ ಬಂಡಲ್‌ಗಳನ್ನೇ ಪುಸ್ತಕವೆಂದು ತಿಳಿದುಕೊಂಡಿದ್ದಾರೆ. ನಿಜವಾದ ಪುಸ್ತಕಗಳ ಬಗ್ಗೆ ಪರಿಕಲ್ಪನೆ ಇದೆಯೋ ಅಥವಾ ಇಲ್ಲವೋ ಎನ್ನುವ ಅನುಮಾನ ಕುರುವಾಗಿದೆ.
> -ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ವಿಮರ್ಶಕ.

ಚಾಳಿ ಇದೆ. ಪ್ರೀತಿಯಿಂದ ಅಧ್ಯಯನ ಹಾಗೂ ಸಮಾಜವನ್ನೇ ಪ್ರೀತಿಸುವ ಶಕ್ತಿ ಕಳೆದುಕೊಳ್ಳುತ್ತಿದ್ದೇವೆ,'' ಎಂದರು.

''ಲಕ್ಕಪ್ಪಗೌಡ ಅಧ್ಯಯನ ಗ್ರಾಮೀಣ ಸಂಸ್ಕೃತಿಯನ್ನು ತೋರಿಸುತ್ತದೆ. ಜಯಕುಮಾರಿ ಅವರು ಲಕ್ಕಪ್ಪಗೌಡರ ಬಗ್ಗೆ ಸಮಗ್ರ ವಾಗಿ ಓದಿ ಬರೆದಿದ್ದಾರೆ. ಕೃತಿ ಸಂಶೋಧನೆಗೂ ಕೂಡ ಮಾದರಿ ಯಾಗಿದೆ. ನಾವು ಒತ್ತಡದಿಂದ ಬರೆಯಬಾರದು, ಪ್ರೀತಿಯಿಂದ ಬರೆಯ ಬೇಕು. ಆಗ ಮಾತ್ರ ಜ್ಞಾನದ ಶಕ್ತಿ ಹೆಚ್ಚಾಗಲಿದೆ,'' ಎಂದು ತಿಳಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಎಚ್.ಆರ್.ತಿಮ್ಮೇಗೌಡ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಡಾ.ಹಿ.ಶಿ.ರಾಮಚಂದ್ರೇಗೌಡ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರುಳೀಧರ್ ಭಾಗವತ್, ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಕನ್ನಡ ಪ್ರಾಧ್ಯಾಪಕರಾದ ಡಾ.ಎ.ರಂಗಸ್ವಾಮಿ, ಪ್ರೊ.ಕೃಷ್ಣಮೂರ್ತಿ, ಮಣಿ ಪ್ರಕಾಶನದ ಪ್ರಕಾಶಕ ಎಚ್.ಆರ್.ಮಂಜೇಗೌಡ, ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಮತ್ತಿತರರು ಹಾಜರಿದ್ದರು.



ಮೈಸೂರಿನಲ್ಲಿ ಡಾ.ಬಿ.ಆರ್.ಜಯಕುಮಾರಿ ಅವರ 'ಬೇರಿಗಿಳಿದ ನೀರು' ಎಂಬ ಕೃತಿಯನ್ನು ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಲೋಕಾರ್ಪಣೆ ಮಾಡಿದರು. ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಬಿ.ವಿ.ವಸಂತಕುಮಾರ್ ಇದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ
ಸೋಮವಾರ 14 ನವೆಂಬರ್ 2022

ಸಾಹಿತಿ ಡಾ.ಬಾಲಸುಬ್ರಹ್ಮಣ್ಯ ಕಳವಳ | ಕೃತಿ ಬಿಡುಗಡೆ ಸಮಾರಂಭ

ಸಂಶೋಧನೆಗಳಿಂದ ದೂರ ಉಳಿದ ವಿವಿಗಳು

■ ವಿಜಯವಾಣಿ ಸುದ್ದಿಜಾಲ ಮೈಸೂರು

ಇತ್ತೀಚಿನ ವಿದ್ಯಾರ್ಥಿಗಳು ಮತ್ತು ಸಾಹಿತಿಗಳು, ಲೇಖಕರಿಂದ ಗುಣಮಟ್ಟದ ಸಂಶೋಧನೆ ಆಗುತ್ತಿಲ್ಲ ಎಂದು ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಕಳವಳ ವ್ಯಕ್ತಪಡಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜು ಮತ್ತು ಪದವಿ ಕನ್ನಡ ಅಧ್ಯಾಪಕರ ಸಂಘದ ಸಹಯೋಗದಲ್ಲಿ ನಗರದ ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ಭಾನುವಾರ ಆಯೋಜಿಸಿದ್ದ ಲೇಖಕಿ ಡಾ.ಬಿ.ಆರ್.ಜಯಕುಮಾರಿ ಅವರ 'ಬೇರಿಗಿಳಿದ ನೀರು' (ಡಾ.ಎಚ್.ಜಿ.ಲಕ್ಕಪ್ಪಗೌಡರ ಬದುಕು ಮತ್ತು ಬರಹ)ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಆಧುನಿಕ ಯುಗದಲ್ಲಿ ಅಧ್ಯಯನ ಹಿಂದೆ ಸರಿಯುತ್ತಿದೆ. ವಿಶ್ವ ವಿದ್ಯಾಲಯಗಳಂತೂ ಸಂಶೋಧನೆಗಳಿಂದ ದೂರವೇ ಉಳಿದಿವೆ. ಕುವೆಂಪು, ಬೇಂದ್ರೆ, ಅಡಿಗ ಹೀಗೆ ವಿದ್ವಾಂಸರ ಸಾಹಿತ್ಯಗಳನ್ನು ಸಮಗ್ರವಾಗಿ ಮತ್ತು ಪರಿಪೂರ್ಣವಾಗಿ ಓದುತ್ತಿಲ್ಲ. ಅಲ್ಪ ಓದಿ ಅವರ ಬಗ್ಗೆ ಮಾತನಾಡುವ ಕೆಟ್ಟ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗಿದೆ. ಇದು ಸರಿಯಲ್ಲ. ಹೀಗಾಗಿ ಸಮೃದ್ಧ ಸಾಹಿತ್ಯದ ಅಧ್ಯಯನ ಮಾಡಬೇಕು ಎಂದರು.

ರಾಜಕಾರಣಿಗಳು ಪುಸ್ತಕಗಳ ದ್ವೇಷಿಗಳಾಗಿದ್ದಾರೆ. ಇದರಿಂದಾಗಿ ರಾಜಕೀಯ ಮತ್ತು ಧರ್ಮ ಭ್ರಷ್ಟವಾಗಿದೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಲೇಖಕರು ಸಾಹಿತ್ಯ ಮತ್ತು ಸಂಸ್ಕೃತಿಯಿಂದ ಮಾತ್ರ ಸಮಾಜವನ್ನು ಸಂರಕ್ಷಣೆ ಮಾಡಬಹುದಾಗಿದೆ. ಇದಕ್ಕಾಗಿ ಅಧ್ಯಯನ ಮತ್ತು ಬರವಣಿಗೆ ಅಗತ್ಯ ಇದೆ ಎಂದು ಹೇಳಿದರು.

ಗ್ರಾಮೀಣ ಸಂಸ್ಕೃತಿಯನ್ನು ಸಾಹಿತ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿತ್ತಬೇಕು. ಅಕ್ಷರಲೋಕದಲ್ಲಿ ಇದನ್ನು ಪಸರಿಸುವ ಮೂಲಕ ಕೂಡಿ ಬಾಳುವ ಸಂಸ್ಕೃತಿಯನ್ನು ಸಾರಬೇಕು. ಒತ್ತಡದ ಕಾರಣದಿಂದ ಲೇಖಕರು ಬರವಣಿಗೆಯನ್ನು ನಿಲ್ಲಿಸಬಾರದು. ಡಾ.ಎಚ್.ಜಿ.ಲಕ್ಕಪ್ಪಗೌಡರು ನವೋದಯ ಸಾಹಿತ್ಯ ಪರಂಪರೆಯವರು. ಇವರು ಸಾಹಿತ್ಯ ಎಲ್ಲ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಜಾನಪದ, ವಿಮರ್ಶೆ, ಕಾವ್ಯ ಮೀಮಾಂಸೆ ಮುಂತಾದಗಳಲ್ಲಿ ಪಾಂಡಿತ್ಯ ಹೊಂದಿದವರು. ಲಕ್ಕಪ್ಪಗೌಡರ ಸಾಹಿತ್ಯವನ್ನು ಡಾ.ಜಯಕುಮಾರಿ ಅವರು ಓದಿ ಈ ಕೃತಿಯನ್ನು ರಚಿಸಿದ್ದಾರೆ ಎಂದರು.


ವಿಜಯವಾಣಿ

ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಡಾ.ಬಿ.ಆರ್. ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿಯನ್ನು ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಡಾ.ಬಿ.ವಿ.ವಸಂತಕುಮಾರ್, ಸಿ.ಎಸ್.ಪುಟ್ಟರಾಜು, ಡಾ.ಹಿ.ಶಿ.ರಾಮಚಂದ್ರೇಗೌಡ ಮತ್ತಿತರರಿದ್ದರು.

ಕೃತಿ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ಮಾತನಾಡಿದರು. ಶಾಸಕ ಸಿ.ಎಸ್.ಪುಟ್ಟರಾಜು, ಜಾನಪದ ವಿದ್ವಾಂಸ ಡಾ.ಹಿ.ಶಿ.ರಾಮಚಂದ್ರೇಗೌಡ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಕನ್ನಡ ಪ್ರಾಧ್ಯಾಪಕ ಡಾ.ಎ.ರಂಗಸ್ವಾಮಿ, ಮಣಿ ಪ್ರಕಾಶನದ ಎಚ್.ಕೆ.ಮಂಜೇಗೌಡ, ಲೇಖಕಿಯೂ ಆದ ಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯ ಡಾ.ಎಚ್.ಆರ್.ತಿಮ್ಮೇಗೌಡ ಪಾಲ್ಗೊಂಡಿದ್ದರು.

MFGE In the Eyes of the Press.....

ವಿಜಯ ಕರ್ನಾಟಕ

ಸಮಸ್ತ ಕನ್ನಡಿಗರ ಪತ್ರಿಕೆ

ಮಂಗಳವಾರ,1 ನವೆಂಬರ್ 2022



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ಕೋಟಿ ಕಂಠ ಕನ್ನಡ ಗೀತ ಗಾಯನ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕನ್ನಡ ಗೀತೆಗಳನ್ನು ಹಾಡಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 3.11.2022



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್. ತಿಮ್ಮೇಗೌಡ ಅವರು ರಾಜ್ಯೋತ್ಸವದ ಅಂಗವಾಗಿ ಕನ್ನಡ ಧ್ವಜಾರೋಹಣ ನೆರವೇರಿಸಿ, ವಂದನೆ ಸಲ್ಲಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಶನಿವಾರ • ನವೆಂಬರ್ 12, 2022

ಮಹಾಜನ ಕಾಲೇಜಿನಲ್ಲಿ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಮಹಾಜನ ಪ್ರೌಢಶಾಲೆ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಸಂಭ್ರಮದಿಂದ ಈಚೆಗೆ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ವಾಗ್ಮಿ ಪ್ರೊ.ಎಂ.ಕೃಷ್ಣಗೌಡ ಮಾತನಾಡಿ, 'ಕನ್ನಡ ಹೃದಯಕ್ಕೆ ಹತ್ತಿರವಾದ ಸರಳ ಮತ್ತು ಸುಂದರವಾದ ಭಾಷೆ. ಅಂತರಂಗದಲ್ಲಿ ಕನ್ನಡದ ಭಾಷೆ ಕುರಿತು ಪ್ರೀತಿ ಬೆಳೆಸಿಕೊಳ್ಳಬೇಕು' ಎಂದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರುಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ



ಮೈಸೂರಿನ ಮಹಾಜನ ವಿದ್ಯಾಸಂಸ್ಥೆಯ ವಿವೇಕಾನಂದ ಸಭಾಂಗಣದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ರಾಜೋತ್ಸವದಲ್ಲಿ ವಾಗ್ಮಿ ಪ್ರೊ.ಎಂ.ಕೃಷ್ಣಗೌಡ ಆವರನ್ನು ಸನ್ಮಾನಿಸಲಾಯಿತು

ಮುರಳೀಧರ್, ಆಡಳಿತ ಅಧಿಕಾರಿ ಪ್ರೊ.ಪಿ.ಸರೋಜಮ್ಮ, ಎಸ್‌ಬಿಆರ್‌ಆರ್ ಮಹಾಜನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಎಸ್.ಉಮಾರಾಣಿ, ಪ್ರೌಢಶಾಲೆಯ ಮುಖ್ಯಶಿಕ್ಷಕ ಎ.ಎಂ. ರಘುರಾಮ್ ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಸೋಮವಾರ, 7 ನವೆಂಬರ್ 2022

ಅರ್ಥಶಾಸ್ತ್ರ ಬೋಧಿಸುತ್ತಲೇ ಆಪ್ತವಾದ ಗುರುಗಳು

ಮಹಾಜನ ಕಾಲೇಜಿನ ವೆಂಕಟಲಕ್ಷ್ಮೀ ಮೇಡಂ ವಿದ್ಯಾರ್ಥಿಗಳ ಫೇವರೇಟ್

● ಮಣಿಕಂಠ ತ್ರಿಶಂಕರ್,
ಮೈಸೂರು

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ನಾನು. ಈ ವೇಳೆ ಅಲ್ಲಿ ಅರ್ಥಶಾಸ್ತ್ರ ಪಾಠ ಮಾಡುತ್ತಿದ್ದ ಎಂ.ಎನ್. ವೆಂಕಟ ಲಕ್ಷ್ಮೀ ಮೇಡಂ ಎಂದರೆ ನನಗೆ ಅಚ್ಚುಮೆಚ್ಚು.

ನನ್ನ ಹಾಗೆಯೇ ಸಾವಿರಾರು ವಿದ್ಯಾರ್ಥಿಗಳ ಪ್ರೀತಿಗೆ ಇವರು ಪಾತ್ರರು. ತಮ್ಮ ವಿಶೇಷ ವ್ಯಕ್ತಿತ್ವ, ವಿದ್ಯಾರ್ಥಿಗಳನ್ನು ಆಕರ್ಷಿಸುವ ಕಾಣುವ ಗುಣ, ಪಾಠ ಮಾಡುವ ಶೈಲಿ, ನಗು ಮೊಗ ಹೀಗೆ ವಿವಿಧ ಕಾರಣಕ್ಕೆ ನಮಗೆಲ್ಲಾ ತುಂಬಾ ಇಷ್ಟವಾದವರು.



ಅರ್ಥಶಾಸ್ತ್ರದ ಪ್ರಾಧ್ಯಾಪಕಿಯಾಗಿ ಕರ್ನಾಟಕ ಅರ್ಥಶಾಸ್ತ್ರ ಸಂಘ, ಕರ್ನಾಟಕ ರಾಜ್ಯ ಆರ್ಥಿಕ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಶಿಕ್ಷಕರ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವ ಇವರು ತುಸು ಕಷ್ಟ ಎನ್ನಿಸುವ ಅರ್ಥಶಾಸ್ತ್ರವನ್ನು ಮನಮುಟ್ಟುವಂತೆ ಕಲಿಸುತ್ತಾರೆ.

ನಾನು ಕಂಡಂತೆ ಅವರು ತರಗತಿಯಲ್ಲಿ ಒಮ್ಮೆಯೂ ಪುಸ್ತಕ, ಇತರ ಮಾಹಿತಿ ಆಕರಗಳನ್ನು ನೋಡಿ ಪಾಠ ಮಾಡಿದ್ದೇ ಇಲ್ಲ. ತರಗತಿಗೆ ಬಂದರೆ ನಿರರ್ಗಳವಾಗಿ ವಿಷಯವನ್ನು ನಮಗೆಲ್ಲಾ ದಾಟಿಸುತ್ತಿದ್ದರು. ಇಡೀ ತರಗತಿ



ಎಷ್ಟು ಬೇಗ ಮುಗಿಯಿತು ಎನ್ನುವುದೇ ಗೊತ್ತಾಗುವುದಿಲ್ಲ. ಅಷ್ಟರ ಮಟ್ಟಿಗೆ ವಿದ್ಯಾರ್ಥಿಗಳ ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ಗುಣ ಅವರದ್ದು.

ಇವರ ಬೋಧನಾ ಶೈಲಿಗೆ ಮನ ಸೋತು ಹಲವಾರು ವಿದ್ಯಾರ್ಥಿಗಳು ಇವರಂತೆಯೇ ಶಿಕ್ಷಕರಾಗಿದ್ದಾರೆ. ಇನ್ನೂ ಕೆಲವರು ಅರ್ಥಶಾಸ್ತ್ರಜ್ಞರಾಗಿದ್ದಾರೆ. ಉದಾಹರಣೆಗೆ ಅಂತಾರಾಷ್ಟ್ರೀಯ ಮಾನಿಟರಿ ಫಂಡ್ ಮುಖ್ಯಸ್ಥೆ ಗೀತಾ ಗೋಪಿನಾಥ್ ಅವರೇ ನಮ್ಮೆದುರಿಗಿರುವ ಸಾಕ್ಷಿ.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಅಷ್ಟೇ ಪ್ರೋತ್ಸಾಹ ನೀಡುವರು ವೆಂಕಟಲಕ್ಷ್ಮೀ ಮೇಡಂ. ಸದಾ ವಿದ್ಯಾರ್ಥಿಗಳ ಏಳಿಗೆಯನ್ನು ಬಯಸುವ, ವಿದ್ಯಾರ್ಥಿಗಳ ನೋವು ನಲಿವಿಗೆ ಸ್ಪಂದಿಸುವ, ಬೆನ್ನೆಲುಬಾಗಿ ನಿಲ್ಲುವ ಪ್ರಾಧ್ಯಾಪಕರಲ್ಲಿ ಇವರು ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ. ವಿದ್ಯಾರ್ಥಿಗಳ ಸಮಸ್ಯೆ ಮೊದಲು ತದನಂತರ ಉಳಿದ ಕೆಲಸ ಕಾರ್ಯ ಎಂಬ ನಿಯಮ ಇವರದ್ದು. ಇದೇ ಕಾರಣಕ್ಕೆ ಇವರು ನಮ್ಮಂತಹವರ ಫೇವರೇಟ್.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 17.11.2022

ವೈಸ್- ಮಹಾಜನ ಪ್ರಥಮ ದರ್ಜೆ ಕಾಲೇಜು ಒಡಂಬಡಿಕೆ

ಸಣ್ಣ ಉದ್ಯಮದಲ್ಲಿ ಮಹಿಳೆಯರು ಎಂಬ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ತಿಳಿವಳಿಕೆ ಒಪ್ಪಂದ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ (ವೈಸ್) ಹಾಗೂ ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಸಣ್ಣ ಉದ್ಯಮದಲ್ಲಿ ಮಹಿಳೆಯರು ಎಂಬ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ತಿಳುವಳಿಕೆ ಒಪ್ಪಂದ ಹಾಗೂ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು.

ಬಿಬಿಎ, ಬಿ.ಕಾಂ., ಎಂ.ಕಾಂ ಮತ್ತು ಎಂಬಿಎ ವಿಷಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ವಿವಿಧ ವಾಣಿಜ್ಯೋದ್ಯಮ ಅಭಿವೃದ್ಧಿ ಕಾರ್ಯಕ್ರಮ, ಪ್ರಮಾಣಪತ್ರ ಕಾರ್ಯಕ್ರಮ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಜಂಟಿಯಾಗಿ ಆಯೋಜಿಸುವುದು ಈ ಒಡಂಬಡಿಕೆಯ ಉದ್ದೇಶವಾಗಿದೆ.

ವಿದ್ಯಾರ್ಥಿಗಳನ್ನು ಉದ್ಯೋಗಾಕಾಂಕ್ಷಿಗಳಾಗುವುದು ಮತ್ತು ಉದ್ಯೋಗ ಪೂರೈಕೆ ಹಾಗೂ ಉದ್ಯಮಶೀಲ ಕೌಶಲ್ಯಗಳು, ಆರ್ಥಿಕ ಸ್ವಾವಲಂಬನೆ, ಮಹಿಳಾ ಸಬಲೀಕರಣ ಮತ್ತು ನಾವೀನ್ಯತೆಗಳನ್ನು ಉತ್ತೇಜಿಸುವುದು, ಪ್ರೇರೇಪಿಸುವುದು ಈ ಒಪ್ಪಂದದ ಉದ್ದೇಶವಾಗಿರುತ್ತದೆ.



ಮೈಸೂರು ಚೇಂಬರ್ ಆಫ್ ಕಾಮರ್ಸ್ ವೈಸ್- ಮಹಾಜನ ಪ್ರಥಮ ದರ್ಜೆ ಕಾಲೇಜು ಒಡಂಬಡಿಕೆ ಮಾಡಿಕೊಳ್ಳಲಾಯಿತು. ಎಂಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ವೈಸ್ ಅಧ್ಯಕ್ಷೆ ವಸಂತಕುಮಾರಿ ಇತರರಿದ್ದರು.

ಒಪ್ಪಂದದ ಕಾರ್ಯಕ್ರಮದಲ್ಲಿ ಎಂಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ವೈಸ್ ಅಧ್ಯಕ್ಷೆ ವಸಂತಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಇಒ ಡಾ. ಎಸ್. ಆರ್. ರಮೇಶ್, ಸಂಚಾಲಕಿ ಎಸ್. ಶೈಲ, ಗೌರವ ಕಾರ್ಯದರ್ಶಿ ರಚನಾ ಮಹೇಶ್, ಉಪಾಧ್ಯಕ್ಷೆ ಪದ್ಮಿನಿ ಶಿವಣ್ಣ, ವೈಸ್ ವಿಜಾಂಚಿ ಕಲ್ಪನಾ ಸುರೇಂದ್ರ ಮೊದಲಾದವರು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 29.11.2022

ಸಲಹೆ ಉಪನ್ಯಾಸಕ ನಾರಾಯಣ ದೇಸಾಯಿ ಅಭಿಮತ

ಮೌಲ್ಯಯುತ ಜೀವನ ಸಾರ್ಥಕ ಮಾಡಿಕೊಳ್ಳಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾಷಾ ವಿಭಾಗಗಳು ಹಾಗೂ ಐಕ್ಯೂಎಸಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಹರ್ಷಿ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ವಿದ್ವಾನ್ ನಾರಾಯಣ ದೇಸಾಯಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮೌಲ್ಯಯುತ ಜೀವನಕ್ಕೆ ಭಾರತೀಯ ಸಾಹಿತ್ಯದ ಕೊಡುಗೆ ಕುರಿತು ಮಾತನಾಡಿದ ಅವರು, ಭಾರತೀಯ ಸಾಹಿತ್ಯವು ಸಿಂಧುವಿನಂತೆ ವಿಶಾಲವಾಗಿದ್ದು, ಅದರಲ್ಲಿ ಒಂದು ಬಿಂದುವಿನ ರೀತಿಯಲ್ಲಿ ವಿವರಿಸಬಹುದಾದ ಕೆಲವು ವಿಚಾರಗಳನ್ನು ತಿಳಿಸುತ್ತಾ ವೇದ ಸಾಹಿತ್ಯವು ಅತ್ಯಂತ ಪ್ರಾಚೀನ ಸಾಹಿತ್ಯವಾಗಿದೆ, ಅವುಗಳಲ್ಲಿ ಭಗವಂತ! ನಮ್ಮೆಲ್ಲರಿಗೂ ಪರಸ್ಪರ ರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯ ಕೊಡು. ಎಲ್ಲರೂ ಪರಸ್ಪರ ಪ್ರೀತಿಯಿಂದ ಆನಂದವನ್ನು ಅನುಭವಿಸುವಂತಾಗಲಿ. ನಮ್ಮೆಲ್ಲರ ತೇಜಸ್ಸು ವರ್ಧಿಸಲಿ. ನಾವೆಲ್ಲರೂ ಪರಸ್ಪರ ವಿರೋಧವನ್ನು ಎಂದಿಗೂ ಮಾಡದಂತೆ, ಮಿತ್ರರಾಗಿ ಸದಾ ಇರುವಂತೆ



ಮಾಡು ಎಂದು ಸಹಬಾಳ್ವೆಯನ್ನು ಪ್ರಾರ್ಥಿಸುವ ಮಂತ್ರದಲ್ಲಿನ ಅರ್ಥವನ್ನು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಪ್ರೊ.ಬಿ.ಆರ್. ಜಯಕುಮಾರಿ ಮಾತನಾಡಿ, ಬಸವಣ್ಣನವರ ಪ್ರಸಿದ್ಧ ವಚನವಾದ ಕಳಬೇಡ ಕೊಲಬೇಡ ಹುಸಿಯನುಡಿಯಲು ಬೇಡ ಎಂಬ ವಚನ ಸಾಹಿತ್ಯದಲ್ಲಿ ವ್ಯಕ್ತವಾದ ಉದಾತ್ತ ಮೌಲ್ಯಗಳಿಂದ ವ್ಯಕ್ತಿತ್ವ ವಿಕಾಸ, ತನ್ಮೂಲಕ ದೇಶದ ಅಭಿವೃದ್ಧಿ ಸಾಧ್ಯ. ಯಾವುದೇ ಶತ ಶತಮಾನಗಳ ಸಾಹಿತ್ಯವನ್ನು ನೋಡಿದರೂ ಅಲ್ಲಿ ಉತ್ತಮ ಜೀವನಕ್ಕೆ ಬೇಕಾದ ಮೌಲ್ಯ ಕಾಣಬಹುದು. ಆದ್ದರಿಂದ ವಿದ್ಯಾರ್ಥಿಗಳು ಉತ್ತಮ ಸಾಹಿತ್ಯವನ್ನು ಓದುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಕೆ. ಆರ್. ಮಂಜುನಾಥ್, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್ ಇದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 30 ನವೆಂಬರ್ 2022

ಭಾರತೀಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ

ಸಂಸ್ಕೃತ ವಿದ್ವಾಂಸ ನಾರಾಯಣ ದೇಸಾಯಿ ಅಭಿಮತ



ಮೈಸೂರು,ನ.29(ಪಿಎಂ)– ಭಾರತೀಯ ಸಾಹಿತ್ಯದಲ್ಲಿ ಜೀವನ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಮಹರ್ಷಿ ಪದವಿಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ವಿದ್ವಾನ್ ನಾರಾಯಣ ದೇಸಾಯಿ ಅಭಿಪ್ರಾಯಪಟ್ಟರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾಷಾ ವಿಭಾಗಗಳು ಹಾಗೂ ಐಕ್ಯೂಎಸಿ ಮತಿಯಿಂದ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಮೌಲ್ಯಯುತ ಜೀವನಕ್ಕೆ ಭಾರತೀಯ ಸಾಹಿತ್ಯದ ಕೊಡುಗೆ' ಕುರಿತು ಮಾತನಾಡಿದ ಅವರು, ಭಾರತೀಯ ಸಾಹಿತ್ಯ ವಿಶಾಲವಾಗಿದ್ದು, ಅದರಲ್ಲಿ ವೇದ ಸಾಹಿತ್ಯವು ಅತ್ಯಂತ ಪ್ರಾಚೀನತೆ ಹೊಂದಿದೆ ಎಂದು ಹೇಳಿದರು. ಸಮುದಾಯದಲ್ಲಿ ಪರಸ್ಪರ ವಿರೋಧವನ್ನು ಎಂದಿಗೂ ಮಾಡದಂತೆ, ಮಿತ್ರರಾಗಿ ಸಹಬಾಳ್ವೆ ನಡೆಸುವ ಬಗ್ಗೆ ವಿಶಿಷ್ಟ ಚಿಂತನೆ ವೇದ ಸಾಹಿತ್ಯದಲ್ಲಿದೆ. 'ಮಾಧ್ವೆವ ಕುಟುಂಬಕಂ' ಪರಿಪಾಲನೆಗೆ ಮಹತ್ವ ನೀಡಲಾಗಿದೆ. ಮರ್ಯಾದಾ ಪುರುಷೋತ್ತಮ ಶ್ರೀರಾಮ ಚಂದ್ರ ಭಾರತೀಯ ಸಂಸ್ಕೃತಿ, ಸಭ್ಯತೆ, ಜೀವನ ಮೌಲ್ಯಗಳ ಸಾಕಾರರೂಪ. ಶ್ರೀರಾಮ ಗುಣವಂತ, ಧೀರ, ಶೀಲವಂತ, ಸತ್ಯನಿಷ್ಠ, ಧರ್ಮಜ್ಞ, ವಿದ್ವಾಂಸ, ಸರ್ವ ಪ್ರಾಣಿ ಹಿತಾಸಕ್ತ ಎಂದು ಬಣ್ಣಿಸಿದರು.

ರಾಮನು ಅನಂತ ಗುಣಗಳ ಗಣಿ. ಮಾನವ ಜೀವನ ಮೌಲ್ಯಗಳನ್ನು ಸಮಗ್ರವಾಗಿ ತಿಳಿಸುವ ಕಾವ್ಯ ವಾಲ್ಮೀಕಿ ವಿರಚಿತ ರಾಮಾಯಣವಾಗಿದೆ. ಇಲ್ಲಿ ಬರುವ ಅನೇಕ ಪಾತ್ರಗಳ ಮೂಲಕ ಜೀವನದ ಮೌಲ್ಯಗಳಾದ ಧರ್ಮ, ಅರ್ಥ, ಕಾಮ ಗಳನ್ನು ಕವಿ ವಾಲ್ಮೀಕಿ ಅರ್ಥೈಸಿದ್ದಾನೆ. ಇಂದಿನ ಜಗತ್ತಿಗೆ ಶಾಂತಿ ನೀಡಬಲ್ಲ ಶಕ್ತಿ ಈ ಮೌಲ್ಯಗಳಿಗೆ ಇದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಕೆ.ಆರ್.ಮಂಜುನಾಥ್, ಹಿಂದಿ ವಿಭಾಗದ ಮುಖ್ಯಸ್ಥ ಪರಮೇಶ್ವರ ಹೆಗಡೆ, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾನುವಾರ 27.11.2022

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಎನ್‌ಸಿಸಿ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾನಜ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್‌ಸಿಸಿ ದಿನ ಆಯೋಜಿಸಲಾಗಿತ್ತು.

ಎನ್‌ಸಿಸಿ ಗುರಿ, ಉದ್ದೇಶ ಮತ್ತು ಮಹತ್ವವನ್ನು ತಿಳಿಸಲಾಯಿತು. ಕಾರ್ಯಕ್ರಮ ಅಂಗವಾಗಿ ಎನ್‌ಸಿಸಿ ಕೆಡೆಟ್‌ಗಳಿಗೆ ವಿಪತ್ತು ನಿರ್ವಹಣೆ ಕುರಿತು ವಿಶೇಷ ಅಧಿವೇಶನ ಆಯೋಜಿಸಲಾಗಿತ್ತು. ಎನ್‌ಸಿಸಿ ವಿಶೇಷಾಧಿಕಾರಿ ಡಾ.ಪಿ.ಎನ್. ಹೇಮಚಂದ್ರ ಸಂಪನ್ಮೂಲವ್ಯಕ್ತಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕೋಯ್ ಕಮಾಂಡರ್ ಕ್ಯಾಪ್ಟನ್ ಬಿ.ಆರ್. ನಿಖಿಲ್ ಮತ್ತು 110 ಕೆಡೆಟ್‌ಗಳು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 19.11.2022

ಗ್ರಾಮಗಳ ಉದ್ಧಾರವಾಗದೇ ದೇಶದ ಅಭಿವೃದ್ಧಿ ಅಸಾಧ್ಯ



• ಕನ್ನಡಪ್ರಭ ವಾರ್ತೆ ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ವಿಜ್ಞಾನ ವಿಭಾಗ, ಎನ್ನೆಸ್ಸೆಸ್ ಘಟಕಗಳು, ಸ್ವಚ್ಛಭಾರತ್ ಘಟಕ ಮತ್ತು ಮಹಾತ್ಮಗಾಂಧಿ ನ್ಯಾಷನಲ್ ಕೌನ್ಸಿಲ್ ಆಫ್ ರೂರಲ್ ಎಜುಕೇಷನ್, ಮಿನಿಷ್ಟ್ರಿ ಆಫ್ ಎಜುಕೇಷನ್ ಕೇಂದ್ರ ಸರ್ಕಾರ ಇವರ ಸಹಯೋಗದೊಂದಿಗೆ ಗ್ರಾಮೀಣ ಉದ್ಯಮಶೀಲತೆ ಮತ್ತು ಸ್ವಚ್ಛತಾ ಅಭಯಾನ ಕಾರ್ಯಗಾರ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಜೆ. ಶ್ರೀನಿವಾಸ್ ಮಾತನಾಡಿ, ನಮ್ಮ ಭಾರತ ದೇಶವು ಸುಮಾರು ಶೇ. 60ರಷ್ಟು ಗ್ರಾಮಗಳಿಂದ ಕೂಡಿದ್ದು, ಗ್ರಾಮಗಳ ಉದ್ಧಾರವಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ವಿದ್ಯಾವಂತ ಯುವಕರು ಹಳ್ಳಿಗಳ ಏಳಿಗೆಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆ ಹಾಗೂ ಸ್ವ-ಉದ್ಯೋಗದಲ್ಲಿ ತೊಡಗಿಕೊಳ್ಳಬೇಕು. ಇದರಿಂದ ದೇಶ ಅಭಿವೃದ್ಧಿ ಹಾದಿಯಲ್ಲಿ ಮುಂದುವರೆಯುತ್ತದೆ, ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಾದ ನೀವು ಹಳ್ಳಿಗಳ ಅಭಿವೃದ್ಧಿಯೆಡೆಗೆ ಗಮನಹರಿಸಬೇಕು ಎಂದು ತಿಳಿಹೇಳಿದರು.

- ಸಂಪನ್ಮೂಲ ವ್ಯಕ್ತಿಯಾಗಿ ಜೆ. ಶ್ರೀನಿವಾಸ್ ಆಭಿಮತ
- ಮಹಾಜನ ಕಾಲೇಜಿನಲ್ಲಿ ಗ್ರಾಮೀಣ ಉದ್ಯಮಶೀಲತೆ, ಸ್ವಚ್ಛತಾ ಅಭಿಯಾನ ಕಾರ್ಯಾಗಾರ

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ನಮ್ಮ ರಾಷ್ಟ್ರದ ನಿರ್ಮಾಣದಲ್ಲಿ ಗಾಂಧೀಜಿಯವರ ತತ್ವಗಳಾದ ಗ್ರಾಮೀಣಾಭಿವೃದ್ಧಿ, ಪರಿಸರನೈರ್ಮಲ್ಯ ಮತ್ತು ಶಿಕ್ಷಣ ಹಾಗೂ ಇನ್ನಿತರ ಯೋಜನೆಗಳು ಪ್ರಸ್ತುತ ಸಮಾಜಕ್ಕೆ ಅಗತ್ಯವಿದೆ. ಸರ್ಕಾರ ನಿಟ್ಟಿನಲ್ಲಿ ಗಮನಹರಿಸಬೇಕೆಂದು ಮನವಿ ಮಾಡಿದರು. ಉತ್ತಮ ರಾಷ್ಟ್ರ ನಿರ್ಮಾಣದಲ್ಲಿ ಸ್ವಚ್ಛತೆ ಮುಖ್ಯವಾಗುತ್ತದೆ. ನಾವೆಲ್ಲರೂ ಒಗ್ಗಟ್ಟಾಗಿ ಸ್ವಚ್ಛ ಭಾರತ ನಿರ್ಮಾಣಕ್ಕೆ ಕೈಜೋಡಿಸುವಂತೆ ಹೇಳಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 17.11.2022

ಮಹಾಜನ ಕಾಲೇಜಿನಲ್ಲಿ ಬೋಧನೆ, ಕಲಿಕಾ ತರಬೇತಿ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮಾನವ ಸಂಪನ್ಮೂಲ ಅಭಿವೃದ್ಧಿ-1 ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಹೊಸದಾಗಿ ನೇಮಕಗೊಂಡ ಅಧ್ಯಾಪಕರಿಗಾಗಿ ಜ್ಞಾನದ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳಲು ಶಿಕ್ಷಣಶಾಸ್ತ್ರ ಬೋಧನೆ ಮತ್ತು ಕಲಿಕೆ ಹಾಗೂ ತರಬೇತಿ ಕುರಿತು ಒಂದು ದಿನದ ಕಾರ್ಯಕ್ರಮವನ್ನುಕಾಲೇಜಿನಲ್ಲಿಇತ್ತೀಚೆಗೆ ಆಯೋಜಿಸಿತ್ತು.



ಸಂಪನ್ಮೂಲ ವ್ಯಕ್ತಿಯಾಗಿದ್ದ ಆರ್‌ಐಇ ಶಿಕ್ಷಣ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಟಿ.ವಿ. ಸೋಮಶೇಖರ್ ಅವರು ಕಲಿಕೆಯ ಪ್ರಕ್ರಿಯೆ, ಪ್ರಾಮುಖ್ಯತೆ, ಬೋಧನೆಯ ಶೈಲಿ ಹಾಗೂ ಶಿಕ್ಷಣದಲ್ಲಿ ಕಲಿಕೆಯಪಾತ್ರ ಮತ್ತು ಪರಿಗಣನೆಗಳನ್ನು ಕುರಿತು ಶಿಕ್ಷಕರಿಗೆ ಪ್ರಾಯೋಗಿಕವಾಗಿ ಹಾಗೂ ವಿಮರ್ಶಾತ್ಮಕವಾಗಿ ತರಬೇತಿ ನೀಡಿದರು.

ಸಂವಹನ, ಆಯ್ಕೆಗಳ ಪ್ರಕ್ರಿಯೆ, ಶಿಕ್ಷಣದ ಕಾಳಜಿ, ಸೃಜನಶೀಲತೆ ಮತ್ತು ಪ್ರಾಮುಖ್ಯತೆಗಳ ಬಗ್ಗೆ ಒತ್ತು ನೀಡಲಾಯಿತು. ಅಧಿವೇಶನದಲ್ಲಿ ಐನ್‌ಸ್ಟೈನ್‌ರವರ ಪ್ರಸಿದ್ಧ ಉಕ್ತಿಯಾದ ಶಿಕ್ಷಣವು ಸತ್ಯಗಳ ಕಲಿಕೆಯಲ್ಲ, ಮನಸ್ಸುಗಳು ಯೋಚಿಸುವ ತರಬೇತಿಯಾಗಿದೆ ಎಂಬ ಉಲ್ಲೇಖದೊಂದಿಗೆ ಮುಕ್ತಾಯಗೊಂಡಿತು.

ಮಾನವ ಸಂಪನ್ಮೂಲ ಅಭಿವೃದ್ಧಿ-1ರ ಸಂಚಾಲಕರಾದ ಎಸ್.ಶೈಲಾ ಅತಿಥಿಗಳನ್ನು ಪರಿಚಯಿಸಿ, ಸ್ವಾಗತಿಸಿದರು. ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಕಾರ್ಯನಿರ್ವಹಣಾ ಅಧಿಕಾರಿ ಡಾ. ಎಸ್.ಆರ್. ರಮೇಶ್ ಇದ್ದರು. ವಾಣಿಜ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಚ್.ಎಲ್. ಸೌಮ್ಯ ವಂದಿಸಿದರು.

MFGE In the Eyes of the Press.....

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

ಮಂಗಳವಾರ 22.11.2022

ಅಭಿನಂದನೆ ಪುರುಷರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಲಭ್ಯ

ಮಹಾಜನ ಕಾಲೇಜಿಗೆ ಪ್ರಶಸ್ತಿ



• ಕನ್ನಡಪ್ರಭ ವಾರ್ತೆ
ಮೈಸೂರು

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗವು ಆಯೋಜಿಸಿದ್ದ ನಗರ ಅಂತರ ಕಾಲೇಜು ಪುರುಷರ ಪಂದ್ಯಾವಳಿಯಲ್ಲಿ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2021- 22ನೇ ಸಾಲಿನ ಪುರುಷರ ತಂಡವು ಸಮಗ್ರ ಪ್ರಶಸ್ತಿ ಪಡೆದಿದೆ. ವಿಜೇತರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತ ಮಂಡಳಿ ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್. ಆರ್. ರಮೇಶ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಪರೀಕ್ಷಾ ನಿಯಂತ್ರಣಾಧಿಕಾರಿ ಆರ್. ಮಂಜುನಾಥ ಅಭಿನಂದಿಸಿದ್ದಾರೆ.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 23 ನವೆಂಬರ್ 2022

ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ನಗರ ಅಂತರ ಕಾಲೇಜು ಪುರುಷರ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2021–22ನೇ ಸಾಲಿನ ಸಮಗ್ರ ತಂಡ ಪ್ರಶಸ್ತಿ ಪಡೆದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ ಕುಳಿತಿರುವವರು): ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂದನ, ಡಾ.ಭಾಸ್ಕರ್, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಆಡಳಿತ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಡಾ.ಶ್ರೀಧರ, ಡೀನ್ (ಶೈಕ್ಷಣಿಕ), ಮಂಜುನಾಥ, ಪರೀಕ್ಷಾ ನಿಯಂತ್ರಣಾಧಿಕಾರಿ ಹಾಗೂ ವಿವಿಧ ತಂಡಗಳ ನಾಯಕರುಗಳನ್ನು ಕಾಣಬಹುದು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಬುಧವಾರ 30 ನವೆಂಬರ್ 2022

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಚಿತ್ರನಟ ದೊಡ್ಡಣ್ಣ, ವಿದ್ಯಾರ್ಥಿ ಸಂಸತ್ ಉದ್ಘಾಟನೆ: ನಟ ಕಾರ್ತಿಕ್ ಮಹೇಶ್, ಅಧ್ಯಕ್ಷತೆ: ಕಾಲೇಜು ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

ಆಂದೋಲನ

ದಿನ ಪತ್ರಿಕೆ

ಬುಧವಾರ, 30 ನವೆಂಬರ್ 2022

● **ವೇದಿಕೆ ಉದ್ಘಾಟನಾ**

ಬೆಳಿಗ್ಗೆ 10.30ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಪ್ರತಿಭಾ ವೇದಿಕೆ ಉದ್ಘಾಟನೆ-ನಟ ದೊಡ್ಡಣ್ಣ, ವಿದ್ಯಾರ್ಥಿ ಸಂಸತ್ ಉದ್ಘಾಟನೆ-ನಟ ಕಾರ್ತಿಕ್ ಮಹೇಶ್, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಸ್ಥಳ-ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣ, ಕಾಲೇಜಿನ ಆವರಣ.

ವಿಜಯವಾಣಿ

ಕನ್ನಡಿಗರ ಧ್ವನಿ

ಬುಧವಾರ 30 ನವೆಂಬರ್ 2022
30 NOVEMBER 2022



■ **ವಿದ್ಯಾರ್ಥಿ ಸಂಸತ್:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು. ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ. ಉದ್ಘಾಟನೆ: ಚಿತ್ರನಟ ದೊಡ್ಡಣ್ಣ. ಅತಿಥಿ: ನಟ ಕಾರ್ತಿಕ್ ಮಹೇಶ್. ಅಧ್ಯಕ್ಷತೆ: ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್. ಸ್ಥಳ: ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣ, ಕಾಲೇಜು ಆವರಣ. ಬೆ.10.30

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 30.11.2022

■ ಮಹಾಜನ ಪ್ರಥಮ ದರ್ಜೆ ಕಾಲೇಜು: ವಿದ್ಯಾರ್ಥಿ ಸಂಸತ್, ಪ್ರತಿಭಾ ವೇದಿಕೆ ಉದ್ಘಾಟನೆ- ನಟರಾದ ದೊಡ್ಡಣ್ಣ, ಕಾರ್ತಿಕ್ ಮಹೇಶ್, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮಿ ಮುರಳೀಧರ್, ಜಯಲಕ್ಷ್ಮೀಪುರಂ, ಬೆಳಗ್ಗೆ 10.30.

MFGE In the Eyes of the Press.....

DECCAN HERALD
WWW.DECCANHERALD.COM
Friday
November 25, 2022



Students of SBRR Mahajana First Grade College, Jayalakshmipuram, Mysuru, take part in a special campaign 'One Hour for Democracy', on voter registration, on Thursday. DH PHOTO

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 25.11.2022

ಮತದಾರ ನೋಂದಣಿ ವಿಶೇಷ ಅಭಿಯಾನ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ ಕಾರ್ಯಕ್ರಮ

• ಕನ್ನಡಪ್ರಭ ವಾರ್ತೆ ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಕುರಿತು ಪ್ರಜಾಪ್ರಭುತ್ವಕ್ಕಾಗಿ ಒಂದು ಗಂಟೆ ಎಂಬ ವಿಶೇಷ ಅಭಿಯಾನ ಆಯೋಜಿಸಲಾಗಿತ್ತು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಮತಚಲಾಯಿಸುವುದು ನಮ್ಮ ಹಕ್ಕು. ಮತದಾನ ಒಂದು ಪವಿತ್ರವಾದ ಕಾರ್ಯ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ನೀವೆಲ್ಲರೂ ಮತದಾನದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. 17 ವರ್ಷ ಮೇಲ್ಪಟ್ಟವರೂ ಮುಂಗಡ ಅರ್ಜಿಸಲ್ಲಿಸುವ ಸೌಲಭ್ಯ ಕಲ್ಪಿಸಲಾಗಿದೆ. ಆದ್ದರಿಂದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಅಭಿಯಾನದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಮತದಾರ ಸಾಕ್ಷರತಾ ಕ್ಲಬ್‌ನ ಸಂಚಾಲಕ ಎ.ಆರ್. ನಂದೀಶ್ ವಿದ್ಯಾರ್ಥಿಗಳಿಗೆ ಮತದಾನದ ಹೆಸರು ನೋಂದಣಿಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದು, ಸ್ಥಳದಲ್ಲಿಯೇ 50 ವಿದ್ಯಾರ್ಥಿಗಳು ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಂಡರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ಡೀನ್ ಡಾ.ಎಚ್. ಶ್ರೀಧರ್ ಇದ್ದರು. ಇಎಲ್‌ಸಿ ಸಂಚಾಲಕ ಎ.ಆರ್. ನಂದೀಶ್ ಸ್ವಾಗತಿಸಿದರು. ವಿದ್ಯಾರ್ಥಿ ಕೃಷ್ಣ ನಿರೂಪಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 2.12.2022

ಜ್ಞಾನ, ಜನರ ನಿರ್ವಹಣೆ ಸಂಸ್ಥೆಯ ಯಶಸ್ಸಿಗೆ ಕೀಲಿ ಕೈ

ಮೈಸೂರು ವಿವಿ ಪ್ರಾಧ್ಯಾಪಕಿ ಡಾ.ಆಯಿಷಾ ಎಂ. ಶರೀಫ್



• **ಕನ್ನಡಪ್ರಭ ವಾರ್ತೆ** ಮೈಸೂರು.

ಜ್ಞಾನ ಮತ್ತು ಜನರ ನಿರ್ವಹಣೆ ಸಂಸ್ಥೆಯ ಯಶಸ್ಸಿಗೆ ಕೀಲಿ ಕೈ ಎಂದು ಮೈಸೂರು ವಿವಿ ಬಹುದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಪ್ರಾಧ್ಯಾಪಕಿ ಡಾ. ಆಯಿಷಾ ಎಂ. ಶರೀಫ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವ್ಯವಹಾರ ನಿರ್ವಹಣಾಶಾಸ್ತ್ರ ಹಾಗೂ ಐಕ್ಯೂಎಸಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ಇಂದಿನ ಮತ್ತು ನಾಳಿನ ವ್ಯವಹಾರದಲ್ಲಿ ಜ್ಞಾನವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಂಸ್ಥೆಯನ್ನು ಪುನರ್ ರಚಿಸುವ ಮತ್ತು ಮಾನವ ಸಂಪನ್ಮೂಲಗಳ ಪುನರ್ ನಿಯೋಜನೆಯ ಜ್ಞಾನವು ಇತರೆ ಸಂಸ್ಥೆಗಳಿಗಿಂತ ಸ್ಪರ್ಧಾತ್ಮಕ ಅಂಚನ್ನು ಪಡೆಯಲು ಪ್ರಮುಖವಾಗಿದೆ ಎಂದರು.

ಇಂದಿನ ವೃತ್ತಿಪರರು ಹೆಚ್ಚು ಬೇಡಿಕೆಯಲ್ಲಿದ್ದಾರೆ, ಜನರು ಸಂಸ್ಥೆಯ ಪ್ರಮುಖ ಸಾಧನವಾಗಿದ್ದಾರೆ ಮತ್ತು ಆದ್ದರಿಂದ ಗ್ರಾಹಕರ ಅಗತ್ಯತೆಗಳ ಜ್ಞಾನ, ಉತ್ಪಾದನೆ ಮತ್ತು ಜನರ ನಡುವಿನ ಸಂಬಂಧ, ವ್ಯವಹಾರ ಪ್ರಕ್ರಿಯೆ ಮರು ಎಂಜಿನಿಯರಿಂಗ್ ಬಹಳ ಅವಶ್ಯಕ. ಹಿಂದಿನ ಕಾಲದಲ್ಲಿ, ಜನರ ನಿರ್ವಹಣೆ ಮಾನವಸಂಪನ್ಮೂಲಅಭಿವೃದ್ಧಿಯಾಗಿದ್ದರೆ, ಇಂದು ಅದನ್ನು ಹೊಸ ಜನರ ನಿರ್ವಹಣೆ ಎಂದು ಕರೆಯಲಾಗುತ್ತದೆ ಎಂದು ಅವರು ಹೇಳಿದರು.

ಇದು ನಡೆಯುತ್ತಿರುವ ಪ್ರಕ್ರಿಯೆ ಮತ್ತು ಸಂಸ್ಥೆಯ ಯಶಸ್ಸು ವೈಯಕ್ತಿಕ ಪಾಂಡಿತ್ಯ, ಮಾನಸಿಕ ಮಾದರಿಗಳು, ವ್ಯವಸ್ಥೆಗಳ ಚಿಂತನೆ, ಹಂಚಿಕೆಯ ದೃಷ್ಟಿ ಮತ್ತು ತಂಡದ ಕಲಿಕೆಯನ್ನು ನಿರ್ಮಿಸುವ ಐದು ವಿಭಾಗಗಳ ಮೇಲೆ ಅವಲಂಬಿತವಾಗಿದೆ. ಕಾರ್ಪೊರೇಟ್ ಸಂಸ್ಕೃತಿಯು ಈಗ ತರಬೇತಿ ಮತ್ತು ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತಿದೆ ಎಂದು ಅವರು ವಿವರಿಸಿದರು.

ಕಾಲೇಜಿನಪ್ರಾಂಶುಪಾಲೆಡಾ.ಬಿ.ಆರ್. ಜಯಕುಮಾರಿ, ವ್ಯವಹಾರ ನಿರ್ವಹಣಾ ಶಾಸ್ತ್ರದ ಮುಖ್ಯಸ್ಥೆ ಎಸ್. ಶೈಲಾ, ಸಂಯೋಜಕ ಎನ್. ಸುನೀಲ್ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 17.12.2022

ಬೌದ್ಧಿಕ ಆಸ್ತಿ ಹಕ್ಕುಗಳ ಪ್ರಯೋಜನ ಕುರಿತು ಅಧಿವೇಶನ



• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜು ಜೈವಿಕ ತಂತ್ರಜ್ಞಾನ ವಿಭಾಗ ಮತ್ತು ಐಕ್ಯೂಎಸಿ ಸಂಯೋಗದಲ್ಲಿ ಒಂದು ದಿನದ ಬೌದ್ಧಿಕ ಆಸ್ತಿ ಹಕ್ಕುಗಳ ಪ್ರಯೋಜನಗಳ ಕುರಿತು ಸಂವಾದಾತ್ಮಕ ಅಧಿವೇಶನವನ್ನು ಬುಧವಾರ ಆಯೋಜಿಸಲಾಗಿತ್ತು. ಪ್ರೊಸೆಟ್ಟಾ ಸಂಸ್ಥೆ ನಿರ್ದೇಶಕ ಡಾ. ಧರ್ಮಪ್ರಸಾದ್ ಅತಿಥಿಯಾಗಿ ಆಗಮಿಸಿ ಮಾತನಾಡಿ, ಬೌದ್ಧಿಕ ಆಸ್ತಿ ಹಕ್ಕುಗಳು ಒಂದು ವ್ಯಕ್ತಿಯ ಸೃಷ್ಟಿ ಅಥವಾ ಆವಿಷ್ಕಾರದ ಮೇಲೆ ವ್ಯಕ್ತಿಗಳಿಗೆ ನೀಡಲಾದ ಹಕ್ಕುಗಳಾಗಿದೆ. ಅದನ್ನು ಸಾಮಾನ್ಯವಾಗಿ ಸೃಷ್ಟಿಕರ್ತನಿಗೆ, ಅವಳ/ಅವನ ಸೃಷ್ಟಿಯ ಬಳಕೆಯ ಮೇಲೆ ಒಂದು ನಿರ್ದಿಷ್ಟ ಅವಧಿಗೆ ವಿಶೇಷ ಹಕ್ಕನ್ನು ನೀಡಲಾಗುತ್ತದೆ ಎಂದರು. ಸೆಮಿನಾರ್ ವಿವಿಧರೀತಿಯಬೌದ್ಧಿಕಆಸ್ತಿಹಕ್ಕುಗಳಮೇಲೆಕೇಂದ್ರೀಕೃತವಾಗಿತ್ತು. ಇದರಲ್ಲಿ ಪೇಟೆಂಟ್, ಟ್ರೇಡ್ ಮಾರ್ಕ್, ಕೈಗಾರಿಕಾ ವಿನ್ಯಾಸ, ನಕಲು ಹಕ್ಕು ಮತ್ತು ಭೌಗೋಳಿಕ ಸೂಚಕಗಳು ಸೇರಿತ್ತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್, ವಿಭಾಗದ ಮುಖ್ಯಸ್ಥೆ ಸರಸ್ವತಿ ಮತ್ತು ವಿದ್ಯಾರ್ಥಿಗಳು ಇದ್ದರು. ಅಂತಿಮ ವರ್ಷದ ವಿದ್ಯಾರ್ಥಿನಿ ಸುಭಿಕ್ಷಾ ಅತಿಥಿಗಳನ್ನು ಸ್ವಾಗತಿಸಿದರು. ಭವಾನಿ ಅತಿಥಿಗಳನ್ನು ಪರಿಚಯಿಸಿದರು.

ನೇರ.ದಿಟ್ಟ.ನಿರಂತರ

ಭಾನುವಾರ 25.12.2022



ಪೌಷ್ಟಿಕಾಂಶ ಕುರಿತು ಸಂವಾದಾತ್ಮಕ ಅಧಿವೇಶನ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಜೈವಿಕ ರಾಸಾಯನಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ನ್ಯೂಟ್ರೀಷಿಯನ್ ಎಕ್ಸ್‌ಪ್ಲೋರಿಂಗ್ ದ ನ್ಯೂ ಹಾರಿಜಾನ್ಸ್ ಕುರಿತು ಸಂವಾದಾತ್ಮಕ ಅಧಿವೇಶನ ಆಯೋಜಿಸಿತ್ತು. ಜೆಎಸ್‌ಎಸ್ ಎಚ್‌ಇಆರ್‌ನ ಸಹಾಯಕ ಪ್ರಾಧ್ಯಾಪಕಿ ಡಾ. ಸುಧಾ ಸಾಯಿರಾಮ್ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿ, ಪೋಷಕಾಂಶದ ಪ್ರಾಮುಖ್ಯತೆಯು ಬೆಳವಣಿಗೆ, ಅಭಿವೃದ್ಧಿ ಮತ್ತು ಶಕ್ತಿಯ ಪೂರೈಕೆಗಳಲ್ಲಿ ಮಾತ್ರವಲ್ಲದೆ ಒಟ್ಟಾರೆ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುವುದರಲ್ಲಿಯೂ ಇದೆ. ಅನೇಕ ರೋಗಗಳನ್ನು ತಡೆಗಟ್ಟುವಲ್ಲಿ ಸಮತೋಲಿತ ಆಹಾರದ ಪ್ರಾಮುಖ್ಯತೆಯನ್ನುಹೇಳಿದರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್.ಆರ್. ರಮೇಶ್ ಇದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಭಾನುವಾರ 25.12.2022



ವಾಣಿಜ್ಯ ಇಲಾಖೆಯು ನಗರದ ಮಹಾಜನ ಕಾಲೇಜಿನ ಐಕ್ಯೂಎಸಿ ಸಹಯೋಗದಲ್ಲಿ ಗೇಟ್‌ವೇ ಟು ರಿಸರ್ಚ್ ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಮೈಸೂರು ವಿವಿ ಗ್ರಂಥಾ ಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅಧ್ಯಕ್ಷ ಡಾ.ಎನ್.ಎಸ್. ಹರಿನಾರಾಯಣ ಉದ್ಘಾಟಿಸಿದರು.

ಅಂಚೋಲನ
ದಿನ ಪತ್ರಿಕೆ

ಬುಧವಾರ, 7 ಡಿಸೆಂಬರ್ 2022

ಕಾನೂನು ಪರಿಪಾಲನೆ ನಾಗರಿಕರ ಕರ್ತವ್ಯ: ವಾಸುದೇವ

ಮಹಾಜನದಲ್ಲಿ 'ಭಾರತ ಸಂವಿಧಾನದ ಆಶಯ ಮತ್ತು ಮಹತ್ವ' ಕುರಿತ ಕಾರ್ಯಕ್ರಮ



ಮೈಸೂರು: ಭಾರತದ ಸಂವಿಧಾನವು ಕಣ್ಣಿಗೆ ಕಾಣುವ ದೇವರು, ಎಲ್ಲ ಕಾನೂನು ಸಂವಿಧಾನಾತ್ಮಕವಾಗಿರಬೇಕು. ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ಪ್ರಜೆಗಳು ಕಾನೂನು ಪಾಲಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ವಿದ್ಯಾವರ್ಧಕ ಕಾನೂನು ಕಾಲೇಜಿನ ಕೆ.ಬಿ.ವಾಸುದೇವ ಹೇಳಿದರು.

ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಕಾನೂನು ವಿಭಾಗ ಮತ್ತು ಐಕ್ಯೂಎಸಿ ಸಂಯುಕ್ತಾಶ್ರಯದಲ್ಲಿ 'ಸಂವಿಧಾನ ದಿನಾಚರಣೆ'ಯ ಅಂಗವಾಗಿ ಮಂಗಳವಾರ ನಡೆದ 'ಭಾರತ ಸಂವಿಧಾನದ ಆಶಯ ಮತ್ತು ಮಹತ್ವ' ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಂತಿಯಿಂದ ಬದುಕಬೇಕಾದರೆ ಸಮಾನತೆ ಅಗತ್ಯ. ಅಸಮಾನತೆಯನ್ನು ಹೋಗಲಾಡಿಸಲು ಸಂವಿಧಾನವನ್ನು ರಚಿಸಲಾಗಿದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಎನ್.ಆದರ್ಶ ಪ್ರಾರ್ಥಿಸಿದರು. ಕಾನೂನು ವಿಭಾಗದ ಮುಖ್ಯಸ್ಥರಾದ ಮಂಜುಳ ಸ್ವಾಗತಿಸಿದರು. ಎಸ್.ರಾಜು ಅವರು ವಂದಿಸಿದರು. ಬಿ.ಎಲ್.ಸಂದರ್ಶ ಕಾರ್ಯಕ್ರಮ ನಿರೂಪಿಸಿದರು. ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿ ಸಿ.ಎಸ್.ಸಿದ್ದರಾಜು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಎನ್ಎಸ್ಎಸ್ ಸ್ವಯಂ ಸೇವಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 7.12.2022

ಸಂವಿಧಾನ ದಿನ | ವಿದ್ಯಾವರ್ಧಕ ಕಾನೂನು ಕಾಲೇಜಿನ ನಿರ್ದೇಶಕ ಪ್ರೊ.ಕೆ.ಬಿ. ವಾಸುದೇವ ಅಭಿಮತ

ಸಂವಿಧಾನವೆಂಬುದು ಕಣ್ಣಿಗೆ ಕಾಣುವ ದೇವರು

• ಕನ್ನಡಪ್ರಭ ವಾರ್ತೆ ಮೈಸೂರು

ಸಂವಿಧಾನ ಕಣ್ಣಿಗೆ ಕಾಣುವ ದೇವರು, ಎಲ್ಲಾ ಕಾನೂನು ಸಂವಿಧಾನಾತ್ಮಕವಾಗಿರಬೇಕು ಎಂದು ವಿದ್ಯಾವರ್ಧಕ ಕಾನೂನು ಕಾಲೇಜಿನ ನಿರ್ದೇಶಕ ಪ್ರೊ.ಕೆ.ಬಿ. ವಾಸುದೇವ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಕಾನೂನು ವಿಭಾಗ ಮತ್ತು ಐಕ್ಯೂಎಸಿ ಸಹಯೋಗ ದೊಂದಿಗೆ ಸಂವಿಧಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಭಾರತ ಸಂವಿ ಧಾನದ ಆಶಯ ಮತ್ತು ಮಹತ್ವ ಕುರಿತ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಕಾನೂನು ಪರಿಪಾಲನೆ ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಕಾನೂನು ಪರಿಪಾಲನೆ ಮಾಡುವ ಮೂಲಕ ನಮ್ಮ ಮಾನಸಿಕ ಸ್ಥಿತಿ ಸ್ಥಿರವಾಗಿರಬೇಕು. ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು. ಪ್ರಜೆಗಳು ಕಾನೂನು ಕಟ್ಟಲೆಗಳನ್ನು ಪಾಲಿಸು



ಸಂವಿಧಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಭಾರತ ಸಂವಿಧಾನದ ಆಶಯ ಮತ್ತು ಮಹತ್ವ ಕುರಿತ ಕಾರ್ಯಕ್ರಮವನ್ನು ಪ್ರೊ.ಕೆ.ಬಿ. ವಾಸುದೇವ ಉದ್ಘಾಟಿಸಿದರು.

ವಲ್ಲಿ ಪ್ರಮುಖ ಪಾತ್ರವಹಿಸಿ, ಸಂವಿಧಾನಕ್ಕೆ ಗೌರವ ನೀಡಬೇಕು ಎಂದು ಅವರು ಕರೆ ನೀಡಿದರು. ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು ಒಂದು ಕಲ್ಯಾಣ ರಾಜ್ಯವಾಗಿ ನಿರ್ಮಿಸಲು ಅಗತ್ಯವಾಗಿದೆ. 1987ರ ರೂಪ ಕನ್ವರ್ ಪ್ರಕರಣ ಸ್ಥರಿಸಿ, ಮಹಿಳೆಯರ ಮೇಲೆ ಜರುಗುತ್ತಿರುವ ಶೋಷಣೆ ಬಗ್ಗೆ ತಿಳಿಸಿದರು. ಶಾಂತಿಯಿಂದ ಬದುಕಬೇಕಾದರೆ ಸಮಾನತೆ ಆಗತ್ಯ. ಅಸಮಾನತೆಯನ್ನುಹೋಗಲಾಡಿಸಲು ಸಂವಿಧಾನವನ್ನು ರಚಿಸಲಾಗಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನದ ಮತ್ತು ಬದುಕಿನ ಆಶಯ ಒಂದೇ ಆಗಿದ್ದಲ್ಲಿ ಅಭಿವೃದ್ಧಿ ಸಾಧ್ಯ. ವಿದ್ಯಾರ್ಥಿಗಳು ಸಂವಿಧಾನದ ಹಕ್ಕು ಮತ್ತು ಕರ್ತವ್ಯಗಳನ್ನು ಸರಿಯಾಗಿ ಅರ್ಥೈಸಿಕೊಂಡು ಬದುಕಿನಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳಿ ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಿ. ಎಸ್. ಸಿದ್ದರಾಜು ಇದ್ದರು. ವಿದ್ಯಾರ್ಥಿ ಎನ್. ಆದರ್ಶ ಪ್ರಾರ್ಥಿಸಿದರು. ಕಾನೂನು ವಿಭಾಗದಮುಖ್ಯಸ್ಥೆಮಂಜುಳಸ್ವಾಗತಿಸಿದರು. ಎಸ್. ರಾಜು ವಂದಿಸಿದರು. ಬಿ.ಎಲ್. ಸಂದರ್ಶ ನಿರೂಪಿಸಿದರು.

MFGE In the Eyes of the Press.....

ಆರಾಮೋಲಾ
ದಿನ ಪತ್ರಿಕೆ

ಸೋಮವಾರ, 12 ಡಿಸೆಂಬರ್ 2022



ವಿಶ್ವ ಮಾನವ ಹಕ್ಕುಗಳ ದಿನಾಚರಣೆ

ಮೈಸೂರಿನ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಹಾಗೂ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜಿನ ಸಂಯುಕ್ತಾಶ್ರಯದಲ್ಲಿ 'ವಿಶ್ವ ಮಾನವ ಹಕ್ಕುಗಳ ದಿನಾಚರಣೆ'ಯನ್ನು ಆಚರಿಸಲಾಯಿತು. ಬೆಂಗಳೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ.ಎನ್.ಸತೀಶ್‌ಗೌಡ, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಮೈವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮಹಾಜನ ಕಾಲೇಜಿನ ಕಾರ್ಯನಿರ್ವಹಣ ಅಧಿಕಾರಿ ಡಾ.ಎಸ್.ಆರ್.ರಮೇಶ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಜಿ.ದೊಡ್ಡರಸಯ್ಯ, ಸಿ.ಎಸ್.ಸಿದ್ಧರಾಜು, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಪ್ರಭುಸ್ವಾಮಿ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಭಾನುವಾರ 11 ಡಿಸೆಂಬರ್ 2022

ಮಹಾಜನ ಕಾಲೇಜಿನಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ

ಪ್ರತಿಯೊಬ್ಬರು ತಮ್ಮ ತಮ್ಮ ಹಕ್ಕುಗಳ ರಕ್ಷಿಸಿಕೊಳ್ಳಿ

ಬೆಂಗಳೂರು ವಿವಿ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ. ಎನ್.ಸತೀಶ್‌ಗೌಡ ಸಲಹೆ

ಮೈಸೂರು, ಡಿ.10(ಪಿಎಂ)– ಪ್ರಜಾಪ್ರಭುತ್ವದಲ್ಲಿ ಮಾನವ ಹಕ್ಕುಗಳು ಒಂದು ಮುಖ್ಯ ಅಂಗ. ಪ್ರತಿಯೊಬ್ಬ ನಾಗರಿಕರು ಮಾನವ ಹಕ್ಕುಗಳ ಬಗ್ಗೆ ಅರಿತು ತಮ್ಮ ಹಕ್ಕುಗಳ ರಕ್ಷಣೆ ಮಾಡಿಕೊಳ್ಳಬೇಕು ಎಂದು ಬೆಂಗಳೂರು ವಿಶ್ವವಿದ್ಯಾನಿಲಯದ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ.ಎನ್.ಸತೀಶ್‌ಗೌಡ ಹೇಳಿದರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ವಿದ್ಯಾ ಸಂಸ್ಥೆಯ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜು ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆಯಲ್ಲಿ ಅವರು ಉಪನ್ಯಾಸ ನೀಡಿದರು.

ಭಾರತ ಸಂವಿಧಾನದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮಾನವ ಹಕ್ಕುಗಳನ್ನು ಕಾನೂನಾತ್ಮಕವಾಗಿ ನೀಡಲಾಗಿದೆ. ಆದರೆ ಕನಿಷ್ಠ ಮಟ್ಟದಲ್ಲಿ ಅನುಷ್ಠಾನಗೊಳಿಸಿದ್ದು, ಇದು ನಿಜಕ್ಕೂ ದುರಂತ. ಉತ್ತಮ ಜೀವನಕ್ಕಾಗಿ ಮಾನವ ಹಕ್ಕುಗಳು ಬಹಳ ಮುಖ್ಯ. ತಮ್ಮ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕರ ಮೇಲಿದೆ ಎಂದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಮಾತನಾಡಿ, ನಮ್ಮ ಸಂಸ್ಥೆ ಶೈಕ್ಷಣಿಕವಾಗಿ ಪ್ರತಿಯೊಬ್ಬರಿಗೂ ಸಮಾನ ಸೌಲಭ್ಯಗಳನ್ನು ಕಲ್ಪಿಸಿದೆ. ಶೇ.95ಕ್ಕಿಂತ ಹೆಚ್ಚಿನ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಹಮ್ಮಿಕೊಂಡಿದೆ. ಇದಲ್ಲದೆ, ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಪೋಷಕರ ಮಕ್ಕಳಿಗೆ ಪ್ರವೇಶಾತಿಯಲ್ಲಿ ರಿಯಾಯಿತಿ ಕಲ್ಪಿಸಿದೆ. ಹೀಗೆ ಹಲವಾರು ರೀತಿಯಲ್ಲಿ ನಮ್ಮ ಸಂಸ್ಥೆ ನಾಗರಿಕರಿಗೆ ನೆರವಾಗಿದೆ ಎಂದು ತಿಳಿಸಿದರು.

ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಮಹಾಜನ ಕಾಲೇಜಿನ ಕಾರ್ಯ ನಿರ್ವಾಹಣಾ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಮಹಾಜನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ದೊಡ್ಡರಸಯ್ಯ, ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಪ್ರಸನ್ನಸ್ವಾಮಿ ಮತ್ತಿತರರು ಹಾಜರಿದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಸೋಮವಾರ,12 ಡಿಸೆಂಬರ್ 2022

ಮಾನವ ಹಕ್ಕುಗಳ ತಿಳಿವಳಿಕೆ ಅವಶ್ಯ

ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಪ್ರಾಧ್ಯಾಪಕ ಡಾ.ಎನ್.ಸತೀಶ್‌ಗೌಡ ಹೇಳಿಕೆ

■ ವಿಕ ಸುದ್ದಿಲೋಕ ಮೈಸೂರು

ಪ್ರಜಾಪ್ರಭುತ್ವದಲ್ಲಿ ಮಾನವ ಹಕ್ಕುಗಳು ಮುಖ್ಯ. ಪ್ರತಿಯೊಬ್ಬ ನಾಗರಿಕರು ಮಾನವ ಹಕ್ಕುಗಳ ಬಗ್ಗೆ ಅರಿತು, ಜಾಗೃತರಾಗಿ ಸಾರ್ವಜನಿಕ ಹಿತಾಸಕ್ತಿಯಿಂದ ತಮ್ಮ ಹಕ್ಕುಗಳ ಬಗ್ಗೆ ಪ್ರಶ್ನೆ ಮಾಡುವುದನ್ನು ಕಲಿಯಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಪ್ರಾಧ್ಯಾಪಕರಾದ ಡಾ.ಎನ್.ಸತೀಶ್‌ಗೌಡ ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿಶ್ವವಿದ್ಯಾಲಯ ಮತ್ತು ರಾಷ್ಟ್ರೀಯ ಸೇವಾ ಯೋಜನೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು ಹಾಗೂ ಎಸ್‌ಬಿಆರ್‌ಆರ್ ಮಹಾಜನ ಕಾನೂನು ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

''ಎಲ್ಲಾ ಮಾನವರು ಸಮಾನತೆಯ ಹಕ್ಕನ್ನು ಹೊಂದಿರುತ್ತಾರೆ. ಘನತೆ, ಸ್ವಾತಂತ್ರ್ಯ ಮತ್ತು ಎಲ್ಲರಿಗೂ ನ್ಯಾಯ ಎಂಬ ಸಂದೇಶವು ವಿಶ್ವಸಂಸ್ಥೆ ಹಾಗೂ ಸಂವಿಧಾನ ಮೂಲಭೂತ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಮಾನವ ಹಕ್ಕುಗಳ ರಕ್ಷಣೆ ಹಾಗೂ ಜಾರಿಗೊಳಿಸುವ ಜವಾಬ್ದಾರಿಯನ್ನು ನ್ಯಾಯಾಂಗಕ್ಕೆ ಪಹಿಸಲಾಗಿದೆ. ಸಂವಿಧಾನದಲ್ಲಿ ಮಾನವ ಹಕ್ಕುಗಳು ನಾಗರಿಕರ ನೆರವಿಗೆ ಬರಬೇಕು. ಇದರಲ್ಲಿ ಆಹಾರ, ಆರೋಗ್ಯ, ಶಿಕ್ಷಣ, ಉಚಿತ ಶಿಕ್ಷಣ, ಉಚಿತ ಕಾನೂನು ಹಾಗೂ ನೆರವು ಹೀಗೆ ಮಾನವ ಹಕ್ಕುಗಳನ್ನು ಪ್ರತಿಯೊಬ್ಬ ಪ್ರಜೆಗಳು ಅರಿಯಬೇಕು,'' ಎಂದರು.



ನಗರದ ಮಹಾಜನ ಕಾಲೇಜಿನಲ್ಲಿ ನಡೆದ ವಿಶ್ವ ಮಾನವ ಹಕ್ಕು ದಿನಾಚರಣೆಯಲ್ಲಿ ಗಣ್ಯರು ಉದ್ಘಾಟಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಮಾತನಾಡಿದರು. ಮೈವಿವಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಎಂ.ಬಿ.ಸುರೇಶ್, ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಮಹಾಜನ ಕಾಲೇಜಿನ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್. ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್. ಆರ್.ತಿಮ್ಮೇಗೌಡ, ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಎಂ. ಪ್ರಭುಸ್ವಾಮಿ, ಮಹಾಜನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಡಾ. ಜಿ.ದೊಡ್ಡರಸಯ್ಯ ಜಿ ಮತ್ತು ಸಿ.ಎಸ್.ಸಿದ್ಧರಾಜು ಮತ್ತಿತರರು ಇದ್ದರು.

MFGE In the Eyes of the Press.....





ಸಂಪೋಲನ
ದಿನ ಪತ್ರಿಕೆ

ಶನಿವಾರ, 10 ಡಿಸೆಂಬರ್ 2022

● ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ

ಬೆಳಿಗ್ಗೆ 11ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು, ಕಾನೂನು ಕಾಲೇಜು, ಉದ್ಘಾಟನೆ-ಹುಬ್ಬಳ್ಳಿಯ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು, ಸಂಪನ್ಮೂಲ ವ್ಯಕ್ತಿ-ಬೆಂಗಳೂರಿನ ಕಾನೂನು ವಿಭಾಗದ ಸಹ ಪ್ರಾಧ್ಯಾಪಕ ಡಾ.ಎನ್.ಸತೀಶ್ ಗೌಡ, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಸ್ಥಳ-ಕಾಲೇಜಿನ ಆವರಣ, ಜಯಲಕ್ಷ್ಮೀಪುರಂ.



ಪ್ರಜಾವಾಣಿ

ಶನಿವಾರ • ಡಿಸೆಂಬರ್ 10, 2022

ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ, ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕಾನೂನು ಕಾಲೇಜು: ಅಂತರರಾಷ್ಟ್ರೀಯ ಮಾನವ ಹಕ್ಕು ದಿನಾಚರಣೆ ಉದ್ಘಾಟನೆ-ಪ್ರೊ.ಸಿ.ಬಸವರಾಜು, ಅಧ್ಯಕ್ಷತೆ-ಟಿ.ಮುರಳೀಧರ್ ಭಾಗವತ್, ಸ್ಥಳ-ವಿವೇಕಾನಂದ ಸಭಾಂಗಣ, ಬೆಳಿಗ್ಗೆ 11

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 10.12.2022

■ **ಮಹಾಜನ ಕಾಲೇಜು: ಮಾನವ ಹಕ್ಕುಗಳ ದಿನಾಚರಣೆ, ಉದ್ಘಾಟನೆ- ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ. ಬಸವರಾಜು,. ಅಧ್ಯಕ್ಷತೆ- ಟಿ. ಮುರಳೀಧರ ಭಾಗವತ್, ಸಂಪನ್ಮೂಲ ವ್ಯಕ್ತಿ- ಡಾ.ಎನ್. ಸತೀಶ್‌ಗೌಡ, ಜಯಲಕ್ಷ್ಮೀಪುರಂ, ಬೆಳಗ್ಗೆ 11.**

ಮೈಸೂರು ಮಿತ್ರ

ಮೈಸೂರು-ಮಂಡ್ಯ-ರಾಮನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 10 ಡಿಸೆಂಬರ್ 2022

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಮಹಾಜನ ಕಾನೂನು ಕಾಲೇಜು:** ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ, ಉದ್ಘಾಟನೆ: ಹುಬ್ಬಳ್ಳಿ ಕಾನೂನು ವಿವಿ ಕುಲಪತಿ ಪ್ರೊ. ಬಸವರಾಜು, ಅಧ್ಯಕ್ಷತೆ: ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಸಂಪನ್ಮೂಲ ವ್ಯಕ್ತಿ: ಡಾ.ಸತೀಶ್ ಗೌಡ, ಮುಖ್ಯ ಅತಿಥಿಗಳು: ಪ್ರತಾಪ್ ಲಿಂಗಯ್ಯ, ಡಾ. ಎಂ.ಬಿ. ಸುರೇಶ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 11ಕ್ಕೆ.

ವಿಜಯವಾಣಿ

ಕನ್ನಡಿಗರ ಧ್ವನಿ

ಶನಿವಾರ 10 ಡಿಸೆಂಬರ್ 2022
10 DECEMBER 2022



■ **ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ:** ಮಹಾಜನ ಪ್ರಥಮ ದರ್ಜೆ ಕಾಲೇಜು. ಅತಿಥಿಗಳು: ಪ್ರೊ.ಸಿ.ಬಸವರಾಜು, ಡಾ.ಎನ್.ಸತೀಶ್ ಗೌಡ, ಟಿ. ಮುರಳೀಧರ್ ಭಾಗವತ್, ಸ್ಥಳ-ಕಾಲೇಜಿನ ಆವರಣ, ಜಯಲಕ್ಷ್ಮೀ ಪುರಂ. ಬೆ.11. ■

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 28.12.2022

ಆಧುನಿಕ ಬದುಕು ಮೌಲ್ಯ ಪಲ್ಲಟಗೊಳಿಸಿದೆ

ಕನ್ನಡ ಪ್ರಾಧ್ಯಾಪಕ ಡಾ. ಹೊಂಬಯ್ಯ ಅಭಿಮತ | ಕನ್ನಡ ಸಾಹಿತ್ಯ: ಜೀವನ ಮೌಲ್ಯಗಳು ವಿಚಾರ ಸಂಕಿರಣ

• ಕನ್ನಡಪ್ರಭ ವಾರ್ತೆ ಮೈಸೂರು

ಇವತ್ತು ಸಮಾಜದಲ್ಲಿ ಅಪಮೌಲ್ಯಕ್ಕೆ ಒತ್ತು ಕೊಡುತ್ತಿದ್ದೇವೆ. ಆಧುನಿಕ ಬದುಕು ಮೌಲ್ಯಗಳನ್ನು ಪಲ್ಲಟಗೊಳಿಸಿದೆ ಎಂದು ಬೆಳಗಾವಿ ಶ್ರೀಮತಿ ಕುಸುಮಾವತಿ ಮಿರಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ. ಹೊಂಬಯ್ಯ ವಿಷಾದಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ಸಾಹಿತ್ಯ: ಜೀವನ ಮೌಲ್ಯಗಳು ವಿಚಾರ ಕುರಿತು ಅವರು ಮಾತನಾಡಿದರು.

ಕವಿ ಮ್ಯಾಥ್ಯೂ ಆರ್ನಲ್ಡ್ ಮೃಗತ್ವ ಕಳೆದು ಮಾನವತ್ವ ತುಂಬುವುದೇ ಮೌಲ್ಯ ಎಂದಿದ್ದಾರೆ. ಪಂಪ ಹೇಳಿದಂತೆ ಮನುಷ್ಯ ಜಾತಿ ತಾನೊಂದೇ ವಲಂ, ದೇವನೂರ ಮಹಾದೇವರ ಸಂಬಂಜ ಅನ್ನೋದು ದೊಡ್ಡದು ಕನಾ ಸಾಲುಗಳು ಮೌಲ್ಯಗಳ ತಳಪಾಯ ಎಂದರು.

ಕನ್ನಡ ಸಾಹಿತ್ಯ ಚರಿತ್ರೆ ಮೌಲ್ಯದಿಂದಲೇ ತುಂಬಿದೆ. ಜನಪದ ಸಾಹಿತ್ಯದ ಗರತಿಯರ



ಹಾಡುಗಳಲ್ಲಿ ಮೌಲ್ಯ ಇದೆ. ಜನಪದರ ನಡೆ ನುಡಿಯಲ್ಲಿ ಸಾಮಾಜಿಕ, ಕುಟುಂಬದ ಮೌಲ್ಯ ಇದೆ. ಮೌಲ್ಯಗಳೇ ಜನಪದರ ಬಾಳಿನ ದೀಪ. ಇವರದು ಅಪ್ಪಿಕೊಳ್ಳುವ ಸಂಸ್ಕೃತಿ, ಅಪ್ಪತೆಯ ಸಂಸ್ಕೃತಿ ಎಂದರು.

ಕಲ್ಲು ಕೊಟ್ಟವಗೆ ಎಲ್ಲ ಭಾಗ್ಯವೂ ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ, ಮಲ್ಲಿಗೆ ಮುಡಿವ ಸೊಸೆ ಬರಲಿ... ಎಂದು ಜನಪದರು ಹಾಡಿದ್ದಾರೆ. ಇವತ್ತಿನ ಸಂದರ್ಭ ಹೇಗಿದೆ? ಮಗ ಕಂಪ್ಯೂಟರ್ ಕಲಿಯಲಿ, ಸೈಟ್ ತರುವ ಸೊಸೆ ಬರಲಿ ಎಂಬ ಸ್ಥಿತಿಗೆ ತಲುಪಿದ್ದೇವೆ ಎಂದು ಮಾರ್ಮಿಕವಾಗಿ ನುಡಿದರು.

ಶರಣರು, ವಚನಕಾರರು ನಡೆ-ನುಡಿಯೂ ಮೌಲ್ಯ ಮೀರಲಿಲ್ಲ. ಕವಿರಾಜ ಮಾರ್ಗ ವಿವೇಕವೇ ಕನ್ನಡದ ಮಾರ್ಗವಾಯಿತು. ಮೌಲ್ಯದ ಪರಿಕಲ್ಪನೆಗೆ ಜನ್ನನ ಯಶೋಧರ ಚರಿತೆ ಕಾವ್ಯವೇ ಸಾಕು ಅನಿಸುತ್ತದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದ ಮೂಲಕ ಕನ್ನಡದ ಸರಸ್ವತಿ

> ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶದಲ್ಲಿ ಎಲ್ಲ ಮೌಲ್ಯ ಇದೆ. ಅವರ ಕವಿತೆ, ನಾಟಕ, ಕತೆ, ಕಾದಂಬರಿಗಳು ಜೀವನ ಪಾಠ ಕಲಿಸುತ್ತವೆ. ಓ ನನ್ನ ಚೇತನದ ಕವಿತೆಯಲ್ಲಿ ಮೌಲ್ಯದ ಪೂರ್ಣ ದೃಷ್ಟಿ ಇದೆ.
> • ಡಾ. ಹೊಂಬಯ್ಯ

ದೇಗಲುದ ಮೇಲೆ ಸತ್ಯದ ಗುಡಿ ಕಟ್ಟಿದ. ಸತ್ಯ ವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನ ಪರಮಾತ್ಮನ ಎಂಬ ಗೋವಿನ ಹಾಡಿಗಿಂತ ಮೌಲ್ಯ ವಿರುವುದೇ ಎಂದರು.

ತ್ಯಾಗ ಮತ್ತು ಭೋಗ ಎಂಬ ಎರಡು ಮೌಲ್ಯಗಳಿಗೆ ಸಹೋದರರಾದ ಭರತ ಮತ್ತು ಬಾಹುಬಲಿ ಉದಾಹರಣೆ. ಅಣ್ಣನನ್ನು ಜಯಿಸಿದ ಬಾಹುಬಲಿ ವೈರಾಗ್ಯ ತಾಳಿ ದಿಗಂಬರನಾದ. ಭರತ ಭೋಗವನ್ನಪ್ಪಿಕೊಂಡು ರಾಜ್ಯವನ್ನಾಳಿದ. ಸೈನಿಕರು ದೇಶಪ್ರೇಮದ ಬದ್ಧತೆ ಇಲ್ಲದಿದ್ದರೆ ನಿರಾಂಕತವಾಗಿ ಇರಲು ಸಾಧ್ಯವಿಲ್ಲ. ದೇಶಪ್ರೇಮವೂ ಒಂದು ಮೌಲ್ಯ ಎಂದರು.

ಮೌಲ್ಯಕ್ಕೆ ಬೆಲೆ ಕಟ್ಟುವುದೆಂದರೆ ಮೌಲ್ಯ ಕುಸಿಯದ ರೀತಿಯಲ್ಲಿ ನಡೆಯುವುದು. ಪರೋಪಕಾರ, ಸಹನೆ, ಸ್ವಾಭಿಮಾನ, ಕಾಯಕ, ಸಮಾನತೆ, ಶಿಕ್ಷಣ, ಸರಳ ಜೀವನ ಮೌಲ್ಯದ ಪ್ರಮುಖಾಂಶಗಳು. ದಲಿತ ಬಂಡಾಯ ಸಾಹಿತ್ಯದಲ್ಲಿ ಸಮಾನತೆಯೂ ಒಂದು ಮೌಲ್ಯ ಎಂದು ತಿಳಿಸಿದರು.

ಸಾಹಿತ್ಯದ ಪರಿಭಾಷೆಯಲ್ಲಿ ಮುಟ್ಟುವ ಕ್ರಮ ಭೇದವನ್ನು ನಿವಾರಿಸಿ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಅಸಮಾನ ಸಮಾಜದಲ್ಲಿ ಮುಟ್ಟುವುದು ಒಂದು ಮೌಲ್ಯವಾಗಿದೆ. ಎಲ್ಲರಿಗೂ ಒಂದೇ ಮನಸ್ಸು, ಡಬಲ್ ಆ್ಯಕ್ಟಿಂಗ್ ಮಾಡುತ್ತಿರುತ್ತೇವೆ. ಏಕಮುಖ ಆಲೋಚನೆ ಧನಾತ್ಮಕ ಚಿಂತನೆ ಇರಬೇಕು ಹೊಂದುವುದು ಮುಖ್ಯ ಎಂದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ವಿಜಯಕುಮಾರಿ ಅಧ್ಯಕ್ಷತೆವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಬುಧವಾರ 28 ಡಿಸೆಂಬರ್ 2022

ಮನುಷ್ಯನ 'ಆಧುನಿಕ' ಬದುಕು ಮೌಲ್ಯಗಳ ಪಲ್ಲಟಗೊಳಿಸಿದೆ

ಕನ್ನಡ ಪ್ರಾಧ್ಯಾಪಕ ಡಾ. ಹೊಂಬಯ್ಯ ವಿಷಾದ



ಮೈಸೂರು.ಡಿ.27(ಎಂಟಿವೈ)–ಸಮಾಜದಲ್ಲಿ ಅಪಮೌಲ್ಯಕ್ಕೆ ಒತ್ತು ಕೊಡುತ್ತಿದ್ದೇವೆ. ಆಧುನಿಕ ಬದುಕು ಮೌಲ್ಯಗಳನ್ನು ಪಲ್ಲಟಗೊಳಿಸಿದೆ ಎಂದು ಬೆಳಗಾವಿ ಶ್ರೀಮತಿ ಕುಸುಮಾವತಿ ಮಿರಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಹೊಂಬಯ್ಯ ವಿಷಾದಿಸಿದರು.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂ ಎಸಿ ಸಹಯೋಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಕನ್ನಡ ಸಾಹಿತ್ಯ: ಜೀವನ ಮೌಲ್ಯಗಳು ವಿಚಾರ ಕುರಿತು ಅವರು ಮಾತನಾಡಿದರು. ಕವಿ ಮ್ಯಾಥ್ಯೂ ಆರ್ನಲ್ಡ್ ಮೃಗತ್ವ ಕಳೆದು ಮಾನವತ್ವ ತುಂಬುವುದೇ ಮೌಲ್ಯ ಎಂದಿದ್ದಾರೆ. ಪಂಪ ಹೇಳಿದಂತೆ ಮನುಷ್ಯ ಜಾತಿ ತಾನೊಂದೇ ವಲಂ, ದೇವನೂರ ಮಹಾದೇವರ 'ಸಂಬಂಜ(ಸಂಬಂಧ) ಅನ್ನೋದು ದೊಡ್ಡದು ಕನಾ' ಸಾಲುಗಳು ಮೌಲ್ಯಗಳ ತಳಪಾಯ. ಕನ್ನಡ ಸಾಹಿತ್ಯ ಚರಿತ್ರೆ ಮೌಲ್ಯ ದಿಂದಲೇ ತುಂಬಿದೆ. ಜನಪದ ಸಾಹಿತ್ಯದ ಗರತಿಯರ ಹಾಡುಗಳಲ್ಲಿ ಮೌಲ್ಯ ಇದೆ. ಜನಪದರ ನಡೆ ನುಡಿಯಲ್ಲಿ ಸಾಮಾಜಿಕ, ಕುಟುಂಬದ ಮೌಲ್ಯ ಇದೆ. ಮೌಲ್ಯಗಳೇ ಜನಪದರ ಬಾಳಿನ ದೀಪ. ಇವರದು ಅಪ್ಪಿಕೊಳ್ಳುವ ಸಂಸ್ಕೃತಿ. ಆಪ್ತತೆಯ ಸಂಸ್ಕೃತಿ ಎಂದರು.

ಕಲ್ಲು ಕೊಟ್ಟವಗೆ ಎಲ್ಲ ಭಾಗ್ಯವೂ ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ, ಮಲ್ಲಿಗೆ ಮುಡಿವ ಸೊಸೆ ಬರಲಿ... ಎಂದು ಜನಪದರು ಹಾಡಿದ್ದಾರೆ. ಇವತ್ತಿನ ಸಂದರ್ಭ ಹೇಗಿದೆ, ಮಗ ಕಂಪ್ಯೂಟರ್ ಕಲಿಯಲಿ, ಸೈಟ್ ತರುವ ಸೊಸೆ ಬರಲಿ ಎಂಬ ಸ್ಥಿತಿಗೆ ತಲುಪಿದ್ದೇವೆ. ಶರಣರು, ವಚನಕಾರರು ನಡೆ-ನುಡಿಯೂ ಮೌಲ್ಯ ಮೀರಲಿಲ್ಲ. ಕವಿರಾಜ ಮಾರ್ಗ ವಿವೇಕವೇ ಕನ್ನಡದ ಮಾರ್ಗವಾಯಿತು. ಮೌಲ್ಯದ ಪರಿಕಲ್ಪನೆಗೆ ಜನ್ನನ ಯಶೋಧರ ಚರಿತೆ ಕಾವ್ಯವೇ ಸಾಕು ಅನ್ನಿಸುತ್ತದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದ ಮೂಲಕ ಕನ್ನಡದ ಸರಸ್ವತಿ ದೇಗಲದ ಮೇಲೆ ಸತ್ಯದ ಗುಡಿ ಕಟ್ಟಿದ. ಸತ್ಯ ವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬ ಗೋವಿನ ಹಾಡಿಗಿಂತ ಮೌಲ್ಯವಿರುವುದೇ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ವಿಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ ಉಪಸ್ಥಿತರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 28 ಡಿಸೆಂಬರ್ 2022
28 DECEMBER 2022

ಪ್ರಾಧ್ಯಾಪಕ ಡಾ.ಹೊಂಬಯ್ಯ ಅಭಿಮತ | ಮಹಾಜನ ಕಾಲೇಜಿನಲ್ಲಿ ಸಂವಾದ ಕಾರ್ಯಕ್ರಮ

ಮೌಲ್ಯದಿಂದ ತುಂಬಿರುವ ಕನ್ನಡ ಸಾಹಿತ್ಯ ಚರಿತ್ರೆ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಜಾನಪದರ ನಡೆ ನುಡಿಯಲ್ಲಿ ಸಾಮಾಜಿಕ, ಕುಟುಂಬದ ಮೌಲ್ಯ ಇದೆ. ಮೌಲ್ಯವೇ ಜಾನಪದರ ಬಾಳಿನ ದೀಪ. ಇವರದು ಅಪ್ಪಿಕೊಳ್ಳುವ ಸಂಸ್ಕೃತಿ, ಆಪ್ತತೆಯ ಸಂಸ್ಕೃತಿ ಎಂದು ಬೆಳಗಾವಿ ಕುಸುಮಾವತಿ ಮಿರಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಹೊಂಬಯ್ಯ ಹೇಳಿದರು

ಐಕ್ಯೂಎಸಿ ಸಹಯೋಗದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಕನ್ನಡ ಸಾಹಿತ್ಯ: ಜೀವನ ಮೌಲ್ಯ' ಕುರಿತು ಮಾತನಾಡಿದರು. ಕನ್ನಡ ಸಾಹಿತ್ಯ ಚರಿತ್ರೆ ಮೌಲ್ಯದಿಂದಲೇ ತುಂಬಿದೆ. ಜಾನಪದ ಸಾಹಿತ್ಯದ ಗತಿತಿಯರ ಹಾಡುಗಳಲ್ಲಿ ಮೌಲ್ಯ ಇದೆ. ಕಲ್ಲು ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ, ಪಲ್ಲಕ್ಕಿಯ ಮೇಲೆ ಮಗ ಬರುವಂತಾಗಲಿ, ಮಲ್ಲಿಗೆ ಮುಡಿವ ಸೊಸೆ ಬರಲಿ... ಎಂದು ಜಾನಪದರು ಹಾಡಿದ್ದಾರೆ. ಇವತ್ತಿನ ಸಂದರ್ಭ ಹೇಗಿದೆ? ಮಗ ಕಂಪ್ಯೂಟರ್ ಕಲಿಯಲಿ, ಸೈಟ್ ತರುವ ಸೊಸೆ ಬರಲಿ ಎಂಬ ಸ್ಥಿತಿಗೆ ತಲುಪಿದ್ದೇವೆ ಎಂದು ಮಾರ್ಮಿಕವಾಗಿ ನುಡಿದರು.

ಕವಿ ಮ್ಯಾಥ್ಯೂ ಆರ್ನಲ್ಡ್ ಮೃಗತ್ವ ಕಳೆದು ಮಾನವತ್ವ ತುಂಬುವುದೇ ಮೌಲ್ಯ ಎಂದಿದ್ದಾರೆ. ಪಂಪ ಹೇಳಿದಂತೆ ಮನುಷ್ಯ ಜಾತಿ ತಾನೊಂದೇ ವಲಂ, ದೇವನೂರ ಮಹಾದೇವರ ಸಂಬಂಜ ಅನ್ನೋದು ದೊಡ್ಡದು



ವಿಜಯವಾಣಿ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಲ್ಲಿ ಮಂಗಳವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಡಾ.ಹೊಂಬಯ್ಯ, ಡಾ.ಬಿ.ಆರ್.ಜಯಕುಮಾರಿ, ಡಾ.ಎಚ್. ಆರ್.ತಿಮ್ಮೇಗೌಡ ಇದ್ದರು.

ಕನಾ... ಸಾಲುಗಳು ಮೌಲ್ಯಗಳ ತಳಪಾಯ. ಆದರೆ, ಇವತ್ತು ಸಮಾಜದಲ್ಲಿ ಅಪಮೌಲ್ಯಕ್ಕೆ ಒತ್ತು ಕೊಡುತ್ತಿದ್ದೇವೆ. ಆಧುನಿಕ ಬದುಕು ಮೌಲ್ಯವನ್ನು ಪಲ್ಲಟಗೊಳಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಶರಣರು, ವಚನಕಾರರ ನಡೆ-ನುಡಿಯೂ ಮೌಲ್ಯ ಮೀರಲಿಲ್ಲ. ಕವಿರಾಜಮಾರ್ಗ ವಿವೇಕವೇ ಕನ್ನಡದ ಮಾರ್ಗವಾಯಿತು. ಮೌಲ್ಯದ ಪರಿಕಲ್ಪನೆಗೆ ಜನ್ನನ ಯಶೋಧರ ಚರಿತ್ರೆ ಕಾವ್ಯವೇ ಸಾಕು ಅನಿಸುತ್ತದೆ. ರಾಘವಾಂಕ ಹರಿಶ್ಚಂದ್ರ ಕಾವ್ಯದ ಮೂಲಕ ಕನ್ನಡದ ಸರಸ್ವತಿ ದೇಗುಲದ ಮೇಲೆ ಸತ್ಯದ ಗುಡಿ ಕಟ್ಟಿದ. ಸತ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಪರಮಾತ್ಮನು ಎಂಬ ಗೋವಿನ ಹಾಡಿಗಿಂತ ಮೌಲ್ಯವಿರುವುದೇ ಎಂದರು.

ತ್ಯಾಗ ಮತ್ತು ಭೋಗ ಎಂಬ ಎರಡು ಮೌಲ್ಯಕ್ಕೆ ಸಹೋದರರಾದ ಭರತ ಮತ್ತು ಬಾಹುಬಲಿ ಉದಾಹರಣೆ. ಅಣ್ಣನನ್ನು ಜಯಿಸಿದ ಬಾಹುಬಲಿ ವೈರಾಗ್ಯ ತಾಳಿ ದಿಗಂಬರನಾದ. ಭರತ ಭೋಗವನ್ನು ಪ್ಪಿಕೊಂಡು ರಾಜ್ಯ ವನ್ಪಾಳಿದ. ಸೈನಿಕರಿಗೆ ದೇಶಪ್ರೇಮದ ಬದ್ಧತೆ ಇಲ್ಲದಿದ್ದರೆ ನಿರಾತಂಕ ವಾಗಿ ಇರಲು ಸಾಧ್ಯವಿಲ್ಲ. ದೇಶಪ್ರೇಮವೂ ಒಂದು ಮೌಲ್ಯ ಎಂದರು. ಮೌಲ್ಯಕ್ಕೆ ಬೆಲೆ ಕಟ್ಟುವುದೆಂದರೆ ಮೌಲ್ಯ ಕುಸಿಯದ ರೀತಿಯಲ್ಲಿ ನಡೆಯುವುದು. ಪರೋಪಕಾರ, ಸಹನೆ, ಸ್ವಾಭಿಮಾನ, ಕಾಯಕ, ಸಮಾನತೆ, ಶಿಕ್ಷಣ, ಸರಳ ಜೀವನ ಮೌಲ್ಯದ ಪ್ರಮುಖಾಂಶಗಳು. ದಲಿತ ಬಂಡಾಯ ಸಾಹಿತ್ಯದಲ್ಲಿ ಸಮಾನತೆಯೂ ಒಂದು ಮೌಲ್ಯ ಎಂದು ತಿಳಿಸಿದರು.

ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸಂದೇಶದಲ್ಲಿ ಎಲ್ಲ ಮೌಲ್ಯ ಇದೆ. ಅವರ ಕವಿತೆ, ನಾಟಕ, ಕಥೆ, ಕಾದಂಬರಿಗಳು ಜೀವನ ಪಾಠ ಕಲಿಸುತ್ತವೆ. ಓ ನನ್ನ ಚೇತನದ ಕವಿತೆಯಲ್ಲಿ ಮೌಲ್ಯದ ಪೂರ್ಣದೃಷ್ಟಿ ಇದೆ ಎಂದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಉಪಸ್ಥಿತರಿದ್ದರು.

MFGE In the Eyes of the Press.....

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಡಿಸೆಂಬರ್ 9, 2022

'ಕೃಷಿಕ ಕವಿಗಳ ಮರೆತ ಸಾಹಿತ್ಯ ಲೋಕ'

ವಿದ್ವಾಂಸ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಪ್ರತಿಪಾದನೆ; 'ಯಕ್ಷಕವಿ ಕೆಂಪಣ್ಣಗೌಡ' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾಮಾನ್ಯ ಕೃಷಿಕನಾಗಿ ವಿದ್ಯೆಗೆ ಮನಸ್ಸು ಕೊಟ್ಟು ಸಾಹಿತ್ಯ ಶಕ್ತಿ ಬೆಳೆಸಿಕೊಂಡ ಕವಿಗಳನ್ನು ಕನ್ನಡ ಸಾಹಿತ್ಯ ಲೋಕ ನಿರ್ಲಕ್ಷಿಸಿದೆ. ಮಂಡ್ಯದ ಯಕ್ಷಕವಿ ಕೆಂಪಣ್ಣಗೌಡ ಅದಕ್ಕೆ ಉದಾಹರಣೆ' ಎಂದು ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ ಹೇಳಿದರು.

ಜಯಲಕ್ಷ್ಮೀಪುರಂನ ಮಹಾಜನ ಕಾಲೇಜಿನಲ್ಲಿ 'ಅಭಿನವ ಪ್ರಕಾಶನ' ಗುರುವಾರ ಏರ್ಪಡಿಸಿದ್ದ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಯಕ್ಷಕವಿ ಕೆಂಪಣ್ಣಗೌಡ' ಕೃತಿ ಬಿಡುಗಡೆಯಲ್ಲಿ ಅವರು ಮಾತನಾಡಿದರು.

'ಅಸ್ಥಾನ ಕವಿಗಳಿಗೆ ಮನ್ನಣೆ ನೀಡಲಾಗಿದೆ. ಕೃಷಿಕ ಕವಿಗಳ ಹೆಸರುಗಳು ಸಾಹಿತ್ಯ ಚರಿತ್ರೆಯಲ್ಲಿ ಚರ್ಚಿತವಾಗುವುದೇ ಇಲ್ಲ. ಎಲ್ಲರನ್ನು ಅಂತರ್ಗತಗೊಳಿಸಲಾಗಿದೆ' ಎಂದರು.

'ಯಾವ ಹಿನ್ನೆಲೆಯೂ ಇಲ್ಲದ ಸಾಮಾನ್ಯ ಜನರೊಂದಿಗೆ ಬೆರೆತು ಕಟ್ಟಿದ ಸಾಹಿತ್ಯ ಅಮೂಲ್ಯ. ಮೂಡಲಪಾಯ ಯಕ್ಷಗಾನ ಕವಿ ಕೆಂಪಣ್ಣಗೌಡ 15ನೇ ಶತಮಾನದಲ್ಲಿ ರಚಿಸಿದ ನಳಚರಿತ್ರೆ, ಕರಿರಾಯಚರಿತ್ರೆ, ಶನಿಮಹಾತ್ಮೆ ಮೇಲೆ ಸಂಶೋಧನೆಗಳು ಹೆಚ್ಚು ನಡೆದಿಲ್ಲ' ಎಂದು ಹೇಳಿದರು.

ಮುಖ್ಯಾಂಶಗಳು

- ಯಕ್ಷಗಾನ ಬಾಲ್ಯದ ಬದುಕಿನ ಭಾಗವಾಗಿತ್ತು
- ಎಚ್.ಡಿ.ಕೋಟೆಯ 'ಘಟ್ಟದಕೋರೆ' ಕಣ್ಮರೆ
- 'ಮೂಡಲಪಾಯ' ಪುನರುತ್ಥಾನ ಅಗತ್ಯ

'ಕನ್ನಡ ಯಕ್ಷಗಾನ ಚರಿತ್ರೆಯನ್ನು ವಿಸ್ತಾರವಾಗಿ ಬರೆದಿಲ್ಲ. ಈ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ಕೆಂಪಣ್ಣಗೌಡ ಕುರಿತು ನರಹಳ್ಳಿ ಬಾಲಸುಬ್ರಹ್ಮಣ್ಯ ಕೃತಿಶೋಧ ಮಾಡಿರುವುದು ಸಾಹಿತ್ಯ- ಸಂಸ್ಕೃತಿಯ ಹೊಸ ಅನುಸಂಧಾನಕ್ಕೆ ದಾರಿ ಮಾಡಿಕೊಟ್ಟಿದೆ' ಎಂದು ಶ್ಲಾಘಿಸಿದರು.

ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, 'ಕರಾವಳಿ ಭಾಗದಲ್ಲಿ ಬಾಲ್ಯದ ಬದುಕಿನ ಭಾಗ ಯಕ್ಷಗಾನ. ಸಂಭಾಷಣೆ, ವೈಖರಿಗಳನ್ನು ಹಾಡುವುದನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ. ಆದರೆ, ಮಂಡ್ಯದ ಮೂಡಲಪಾಯ ಯಕ್ಷಗಾನ ಅಳಿದು ಹೋಗಿದೆ' ಎಂದರು.



ಮೈಸೂರಿನಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಯಕ್ಷಕವಿ ಕೆಂಪಣ್ಣಗೌಡ' ಕೃತಿಯನ್ನು ಪ್ರೊ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಬಿಡುಗಡೆ ಮಾಡಿದರು. ಡಾ.ಬಿ. ಆರ್. ಜಯಕುಮಾರಿ, ಪಿ.ಎಸ್.ಪುಟ್ಟರಾಜು, ಪ್ರೊ.ಎಂ.ಕೃಷ್ಣೇಗೌಡ, ಡಾ.ಎಚ್.ಆರ್. ತಿಮ್ಮೇಗೌಡ, ನ.ರವಿಕುಮಾರ ಇದ್ದರು

'ಎಚ್.ಡಿ.ಕೋಟೆಯಲ್ಲಿ ಘಟ್ಟದ ಕೋರೆ ಯಕ್ಷಗಾನ ತಂಡವಿತ್ತು. ಅದೂ ಇಲ್ಲವಾಗಿದೆ. ಮೂಡಲಪಾಯ ಯಕ್ಷಗಾನ ಪ್ರಯೋಗಗಳನ್ನು ಹಲವರು ಮಾಡುತ್ತಿದ್ದಾರೆ. ಜಾನಪದ ತಜ್ಞ ಬೀ.ಶಂ. ಪರಮಶಿವಯ್ಯ ಅವರು ಮಾನಸ ಗಂಗೋತ್ರಿಯಲ್ಲಿ ಯಕ್ಷಗಾನ ಜಾನಪದ ಕಲಾಕೂಟ ಸ್ಥಾಪಿಸಿದ್ದರು. ಮೂಡಲಪಾಯ ಪುನರುತ್ಥಾನ ಗೊಳಿಸುವುದು ಅದರ ಗುರಿಯಾಗಿತ್ತು' ಎಂದು ಸ್ಮರಿಸಿದರು.

'ಮಕ್ಕಳಿಗೆ ಸಾಹಿತ್ಯದ ಮೂಲಕ ಕನ್ನಡ ಪರಂಪರೆಯನ್ನು ತಿಳಿಸಬೇಕಾದ ದೊಡ್ಡವರು- ಪಕ್ಷ, ಪಂಥ, ಸಿದ್ಧಾಂತಕ್ಕೆ ಅಂಟಿಕೊಂಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ಪಿ.ಎಸ್.ಪುಟ್ಟರಾಜು ಕೃತಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ರಜನಿ ನರಹಳ್ಳಿ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಅಭಿನವ ಪ್ರಕಾಶನದ ನ.ರವಿಕುಮಾರ್, ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು.

'ಯಕ್ಷಗಾನಕ್ಕೆ ಮಂಡ್ಯವೇ ಮೂಲ'

ಕೃತಿಯ ಲೇಖಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿ, 'ಯಕ್ಷಗಾನ ಪ್ರಯೋಗ ಕಲೆಯಾಗಿ ಪ್ರಚಾರದಲ್ಲಿದೆಯೇ ಹೊರತು ಅದರ ಸಾಹಿತ್ಯಕ್ಕೆ ಯಾರೂ ಪ್ರಾಮುಖ್ಯತೆಯನ್ನು ನೀಡುತ್ತಿಲ್ಲ. ಭಾಗವತರು ಹೇಳುವುದನ್ನು ಬರೆದವರು ಯಾರು' ಎಂದು ಪ್ರಶ್ನಿಸಿದರು.

'ಯಕ್ಷಗಾನವು ಕರಾವಳಿಗೆ ಸೀಮಿತ ಮಾಡಿದ್ದಾರೆ. ಅದರ ಮೂಲ ಮಂಡ್ಯ. ಈ ಜಿಲ್ಲೆಯವರು ತಮ್ಮ ಕಲೆ ಹಾಗೂ ಸಂಸ್ಕೃತಿಯ ವಾರಸುದಾರತ್ವವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿಲ್ಲ. ಯಕ್ಷಗಾನ ಕರಾವಳಿ ಕಲೆ ಎನ್ನದೆ ಕನ್ನಡದ ಕಲೆ ಎಂದು ಹೇಳಬೇಕು' ಎಂದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಬುಧವಾರ, 21 ಡಿಸೆಂಬರ್ 2022

ಮಹಾಜನದಲ್ಲಿ ತರಬೇತಿ ಕಾರ್ಯಾಗಾರ



ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತವಿಜ್ಞಾನ ವಿಭಾಗದಿಂದ ಆಯೋಜಿಸಿರುವ ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ಸಂಪನ್ಮೂಲ ವ್ಯಕ್ತಿ ಬಿ.ಎಸ್. ಕೃಷ್ಣಮೂರ್ತಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಸಾಮಾನ್ಯವಾಗಿ ಮನಸ್ಸಿನಲ್ಲಿರುವ ಗಣಿತದ ಭಯವನ್ನು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಮನಸ್ಸಿನಿಂದ ತೆಗೆದು ಹಾಕುವುದು. ದಿನನಿತ್ಯದ ಚಟುವಟಿಕೆಗಳಲ್ಲಿ ಗಣಿತದ ಅಳವಡಿಕೆ ಮತ್ತು ಭೌತಿಕ ವಿಜ್ಞಾನದೊಂದಿಗಿನ ಸಂಬಂಧವನ್ನು ಕುರಿತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ವೇಳೆ ಪ್ರೌಢಶಾಲಾ ಮತ್ತು ಕಾಲೇಜು ಶಿಕ್ಷಕರಿಗೆ ತಾಂತ್ರಿಕ ಶಿಬಿರಗಳನ್ನು ನಡೆಸಲಾಯಿತು. ಸುಮಾರು 200ಕ್ಕೂ ಹೆಚ್ಚು ಪ್ರೌಢಶಾಲಾ ಶಿಕ್ಷಕರು, ಕಾಲೇಜುಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತರಬೇತಿಯ ಸದುಪಯೋಗ ಪಡೆದುಕೊಂಡರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪರೀಕ್ಷಾ ಘಟಕದ ನಿಯಂತ್ರಕ ಆರ್.ಮಂಜುನಾಥ್, ಭೌತವಿಜ್ಞಾನ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಬುಧವಾರ 21.12.2022

ಎರಡು ದಿನಗಳ ತರಬೇತಿ ಕಾರ್ಯಕ್ರಮ



ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಭೌತವಿಜ್ಞಾನ ವಿಭಾಗಗಳಿಂದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮ ಉದ್ಘಾಟಿಸಿದ ಗಣಿತ ಚಟುವಟಿಕೆಗಳ ಪ್ರವರ್ತಕ ಬಿ.ಎಸ್. ಕೃಷ್ಣಮೂರ್ತಿ ಅವರು, ಗಣಿತವನ್ನು ನೈಜ ಪ್ರಪಂಚಕ್ಕೆ ಸಂಪರ್ಕಿಸುವುದು. ಸಾಮಾನ್ಯ ಮನಸ್ಸಿನಲ್ಲಿರುವ ಗಣಿತದ ಭಯವನ್ನು ವಿಶೇಷವಾಗಿ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಮನಸ್ಸಿನಿಂದ ತೆಗೆದು ಹಾಕುವುದು. ದಿನನಿತ್ಯದ ಚಟುವಟಿಕೆಗಳಲ್ಲಿ ಗಣಿತದ ಅಳವಡಿಕೆ ಮತ್ತು ಭೌತಿಕ ವಿಜ್ಞಾನದೊಂದಿಗಿನ ಸಂಬಂಧವನ್ನು ಕುರಿತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ತಿಳಿಸಿದರು.

ಪ್ರೌಢಶಾಲಾ ಮತ್ತು ಕಾಲೇಜು ಶಿಕ್ಷಕರಿಗೆ ತಾಂತ್ರಿಕ ಶಿಬಿರಗಳನ್ನು ನಡೆಸಲಾಯಿತು. ಎರಡನೇ ದಿನ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ಸಹ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ತಮ್ಮ ಆಲೋಚನೆಗಳನ್ನು ಸಕ್ರಿಯಗೊಳಿಸಲು ಗಣಿತದ ಆಟಗಳನ್ನು ಆಡುವಂತಹ ಚಟುವಟಿಕೆಗಳು - ವಿಂಗಡಿಸುವುದು, ಹೊಂದಿಸುವುದು ಇವುಗಳಲ್ಲಿ ತೊಡಗಿಸಿಕೊಂಡರು. ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಪರೀಕ್ಷಾ ಘಟಕದ ನಿಯಂತ್ರಕ ಆರ್. ಮಂಜುನಾಥ್, ಎಲ್ಲಾ ಭೌತವಿಜ್ಞಾನ ವಿಭಾಗದ ಮುಖ್ಯಸ್ಥರು ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 30 ಡಿಸೆಂಬರ್ 2022

'ಜೀವ ಕೇಂದ್ರಿತ ಮೀಮಾಂಸೆ ಕಟ್ಟಿಕೊಟ್ಟ ಕುವೆಂಪು'

ಮಹಾಜನ ಕಾಲೇಜಿನಲ್ಲಿ 'ಕುವೆಂಪು ಸಾಹಿತ್ಯದಲ್ಲಿ ಜೀವ ಸಮಾನತೆ' ಕುರಿತು ಸಂವಾದ ಕಾರ್ಯಕ್ರಮ



ಮೈಸೂರು: ಕುವೆಂಪು ಅವರು ದೈವ ಮೀಮಾಂಸೆ ಮತ್ತು ಪ್ರಾಣಿ ಮೀಮಾಂಸೆ ಇವೆರಡನ್ನೂ ನಿರಾಕರಿಸಿ ಒಟ್ಟು ಜೀವ ಕೇಂದ್ರಿತವಾದ ಜೀವ ಮೀಮಾಂಸೆಯನ್ನು ಕಟ್ಟಿಕೊಟ್ಟರು ಎಂದು ಪ್ರಾಧ್ಯಾಪಕ ಡಾ. ಚಿಕ್ಕಮಗಳೂರು ಗಣೇಶ್ ಹೇಳಿದರು.

ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಐಕ್ಯೂಎಸಿ ಸಂಯುಕ್ತಾಶ್ರಯದಲ್ಲಿ ನಡೆದ ಕುವೆಂಪು ಜನ್ಮ ದಿನಾಚರಣೆಯ ಅಂಗವಾಗಿ 'ಕುವೆಂಪು ಸಾಹಿತ್ಯದಲ್ಲಿ ಜೀವ ಸಮಾನತೆ' ಎಂಬ ವಿಷಯ ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕುವೆಂಪು ಅವರು 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯವನ್ನು ರಚಿಸಿ ಯುಗದ ಕವಿಯಾದರು. ಕನ್ನಡಿಗರು ಜಗತ್ತನ್ನು ಹೇಗೆ ಗ್ರಹಿಸಬೇಕು, ಕನ್ನಡವನ್ನು ಹೇಗೆ ವಿಶ್ವಮಟ್ಟಕ್ಕೆ ಕೊಂಡೊಯ್ಯಬೇಕು ಎಂಬುದನ್ನು ಅನಿಕೇತನ ಗೀತೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಕುವೆಂಪು ಅವರ ಸಾಹಿತ್ಯದಲ್ಲಿ ಗ್ರಾಮ ಭಾರತದ ನಾಯಕತ್ವ, ಕಲೆಯ ಹೊಣೆಗಾರಿಕೆ, ಸರ್ವ ಜೀವಾದ್ವೈತ, ಅಗಾಧವಾದ ಪ್ರಕೃತಿ ಪ್ರೇಮ ಮೊದಲಾದ ಮಾನವೀಯ · ಮೌಲ್ಯಗಳನ್ನು ಕಾಣಬಹುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿದರು. ಇದೇ ವೇಳೆ ವಿದ್ಯಾರ್ಥಿಗಳು ಕುವೆಂಪು ರಚಿತ ಸಮೂಹ ಭಾವಗೀತೆಗಳ ಗಾಯನ ನಡೆಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಗಣ್ಯರನ್ನು ಸ್ವಾಗತಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನೋದಮ್ಮ ವಂದಿಸಿದರು, ಸಿ.ಎಂ.ಕಿರಣ್‌ಕುಮಾರ್, ಮನೋಜ್‌ಕುಮಾರ್, ಅಧ್ಯಾಪಕರು ಮತ್ತು ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

30.12.2022 ಶುಕ್ರವಾರ

ವಿಶ್ವಮಾನವ ಸಂದೇಶ ಜಗತ್ತಿಗೆ ಕಟ್ಟಿಕೊಟ್ಟವರು ಕವಿ ಕುವೆಂಪು

ಪ್ರಾಧ್ಯಾಪಕ ಡಾ. ಚಿಕ್ಕಮಗಳೂರು ಗಣೇಶ್ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ರಾಷ್ಟ್ರಕವಿ ಕುವೆಂಪು ಅವರು ವಿಶ್ವಮಾನವ ಸಂದೇಶಎನ್ನುವಸಾಂಸ್ಕೃತಿಕಜಾಗತೀಕರಣವನ್ನು ಕಟ್ಟಿಕೊಟ್ಟವರು ಎಂದು ಕೆ.ಆರ್. ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಕನ್ನಡ ಪ್ರಾಧ್ಯಾಪಕ ಡಾ. ಚಿಕ್ಕಮಗಳೂರು ಗಣೇಶ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಕುವೆಂಪು ಜನ್ಮ ದಿನಾಚರಣೆಯ ಅಂಗವಾಗಿ ಗುರುವಾರ ಆಯೋಜಿಸಿದ್ದ ಕುವೆಂಪು ಸಾಹಿತ್ಯ ದಲ್ಲಿ ಜೀವ ಸಮಾನತೆ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕುವೆಂಪು ಆಧುನಿಕ ಕಾಲದ ಮಹಾನ್ ದಾರ್ಶನಿಕ ಕವಿ. ಅವರು ದೊಡ್ಡ ಆತ್ಮ ಗೌರವ ದಿಂದ ಬಾಳಿದವರು. ಕನ್ನಡದ ವಿಶ್ವಪ್ರಜ್ಞೆಯ ಲೇಖಕರಾದ ಅವರು ಶುದ್ಧ- ಶುಚಿ ಬದುಕು ಬರಹವನ್ನು ಮೇಳೈಸಿಕೊಂಡವರು. ಇಂದು ನಾಡು ಧಾರ್ಮಿಕವಾಗಿ ಛಿದ್ರವಾಗುತ್ತಿರುವ ಸನ್ನಿವೇಶದಲ್ಲಿ ಕುವೆಂಪು ಅವರ ಅನಿಕೇತನ ಗೀತೆ ಸಂಜೀವಿನಿಯಾಗಿದೆ ಎಂದರು.

ಕುವೆಂಪು ಅವರು ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ರಚಿಸಿ ಯುಗದ ಕವಿಯಾದರು. ಕನ್ನಡಿಗರು ಜಗತ್ತನ್ನು ಹೇಗೆ ಗ್ರಹಿಸಬೇಕು ಹಾಗೂ ಕನ್ನಡವನ್ನು ಹೇಗೆ ವಿಶ್ವ ಮಟ್ಟಕ್ಕೆ ಕೊಂಡೊಯ್ಯಬೇಕು ಮತ್ತು ಕನ್ನಡಿಗರು ಮತ್ತು ವಿಶ್ವದ ಜನರ ನಡುವೆ ಒಂದು ಸಂಪರ್ಕ ಜಾಗತಿಕ ಬಂಧುತ್ವವನ್ನು ಅನಿಕೇತನ ಗೀತೆಯ ಮೂಲಕ ಕಟ್ಟಿಕೊಟ್ಟಿದ್ದಾರೆ ಎಂದು ಅವರು ಹೇಳಿದರು.

ಇದೇ ವೇಳೆ ವಿದ್ಯಾರ್ಥಿಗಳಾದ ಸುಪ್ರಿತ್ ಭಾರಧ್ವತ್, ಸೃಷ್ಟಿ, ಅರ್ಚನ, ಅಂಕಿತ್, ಸಂದೀಪ್, ಸುಭಿಕ್ಷ ಅವರು ಕುವೆಂಪು ಅವರ ಭಾವಗೀತೆಗಳ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ. ವಿನೋದಮ್ಮ ವಂದಿಸಿದರು. ಸಿ.ಎಂ. ಕಿರಣ್‌ಕುಮಾರ್ ನಿರೂಪಿಸಿದರು.

MFGE In the Eyes of the Press.....

ಆರೋಗ್ಯ
ದಿನಪತ್ರಿಕೆ

ಶುಕ್ರವಾರ, 9 ಡಿಸೆಂಬರ್ 2022

ಪ್ರಸ್ತುತ ಕವಿ, ಲೇಖಕರು ನೈತಿಕ ಅಧಃಪತನಕ್ಕಿಳಿದಿದ್ದಾರೆ: ಪ್ರೊ.ಕೃಷ್ಣೇಗೌಡ

'ನರಹಳ್ಳಿ ಬಾಲಸುಬ್ರಹ್ಮಣ್ಯ-70' ಮತ್ತು 'ಯಕ್ಷಕವಿ ಕೆಂಪಣ್ಣ ಗೌಡ ಅವರ ಸಮಗ್ರ ಸಾಹಿತ್ಯ ಕೃಷಿ ಶೋಧ' ಕೃತಿಗಳ ಬಿಡುಗಡೆ

ಮೈಸೂರು: ಕನ್ನಡ ಸಾಹಿತ್ಯದ ಘನತೆ ಮತ್ತು ಗೌರವ ವಿಸ್ತರಿಸಲು ಸಾಹಿತ್ಯ ಕೃಷಿ ಮಾಡುವ ಕವಿಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ವಿಷಾದಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆ ಸಹಯೋಗದಲ್ಲಿ ಗುರುವಾರ ನಡೆದ 'ನರಹಳ್ಳಿ ಬಾಲಸುಬ್ರಹ್ಮಣ್ಯ-70' ಮತ್ತು 'ಯಕ್ಷಕವಿ ಕೆಂಪಣ್ಣ ಗೌಡ ಅವರ ಸಮಗ್ರ ಸಾಹಿತ್ಯ ಕೃಷಿ ಶೋಧ' ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಹಿತ್ಯವನ್ನು ಓದುಗರು ಗೌರವಿಸುತ್ತಿದ್ದು, ಅನೇಕ ಕವಿ ಮತ್ತು ಲೇಖಕರು ಪ್ರಸ್ತುತ ನೈತಿಕ ಅಧಃಪತನ ಕ್ಕಿಳಿದಿದ್ದಾರೆ ಸಾಹಿತ್ಯದ ಮೂಲಕ ಬದುಕಿನ ಆದರ್ಶಗಳನ್ನು ತಿಳಿಸಬೇಕಾದವರು ಪಕ್ಷ, ಪಂಥ, ಸಿದ್ಧಾಂತಕ್ಕೆ ಅಂಟಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಚರಿತ್ರೆಕಾರರು, ಸಾಹಿತಿಗಳು ವಿಮರ್ಶೆ ಮತ್ತು ಚರ್ಚೆ ಮಾಡಬೇಕಾದನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ. ಇದು ಅಸಹ್ಯ ಹುಟ್ಟಿಸುತ್ತಿದೆ ಎಂದರು. ಶಿಕ್ಷಣ ತಜ್ಞರು ಚರ್ಚೆ ಮಾಡಬೇಕಾದದ್ದನ್ನು ಪಕ್ಷಗಳು ಚರ್ಚೆ ಮಾಡುತ್ತಿವೆ. ಇಂತಹ ದುಸ್ಥಿತಿಯಲ್ಲಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಯಾವುದೇ ಅಜೆಂಡಾಗಳಿಗೆ ಸಿಲುಕದೆ, ಜಾತಿಗೆ ಅಂಟಿಕೊಳ್ಳದೇ ಯಾವುದೇ ಪ್ರತಿಫಲವಿಲ್ಲದೆ ಕನ್ನಡ ಸಾಹಿತ್ಯವನ್ನು ವಿಸ್ತರಿಸಲು ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.



ಮೈಸೂರಿನ ಮಹಾಜನ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ನರಹಳ್ಳಿ ಬಾಲಸುಬ್ರಹ್ಮಣ್ಯ -70' ಮತ್ತು ಅವರ 'ಯಕ್ಷಕವಿ ಕೆಂಪಣ್ಣ ಗೌಡ ಅವರ ಸಮಗ್ರ ಸಾಹಿತ್ಯ ಕೃಷಿ ಶೋಧ' ಕೃತಿಗಳನ್ನು ಹಿರಿಯ ವಿಮರ್ಶಕ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರೀ ಬಿಡುಗಡೆಗೊಳಿಸಿದರು. ಶಾಸಕ ಸಿ.ಎಸ್. ಪುಟ್ಟರಾಜು, ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಮುಂತಾದವರು ಚಿತ್ರದಲ್ಲಿದ್ದಾರೆ.

ಯಕ್ಷಗಾನ ಕರಾವಳಿ ಜನತೆಯ ಬದುಕಿನ ಭಾಗವಾಗಿದೆ. ಆದರೆ, ಕಾವೇರಿ ಕಣಿವೆಯ ಮಂಡ್ಯ-ಮೈಸೂರು ಭಾಗದಲ್ಲಿ ಯಕ್ಷಗಾನ ಕಿಲುಬಾಗಿದೆ. ಮತ್ತ ಈ ಭಾಗಗಳಲ್ಲಿ ಯಕ್ಷಗಾನ ಪುನರುಜ್ಜೀವನಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಮೂಡಲ ಪಾಯ ಯಕ್ಷಗಾನ ಕಲಾವಿದರು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು. ನರಹಳ್ಳಿ ಅವರ ಸಾಹಿತ್ಯವನ್ನು ಓದಿದಾಗ ಮನಸ್ಸಿನ ಮೇಲೆ ಗಾಢವಾದ ವಿಶ್ವಾರ್ಹ ಕಾಣಲಿದೆ. ಯಕ್ಷಕವಿ ಕೆಂಪಣ್ಣಗೌಡ ಅವರ ಸಮಗ್ರ ಸಾಹಿತ್ಯವನ್ನು ಶೋಧಿಸಿ ಕೃತಿ ರಚಿಸಿದ್ದಾರೆ ಎಂದು ವಿವರಿಸಿದರು.

ಕೃತಿ ಬಿಡುಗಡೆಗೊಳಿಸಿದ ಹಿರಿಯ ವಿಮರ್ಶಕ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರೀ ಮಾತನಾಡಿ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಕೆಂಪಣ್ಣ ಗೌಡ ಅವರ ಪ್ರಮುಖ ಮೂರು ಕೃತಿಗಳಲ್ಲಿನ ಕಲ್ಪನೆ, ಸಂವಿಧಾನ ವಿಚಾರ ಮತ್ತು ಹಲವು ಪ್ರಕಾರಗಳನ್ನು ಆಯ್ಕೆ ಮಾಡಿಕೊಂಡು ಸಮಗ್ರ ವಿಮರ್ಶೆ ಮಾಡಿದ್ದಾರೆ. 13ನೇ ಶತಮಾನದಲ್ಲಿ ಗ್ರಾಮೀಣ ಭಾಗದ ಕೃಷಿ ಕುಟುಂಬದಲ್ಲಿ ಹುಟ್ಟ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡು ಜನಪ್ರಿಯ ದಾಟಿಯಲ್ಲಿ ಯಕ್ಷಗಾನವನ್ನು ರಚಿಸಿದ ಕೆಂಪಣ್ಣ ಗೌಡ ಅವರ ಹೆಸರನ್ನು ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸುವುದಿಲ್ಲ ಯಾಕೇ ಎಂದು ಪ್ರಶ್ನಿಸಿದರು.

ಡಾ. ನರಹಳ್ಳಿ ಅವರು ಕನ್ನಡದ ಶ್ರೇಷ್ಠ ಬರಹಗಾರರು, ವಿಮರ್ಶಕರು, ಚಿಂತಕರು, ಒಳ್ಳೆಯ ವಾಗ್ಮಿಗಳು ಹಾಗೂ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆಗಳನ್ನು ನೀಡಿದವರು. ಇವರ ಕೃತಿ ಲೋಕಾರ್ಪಣೆಗೊಂಡಿರುವುದು ನನಗೆ ಸಂತಸ ತಂದಿದೆ. ಯಕ್ಷಗಾನದ ಹುಟ್ಟು ಬೆಳವಣಿಗೆ ಹಾಗೂ ವೈಶಿಷ್ಟತೆಗಳನ್ನು ಕೃತಿಯಲ್ಲಿ ವಿಮರ್ಶಿಸಿದ್ದಾರೆ. ಮಂಡ್ಯ ಪ್ರಾಂತ್ಯದ ಕೆಲವು ಮುಖ್ಯ ಅಂಶಗಳನ್ನು ಜನತೆಗೆ ತಮ್ಮದೇ ಆದ ಶೈಲಿಯಲ್ಲಿ ರಚಿಸಿರುವುದು ಬಹಳ ಸೂಕ್ಷವಾಗಿದೆ. ಈ ಕೃತಿ ಜನರ ಮನ್ನಣೆಗೆ ಪಾತ್ರವಾಗಿದೆ ಎಂದು ಶುಭಕೋರಿದರು.

ಶಾಸಕ ಸಿ.ಎಸ್.ಪುಟ್ಟರಾಜು ಕೃತಿಗಳನ್ನು ಸ್ಥೀಕರಿಸಿದರು. ಸಾಹಿತಿ ಡಾ.ನರಹಳ್ಳಿ ಬಾಲ ಸುಬ್ರಹ್ಮಣ್ಯ, ಪತ್ನಿ ರಜನಿ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಪತ್ರಕರ್ತ ಜಗದೀಶ ಕೊಪ್ಪ, ಕವಿ ಕೆ.ಸಿ.ಶಿವಪ್ಪ, ಮರಿಸ್ವಾಮಿ ಗೌಡ ಕಾರ್ಯಕ್ರಮದಲ್ಲಿ ಹಾಜರಿದ್ದರು. ಬೆಂಗಳೂರಿನ ಅಭಿನವ ಸಂಸ್ಥೆಯ ನ. ರವಿಕುಮಾರ್ ನಿರೂಪಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಸ್ವಾಗತಿಸಿ ದರು. ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ವಿನೋದಮ್ಮ ವಂದಿಸಿದರು. ವಿದ್ಯಾರ್ಥಿನಿ ಮನೋಜ್ಞ ಪ್ರಾರ್ಥಿಸಿದರು.

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪತ್ರಿಕೆ

ಶುಕ್ರವಾರ,9 ಡಿಸೆಂಬರ್ 2022

ತಜ್ಞರು, ಸಾಹಿತಿಗಳ ಕೆಲಸ ಮಾಡುತ್ತಿರುವ ರಾಜಕಾರಣಿಗಳು

ಪ್ರೊ.ಎಂ.ಕೃಷ್ಣೇಗೌಡ ವಿಷಾದ

■ **ವಿಕ ಸುದ್ದಿಲೋಕ** ಮೈಸೂರು

ಪ್ರಸ್ತುತ ಚರಿತ್ರಕಾರರು, ಸಾಹಿತಿಗಳು, ಶಿಕ್ಷಣ ತಜ್ಞರು ವಿಮರ್ಶೆ ಮತ್ತು ಚರ್ಚೆ ಮಾಡಬೇಕಾದ್ದನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ವಿಷಾದ ವ್ಯಕ್ತಪಡಿಸಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆ ಸಹಯೋಗದಲ್ಲಿ ಗುರುವಾರ ನಡೆದ ನಾ.ನರಹಳ್ಳಿ ಬಾಲಸುಬ್ರಹ್ಮಣ್ಯ-70 ಮತ್ತು ಯಕ್ಷಕವಿ ಕೆಂಪಣ್ಣ ಗೌಡ ಅವರ ಸಮಗ್ರ ಸಾಹಿತ್ಯ ಕೃಷಿ ಶೋಧ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಮಕ್ಕಳಿಗೆ ಸಾಹಿತ್ಯದ ಮೂಲಕ ಬದುಕಿನ ಆದರ್ಶನಗಳನ್ನು ತಿಳಿಸಬೇಕಾದವರು ಪಕ್ಷ, ಪಂಥ, ಸಿದ್ಧಾಂತಕ್ಕೆ ಅಂಟಿಕೊಂಡು ಅದನ್ನು ಘೋಷಿಸಿ ಕೊಂಡು ಹೊರಟಿದ್ದಾರೆ. ಇಂತಹ ದುಸ್ಥಿತಿಯಲ್ಲಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಯಾವ ಸಿದ್ಧಾಂತ ಹಾಗೂ ಜಾತಿಗೆ ಅಂಟಿಕೊಳ್ಳದೆ ಸಾಹಿತ್ಯವನ್ನು ವಿಸ್ತರಿಸಲು ಕೆಲಸ ಮಾಡುತ್ತಿದ್ದಾರೆ,'' ಎಂದು ಶ್ಲಾಘಿಸಿದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯಕ್ಷಕವಿ ಕೆಂಪಣ್ಣ ಗೌಡ ಅವರ ಕೃತಿಗಳನ್ನು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಬಿಡುಗಡೆ ಮಾಡಿದರು.

''ನರಹಳ್ಳಿ ಸಾಹಿತ್ಯವನ್ನು ಓದಿದಾಗ ಮನಸ್ಸಿನ ಮೇಲೆ ಗಾಢವಾದ ವಿಶ್ವಾಸ ಕಾಣಲಿದೆ. ಯಕ್ಷಕವಿ ಕೆಂಪಣ್ಣಗೌಡ ಸಮಗ್ರ ಸಾಹಿತ್ಯವನ್ನು ಶೋಧಿಸಿ ಕೃತಿ ರಚಿಸಿದ್ದಾರೆ. ಯಕ್ಷಗಾನ ಕರಾವಳಿ ಜನರ ಬದುಕಿನ ಭಾಗವಾಗಿದೆ. ಆದರೆ, ಕಾವೇರಿ ಕಣಿವೆಯ ಮಂಡ್ಯ-ಮೈಸೂರಿನ ಭಾಗದಲ್ಲಿ ಯಕ್ಷಗಾನದ ಪರಂಪರೆಯನ್ನು ಪರಿಚಯಿಸಿದ ಕೀರ್ತಿ ಕೆಂಪಣ್ಣ ಗೌಡ ಅವರಿಗೆ ಸಲ್ಲುತ್ತದೆ. ಮತ್ತೆ ಈ ಭಾಗಗಳಲ್ಲಿ ಯಕ್ಷಗಾನ ಪುನರುಜ್ಜೀವನಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಮೂಡಲ ಪಾಯ ಯಕ್ಷಗಾನ ಕಲಾವಿದರು ಶ್ರಮಿಸುತ್ತಿದ್ದಾರೆ,'' ಎಂದು ಹೇಳಿದರು. ಕೃತಿ ಬಿಡುಗಡೆಗೊಳಿಸಿದ ಹಿರಿಯ ವಿಮರ್ಶಕ ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ ಮಾತನಾಡಿದರು. ಶಾಸಕ ಸಿ. ಎಸ್.ಪುಟ್ಟರಾಜು ಕೃತಿಗಳನ್ನು ಸ್ವೀಕರಿಸಿದರು. ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಪತ್ನಿ ರಜನಿ, ಪ್ರಾಂಶುಪಾಲ ಡಾ.ಬಿ.ಆರ್.ಜಯಕುಮಾರಿ, ಪತ್ರಕರ್ತ ಜಗದೀಶ ಕೊಪ್ಪ, ಕವಿ ಕೆ.ಸಿ.ಶಿವಪ್ಪ, ಮರಿ ಸ್ವಾಮಿ ಗೌಡ, ಬೆಂಗಳೂರಿನ ಅಭಿನವ ಸಂಸ್ಥೆಯ ನ.ರವಿಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಹಾಜರಿದ್ದರು.

MFGE In the Eyes of the Press.....

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 9 ಡಿಸೆಂಬರ್ 2022
9 DECEMBER 2022

ಪಕ್ಷ, ಸಿದ್ಧಾಂತಕ್ಕೆ ಅಂಟಿಕೊಳ್ಳಬೇಡಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಕ್ಕಳಿಗೆ ಸಾಹಿತ್ಯದ ಮೂಲಕ ಬದುಕಿನ ಆದರ್ಶನಗಳನ್ನು ತಿಳಿಸಬೇಕಾದವರು ಪಕ್ಷ, ಪಂಥ, ಸಿದ್ಧಾಂತಕ್ಕೆ ಅಂಟಿಕೊಂಡು ಅದನ್ನು ಪೋಷಿಸಿಕೊಂಡು ಹೊರಟಿದ್ದಾರೆ ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಬೇಸರ ವ್ಯಕ್ತಪಡಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಸಂಸ್ಥೆ ಸಹಯೋಗದಲ್ಲಿ ಗುರುವಾರ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ 'ನರಹಳ್ಳಿ 70' ಮತ್ತು ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಯಕ್ಷಕವಿ ಕೆಂಪಣ್ಣಗೌಡ' ಸಮಗ್ರ ಸಾಹಿತ್ಯ ಶೋಧ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

» ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ಬೇಸರ

ಸಾಹಿತಿಗಳು ವಿಮರ್ಶೆ ಮತ್ತು ಚರ್ಚೆ ಮಾಡಬೇಕಾದ್ದನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ. ಶಿಕ್ಷಣ ತಜ್ಞರು ಚರ್ಚೆ ಮಾಡಬೇಕಾದ್ದನ್ನು ಪಕ್ಷಗಳು ಚರ್ಚಿಸುತ್ತಿವೆ. ಇಂತಹ ದುಸ್ಥಿತಿಯಲ್ಲಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಯಾವುದೇ ಸಿದ್ಧಾಂತಗಳಿಗೆ ಸಿಲುಕದೆ, ಜಾತಿಗೆ ಅಂಟಿಕೊಳ್ಳದೆ ಮತ್ತು ಯಾವುದೇ ಪ್ರತಿಫಲವಿಲ್ಲದೆ ಕನ್ನಡ ಸಾಹಿತ್ಯವನ್ನು ವಿಸ್ತರಿಸಲು ಕೆಲಸ ಮಾಡುತ್ತಿದ್ದಾರೆ. ಇದು ಅವರ ಸಾಹಿತ್ಯದಲ್ಲಿ ಕಾಣಲಿದೆ ಎಂದು ಶ್ಲಾಘಿಸಿದರು.

ಕೃತಿಬಿಡುಗಡೆಗೊಳಿಸಿದ ಹಿರಿಯ ವಿಮರ್ಶಕ ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಮಾತನಾಡಿ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಕೆಂಪಣ್ಣಗೌಡ ಅವರ ಪ್ರಮುಖ ಮೂರು ಕೃತಿಗಳಲ್ಲಿನ ಕಲ್ಪನೆ, ಸಂವಿಧಾನ ವಿಚಾರ ಮತ್ತು ಹಲವು ಪ್ರಕಾರಗಳನ್ನು ಆಯ್ಕೆ ಮಾಡಿಕೊಂಡು ಸಮಗ್ರ ವಿಮರ್ಶೆ ಮಾಡಿದ್ದಾರೆ. 13ನೇ ಶತಮಾನದಲ್ಲಿ ಗ್ರಾಮೀಣ ಭಾಗದ ಕೃಷಿ ಕುಟುಂಬದಲ್ಲಿ ಹುಟ್ಟಿ ಸಾಹಿತ್ಯ ಆಸಕ್ತಿಯನ್ನು ಬೆಳೆಸಿಕೊಂಡು ಜನಪ್ರಿಯ ಧಾಟಿಯಲ್ಲಿ ಯಕ್ಷಗಾನವನ್ನು ರಚಿಸಿದ ಕೆಂಪಣ್ಣಗೌಡ ಅವರ ಹೆಸರನ್ನು ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸುವುದಿಲ್ಲ ಏಕೆ ಎಂದು ಪ್ರಶ್ನಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು, ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಪತ್ನಿ ರಜನಿ, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಪತ್ರಕರ್ತ ಜಗದೀಶ ಕೊಪ್ಪ, ಕವಿ ಕೆ.ಸಿ.ಶಿವಪ್ಪ, ಮರಿಸ್ವಾಮಿಗೌಡ ಹಾಜರಿದ್ದರು.



ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಯಕ್ಷಕವಿ ಕೆಂಪಣ್ಣಗೌಡ' ಸಮಗ್ರ ಸಾಹಿತ್ಯ ಶೋಧ ಕೃತಿಯನ್ನು ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ ಬಿಡುಗಡೆ ಮಾಡಿದರು. ಪ್ರೊ.ಎಂ.ಕೃಷ್ಣೇಗೌಡ, ಶಾಸಕ ಸಿ.ಎಸ್.ಪುಟ್ಟರಾಜು, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಬಿ.ಆರ್.ಜಯಕುಮಾರಿ ಇದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಶುಕ್ರವಾರ, 30 ಡಿಸೆಂಬರ್ 2022

ಹಳ್ಳಿಗಳ ಅಭಿವೃದ್ಧಿಗೆ ಕೈಜೋಡಿಸಬೇಕು

■ ವಿಕ ಸುದ್ದಿಲೋಕ ಮೈಸೂರು

ಗ್ರಾಮೀಣ ಪ್ರದೇಶದ ಜನರಿಗೆ ಪರಿಸರ ರಕ್ಷಣೆ, ಆರೋಗ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಎನ್‌ಎಸ್‌ಎಸ್ ಕರ್ತವ್ಯವಾಗಿದೆ ಮೈವಿವಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್)ಯ ಘಟಕದ ವತಿಯಿಂದ ತಿ.ನರಸೀಪುರ ತಾಲೂಕಿನ ಮಾದೇಗೌಡನಹುಂಡಿ ಶ್ರೀರಾಮಮಂದಿರ ಆವರಣದಲ್ಲಿ 'ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವದೆಡೆಗೆ ಯುವಜನತೆ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

''ಭವ್ಯಭಾರತದ ಕನಸು ನನಸಾಗಲು ಹಳ್ಳಿಗಳ ಏಳಿಗೆಯಿಂದ ಮಾತ್ರ ಸಾಧ್ಯ ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಅವರ ಮಾತಿನಂತೆ ಹಳ್ಳಿಗಳ ಏಳಿಗೆಗೆ ನಾವೆಲ್ಲರು ಕೈ ಜೋಡಿಸಬೇಕು. ಎನ್‌ಎಸ್‌ಎಸ್ ಮೂಲಕ ದೇಶಭಕ್ತಿ, ಶಿಸ್ತು, ಹೊಂದಾಣಿಕೆ ಮನೋಭಾವ, ವ್ಯಕ್ತಿತ್ವ ವಿಕಸನ ಹಾಗೂ ಪ್ರಗತಿಪರ ಚಿಂತನೆ ಬೆಳೆಯುತ್ತವೆ. ಅಲ್ಲದೇ, ಹಳ್ಳಿಗಳ ಅಭಿವೃದ್ಧಿಗೆ ಮಾರ್ಗದರ್ಶನ ನೀಡುತ್ತವೆ.'' ಎಂದು ಹೇಳಿದರು.

ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್ ಮಾತನಾಡಿ, ''ಮೈಸೂರು ವಿವಿ ರಾಜ್ಯದಲ್ಲಿ 750 ಹಳ್ಳಿಗಳನ್ನು ದತ್ತು ತೆಗೆದುಕೊಂಡು ಅವುಗಳ ಬೆಳವಣಿಗೆಗೆ ದುಡಿಯುತ್ತಿದೆ,'' ಎಂದರು. ಕಾಲೇಜಿನ ಎನ್‌ಎಸ್‌ಎಸ್ ಸಲಹ ಸಮಿತಿ ಸದಸ್ಯ ಡಾ.ಎಚ್.ಆರ್.ತಿಮ್ಮೇಗೌಡ, ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ರಂಗಸಮುದ್ರ ಗ್ರಾಪಂ ಅಧ್ಯಕ್ಷೆ ಸೌಮ್ಯ ಪ್ರಕಾಶ್, ಪಿಡಿಒ ರಾಜಣ್ಣ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸಿ.ಎಸ್.ಸಿದ್ದರಾಜು ಇತರರು ಹಾಜರಿದ್ದರು.



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ(ಎನ್‌ಎಸ್‌ಎಸ್)ಯ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಶಿಬಿರವನ್ನು ಮೈವಿವಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಉದ್ಘಾಟಿಸಿದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 7.12.2022

ನಾಳೆ ನರಹಳ್ಳಿ-70 ಕಾರ್ಯಕ್ರಮ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರು ಅಭಿನವ ವತಿಯಿಂದ ಡಿ.8 ರಂದು ಬೆಳಗ್ಗೆ 10.30ಕ್ಕೆ ನರಹಳ್ಳಿ-70 ಕಾರ್ಯಕ್ರಮ ಏರ್ಪಡಿಸಿದೆ. ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರ ಯಕ್ಷಕವಿ ಕೆಂಪಣ್ಣಗೌಡ- ಸಮಗ್ರ ಸಾಹಿತ್ಯ ಶೋಧ ಕೃತಿಯನ್ನು ಪ್ರೊ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಬಿಡುಗಡೆ ಮಾಡುವರು. ಕೃತಿ ಕುರಿತು ಪ್ರೊ.ಎಂ. ಕೃಷ್ಣೇಗೌಡ ಮಾತನಾಡುವರು. ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸುವರು. ಪಾಂಡವಪುರ ಶಾಸಕ ಸಿ.ಎಸ್. ಪುಟ್ಟರಾಜು ಮೊದಲ ಪ್ರತಿ ಸ್ವೀಕರಿಸುವರು.

ಪ್ರಜಾವಾಣಿ

ಗುರುವಾರ • ಡಿಸೆಂಬರ್ 8, 2022

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು: 'ನರಹಳ್ಳಿ 70'. ಪ್ರೊ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಯಕ್ಷಕವಿ ಕೆಂಪಣ್ಣಗೌಡ' ಕೃತಿ ಬಿಡುಗಡೆ- ಪ್ರೊ.ಟಿ.ವಿ.ವೆಂಕಟಾಚಲಶಾಸ್ತ್ರಿ, ಪ್ರತಿಕ್ರಿಯೆ- ಪ್ರೊ.ಎಂ.ಕೃಷ್ಣೇಗೌಡ, ಮೊದಲ ಪ್ರತಿ ಸ್ವೀಕಾರ: ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು, ಅಧ್ಯಕ್ಷತೆ: ಪ್ರಾಂಶುಪಾಲರಾದ ಬಿ.ಆರ್. ಜಯಕುಮಾರಿ, ಕಾಲೇಜು ಸಭಾಂಗಣ. ಬೆಳಿಗ್ಗೆ 10.30

ಆಂದೋಲನ

ದಿನಪತ್ರಿಕೆ

ಗುರುವಾರ, 8 ಡಿಸೆಂಬರ್ 2022

● **ಪುಸ್ತಕ ಬಿಡುಗಡೆ**

ಬೆಳಿಗ್ಗೆ 10.30ಕ್ಕೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ, 'ನರಹಳ್ಳಿ 70' ಕೃತಿ ಬಿಡುಗಡೆ- ಪ್ರೊ.ಟಿ.ವಿ. ವೆಂಕಟಾಚಲಶಾಸ್ತ್ರಿ, ಅಧ್ಯಕ್ಷತೆ -ಡಾ.ಬಿ.ಆರ್.ಜಯಕುಮಾರಿ, ಕೃತಿ ಕುರಿತು-ಪ್ರೊ. ಎಂ.ಕೃಷ್ಣೇಗೌಡ, ಪ್ರತಿ ಸ್ವೀಕಾರ- ಶಾಸಕ ಸಿ.ಎಸ್. ಪುಟ್ಟರಾಜು, ಸ್ಥಳ- ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣ, ಜಯಲಕ್ಷ್ಮೀಪುರಂ.

MFGE In the Eyes of the Press.....

ನೇರ.ದಿಟ್ಟ.ನಿರಂತರ

ಕನ್ನಡಪ್ರಭ

30.12.2022 ಶುಕ್ರವಾರ

ಸಂದರ್ಶನ, ವ್ಯಕ್ತಿತ್ವ ವಿಕಸನ, ಕೌಶಲ್ಯಾಭಿವೃದ್ಧಿ ಕಾರ್ಯಾಗಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಐಕ್ಯೂಎಸಿ ಸಂಯುಕ್ತವಾಗಿ ಸಂದರ್ಶನ, ವ್ಯಕ್ತಿತ್ವ ವಿಕಸನ ಮತ್ತು ಕೌಶಲ್ಯಾಭಿವೃದ್ಧಿ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾಲೇಜಿನಪ್ರಾಂಶುಪಾಲೆಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ಮೊಬೈಲ್, ಇಂಟರ್‌ನೆಟ್ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಮೊರೆಹೋಗಿದ್ದಾರೆ. ತಮ್ಮಲ್ಲಿಹುದುಗಿರುವ ಕೌಶಲ್ಯಗಳನ್ನು ಹೊರ ಹಾಕಲು ವಿಫಲರಾಗಿದ್ದಾರೆ. ಇದರಿಂದ ಅವರ ಮುಂದಿನ ಭವಿಷ್ಯ ಕಷ್ಟಕರ ಪರಿಸ್ಥಿತಿಗೆ ತಲುಪುವ ಎಲ್ಲಾ ಸಾಧ್ಯತೆಗಳು ಕಾಣುತ್ತಿವೆ. ಇದನ್ನು ಅರಿತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಹಾಗೂ ಉಜ್ವಲ ಭವಿಷ್ಯಕ್ಕಾಗಿ ಈಕಾರ್ಯಾಗಾರವನ್ನುಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕಾರ್ಯಾಗಾರದಸಂಪನ್ಮೂಲವ್ಯಕ್ತಿಯಾ ಎ.ಎಸ್. ಶ್ರೀಧರ ವಿಶೇಷ ಉಪನ್ಯಾಸ ನೀಡಿದರು. ಕಾಲೇಜಿನ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಎಲ್. ರವಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ವಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 26.12.2022

ಮನಸ್ಸನ್ನು ಸಮತೋಲನದಲ್ಲಿಡಲು ಯೋಗ, ಧ್ಯಾನ ಮಾಡಲೇಬೇಕು

ಕೌಶಲ್ಯ ತರಬೇತುದಾರ ಕೆ. ವಿ. ಸೂರ್ಯನಾರಾಯಣ್



ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಶಿಕ್ಷಕರನ್ನು ಸಬಲೀಕರಣಗೊಳಿಸುವ ತರಬೇತಿಯಲ್ಲಿ ಕೌಶಲ್ಯ ತರಬೇತುದಾರ ಕೆ. ವಿ. ಸೂರ್ಯನಾರಾಯಣ್ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಮೈಸೂರು

ಮನಸ್ಸನ್ನು ಸಮತೋಲನದಲ್ಲಿಡಲು ಯೋಗ ಮತ್ತು ಧ್ಯಾನ ಮುಖ್ಯ ಎಂದು ಇನ್‌ಸ್ಪೈರ್ ಫಾರ್ ಶೂರ್ ಸಂಸ್ಥೆಯ ಸಂಸ್ಥಾಪಕ ಹಾಗೂ ಕೌಶಲ್ಯ ತರಬೇತುದಾರರ ಕೆ. ವಿ. ಸೂರ್ಯನಾರಾಯಣ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಆಂಗ್ಲ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಶಿಕ್ಷಕರನ್ನು ಸಬಲೀಕರಣಗೊಳಿಸುವ ತರಬೇತಿಯಲ್ಲಿ ಮಾತನಾಡಿದ ಅವರು, ಸ್ವಯಂ ಶಿಕ್ಷಣದ ಪ್ರಕ್ರಿಯೆಯು ಶಿಸ್ತು ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಇದು ಜೀವನದ ಗುಣಮಟ್ಟ ಮತ್ತು ವೃತ್ತಿಪರ ಕೌಶಲ್ಯಗಳನ್ನು ವೃದ್ಧಿಸುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಎಸ್. ಜಯಕುಮಾರಿ ಮಾತನಾಡಿ, ಇಂದಿನ ಒತ್ತಡದ ಜೀವನದಲ್ಲಿ ಯೋಗ ಮತ್ತು ಧ್ಯಾನ ಇವು ನಮ್ಮನ್ನು ಸಮತೋಲನದಲ್ಲಿ ಇಡುತ್ತವೆ. ಹಾಗೂ ಆರೋಗ್ಯವನ್ನು ವೃದ್ಧಿಸುತ್ತದೆ. ಇದರಿಂದ ಗುಣಾತ್ಮಕ ಚಿಂತನೆಗಳು ಹೆಚ್ಚಿ, ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿರುತ್ತವೆ ಎಂದರು.

ಸಹಾಯಕ ಪ್ರಾಧ್ಯಾಪಕರಾದ ರೇಖಾ, ಡಾ. ವಿನೋದಮ್ಮ, ಎಲ್. ರವಿ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಸಾರ್ವಜನಿಕ ಸಂಪರ್ಕಾಧಿಕಾರಿ ಪೂರ್ಣಿಮಾ ಇದ್ದರು. ಐಕ್ಯೂಎಸಿಯ ಸಂಚಾಲಕಿ ಗೀತಾ ಸ್ವಾಗತಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಗುರುವಾರ, 29 ಡಿಸೆಂಬರ್ 2022



ಮಹಾಜನ ಪದವಿ ಕಾಲೇಜು ತಂಡಕ್ಕೆ ಸಮಗ್ರ ಪ್ರಶಸ್ತಿ...

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ತಂಡ 62 ಅಂಕಗಳೊಂದಿಗೆ ಸಮಗ್ರ ಪ್ರಶಸ್ತಿ ಗಳಿಸಿದೆ. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ್, ಡಾ.ಎಚ್.ಎನ್.ಭಾಸ್ಕರ್, ತರಬೇತುದಾರ ಸುಹಾಸ್ ಗೌಡ, ತಂಡದ ನಾಯಕ ಅಗ್ನೀಶ್, ಸೋಮಶೇಖರ್, ದೀಪಕ್, ಧನುಷ್, ರಾಕೇಶ್, ಪ್ರಜ್ವಲ್, ಗಗನ್, ಎಲ್.ಗೌಡ, ಸಾಬಿತ್, ಅನಿಕೇತ್, ಮಿಲಿಂದ್ ಎಸ್.ಪ್ರಸಾದ್, ಪ್ರಜ್ವಲ್, ಉಲ್ಲಾಷ್ ಗೌಡ, ಚಿದನ್ ಹಾಗೂ ರಾಹುಲ್ ದ್ರಾವಿಡ್ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 29.12.2022

ಮಹಾಜನ ಕಾಲೇಜಿಗೆ ಪುರುಷರ ಅಥ್ಲೆಟಿಕ್ಸ್ ಸಮಗ್ರ ಪ್ರಶಸ್ತಿ ಗರಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗವು ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಪುರುಷರ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಎಸ್ ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2022- 23ನೇ ಸಾಲಿನ 62 ಅಂಕಗಳೊಂದಿಗೆ ಪುರುಷರ ಅಥ್ಲೆಟಿಕ್ಸ್ ತಂಡಕ್ಕೆ ಸಮಗ್ರ ಪ್ರಶಸ್ತಿ ಲಭಿಸಿದೆ.

ನಾಯಕ ಅಗ್ನೀಶ್ ನೇತೃತ್ವದ ಸೋಮಶೇಖರ್, ದೀಪಕ್, ಧನುಷ್, ರಾಕೇಶ್, ಪ್ರಜ್ವಲ್, ಗಗನ್ ಎಲ್. ಗೌಡ, ಸಾಬಿತ್, ಅನಿಕೇತ್, ಮಿಲಿಂದ್ ಎಸ್. ಪ್ರಸಾದ್, ಪ್ರಜ್ವಲ್, ಉಲ್ಲಾಷ್‌ಗೌಡ, ಚಿದನ್ ಮತ್ತು ರಾಹುಲ್ ದ್ಯಾವಿಡ್ ತಂಡವು ಪ್ರಶಸ್ತಿ ಪಡೆದುಕೊಂಡಿದೆ.

ಇವರನ್ನು ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್. ಮಧುಸೂಧನ, ಡಾ.ಎಚ್. ಎನ್. ಭಾಸ್ಕರ್, ಕೋಚ್ ಸುಹಾಸ್ ಗೌಡ ಅಭಿನಂದಿಸಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 7.12.2022



ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದಿಂದ ನಡೆದ ಮೈವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು 2022-23ನೇ ಸಾಲಿನ ಪುರುಷರ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಪಡೆದಿದೆ. ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್. ಮಧುಸೂಧನ, ಡಾ.ಎಚ್.ಎನ್. ಭಾಸ್ಕರ್, ಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ತಂಡದ ನಾಯಕ ಎಂ. ಮನೋಜ್, ಸೋಮಶೇಖರ್, ಸಚಿನ್, ಯೋಗೇಶನಾಯಕ, ಸದಾತ್‌ಪಾಷ, ಶಶಿಕುಮಾರ್, ಪ್ರಕಾಶ್, ಮಂಚಣ್ಣ, ಪ್ರಜ್ವಲ್, ಸಾಗರ್ ಹಾಗೂ ಡಿ. ಮೋಹನ್‌ಕುಮಾರ್ ಇದ್ದಾರೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶನಿವಾರ 10 ಡಿಸೆಂಬರ್ 2022



ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿದ್ದ ಮೈಸೂರು ವಿವಿ ಅಂತರ ಕಾಲೇಜು ಪುರುಷರ ಕುಸ್ತಿ ಪಂದ್ಯಾವಳಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿಗೆ ಕುಸ್ತಿ ಸಮಗ್ರ ತಂಡ ಪ್ರಶಸ್ತಿ ಲಭಿಸಿದೆ. ಚಿತ್ರದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರಾದ ಪಿ.ಎಸ್.ಮಧುಸೂದನ್, ಡಾ.ಭಾಸ್ಕರ್, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಹಾಗೂ ಕ್ರೀಡಾಪಟುಗಳಿದ್ದಾರೆ.

THE HINDU
INDIA'S NATIONAL NEWSPAPER SINCE 1878
Wednesday, December 21, 2022

SBRR Mahajana FGC clinches overall title

Sports Bureau

SBRR Mahajana FGC clinched the overall championship title with 62 points in the 92nd University of Mysore inter-collegiate athletics meet for men in Mysuru recently.

Balakrishna of Government Science College, Hassan, created a new meet record in the men's 800m clocking 48.74 seconds. The previous record of 49.11 was set by S. Bharath of Yuvaraja's College, Mysuru in 2006-07.

The results (winners only): **100m:** Gagan L. Gowda (SBRR Mahajana FGC, 11.20); **110m hurdles:** Prajwal David (SBRR Mahajana FGC, 19.18); **Discus:** Y. Bharath (HRIE, Hassan, 29.88m); **10,000m:** Manikanta (BEST FGC, Hassan, 33:25.20); **Hammer:** Darshan (STG FGC, Chinkurli, 26.53m); **1,500m:** Rahul (BEST FGC, Hassan, 4:11.80s); **400m:** Balakrishna (Govt. Science College, Hassan, 48.74, NMR, OR: S. Bharath, Yuvaraja's, 49.11, 2006-07); **Long jump:** M. Tejas (PGSC, MGM, 6.31m); **4x400m relay:** SBRR Mahajana FGC, 3:43:10; **Decathlon:** M.C. Rakesh (SBRR Mahajana FGC, 3682 points); **800m:** Rahul Choudhri (Basudeva Somani FGC, 1:56.90); **High jump:** M.R. Keerthish (DD Urs FGC, Hunsur, 1.62m); **Shot Put:** Y. Sachin (Vidhyaashram FGC, Mysore, 11.64m); **400m:** S. Joshith Sham Emmanuel (Vidyaashram FGC, Mysuru, 1:03.04); **5,000m:** Manikanta (BEST, FGC, Hassan, 16:23.30s); **200m:** Deepak Jadhav (Cresta FGC, Mysuru, 21.89);

Javelin: S. Harshavardhan (Maharaja's College, Mysuru, 49.70m); **4x100m relay:** SBRR Mahaja FGC, 46.70. **Overall championship:** SBRR Mahajana FGC (62 points); **Best athlete:** Balakrishna (Govt. Science College, Hassan).



Great show: The triumphant SBRR Mahajana FGC, Mysuru, team, winner of the overall title in the University of Mysore inter-collegiate athletics meet for men. SPECIAL ARRANGEMENT

Karnataka in semifinals

Karnataka posted a 40-run win over Saurashtra to enter the semifinal of the Cooch Behar Trophy u-19 tournament on Tuesday.

The scores:
Karnataka 273 in 112.1 overs (Yashovardhan Parantap 114, Hardik Raj 66, Aashish Mahesh 36, Rohan M. Yareshimi 28, Tirthkajsinh Jadeja 4/98) & 177 in 96.5 overs (C. Prakar 65, S.H. Swaroop 29, Dhruv Prabhakar 25, Mayura Ghoghari 4/50) bt Saurashtra 211 in 69.4 overs (Manav Chothani 80, Karnav Rathod 34, Maan Bhatt 28, Aaditya Nair 5/34) & 199 in 67.1 overs (Raxit Mehta 104, Karnav Rathod 33, Tirthkajsinh Jadeja 32, Hardik Raj 3/54, Dhruv Prabhakar 3/35).

ಆಂದೋಲನ
ದಿನ ಪತ್ರಿಕೆ
ಗುರುವಾರ, 1 ಡಿಸೆಂಬರ್ 2022

ಶಿಕ್ಷಕರು, ಪೋಷಕರನ್ನು ಗೌರವಿಸಿ: ದೊಡ್ಡಣ್ಣ

ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆಯ ಉದ್ಘಾಟನೆ



ಮೈಸೂರು: ವಿದ್ಯೆ ಕೊಟ್ಟ ಶಿಕ್ಷಕರು, ನಿಮಗೋಸ್ಕರ ಜೀವನವನ್ನೇ ಪಣವಾಗಿಡುವ ತಂದೆ ತಾಯಿಯನ್ನು ಗೌರವಿಸಿ ಎಂದು ಹಿರಿಯ ನಟ ದೊಡ್ಡಣ್ಣ ಕಿವಿಮಾತು ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನೇ ದೊಡ್ಡವನು, ನಾನೇ ಮೇದಾವಿ ಎನ್ನಬೇಡಿ. ನೀವೂ ಬೆಳೆಯಿರಿ, ಜತೆಗಿರುವವರನ್ನೂ ಬೆಳೆಸಿರಿ. ನೀವು ಬೆಳೆಸಿದ ದೊಡ್ಡತನ ಮುಂದಿನ ದಿನಗಳಲ್ಲಿ ನಿಮ್ಮನ್ನು ಕಾಯುತ್ತದೆ ಎಂದು ಸಲಹೆ ನೀಡಿದರು.

ನಾನು ಮತ್ತು ಯಶ್ ಒಂದೇ ಊರಿನವರು. ನಮ್ಮ ಮನೆ ಅವರ ಮನೆ ಪಕ್ಕದಲ್ಲಿ ಇದ್ದಿದ್ದು. ಅವರ ತಂದೆ ನನಗೆ ತುಂಬಾ ಆತ್ಮೀಯವಾಗಿದ್ದಾರೆ. ದೀಪ ಹಚ್ಚುವುದು, ಕಟ್ಟಡ ಕಟ್ಟುವ ಕೆಲಸವೂ ಕಷ್ಟ. ಅರಿಸುವುದು, ಬೀಳಿಸುವುದು ಸುಲಭ. ಶಿಕ್ಷಣವನ್ನು ಮಾತೃ ಭಾಷೆಯಲ್ಲಿ ಪಡೆದರೆ ಇತರೆ ಭಾಷೆಗಳನ್ನು ಕಲಿಯುವುದು ಸುಲಭ. ಕೀಳರಿಮೆಯಿಂದ ಹೊರಬನ್ನಿ. ನಿಮ್ಮಲ್ಲಿ ವಿಶೇಷ ಶಕ್ತಿಯಿದೆ. ಅದನ್ನು ಹೊರತನ್ನಿ. ಶಿಕ್ಷಣದ ಉದ್ದೇಶವೂ ಅದೇ ಆಗಿದೆ ಎಂದು ಪ್ರತಿಪಾದಿಸಿದರು.

ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಮಾತನಾಡಿ, ನಾವು ಕೇವಲ ನೌಕರಿಗಾಗಿ ಓದದೆ ನಿಮ್ಮ ಭದ್ರ ಜೀವನಕ್ಕಾಗಿ ಓದಬೇಕು. ವಿದ್ಯಾರ್ಥಿ ಪ್ರಾರಂಭದಿಂದಲೇ ಕಷ್ಟಪಟ್ಟು ಓದಬೇಕು. ನಾವು ಅಂದುಕೊಂಡಂತೆ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದರು.

ನಟ ಕಾರ್ತಿಕ್ ಮಹೇಶ್ ಮಾತನಾಡಿದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಸಿ.ಕೆ. ರೇಣುಕಾಚಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ವಿದ್ಯಾರ್ಥಿಗಳು ಹಾಜರಿದ್ದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 1 ಡಿಸೆಂಬರ್ 2022

ಎಂದೆಂದಿಗೂ ತಾಯಿ-ತಂದೆ, ಗುರು ಹಿರಿಯರ ಗೌರವಿಸಿ

ಕನ್ನಡ ಚಿತ್ರರಂಗದ ಹಿರಿಯ ನಟ ದೊಡ್ಡಣ್ಣ



ಮೈಸೂರು, ನ.30– ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಎಂದೆಂದಿಗೂ ಮರೆಯದಿರಿ, ಮರೆತರೆ ನೀವು ಎಂದಿಗೂ ನಿಮ್ಮ ಜೀವನದಲ್ಲಿ ಏಳ್ಗೆ ಹೊಂದಲು ಸಾಧ್ಯವಿಲ್ಲ ಎಂದು 800ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಕನ್ನಡದ ಹಿರಿಯ ನಟ ದೊಡ್ಡಣ್ಣ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅವರು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ನೀವು ಒಳ್ಳೆಯ ಸುಸಂಸ್ಕೃತ ಪ್ರಜೆಗಳಾಗಿ. ಹೆಣ್ಣು ಮಕ್ಕಳು, ರೈತರು ಹಾಗೂ ಹಿರಿಯರಿಗೆ ಗೌರವ ಕೊಡುವುದನ್ನು ಕಲಿಯಿರಿ. ಜೀವನದಲ್ಲಿ ನನ್ನಿಂದಲೇ ಎಲ್ಲಾ, ನಾನೇ ಎಲ್ಲಾ ಎಂದು ಯಾವಾಗಲೂ ಬೀಗಬೇಡಿ, ಅಹಂ ಒಳ್ಳೆಯ ದಲ್ಲ. ನಮ್ಮನ್ನು ಕಾಪಾಡುತ್ತಿರುವ ಶಕ್ತಿ ಮೇಲೊಂದಿದೆ, ಅದೇ ದೈವಶಕ್ತಿ, ದೇವರನ್ನು ಎಂದೂ ಮರೆಯ ಬಾರದು ಎಂದರು. ಮಾನವ ಜನ್ಮ ದೊಡ್ಡದು, ವಿದ್ಯಾರ್ಥಿಗಳಲ್ಲಿ ಒಂದಲ್ಲ ಒಂದು ಪ್ರತಿಭೆ ಸುಪ್ತ ವಾಗಿದ್ದು, ಅದನ್ನು ಅನಾವರಣಗೊಳಿಸಲು ಮಹಾ ಜನ ಕಾಲೇಜು ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಅದನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿ ಕೊಳ್ಳಿ, ಮಹಾಜನ ಕಾಲೇಜು ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಶಿಕ್ಷಣವನ್ನು ನೀಡುತ್ತಿದೆ. ಇದರಿಂದ ನಮ್ಮ ಯುವ ವಿದ್ಯಾರ್ಥಿಗಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಅನಾವರಣಗೊಳ್ಳಲು ಅವಕಾಶವಾಗಿದೆ ಎಂದು ಕವಿಮಾತು ಹೇಳಿದರು. ಕನ್ನಡ ಒಂದು ಪ್ರಾಚೀನ ಭಾಷೆ. ಇದಕ್ಕೆ 7500 ವರ್ಷದ ಇತಿಹಾಸವಿದೆ. ಕನ್ನಡ ನಾಡಿನಲ್ಲಿ ಜನಿಸಿದ ನಾವು ಕನ್ನಡದ ಅನ್ನ, ನೀರು, ಗಾಳಿಯನ್ನು ಸೇವಿಸುತ್ತಿದ್ದೇವೆ ತಾಯಿ ಭಾಷೆಯನ್ನು ಮರೆತರೆ, ತಾಯಿಯನ್ನು ಮರೆತಂತೆ, ಕನ್ನಡನಾಡಿಗೆ ದ್ರೋಹ ಬಗೆದಂತೆ, ಆದ್ದರಿಂದ ಕನ್ನಡ ಉಳಿಸಿ, ಬೆಳೆಸಿ ಎಂದು ಕನ್ನಡದ ಹಿರಿಮೆಯನ್ನು ಕೊಂಡಾಡಿದರು. ನೀವು ಯಾವ ವಿಷಯದಲ್ಲಿ ಓದುತ್ತಿದ್ದೀರಿ ಎಂಬುದು ಮುಖ್ಯವಲ್ಲ, ನಿಮ್ಮ ಕೌಶಲ್ಯಾಧಾರಿತ ಜ್ಞಾನ ಎಷ್ಟಿದೆ ಎಂಬುದನ್ನು ಅರಿತು, ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡಬೇಕು. ವಿದ್ಯಾರ್ಥಿಗಳು ಬರೀ ಓದಿ, ಪದವಿಯನ್ನು ಗಳಿಸಿದರೆ ಸಾಲದು, ತಮ್ಮಲ್ಲಿ ಹುದುಗಿರುವ ಕೌಶಲ್ಯ, ಪ್ರತಿಭೆಯನ್ನು ಹೊರಹಾಕಿ, ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು. ವಿದ್ಯಾರ್ಥಿ ಸಂಸತ್ ಉದ್ಘಾಟಿಸಿದ ಯುವ ಕನ್ನಡ ಚಲನಚಿತ್ರ ನಟರಾದ ಕಾರ್ತಿಕ್ ಮಹೇಶ್ ಮಾತನಾಡುತ್ತಾ ನಾನು ಓದಿದ ಕಾಲೇಜಿಗೆ ಅತಿಥಿಯಾಗಿ ಬಂದಿರುವುದು ನನಗೆ ಸಂತೋಷ ಉಂಟಾಗಿದೆ. ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಸತ್ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ, ನಿಮ್ಮ ಕೌಶಲ್ಯ, ಪ್ರತಿಭೆಗಳನ್ನು ಹೊರಹಾಕಲು ಕಾಲೇಜು ಅವಕಾಶಗಳನ್ನು ಕಲ್ಪಿಸಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಗುರುವಾರ 1.12.2022

ತಾಯಿ ತಂದೆ, ಗುರು ಹಿರಿಯರನ್ನು ಗೌರವಿಸಿ

ವಿದ್ಯಾರ್ಥಿಗಳಿಗೆ ಹಿರಿಯ ನಟ ದೊಡ್ಡಣ್ಣ ಸಲಹೆ | ಮಹಾಜನ ಕಾಲೇಜಿನ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟನೆ

• ಕನ್ನಡಪ್ರಭ ವಾರ್ತೆ ಮೈಸೂರು

ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಎಂದೆಂದಿಗೂ ಮರೆಯದಿರಿ. ಮರೆತರೆ ನೀವು ಎಂದಿಗೂ ನಿಮ್ಮ ಜೀವನದಲ್ಲಿ ಏಳಿಗೆ ಕಾಣಲು ಸಾಧ್ಯವಿಲ್ಲ ಎಂದು ಕನ್ನಡದ ಹಿರಿಯ ನಟ ದೊಡ್ಡಣ್ಣ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಅವರು ಬುಧವಾರ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ವಿದ್ಯಾರ್ಥಿಗಳಾದ ನೀವು ಮುಂದೆ ಒಳ್ಳೆಯ ಸುಸಂಸ್ಕೃತ ಪ್ರಜೆಗಳಾಗಿ ಮುನ್ನೆಡೆಯಿರಿ. ಸಮಾಜದಲ್ಲಿ ಹೆಣ್ಣು ಮಕ್ಕಳು, ರೈತರು ಹಾಗೂ ಹಿರಿಯರಿಗೆ ಗೌರವ ಕೊಡುವುದನ್ನು ಕಲಿಯಿರಿ. ಜೀವನದಲ್ಲಿ ನನ್ನಿಂದಲೇ ಎಲ್ಲಾ, ನಾನೇ ಎಲ್ಲಾ ಎಂದು ಯಾವಾಗಲೂ ಬೀಗಬೇಡಿ, ಆಹಂ ಒಳ್ಳೆಯದಲ್ಲ. ನಮ್ಮನ್ನು ಕಾಪಾಡುತ್ತಿರುವ ಶಕ್ತಿ ಮೇಲೊಂದಿದೆ, ಅದೇ ದೈವಶಕ್ತಿ. ದೇವರನ್ನು ಎಂದೂ ಮರೆಯಬಾರದು ಎಂದರು.



ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ನಟ ದೊಡ್ಡಣ್ಣ ಉದ್ಘಾಟಿಸಿದರು. ನಟ ಕಾರ್ತಿಕ್ ಮಹೇಶ್, ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್. ರಮೇಶ್, ಪ್ರೊ.ಸಿ.ಕೆ. ರೇಣುಕಾರ್ಯ, ಡಾ.ಬಿ.ಆರ್. ಜಯಕುಮಾರಿ ಇದ್ದರು.

ಮಾನವ ಜನ್ಮ ದೊಡ್ಡದು, ವಿದ್ಯಾರ್ಥಿಗಳಲ್ಲಿ ಒಂದಲ್ಲ ಒಂದು ಪ್ರತಿಭೆ ಸುಪ್ತವಾಗಿದ್ದು, ಅದನ್ನು ಅನಾವರಣಗೊಳಿಸಲು ಈ ಕಾಲೇಜು ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಅದನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಿ. ಕನ್ನಡ ಒಂದು ಪ್ರಾಚೀನ ಭಾಷೆ, ಕನ್ನಡ ನಾಡಿನಲ್ಲಿ ಜನಿಸಿದ ನಾವು ಕನ್ನಡದ ಅನ್ನ, ನೀರು, ಗಾಳಿಯನ್ನು ಸೇವಿಸುತ್ತಿದ್ದೇವೆ. ತಾಯಿ ಭಾಷೆಯನ್ನು ಮರೆತರೆ, ತಾಯಿಯನ್ನು ಮರೆತಂತೆ, ಕನ್ನಡನಾಡಿಗೆ ಮೋಹ ಬಗೆದಂತೆ. ಆದ್ದರಿಂದ ಕನ್ನಡ ಉಳಿಸಿ, ಬೆಳೆಸಿ ಎಂದು ಅವರು ಕರೆ ನೀಡಿದರು.

> ನೀವು ಯಾವ ವಿಷಯದಲ್ಲಿ ಓದುತ್ತಿದ್ದೀರಿ ಎಂಬುದು ಮುಖ್ಯವಲ್ಲ, ನಿಮ್ಮ ಕೌಶಲ್ಯಾಧಾರಿತ ಜ್ಞಾನ ಎಷ್ಟಿದೆ ಎಂಬುದನ್ನು ಆರಿತು, ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡಬೇಕು. ವಿದ್ಯಾರ್ಥಿಗಳು ಬರೀ ಓದಿ, ಪದವಿಯನ್ನು ಗಳಿಸಿದರೆ ಸಾಲದು. ತಮ್ಮಲ್ಲಿ ಹುದುಗಿರುವ ಕೌಶಲ್ಯ, ಪ್ರತಿಭೆಯನ್ನು ಹೊರಹಾಕಿ, ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕು.
>
> • ದೊಡ್ಡಣ್ಣ, ಹಿರಿಯ ನಟ

ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ: ವಿದ್ಯಾರ್ಥಿ ಸಂಸತ್ ಉದ್ಘಾಟಿಸಿದ ನಟ ಕಾರ್ತಿಕ್ ಮಹೇಶ್ ಮಾತನಾಡಿ, ನಾನು ಓದಿದ ಕಾಲೇಜಿಗೆ ಅತಿಥಿಯಾಗಿ ಬಂದಿರುವುದು ನನಗೆ ಸಂತೋಷ ಉಂಟಾಗಿದೆ. ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಸತ್ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ, ನಿಮ್ಮ ಕೌಶಲ್ಯ, ಪ್ರತಿಭೆಗಳನ್ನು ಹೊರಹಾಕಲು ಕಾಲೇಜು ಅವಕಾಶಗಳನ್ನು ಕಲ್ಪಿಸಿದೆ. ಇದನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದು ಸಲಹೆ ನೀಡಿದರು.

ಜೀವನದಲ್ಲಿ ಏನನ್ನಾದರೂ ಸಾಧನೆ ಮಾಡಬೇಕಾದರೆ ಸೂಕ್ತ ಸಮಯದಲ್ಲಿ ಸರಿಯಾದ ಹಾಗೂ ಸಮಯೋಚಿತ ನಿರ್ಧಾರವನ್ನು ಕೈಗೊಳ್ಳಬೇಕಾಗುತ್ತದೆ ಎಂದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶ ಡಾ.ಎಚ್.ಎನ್. ಭಾಸ್ಕರ್ ಅವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಪೂಜಾ ಭಾಗವತ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಇದ್ದರು. ಎ. ನಾಗೇಶ ವಂದಿಸಿದರು. ಸುನೀಲ್ ನಿರೂಪಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಡಿಸೆಂಬರ್ 1, 2022

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಸತ್

ಗುರು ಹಿರಿಯರ ಗೌರವಿಸಿ: ದೊಡ್ಡಣ್ಣ

ಪ್ರಜಾವಾಣಿ ವಾರ್ತೆ

ಮೈಸೂರು: 'ಜೀವನದಲ್ಲಿ ಉತ್ತಮ ನಡತೆ, ಮೌಲ್ಯ ಮತ್ತು ಕೌಶಲಗಳನ್ನು ಕಲಿಸಿ, ಜ್ಞಾನ ನೀಡಿದ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಸದಾ ಸ್ಮರಿಸಬೇಕು. ಅವರನ್ನು ಮರೆತರೆ ಜೀವನದಲ್ಲಿ ಉನ್ನತಿ ಲಭಿಸದು' ಎಂದು ನಟ ದೊಡ್ಡಣ್ಣ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಸಂಸತ್ ಉದ್ಘಾಟಿಸಿ ಮಾತನಾಡಿದ ನಟ ಕಾರ್ತಿಕ್ ಮಹೇಶ್, ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಸತ್ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ ಎಂದರು.

ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿಮುರಳೀಧರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಇಟ್ಟುಕೊಂಡು, ಸ್ವಯಂ ನ್ಯೂನತೆಗಳನ್ನು ಸರಿಪಡಿಸಿ, ಛಲದಿಂದ ಮುನ್ನುಗ್ಗಿ, ಸಾಧನೆ ಮಾಡಿ ಎಂದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ನಟ ದೊಡ್ಡಣ್ಣ ಬುಧವಾರ ಉದ್ಘಾಟಿಸಿದರು. ನಟ ಕಾರ್ತಿಕ್ ಮಹೇಶ್, ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿಮುರಳೀಧರ್, ಪ್ರಮುಖರು ಇದ್ದರು.

ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಭಾಸ್ಕರ್ ಎಚ್. ಎನ್. ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಮುಖ್ಯಅತಿಥಿಗಳಿಗೆ ಗೌರವ ಸಮರ್ಪಿಸಲಾಯಿತು.

ಕಾಲೇಜಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಎಸ್. ಆರ್. ರಮೇಶ್ ಹಾಗೂ ಪೂಜಾ ಭಾಗವತ್, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಸಿ.ಕೆ. ರೇಣುಕಾರ್ಯ, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಪತ್ರಿಭಾ ವೇದಿಕೆಯ ಸಂಚಾಲಕ ಎಂ.ನಾಗೇಶ, ಸಹಾಯಕ ಪ್ರಾಧ್ಯಾಪಕ ಸುನೀಲ್ , ವಿದ್ಯಾರ್ಥಿನಿ ಸುಪ್ರೀತ್ ಎಸ್. ಭಾರದ್ವಾಜ್, ಬೋಧಕ, ಬೋಧಕೇತರ ಸಿಬ್ಬಂದಿ ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಗುರುವಾರ,1 ಡಿಸೆಂಬರ್ 2022

ಪೋಷಕರನ್ನು ನಿರ್ಲಕ್ಷ್ಯ ಮಾಡದಿರಿ: ದೊಡ್ಡಣ್ಣ

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ವೇದಿಕೆ ಉದ್ಘಾಟನೆ ಕಾರ್ಯಕ್ರಮ

■ ವಿಕ ಸುದ್ದಿಲೋಕ ಮೈಸೂರು

ಪ್ರತಿಫಲ ಅಪೇಕ್ಷಿಸದೇ ನಿಮ್ಮ ಏಳಿಗೆಗೆ ಶ್ರಮಿಸುವ ಪೋಷಕರನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು ಎಂದು ಹಿರಿಯ ನಟ ದೊಡ್ಡಣ್ಣ ಎಂದು ಸಲಹೆ ನೀಡಿದರು.

ನಗರದ ಎಸ್‌ಬಿಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆದ ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಕಾರ್ಯಕರ್ಮವನ್ನು ಉದ್ಘಾಟಿಸಿ ಮಾತಾಡಿದ ಅವರು, ''ಮಕ್ಕಳ ಭವಿಷ್ಯ ಉತ್ತಮವಾಗಿರಲಿ ಎಂದು ಯಾವುದೇ ಅಪೇಕ್ಷೆ ಇಲ್ಲದೆ ಕಷ್ಟಪಟ್ಟು ದುಡಿದು ಬುನಾದಿ ಹಾಕುತ್ತಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಇದು ಮರೆಯಾಗುತ್ತಿದೆ. ನೀವು ಏನು ಮಾಡುತ್ತೀರಿ ಅದನ್ನೇ ನಿಮ್ಮ ಮಕ್ಕಳು ಮಾಡುತ್ತಾರೆ. ಆದ್ದರಿಂದ ನಿಮಗಾಗಿ ಶ್ರಮಿಸಿ ಎಲ್ಲರನ್ನೂ ಸರಿಸಮನವಾಗಿ ಪೋಷಿಸಿದ ನಿಮ್ಮ ಪೋಷಕರನ್ನು ವೃದ್ಧಾಪ್ಯಾದಲ್ಲಿ ಮಕ್ಕಳಂತೆಯೇ ನೋಡಿಕೊಳ್ಳಿ'' ಎಂದು ಹೇಳಿದರು.

''ಮನುಷ್ಯನಿಗೆ ಜ್ಞಾನ ಬಹಳ ಮುಖ್ಯ. ಪುಸ್ತಕ ಓದಿನಿಂದ ಮಾತ್ರ ಜ್ಞಾನದ ಬೆಳಕು ಸಿಗಲು ಸಾಧ್ಯ. ಎಲ್ಲರೂ ಹೆಚ್ಚು ಪುಸ್ತಕಗಳನ್ನು ಓದಬೇಕು. ನಾನಾ ದೊಡ್ಡವ, ಮೇಧಾವಿ ಎಂದು ಮೆರೆಯಬಾರದು. ಮರಕ್ಕಿಂತ ಮರ ದೊಡ್ಡದಿರುತ್ತದೆ. ಎಲ್ಲ ವಿದ್ಯಾರ್ಥಿಗಳು ಪುಸ್ತಕ ಓದಿನ ಕಡೆ ಹೆಚ್ಚು ಗಮನ ನೀಡಿ ಉತ್ತಮ ಶಿಕ್ಷಣ ಪಡೆದು ಜೀವನದ ಭದ್ರ ಬುನಾದಿಯನ್ನು ನೀವೇ ಕಟ್ಟಿಕೊಳ್ಳಬೇಕು,''ಎಂದರು.



ನಗರದ ಎಸ್‌ಬಿಆರ್ ಮಹಾಜನ ಕಾಲೇಜಿನಲ್ಲಿ ನಡೆದ ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಕಾರ್ಯಕ್ರಮವನ್ನು ನಟ ದೊಡ್ಡಣ್ಣ ಉದ್ಘಾಟಿಸಿದರು.

''ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗಿದೆ. ಆದರಿಂದ ಯಾವುದೇ ಜ್ಞಾನಾರ್ಜನೆಯಾಗುವುದಿಲ್ಲ. ಯಾವುದೇ ತಂತ್ರಜ್ಞಾನವಿಲ್ಲದ ಕಾಲದಲ್ಲಿ ನಮ್ಮ ಅನೇಕ ಮಹಾನೀಯರು ಪುಸ್ತಕಗಳನ್ನು ಹೆಚ್ಚು ಓದಿ ಜ್ಞಾನಾರ್ಜನೆ ಮಾಡಿಕೊಂಡು ಸಾಧನೆ ಮಾಡಿದ್ದಾರೆ. ಓದುವುದರಿಂದ ಕನ್ನಡವನ್ನು ಸುಲಲೀತವಾಗಿ ಮಾತನಾಡಬಹುದು. ದೇಹಕ್ಕೆ ಹೆಚ್ಚು ಶ್ರಮ ನೀಡಿದರೆ ಆರೋಗ್ಯ ಉತ್ತಮವಾಗಿ ಇರುತ್ತದೆಯೋ ಅದೇ ರೀತಿ ತೆಲೆಗೆ ಹೆಚ್ಚು ಕೆಲಸ ನೀಡಿದರೆ ಜ್ಞಾನಾರ್ಜನೆಯಾಗುತ್ತದೆ,'' ಎಂದು ತಿಳಿಸಿದರು.

''ನಾವು ಎಷ್ಟೇ ದೊಡ್ಡವರಾದರೂ ತಾಯಿ ಭಾಷೆಯನ್ನು ಮರೆಬಾರದು. ಅದನ್ನು ಮರೆತರೆ ತಾಯಿ, ತಾಯಿನಾಡು ಮರೆತಂತೆ. ಇದರಿಂದ ನಮ್ಮ ಸಂಸ್ಕೃತಿ,ಪರಂಪರೆ, ಚರಿತ್ರೆ ಮರೆಯಾಗಿ ಹೋಗುತ್ತದೆ. ಕಲಿಯುವುದಕ್ಕೆ ಕೋಟಿ ಭಾಷೆ ಇರಬಹುದು. ಆದರೆ ಹಾಡುವುದಕ್ಕೆ ಇರುವುದು ಅದ್ಭುತವಾದ ಕನ್ನಡ ಭಾಷೆ ಎನ್ನುವುದನ್ನು ಯಾರೂ ಮರೆಯಬಾರದು,'' ಎಂದು ಹೇಳಿದರು.

ನಟ ಹಾಗೂ ಮಹಾಜನ ಕಾಲೇಜು ಹಿರಿಯ ವಿದ್ಯಾರ್ಥಿ ಕಾರ್ತಿಕ್ ಮಹೇಶ್ ಮಾತನಾಡಿದರು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಸಂಘದ ಸಂಚಾಲಕ ಡಾ.ಎಚ್. ಎನ್.ಭಾಸ್ಕರ್ ಪ್ರತಿಜ್ಞಾವಿಧಿ ಬೋಧಿಸಿದರು. ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಪೂಜಾ ಭಾಗವತ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾಚಾರ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಸೇರಿದಂತೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

MFGE In the Eyes of the Press.....

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 2 ಡಿಸೆಂಬರ್ 2022
2 DECEMBER 2022

ಚಿತ್ರನಟ ದೊಡ್ಡಣ್ಣ ಅಭಿಪ್ರಾಯ | ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರತಿಭಾ ವೇದಿಕೆ ಉದ್ಘಾಟನೆ

ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ ಶಿಕ್ಷಣ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಮಾತೃಭಾಷೆಯಲ್ಲಿ ಶಿಕ್ಷಣ ಕಲಿತರೆ ಮುಂದೆ ಯಾವುದೇ ಭಾಷೆಯನ್ನು ಕಿಳರಿಮೆ ಬಿಟ್ಟು ಕಲಿಯಲು ಸಾಧ್ಯ ಎಂದು ಚಿತ್ರನಟ ದೊಡ್ಡಣ್ಣ ಅಭಿಪ್ರಾಯಪಟ್ಟರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆ ಉದ್ಘಾಟಿಸಿ ಮಾತನಾಡಿದರು.

ಸಂಸ್ಕಾರ, ವಿನಯ ಕಲಿಯಲು ಶಿಕ್ಷಣವೇ ಮುಖ್ಯ. ಆದ್ದರಿಂದ ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಪ್ರಾಥಮಿಕ ಹಂತದಲ್ಲಿ ಕಡ್ಡಾಯವಾಗಿ ಮಾತೃಭಾಷೆ ಕಲಿಕೆ ಆಗಬೇಕು ಎಂದರು.

ಇಂದಿನ ಯುವ ಜನರಲ್ಲಿ ಕೀಳರಿಮೆ ಹೆಚ್ಚಾಗುತ್ತಿದೆ. ತಮ್ಮ ಅಭಿಪ್ರಾಯ, ಅಭಿರುಚಿಯನ್ನು ವ್ಯಕ್ತಪಡಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಆದ್ದರಿಂದ ಕೀಳರಿಮೆ ಬಿಟ್ಟು, ನಿಮ್ಮಲ್ಲಿರುವ ವಿಶೇಷ ಶಕ್ತಿಯನ್ನು ಪ್ರದರ್ಶಿಸಬೇಕು. ಶಿಕ್ಷಣ ಇದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ಚುನಾವಣೆ ಸಮಯದಲ್ಲಿ ವಿವೇಕ, ವಿವೇಚನೆಯಿಂದ ತಮ್ಮ ನಾಯಕರನ್ನು ಆಯ್ಕೆ ಮಾಡಬೇಕು. ಜವಾಬ್ದಾರಿಯುತ ನಾಗರಿಕ ಎನ್ನುವ ಕಲ್ಪನೆ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.



ವಿಜಯವಾಣಿ ಚಿತ್ರ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ವಿದ್ಯಾರ್ಥಿ ಸಂಸತ್ ಹಾಗೂ ಪ್ರತಿಭಾ ವೇದಿಕೆಯನ್ನು ಚಿತ್ರನಟ ದೊಡ್ಡಣ್ಣ ಉದ್ಘಾಟಿಸಿದರು. ಕಾರ್ತಿಕ್ ಮಹೇಶ್, ಡಾ.ಟಿ. ವಿಜಯಲಕ್ಷ್ಮೀ, ಟಿ. ಮುರುಳೀಧರ್ ಭಾಗವತ್, ಪ್ರೊ.ಪಿ. ಸರೋಜಮ್ಮ, ಡಾ.ಎಸ್.ಆರ್. ರಮೇಶ್ ಇತರರು ಇದ್ದರು.

ನಟ ಕಾರ್ತಿಕ್ ಮಹೇಶ್ ಮಾತನಾಡಿ, ಮೌಲ್ಯಯುತ ಜೀವನ ನಡೆಸಿದ ಊರಿನ ಹಿರಿಯರು ಇಂದಿನ ಪೀಳಿಗೆಗೆ ಮಾದರಿ. ಸನ್ಮಾರ್ಗದ ಗುರಿಯೊಂದಿಗೆ ಉತ್ತಮ ಶಿಕ್ಷಣ ಪಡೆದು ತಾನು ಓದಿದ ಶಾಲೆ, ಊರಿಗೆ ಕೀರ್ತಿ ತರಬೇಕು ಎಂದರು.

ಶಾಲಾ ಸಂಸತ್ತಿಗೆ ಆಯ್ಕೆಗೊಂಡ ಮಕ್ಕಳು ರಾಷ್ಟ್ರದ ನೈಜ ಸಂಸತ್ತಿನ ತನಕ ಹೋಗಿ ಕೀರ್ತಿ ಬೆಳಗುವಂತಾಗಲಿ ಹರಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರುಳೀಧರ್ ಮಾತನಾಡಿ, ವಿದ್ಯಾರ್ಥಿಗಳು ಕೆಲಸಕ್ಕಾಗಿ ಓದದೆ ನಿಮ್ಮ ಭದ್ರ ಜೀವನಕ್ಕಾಗಿ ಓದಬೇಕು. ವಿದ್ಯಾರ್ಥಿ ಜೀವನದಲ್ಲಿ ಶ್ರಮವಹಿಸಿ ಓದಿದರೆ ನಮ್ಮ ಗುರಿ ಈಡೇರಿಸಲು ಸಾಧ್ಯ, ಆಗ ಸನ್ಮಾನ, ಬಿರುದುಗಳು ಹುಡುಕಿ ಬರುತ್ತವೆ ಎಂದರು.

2021-22 ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎಂಟನೆ ಸ್ಥಾನ ಗಳಿಸಿ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದ ಪವಿತ್ರಾ ನಾಯ್ಕ್ ಶಾಲೆಗೆ ದ್ವಿತೀಯ ಸ್ಥಾನ ಪಡೆದ ಸಂಜನಾ ಶೇಟ್, ತೃತೀಯ ಸ್ಥಾನ ಪಡೆದ ರಾಘವೇಂದ್ರ ನಾಯ್ಕ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಪೂಜಾ ಭಾಗವತ್ ಸ್ನಾತಕೋತ್ತರ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್ ಇತರರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 2.12.2022

ಚಟುವಟಿಕೆ ಆಧಾರಿತ ಜಾಗೃತಿ ಕಾರ್ಯಕ್ರಮ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಲೈಂಗಿಕ ಕಿರುಕುಳ ವಿರೋಧಿ ವೇದಿಕೆ ಸಹಯೋಗ

• **ಕನ್ನಡಪ್ರಭ ವಾರ್ತೆ** ಮೈಸೂರು ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಲೈಂಗಿಕ ಕಿರುಕುಳ ವಿರೋಧಿ ವೇದಿಕೆ, ಮಹಿಳಾ ಸಬಲೀಕರಣ ವೇದಿಕೆ ಮತ್ತು ಸಮತಾ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಚಟುವಟಿಕೆ ಆಧಾರಿತ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಮಂಗಳೂರಿನ ಹಿತ ಸಂಸ್ಥೆಯ ವಾಣಿ ಪೆರಿಯೋಡಿ ಮತ್ತು ಅವರ ತಂಡದವರು ಆಗಮಿಸಿ, ಲಿಂಗ ತಾರತಮ್ಯದ ಕುರಿತು ಕಿರುನಾಟಕ, ಹಾಡುಗಳು, ಪಾತ್ರನಾಟಕಗಳು ಮತ್ತು ಸಂವಾದ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.



ಮಹಿಳಾ ಹಕ್ಕುಗಳ ಪ್ರಾಮುಖ್ಯತೆ, ಮಹಿಳೆಯರು ಹಿಂಸೆ ಮತ್ತು ತಾರತಮ್ಯದಿಂದ ಮುಕ್ತರಾಗಿ ಸ್ವ ಇಚ್ಛೆಯಿಂದ ಬದುಕುವುದು ಎಷ್ಟು ಮುಖ್ಯ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಲಿಂಗಸಮಾನತೆಯ ಅರಿವು ನಮ್ಮ ನಮ್ಮ ಮನೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಸಮುದಾಯಗಳಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ಆರಂಭವಾಗಬೇಕು ಹಾಗೂ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳಿದರು.

ಲಿಂಗಸಮಾನತೆ ಅರಿವನ್ನು ನಮ್ಮ ದೈನಂದಿನ ಚಟುವಟಿಕೆ ಮತ್ತು ಕಾರ್ಯಗಳಲ್ಲಿ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಳ್ಳುವುದರಿಂದ ಪ್ರಪಂಚದಾದ್ಯಂತ ಒಂದು ಉತ್ತಮ ಪರಿಸರವನ್ನು ಸೃಷ್ಟಿಸಬಹುದು ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಸಮತಾ ಅಧ್ಯಯನ ಕೇಂದ್ರದ ಸಹ ಕಾರ್ಯದರ್ಶಿ ಪಿ. ಓಂಕಾರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸ್ಪರ್ಶ ಸಂಚಾಲಕಿ ಶ್ರುತಿ ಪೂಣಚ್ಚ, ಮಹಿಳಾ ಸಬಲೀಕರಣ ಸಂಚಾಲಕಿ ರಾಧಿಕಾ ರಾಣಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 23.12.2022

ಮಾರ್ಗದರ್ಶನ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಉದ್ಘಾಟನೆ

ವಿದ್ಯಾರ್ಥಿಗಳಿಗೆ ಇಡಿಪಿ ಕಾರ್ಯಾಗಾರ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಮೈಸೂರು ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿಯ ಮಹಿಳಾ ವಿಭಾಗವಾದ ವುಮೆನ್ ಇನ್ ಸ್ಮಾಲ್ ಎಂಟರ್‌ಪ್ರೈಸ್ (ಡಬ್ಲ್ಯುಐಎಸ್‌ಇ) ವತಿಯಿಂದ ಪದವಿ ಕಾಲೇಜುಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮ ಉದ್ಘಾಟಿಸಿದ ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಬರುವ ಅವಕಾಶಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡು ಉಜ್ವಲವಾದ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಕರೆ ನೀಡಿದರು.



ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು ಅವರು, ವಿಶ್ವವನ್ನು ಆರ್ಥಿಕ ಸ್ಥಿರತೆಯತ್ತ ಕೊಂಡೊಯ್ಯುವ ಉದ್ಯಮಶೀಲತೆಯ ಪಾತ್ರದ ಬಗ್ಗೆ ಪ್ರಸ್ತಾಪಿಸಿದರು.

ವೈಸ್‌ನ ಅಧ್ಯಕ್ಷೆ ಟಿ.ಎ. ವಸಂತಕುಮಾರಿ ಅವರು, ಮಹಿಳಾ ಉದ್ಯಮಶೀಲತೆಯ ಒಳನೋಟಗಳನ್ನು ಹಂಚಿಕೊಂಡು, ಹೆಣ್ಣು ಮಕ್ಕಳು ತಮ್ಮ ಜೀವನವನ್ನು ಧೈರ್ಯದಿಂದ ಮುನ್ನಡೆಸಲು ಪ್ರೋತ್ಸಾಹಿಸಿದರು.

ಪ್ರೊಫೈಲ್.ಇನ್ ಸಂಸ್ಥಾಪಕ ಮತ್ತು ಸಿಇಒ ಎಸ್. ವೆಂಕಟೇಶ್ ಮಾತನಾಡಿ, ಉತ್ತಮ ವಾಣಿಜ್ಯೋದ್ಯಮಿ ಆತ್ಮವಿಶ್ವಾಸ, ಸೃಜನಶೀಲ ಮತ್ತು ಹೊಸತನವನ್ನು ಹೊಂದಿರುತ್ತಾನೆ ಎಂದರು. ಡಿಐಸಿ ಜಂಟಿ ನಿರ್ದೇಶಕ ಟಿ. ದಿನೇಶ್, ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಎಸ್. ಶೈಲಾ, ವೈಸ್ ಸದಸ್ಯರಾದ ಪದ್ಮಿನಿ ಶಿವಣ್ಣ, ಶಶಿಕಲಾ ಅಶೋಕ್, ಕಲ್ಪನಾ ಸುರೇಂದ್ರ ಇದ್ದರು. ರಚನಾ ಮಹೇಶ್ ಸ್ವಾಗತಿಸಿದರು. ಮಾಲಿನಿ ಶ್ರೀನಿವಾಸನ್ ವಂದಿಸಿದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಡಿಸೆಂಬರ್ 7, 2022

'ಯುವ ಸೌರಭ' ಸಂಭ್ರಮ



ಮೈಸೂರು: ಜಯಲಕ್ಷ್ಮಿಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ 'ಯುವ ಸೌರಭ' ಕಾರ್ಯಕ್ರಮಕ್ಕೆ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ ಭಾಗವತ್ ಚಾಲನೆ ನೀಡಿದರು.

ಮೈಸೂರಿನ ನಿಸರ್ಗ ಮತ್ತು ವಿಸ್ಮಯ ಸಹೋದರಿಯರ ಸುಗಮ ಸಂಗೀತ, ಸುಪ್ರೀತ್ ಎಸ್. ಭಾರದ್ವಾಜ್ ಮತ್ತು ತಂಡದಿಂದ ಜಾನಪದ ಗೀತೆ, ಕೆ.ಅನ್ವಿತಾ ಮತ್ತು ತಂಡ ಪ್ರದರ್ಶಿಸಿದ ಮಹಿಳಾ ಕಂಸಾಳೆ ಗಮನ ಸೆಳೆಯಿತು.

ತಿ.ನರಸೀಪುರ ತಾಲೂಕಿನ ಪುನೀತ್ ಕುಮಾರ್ ಪಿ.ಮೂಗೂರು ಮತ್ತು ತಂಡದ ಡೊಳ್ಳು ಕುಣಿತ, ಗೌತಮ್ ಮತ್ತು ತಂಡದಿಂದ 'ಬೇಕಾಗಿದ್ದಾರೆ! ಯಾಕೆ ಏನು ಕೇಳಬೇಡಿ' ನಾಟಕ ವಿದ್ಯಾರ್ಥಿಗಳನ್ನು ರಂಜಿಸಿತು. ಪೂಜಾ ಸುಗಮ್ ಮತ್ತು ತಂಡ ಪ್ರಸ್ತುತ ಪಡಿಸಿದ 'ಕರ್ನಾಟಕ ಕಲಾ ದೀಪ್ತಿ' ನೃತ್ಯ ರೂಪಕವು ನಾಡಪ್ರೇಮವನ್ನು ಉಕ್ಕಿಸಿತು.

ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಸಂಚಾಲಕ ಎ.ರಾಜೇಶ್, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ್ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 7 ಡಿಸೆಂಬರ್ 2022
7 DECEMBER 2022

ಕಲಾಪ್ರತಿಭೆ ತೆರೆದಿಟ್ಟ ಯುವಜನರು ಮನ ಸೆಳೆದ ನೃತ್ಯ ರೂಪಕ

ಮಹಾಜನದಲ್ಲಿ ಯುವ ಸಂಭ್ರಮ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಪ್ರತಿಭೆ ಅನಾವರಣಕ್ಕೆ ವೇದಿಕೆಯಾಗಿದ್ದ ಯುವ ಸಂಭ್ರಮದಲ್ಲಿ ಭಾಗವಹಿಸಿ ದ್ದವರು ಹಾಡು, ನೃತ್ಯ, ವಾದ್ಯಗಳ ಮೂಲಕ ತಮ್ಮ ಕಲಾಪ್ರತಿಭೆಯನ್ನು ಸಭಿಕರ ಮುಂದಿಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದ ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಯುವ ಸಂಭ್ರಮದಲ್ಲಿ ಸುಗಮ ಸಂಗೀತ, ಜಾನಪದ ಗೀತೆ, ನೃತ್ಯ ರೂಪಕ, ಕಂಸಾಳೆ, ನಾಟಕ ಇತರ ಕಲಾ ಪ್ರಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರ್ಪಡಿಸಿದರು. ನಿಸರ್ಗ ಮತ್ತು ವಿಸ್ಮಯ ಸಹೋದರಿಯರ ಸುಗಮ ಸಂಗೀತ, ಸುಪ್ರೀತ್ ಎಸ್.ಭಾರದ್ವಾಜ್ ಮತ್ತು ತಂಡ ಸಾರಂತ ರಂಗ ತಂಡದ ಜಾನಪದ ಗೀತೆ, ಕೆ.ಅನ್ವಿತಾ ಮತ್ತು ತಂಡದ ಬೀಸು ಕಂಸಾಳೆ ಗಮನ ಸೆಳೆದರೆ, ಪೂಜಾ ಸುಗಮ್ ಮತ್ತು ತಂಡದ ಕರ್ನಾಟಕ ಕಲಾ ದೀಪ್ತಿ ನೃತ್ಯ ರೂಪಕ ಆಕರ್ಷಕವಾಗಿ ಮೂಡಿಬಂತು. ಪುನೀತ್‌ಕುಮಾರ್ ಪಿ. ಮೂಗೂರು ಮತ್ತು ತಂಡದ ಡೊಳ್ಳು ಕುಣಿತ ಕುಣಿಯುಂತೆ ಮಾಡಿದರೆ, ಗೌತಮ್ ಮತ್ತು ತಂಡ ದಿಂದ 'ಬೇಕಾಗಿದ್ದಾರೆ! ಯಾಕೆ ಏನು ಕೇಳಬೇಡಿ' ನಾಟಕ ನೋಡುಗರನ್ನು ಚಿಂತನೆಗೆ ಹಚ್ಚಿತು. ಮಹಾ ಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳಿಧರ ಭಾಗವತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕಾಲೇಜಿನ ಸಾಂಸ್ಕೃತಿಕ ರಂಗತಂಡ ಸಂಚಾಲಕ ಎ.ರಾಜೇಶ್, ಪ್ರತಿಭಾ ವೇದಿಕೆ ಸಂಚಾಲಕ ಎಂ.ನಾಗೇಶ್ ಇತರರು ಇದ್ದರು.



ವಿಜಯವಾಣಿ ಚಿತ್ರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಯುವ ಸಂಭ್ರಮ ಕಾರ್ಯಕ್ರಮವನ್ನು ಟಿ. ಮುರಳಿಧರ ಭಾಗವತ್ ಉದ್ಘಾಟಿಸಿದರು. ಡಾ.ಎಂ.ಡಿ.ಸುದರ್ಶನ್, ಡಾ.ಬಿ.ಆರ್.ಜಯಕುಮಾರಿ, ಎ.ರಾಜೇಶ್, ಎಂ.ನಾಗೇಶ್ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 12.1.2023

ಮಹಾಜನ ಕಾಲೇಜಿನಲ್ಲಿ ಸಾರಾ ಅಬೂಬಕರ್‌ಗೆ ಶ್ರದ್ಧಾಂಜಲಿ



ಮೈಸೂರು:ನಗರದಜಯಲಕ್ಷ್ಮೀಪುರಂನಲ್ಲಿರುವಎಸ್‌ಬಿಆರ್‌ಆರ್‌ಮಹಾಜನಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡದ ಖ್ಯಾತ ಲೇಖಕಿ, ನಾಡೋಜ ಸಾರಾ ಅಬೂಬಕರ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಸಾರಾ ಅಬೂಬಕರ್ ಅವರು ಪಿ. ಲಂಕೇಶ್ ಪತ್ರಿಕೆಯ ಮೂಲಕ ತಮ್ಮ ಬರವಣಿಗೆಯ ಕೃಷಿ ಆರಂಭಿಸಿದರು. ತಮ್ಮ ಕೃತಿಗಳಲ್ಲಿ ಮುಸ್ಲಿಂ ಸಮುದಾಯದ ಮಹಿಳೆಯರ ವಾಸ್ತವಿಕ ಬದುಕಿನ ಚಿತ್ರಣ, ಧರ್ಮದ ಕಟ್ಟುಪಾಡುಗಳಲ್ಲಿ ಶೋಷಿತಗೊಂಡ ಮಹಿಳೆಯ ಒಳತೋಟಿಗಳನ್ನು ಎಳೆಎಳೆ ಯಾಗಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣ ದೊರಕಬೇಕೆಂದು ಇವರು ನಿರಂತರವಾಗಿ ಪ್ರತಿ ಪಾದಿಸುತ್ತಿದ್ದರು, ಸಾರಾ ಅಬೂಬಕ್ಕರ್ ತಾನು ನಂಬಿದ ಮೌಲ್ಯಗಳಿಗೆ ಬದ್ಧರಾಗಿ ಎದುರಾದ ವಿರೋಧಗಳನ್ನು ದಿಟ್ಟತನದಿಂದ ಎದುರಿಸಿ ಮುಸ್ಲಿಂ ಜನಾಂಗದ ತಲ್ಲಣಗಳಿಗೆ ದನಿಯಾಗಿ ದ್ದವರು. ಚಂದ್ರಗಿರಿಯ ತೀರದಲ್ಲಿ, ಸಹನ, ವಜ್ರಗಳು, ಕದನ ವಿರಾಮ ಮುಂತಾದ ಕಾದಂಬರಿಗಳು, ಚಪ್ಪಲಿಗಳು, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಮುಂತಾದ ಕಥಾ ಸಂಕಲನಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಇವರಿಗೆ ಹತ್ತು ಹಲವು ಪ್ರಶಸ್ತಿಗಳು ಸಂದಿವೆ. ಇವರ ಅಗಲಿಕೆ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟವಾಗಿದೆ ಎಂದು ಹೇಳಿದರು.

ಕಾಲೇಜಿನ ಶೈಕ್ಷಣಿಕ ಸಲಹೆಗಾರರಾದ ಮತ್ತು ಇಒ ಡಾ. ಎಸ್. ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್. ಆರ್. ತಿಮ್ಮೇಗೌಡ ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಅಧ್ಯಾಪಕ, ಅಧ್ಯಾಪಕೇತರ ಸಿಬ್ಬಂದಿ ವರ್ಗದವರನ್ನು ಭಾಗವಹಿಸಿದ್ದರು.

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಗುರುವಾರ • ಜನವರಿ 12, 2023



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡದ ಖ್ಯಾತ ಲೇಖಕಿ ಸಾರಾ ಅಬೂಬಕ್ಕರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 2.1.2023



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಲಿಯಂ ಷೇಕ್ಸ್‌ಪೀಯರ್ ಅವರ ಮ್ಯಾಕ್‌ಬತ್ ಕುರಿತು ಸಹಾಯಕ ಪ್ರಾಧ್ಯಾಪಕ ಡಾ.ಪಿ. ವೆಂಕಟೇಶ್ ಉಪನ್ಯಾಸ ನೀಡಿದರು. ಪ್ರಾಂಶುಪಾಲೆ ಬಿ.ಆರ್. ಜಯಕುಮಾರಿ ಇದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶುಕ್ರವಾರ 27.1.2023

29ರಂದು ಪಾಂಡವಪುರದಲ್ಲಿ ಪ್ರೊ.ತಿಮ್ಮೇಗೌಡ-60 ಕಾರ್ಯಕ್ರಮ

'ನಿಜತಿಲಕ' ಅಭಿನಂದನಾ ಗ್ರಂಥ ಅರ್ಪಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಎಚ್.ಆರ್. ತಿಮ್ಮೇಗೌಡ-60 ಕಾರ್ಯಕ್ರಮವು ಜ.29 ರಂದು ಬೆಳಗ್ಗೆ 10ಕ್ಕೆ ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದೇ ಸಂದರ್ಭದಲ್ಲಿ 'ನಿಜತಿಲಕ' ಅಭಿನಂದನಾ ಗ್ರಂಥವು ಲೋಕಾರ್ಪಣೆಯಾಗಲಿದೆ.

ಶಾಸಕ ಸಿ.ಎಸ್. ಪುಟ್ಟರಾಜು ಅಧ್ಯಕ್ಷತೆ ವಹಿಸುವರು. ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಕೃತಿ ಬಿಡುಗಡೆ ಮಾಡುವರು. ಕೃತಿ ಕುರಿತು ಪ್ರೊ.ಸಿ. ನಾಗಣ್ಣ ಮಾತನಾಡುವರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಗೌ. ಕಾರ್ಯದರ್ಶಿ ಟಿಯ ವಿಜಯಲಕ್ಷ್ಮೀ ಮುರಳೀಧರ್ ಮುಖ್ಯ



ಅತಿಥಿಗಳಾಗಿರುವರು. ಪ್ರೊ.ಹಿ.ಶಿ. ರಾಮಚಂದ್ರೇಗೌಡ, ಪ್ರೊ.ಎಂ. ಕೃಷ್ಣೇಗೌಡ, ಪ್ರೊ.ಜಿ.ಬಿ.ಶಿವರಾಜು ಅಭಿಮಾನದ ನುಡಿ ಸಲ್ಲಿಸುವರು. ಎಸ್. ಕೆಂಪೇಗೌಡ, ಪ್ರೊ.ಎ. ರಂಗಸ್ವಾಮಿ, ಪ್ರೊ.ನೀ. ಗಿರಿಗೌಡ, ಪ್ರೊ.ಎಸ್. ನಾಗರಾಜು,. ಪ್ರೊ.ಬಿ. ನಾರಾಯಣಗೌಡ ಅವರಿಗೆ ಗುರುನಮನ ಸಲ್ಲಿಸಲಾಗುವುದು. ಖ್ಯಾತ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ, ವಿದ್ಯಾಪ್ರಚಾರ ಸಂಘದ ಗೌ. ಕಾರ್ಯದರ್ಶಿ ಕೆ.ವಿ. ಬಸವರಾಜು ಅವರನ್ನು ಸನ್ಮಾನಿಸಲಾಗುವುದು.

ಡಾ.ಪಿ.ಕೆ. ರಾಜಶೇಖರ, ಡಾ.ಮ. ರಾಮಕೃಷ್ಣ, ಡಾ.ಟಿ.ಕೆ. ಕೆಂಪೇಗೌಡ, ಡಾ. ವಿಜಯಲಕ್ಷ್ಮಿ ಮನಾಪುರ, ಸಿ.ಎಂ. ಕಿರಣ್‌ಕುಮಾರ್ ದೇಸಾಯ್, ಬಿ.ಎನ್. ಮಾರುತಿ ಪ್ರಸನ್ನ, ಈ. ರವಿಕುಮಾರ್ ಚಿಕ್ಕೇಗೌಡನ ಕೊಪ್ಪಲು, ಸಿ.ಎಸ್. ಮಂಜುನಾಥ್, ಗೋಪಾಲ ಕಂಪಲಾಪುರ, ಚಿಕ್ಕಮಳಲಿ ಆರ್. ಮಹಾದೇವ, ಸ.ವೆಂ. ತೀರ್ಥಗೌಡ ಅವರಿರುವ ಸಂಪಾದಕ ಮಂಡಳಿಯು 'ನಿಜತಿಲಕ' ಗೌರವ ಗ್ರಂಥ ಸಂಪಾದಿಸಿದೆ. ತಿಮ್ಮೇಗೌಡರು ಮೂಲತಃ ಪಾಂಡವಪುರ ತಾಲೂಕು ಹಳೇಬೀಡು ಗ್ರಾಮದವರು. ಮೈಸೂರು ವಿಶ್ವವಿದ್ಯಾನಿಲಯ ಪದವಿ ಕನ್ನಡ ಅಧ್ಯಾಪಕರ ಸಂಘದ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಯಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ಮಹಾಜನ ವಿದ್ಯಾರ್ಥಿ ನಿಲಯದ ಪಾಲಕರಾಗಿ ವಿದ್ಯಾರ್ಥಿ ಸಮೂಹದಲ್ಲಿ ಶಿಸ್ತು ರೂಪಿಸಲು ಯತ್ನಿಸಿದ್ದಾರೆ.

MFGE In the Eyes of the Press.....

ಸಂಜೆವಾಣಿ
ದಿನಪತ್ರಿಕೆ

ಶನಿವಾರ, 21 ಜನವರಿ 2023

ರಾಷ್ಟ್ರಮಟ್ಟದ ವಿಚಾರಸಂಕಿರಣ ಉದ್ಘಾಟನೆ

ಸಾಹಿತ್ಯ ಪರಂಪರೆಯನ್ನು ಸ್ವಾಯತ್ತ ಪ್ರಜ್ಞೆಯಿಂದ ನೋಡುವುದು ಅಗತ್ಯ: ನರಹಳ್ಳಿ

ಮೈಸೂರು: ಸಾಹಿತ್ಯ ಪರಂಪರೆಯನ್ನು ವಿಮರ್ಶಾ ವಿವೇಕ, ಸ್ವಾಯತ್ತ ಪ್ರಜ್ಞೆಯಿಂದ ನೋಡುವ ತುರ್ತು ಅಗತ್ಯವಿದೆ ಎಂದು ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ ಹಾಗೂ ಅಭಿನವ ಬೆಂಗಳೂರು ಸಹಯೋಗದಲ್ಲಿ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಆಯೋಜಿಸಿದ್ದ 'ಬಾ ವಿಮರ್ಶಾ ದರ್ಶನಕ್ಕೆ: ಸಾಹಿತ್ಯ ಸೃಷ್ಟಿ-ವಿಮರ್ಶಾ ಪರಂಪರೆ' ಎಂಬ ವಿಷಯ ಕುರಿತ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ನಮ್ಮ ಸಾಮಾಜಿಕ ರಚನೆಯನ್ನು ರೂಪಿಸುವ ಎರಡು ಪ್ರಬಲ ಶಕ್ತಿಗಳೆಂದರೆ ರಾಜಕೀಯ ಮತ್ತು ಧರ್ಮ. ರಾಜಕೀಯ ತನ್ನ ಸ್ವಾರ್ಥಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತದೆ. ಜನಪರವಾಗಿ ರಬೇಕಾದ ರಾಜಕೀಯ ತನ್ನ ನೈತಿಕತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತದೆ. ಹೀಗಾಗಿ, ಧರ್ಮ ತನ್ನ ಆಧ್ಯಾತ್ಮಿಕ ನೈತಿಕತೆಯನ್ನು ಕಳೆದುಕೊಳ್ಳುತ್ತಿರುವುದು ವಿಪರ್ಯಾಸ ಎಂದು ಬೇಸರಿಸಿದರು.

ವಿಚಾರಗೋಷ್ಠಿಗಳಲ್ಲಿ ಸಾಹಿತಿಗಳಾದ ಡಾ. ರಾಜೇಂದ್ರ ಚೆನ್ನಿ, ಡಾ.ನಿಂಗಪ್ಪ ಮುದೇನೂರು, ಡಾ.ವೆಂಕಟಗಿರಿ ದಳವಾಯಿ, ಲಕ್ಷ್ಮೀಶ ತೋಳ್ಪಾಡಿ, ಡಾ.ಸಂಧ್ಯಾ ಹೆಗಡೆ, ಡಾ.ಕವಿತಾ ಕುಸಗಲ್, ಡಾ.ವೆಂಕಟರಮಣ ಐತಾಳ, ಡಾ.ರಹಮತ್ ತರೀಕೆರೆ, ಡಾ.ಪಿ.ಚಂದ್ರಿಕಾ, ಡಾ.ಶ್ರೀಧರ ಬಳಗಾರ, ಚ.ಹ.ರಘುನಾಥ್, ಅವರು ವಿಚಾರ ಮಂಡಿಸಿದರು.

ಮಹಾಜನ ವಿದ್ಯಾಸಂಸ್ಥೆ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ರವಿಕುಮಾರ್, ಪ್ರಾಧ್ಯಾಪಕ ಡಾ.ಎಚ್.ಆರ್. ತಿಮ್ಮೇಗೌಡ ಇತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ

ಪೇರ.ದಿಟ್ಟ.ನಿರಂತರ

ಶುಕ್ರವಾರ 20.1.2023

- ಮಹಾಜನ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ, ಅಭಿನವ ಬಾ ವಿಮರ್ಶಾ ದರ್ಶನಕೆ- ಸಾಹಿತ್ಯ ಸೃಷ್ಟಿ- ವಿಮರ್ಶಾ ಪರಂಪರೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನೆ- ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ- ಟಿ. ವಿಜಯಲಕ್ಷ್ಮೀ ಮುರಳೀಧರ್, ಉಪಸ್ಥಿತಿ- ಡಾ.ಬಿ.ಆರ್. ಜಯಕುಮಾರಿ, ಡಾ.ಎಸ್.ಆರ್. ರಮೇಶ್, ನ. ರವಿಕುಮಾರ, ಜಯಲಕ್ಷ್ಮೀಪುರಂ, ಬೆಳಗ್ಗೆ 10.

ಆರೋಗ್ಯ

ದಿನ ಪತ್ರಿಕೆ

ಶುಕ್ರವಾರ, 20 ಜನವರಿ 2023

- **ರಾಷ್ಟ್ರೀಯ ವಿಚಾರ ಸಂಕಿರಣ**

ಬೆಳಗ್ಗೆ 10ಕ್ಕೆ, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ವಿಷಯ-ವಿಮರ್ಶಾದರ್ಶನಕ್ಕೆ:ಸಾಹಿತ್ಯ ಸೃಷ್ಟಿ-ವಿಮರ್ಶಾ ಪರಂಪರೆ, ಉದ್ಘಾಟನೆ-ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿಗಳು-ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್, ಅಧ್ಯಕ್ಷತೆ-ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ-ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮೀಪುರಂ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 21.1.2023

ಸಾಹಿತ್ಯ ಪರಂಪರೆ ವಿಮರ್ಶಾ ವಿವೇಕ, ಸ್ವಾಯತ್ತ ಪ್ರಜ್ಞೆಯಿಂದ ನೋಡುವ ತುರ್ತು ಇದೆ: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಾಹಿತ್ಯ ಪರಂಪರೆಯನ್ನು ವಿಮರ್ಶಾ ವಿವೇಕ, ಸ್ವಾಯತ್ತ ಪ್ರಜ್ಞೆಯಿಂದ ನೋಡುವ ತುರ್ತು ಇದೆ ಎಂದು ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯಂ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಅಭಿನವ ಬೆಂಗಳೂರು ಸಹಯೋಗದಲ್ಲಿ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಬಾ ವಿಮರ್ಶಾ ದರ್ಶನಕೆ; ಸಾಹಿತ್ಯ ಸೃಷ್ಟಿ- ವಿಮರ್ಶಾ ಪರಂಪರೆ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ನಮ್ಮ ಸಾಮಾಜಿಕ ರಚನೆಯನ್ನು ರೂಪಿಸುವ ಎರಡು ಪ್ರಬಲ ಶಕ್ತಿಗಳೆಂದರೆ ರಾಜಕೀಯ ಮತ್ತು ಧರ್ಮ. ಇದು ಅಧೀನ ಮನಸ್ಥಿತಿಯನ್ನು ಬಯಸುವಂತಹುದು. ಇಲ್ಲಿ ಸ್ವಾಯತ್ತ ಚಿಂತನೆಗೆ ಅವಕಾಶವಿಲ್ಲ. ಧಾರ್ಮಿಕ ಪ್ರತಿನಿಧಿಗಳು



ರಾಜಕೀಯದ ಬಗ್ಗೆ ಮಾತನಾಡುತ್ತಾರೆ. ಹಾಗೆಯೇ ರಾಜಕೀಯ ತನ್ನ ಸ್ವಾರ್ಥಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತದೆ. ಜನಪರವಾಗಿರಬೇಕಾದ ರಾಜಕೀಯ ತನ್ನ ನೈತಿಕತೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಿರುವುದು, ಧರ್ಮ ತನ್ನ ಆಧ್ಯಾತ್ಮಿಕ ನೈತಿಕತೆಯನ್ನು ಕಳೆದುಕೊಳ್ಳುತ್ತಿರುವುದು ವಿಪರ್ಯಾಸ ಎಂದರು.

ಸೃಜನಶೀಲವಲ್ಲದ ಜಡವಾದ ಸ್ಥಿತಿ ಕ್ರೌರ್ಯಕ್ಕೆ ಅವಕಾಶ ಮಾಡಿಕೊಡುತ್ತದೆ. ಕನ್ನಡ ಸಾಹಿತ್ಯ ನಿರಂತರವಾಗಿ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಬಂದಿದೆ. ಧರ್ಮ ಸಾಹಿತ್ಯದ ಸ್ವಾಯತ್ತತೆಯನ್ನು ಹತ್ತಿಕ್ಕುವ ಕೆಲಸವನ್ನು ಮಾಡುತ್ತಿದೆ. ಹಾಗೆಯೇ ಪ್ರಭುತ್ವ ತನ್ನ ಹಿಡಿತವನ್ನು ಎಲ್ಲಾ ಕಡೆಗೂ ಚಾಚುತ್ತಿದೆ. ಆಂದರೆ ಪ್ರಭುತ್ವವನ್ನು ಪ್ರಶ್ನಿಸುವ ಮನೋಭಾವವನ್ನೇ ನಿರ್ನಾಮ ಮಾಡುತ್ತಿದೆ. ಆದರೆ ಸಾಹಿತ್ಯದ ಜೀವವೇ ಸ್ವಾಯತ್ತತೆ. ಇಂದು ಸವೇದನ ಶೀಲ ಮನಸ್ಸುಗಳು ಅಧೀನ ಮನಸ್ಥಿತಿಯನ್ನು ಒಪ್ಪಿಕೊಳ್ಳುವ ಮನಸ್ಥಿತಿಗೆ ಬಂದಿದೆ ಎಂದು ಅವರು ಹೇಳಿದರು.

ಇಡೀ ಸಾಹಿತ್ಯ ಪರಂಪರೆಯನ್ನು ವಿಮರ್ಶಾ ವಿವೇಕ, ಸ್ವಾಯತ್ತ ಪ್ರಜ್ಞೆಯಿಂದ ನೋಡುವ ತುರ್ತು ಇದೆ. ಇಂದಿನ ಯುವಜನಾಂಗ ಅಧ್ಯಯನ ಶೀಲರಾಗಬೇಕು. ಕೇಳಿಸಿಕೊಳ್ಳುವ ಸಾಮರ್ಥ್ಯವಿಲ್ಲದೆ ಏನನ್ನು ಸಾಧಿಸಲು ಸಾಧ್ಯವಿಲ್ಲ. ಪರಂಪರೆಯ ಜೊತೆಗೆ ಪ್ರಧಾನ ಸಂಸ್ಕೃತಿಯ ಜೊತೆಗೆ ಸಂಪರ್ಕ ಇಟ್ಟುಕೊಳ್ಳಬೇಕು. ಎಷ್ಟೋ ಜನಪದ ಕವಿಗಳನ್ನು ಸಾಹಿತ್ಯ ಚರಿತ್ರೆ ಮೂಲ ರಚನಾಕಾರ್ಯದಲ್ಲಿ ಕೈಬಿಟ್ಟಿದೆ. ಆದ್ದರಿಂದ ರಂಜೀ ಮುಗಳಿ ಅವರ ಸಾಹಿತ್ಯ ಚರಿತ್ರೆಯನ್ನು ಪುನರ್‌ರಚಿಸುವ ಆಗತ್ಯವಿದೆ ಎಂದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ನ. ರವಿಕುಮಾರ್ ಅಭಿನವ ಇದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ ಸ್ವಾಗತಿಸಿದರು. ಡಾ. ವಿನೋದಮ್ಮ ವಂದಿಸಿದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಶನಿವಾರ,21 ಜನವರಿ 2023

ಪ್ರಭುತ್ವದಿಂದ ಸ್ವಾಯತ್ತತೆ ಹತ್ತಿಕ್ಕುವ ಯತ್ನ

■ ವಿಕ ಸುದ್ದಿಲೋಕ ಮೈಸೂರು

ಶಿಕ್ಷಣ, ಸಂಸ್ಕೃತಿ, ನ್ಯಾಯಾಂಗ ಎಲ್ಲಕ್ಷೇತ್ರಗಳಲ್ಲಿ ಪ್ರಭುತ್ವ ತನ್ನ ಹಿಡಿತ ಸಾಧಿಸುವ ಪ್ರಯತ್ನ ಮಾಡುತ್ತಿದೆ ಎಂದು ವಿಮರ್ಶಕ, ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದ್ದಾರೆ.

ಎಸ್‌ಜಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಅಭಿನವ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಬಾ ವಿಮರ್ಶಾ ದರ್ಶನಕೆ ಸಾಹಿತ್ಯ ಸೃಷ್ಟಿ-ವಿಮರ್ಶಾ ಪರಂಪರೆ' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

''ಸಾಹಿತ್ಯದ ಸ್ವಾಯತ್ತತೆ ಹತ್ತಿಕ್ಕುವ ಪ್ರಯತ್ನವನ್ನು ಪ್ರಭುತ್ವ ಮಾಡುತ್ತಿದೆಯೇ ಎಂಬ ಪ್ರಶ್ನೆ ಕಾಡುತ್ತಿದೆ. ಸ್ವಾಯತ್ತ ಸಂಸ್ಥೆಗಳು ತಮ್ಮ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳದ ಹಾಗೆ ಅವುಗಳ ಹಿಡಿತವನ್ನು ಸ್ಥಾಪಿಸುವ ಪ್ರಯತ್ನವನ್ನು ಪ್ರಭುತ್ವ ಸದ್ದಿಲ್ಲದೇ ಮಾಡುತ್ತಿದೆ,'' ಎಂದು ಆತಂಕ ವ್ಯಕ್ತಪಡಿಸಿದರು.

''ಯಾವುದೇ ಸಾಹಿತ್ಯ ಸಂಸ್ಥೆಗಳನ್ನು ಗಮನಿಸಿದಾಗ ಅದರ ಹಿಂದೆ ಯಾರು ಇದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಇಂದಿನ ಪ್ರಭುತ್ವದ ಆಶಯ ಪ್ರತಿಸುವ ಮನೋಭಾವನೆ ನಿರ್ಮಾಣ ಮಾಡುವುದು,'' ಎಂದರು.

''ರಾಜಕೀಯ ಮತ್ತು ಧರ್ಮ ಜಡತ್ವವನ್ನು ತಲುಪಿ ಸೃಜನಶೀಲತೆಯನ್ನು ಕಳೆದುಕೊಂಡಿವೆ. ಸಾಮಾಜಿಕವಾಗಿ ರಚನೆಯ ವಿನ್ಯಾಸವನ್ನು ರೂಪಿಸುವ ಅತ್ಯಂತ ಪ್ರಬಲವಾದ ಎರಡು ಶಕ್ತಿಗಳೆಂದರೆ, ರಾಜಕೀಯ ಮತ್ತು ಧರ್ಮ. ಈ ಎರಡು ಪರಸ್ಪರ ಪೂರಕವಾಗಿ ಕೆಲಸ ಕೆಲಸ ಮಾಡುತ್ತಿವೆ. ರಾಜಕೀಯ ತನ್ನ ಸ್ವಾರ್ಥಕ್ಕಾಗಿ ಧರ್ಮವನ್ನು



ಮಹಾಜನ ಕಾಲೇಜಿನ ವಿವೇಕಾನಂದ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ವಿಮರ್ಶಕ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಉದ್ಘಾಟಿಸಿದರು.

ಬಳಸಿಕೊಳ್ಳುತ್ತಿದೆ. ಧರ್ಮ ಅಸ್ತಿತ್ವಕ್ಕಾಗಿ ರಾಜಕೀಯ ಶಕ್ತಿಯನ್ನು ಬಳಸಿಕೊಳ್ಳುತ್ತಿದೆ. ಜನಪರವಾಗಿರಬೇಕಾದ ರಾಜಕೀಯ ನೈತಿಕತೆಯನ್ನು ಕಳೆದುಕೊಳ್ಳುತ್ತಿದೆ, ಧರ್ಮ ತನ್ನ ಆಧ್ಯಾತ್ಮಿಕತೆ ಹಸಿವು ಕಳೆದುಕೊಂಡಂತೆ ಕಾಣುತ್ತಿದೆ,'' ಎಂದು ಹೇಳಿದರು.

''ಕವಿ ಪಂಪ, ರಾಜಕೀಯ ಮತ್ತು ಧರ್ಮವನ್ನು ತನ್ನ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡ. ರಾಜಕೀಯ ಮತ್ತು ಧರ್ಮ ಸೃಜನಶೀಲವಾಗಿರಬೇಕು ಎನ್ನುವುದರ ಬಗ್ಗೆ ಮಾದರಿಯನ್ನು ಹಾಕಿಕೊಟ್ಟ, ಹೀಗಾಗಿ ಪಂಪನಲ್ಲಿ ಧರ್ಮ ಪ್ರತಿಪಾದನೆಯಾಗುವುದಿಲ್ಲ, ವ್ಯಾಖ್ಯಾನಕ್ಕೆ ಒಳಪಡುತ್ತದೆ,'' ಎಂದು ತಿಳಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಸಹಾಯಕ ಪ್ರಾಧ್ಯಾಪಕ ಡಾ.ವಿನೋದಮ್ಮ, ಅಭಿನವ ಪ್ರಕಾಶನದ ನ.ರವಿಕುಮಾರ ಮತ್ತಿತರರು ಇದ್ದರು.

ಉದ್ಘಾಟನೆ ಕಾರ್ಯಕ್ರಮದ ನಂತರ ನಡೆದ ವಿಚಾರಗೋಷ್ಠಿ ನಡೆಯಿತು.

MFGE In the Eyes of the Press.....

ವಿಜಯವಾಣಿ

ಕನ್ನಡಿಗರ ಧ್ವನಿ

ಶುಕ್ರವಾರ 20 ಜನವರಿ 2023
20 JANUARY 2023

ವಿಚಾರ ಸಂಕಿರಣ: ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು. 'ಬಾ ವಿಮರ್ಶಾ ದರ್ಶನಕೆ' ಸಾಹಿತ್ಯ ಸೃಷ್ಟಿ ಮತ್ತು ವಿಮರ್ಶಾ ಪರಂಪರೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ. ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್. ಸ್ಥಳ: ವಿವೇಕಾನಂದ ಸಭಾಂಗಣ, ಮಹಾಜನ ವಿದ್ಯಾಸಂಸ್ಥೆ, ಜಯಲಕ್ಷ್ಮೀಪುರಂ, ಬೆ.10

ಪ್ರಜಾವಾಣಿ

ಶುಕ್ರವಾರ • ಜನವರಿ 20, 2023

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಅಭಿನವ ಬೆಂಗಳೂರು:

'ಬಾ ವಿಮರ್ಶಾ ದರ್ಶನಕೆ ರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ- ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ- ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಉಪಸ್ಥಿತಿ- ಪ್ರಾಂಶುಪಾಲರಾದ ಡಾ.ಬಿ.ಆರ್.ಜಯ ಕುಮಾರಿ, ಡಾ.ಎಸ್.ಆರ್.ರಮೇಶ್, ಸ್ಥಳ- ವಿವೇಕಾನಂದ ಸಭಾಂಗಣ, ಬೆಳಿಗ್ಗೆ 10



ನರಹಳ್ಳಿ ಬಾಲಸುಬ್ರಹ्मಣ್ಯ

MFGE In the Eyes of the Press.....

ಆರೋಗ್ಯ
ದಿನ ಪತ್ರಿಕೆ

ಗುರುವಾರ, 12 ಜನವರಿ 2023



ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರಿನ ಎಎಸ್‌ಜಿ ಕಣ್ಣಿನ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಸಂಚಾರ ಸುರಕ್ಷತಾ ದಿನದ ಅಂಗವಾಗಿ ವನಸಿರಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್, ರಾಷ್ಟ್ರೀಯ ಸೇವಾ ಯೋಜನೆ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಿಬ್ಬಂದಿ ಮತ್ತು ವಾಹನ ಚಾಲಕರಿಗಾಗಿ 'ಉಚಿತ ಕಣ್ಣಿನ ತಪಾಸಣಾ ಶಿಬಿರ' ಮತ್ತು 'ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ'ವನ್ನು ನಡೆಸಲಾಯಿತು. ಎಎಸ್‌ಜಿ ಕಣ್ಣಿನ ಆಸ್ಪತ್ರೆ ಆರೋಗ್ಯಾಧಿಕಾರಿ ಡಾ.ಮಹೇಶ್‌ಕುಮಾರ್, ಡಾ.ವಿನಿ ಬದ್ವಾನಿ, ಡಾ.ಲೂಸಿ ಕವರಿ, ವನಸಿರಿ ಟ್ರಸ್ಟ್ ಅಧ್ಯಕ್ಷ ಮಲ್ಲೇಶ್ ಬಿ.ಕೋಟೆ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮ ಅಧಿಕಾರಿ ಡಾ.ಜೆ.ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಗುರುವಾರ 12.1.2023



ರಾಷ್ಟ್ರೀಯ ಸಂಚಾರ ಸುರಕ್ಷತಾ ದಿನದ ಅಂಗವಾಗಿ ಮೈಸೂರಿನ ವನಸಿರಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಮತ್ತು ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯು ಎಎಸ್‌ಜಿ ಕಣ್ಣಿನ ಆಸ್ಪತ್ರೆಯಲ್ಲಿ ಕಾಲೇಜಿನ ಸಿಬ್ಬಂದಿ ಮತ್ತು ವಾಹನ ಚಾಲಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಮತ್ತು ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಆಸ್ಪತ್ರೆಯ ಡಾ. ಮಹೇಶ್‌ಕುಮಾರ್, ಡಾ. ವಿನಿ ಬದ್ವಾನಿ, ಡಾ. ಲೂಸಿ ಕವರಿ, ವನಸಿರಿ ಟ್ರಸ್ಟ್‌ನ ಅಧ್ಯಕ್ಷ ಮಲ್ಲೇಶ್ ಬಿ ಕೋಟೆ, ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಾಕ್ರಮಾಧಿಕಾರಿ ಡಾ.ಜಿ. ದೊಡ್ಡರಸಯ್ಯ ಮತ್ತು ಸಿ.ಎಸ್. ಸಿದ್ದರಾಜು ಪಾಲ್ಗೊಂಡಿದ್ದರು.

ಕನ್ನಡಪ್ರಭ
ಸೇರ.ದಿಟ್ಟ ನಿರಂತರ

ಭಾನುವಾರ 29.1.2023



ವಿದೇಶದಲ್ಲಿ ಅಧ್ಯಯನ, ಅವಕಾಶ ಕಾರ್ಯಕ್ರಮ

ಮೈಸೂರು: ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ಲೇಸ್‌ಮೆಂಟ್ ಮತ್ತು ವೃತ್ತಿ ಮಾರ್ಗದರ್ಶನ ಕೋಶವು ಯುನಿಯಾಬ್ಯಾಡ್ ಪ್ರೈ.ಲಿ. ಸಹಯೋಗದಲ್ಲಿ ವಿದೇಶದಲ್ಲಿ ಅಧ್ಯಯನ- ಅವಕಾಶಗಳು ಕುರಿತು ಕಾರ್ಯಕ್ರಮವನ್ನು ಆಯೋಜಿಸಿತ್ತು. ಯುನಿಯಾಬ್ಯಾಡ್‌ನ ಟೀಮ್ ಲೀಡರ್ ಪ್ರಸಾದ್ ಅವರು, ವಿದೇಶ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಬಯಸುವ ಪದವಿ ವಿದ್ಯಾರ್ಥಿಗಳಿಗೆ ಯೂನಿಯಾಬ್ಯಾಡ್ ನೀಡುವ ಸಂಪನ್ಮೂಲಗಳು ಮತ್ತು ಅವಕಾಶಗಳ ಕುರಿತು ಮಾತನಾಡಿದರು. ಅಂತಿಮ ಬಿಸಿಎ, ಬಿಎಸ್ಸಿ, ಬಿಎಂ, ಬಿ.ಕಾಂನ ಸುಮಾರು 120 ವಿದ್ಯಾರ್ಥಿಗಳು ಹಾಜರಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಸಂಯೋಜಕಿ ಎಚ್.ಎಲ್. ಸೌಮ್ಯಾ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 12.1.2023

ಮಹಾಜನ ಕಾಲೇಜಿನಲ್ಲಿ ಎಲ್.ರವಿಗೆ ಶ್ರದ್ಧಾಂಜಲಿ



• **ಕನ್ನಡಪ್ರಭ ವಾರ್ತೆ** ಮೈಸೂರು

ಹೃದಯಘಾತದಿಂದ ಭಾನುವಾರ ನಿಧನರಾದಎಸ್‌ಬಿಆರ್‌ಆರ್‌ಮಹಾಜನಪ್ರಥಮದರ್ಜೆ ಕಾಲೇಜಿನ ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದ ಎಲ್. ರವಿ ಅವರಿಗೆ ವಿದ್ಯಾಸಂಸ್ಥೆಯಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಗೌರವ ಕಾರ್ಯದರ್ಶಿ ಡಾ. ವಿಜಯ ಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಕಾಲೇಜಿನ ಶೈಕ್ಷಣಿಕ ಸಲಹೆಗಾರರು ಮತ್ತು ಇಒ ಡಾ. ಎಸ್. ಆರ್. ರಮೇಶ್, ಶೈಕ್ಷಣಿಕ ಡೀನ್ ಆದ ಡಾ. ಎಚ್. ಶ್ರೀಧರ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಡಾ. ವಿನೋ ದಮ್ಮ, ಎಂ.ಎನ್. ವೆಂಕಟಲಕ್ಷ್ಮೀ, ಕಾಲೇಜಿನ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಟಿ.ಕೆ. ಬಡಾವಣೆಯ ನಿವಾಸಿಯಾಗಿದ್ದ ರವಿ (59) ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಜೆಎಸ್‌ಎಸ್ ಕಾಲೇಜು ನಂತರ ಮಹಾಜನ ಕಾಲೇಜಿನ ಪತ್ರಿಕೋದ್ಯಮ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಭಾನುವಾರ, 29 ಜನವರಿ 2023



ಮಹಾಜನ ಪ್ರಥಮ ದರ್ಜೆ ಕಾಲೇಜು... ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣರಾಜ್ಯೋತ್ಸವ ದಿನವನ್ನು ಆಚರಿಸಲಾಯಿತು. ಬಿಡಿಎ ಕಾರ್ಯದರ್ಶಿ ಸಿ.ಎಲ್.ಆನಂದ ಅವರು ಧ್ವಜಾರೋಹಣ ನೆರವೇರಿಸಿದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಅಂಗ ಸಂಸ್ಥೆಗಳ ಮುಖ್ಯಸ್ಥರು, ಕಾಲೇಜಿನ ಎಲ್ಲ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು, ಸಂಸ್ಥೆಯ ಎಲ್ಲ ವಿದ್ಯಾರ್ಥಿಗಳೂ ಹಾಜರಿದ್ದರು. ಇದೇ ವೇಳೆ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಕೀರ್ತಿ ವಿನಯ್ ಸಾಗರ್, ಜೆ.ಪಿ.ಭವಾನಿ ಇವರನ್ನು ಗೌರವಿಸಲಾಯಿತು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 28.1.2023

ಮಹಾಜನ ಕಾಲೇಜಿನಲ್ಲಿ ಗಣರಾಜ್ಯೋತ್ಸವ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಜಯಲಕ್ಷ್ಮೀಪುರಂನ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 74ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಬಿಡಿಎ ಕಾರ್ಯದರ್ಶಿ ಸಿ.ಎಲ್. ಆನಂದಮುಖ್ಯ ಅತಿಥಿಯಾಗಿಮಾತನಾಡಿ, ದೇಶದ ಗಡಿಯಲ್ಲಿ ಸೈನಿಕರ ಪಾತ್ರ ಹಾಗೂ ವಿದ್ಯಾರ್ಥಿಗಳು ಯಾರನ್ನು ಮತ್ತು ಹೇಗೆ ಗೌರವಿಸಬೇಕು ಎಂದು ತಿಳಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಸ್ವಾತಂತ್ರ್ಯಕ್ಕಾಗಿ ದೇಶದ ಜನ ಅಪಾರ ಸಂಖ್ಯೆಯಲ್ಲಿ ಪ್ರಾಣತ್ಯಾಗ ಮಾಡಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ರಚಿತ ಸಂವಿಧಾನ ನಮ್ಮ ದೇಶದ ಹೆಮ್ಮೆ ಎಂದರು.

ಈ ವೇಳೆ ವಿದೇಶಿ ವಿದ್ಯಾರ್ಥಿಯಾದ ಅಲಿಸೀನ ರೈಸಿ ಭಾರತದ ಸಂವಿಧಾನದ ಬಗ್ಗೆ ಉತ್ತಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೈದ ಎಲ್.ಸಿ. ಕೀರ್ತಿ, ವಿನಯ್ ಸಾಗರ್, ಜೆ.ಪಿ. ಭವಾನಿ ಅವರನ್ನು ಗೌರವಿಸಲಾಯಿತು.

ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್ ಹಾಗೂ ಅಂಗ ಸಂಸ್ಥೆಗಳ ಮುಖ್ಯಸ್ಥರು, ಕಾಲೇಜಿನ ಎಲ್ಲಾ ವಿಭಾಗಗಳ ಮುಖಸ್ಥರು, ಅಧ್ಯಾಪಕರು, ಅಧ್ಯಾಪಕೇತರರು, ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶನಿವಾರ 28.1.2023

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ



ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ರಾಷ್ಟ್ರೀಯ ಯುವ ದಿನದ ಅಂಗವಾಗಿ ಸ್ವಾಮಿ ವಿವೇಕಾನಂದರ ಜನ್ಮ ದಿನೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀರಾಮಕೃಷ್ಣ ಆಶ್ರಮದ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸ್ವಾಮಿ ಮಹಾಮೇಧಾನಂದ ಅವರು ಸ್ವಾಮಿ ವಿವೇಕನಂದರ ಕುರಿತು ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು ಇದ್ದರು. ಎಸ್.ವೈ. ಸಹನಾ ನಿರೂಪಿಸಿದರು.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶನಿವಾರ 4.2.2023



ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಕನ್ನಡ ವಿಭಾಗ 2022- 23ನೇ ಶೈಕ್ಷಣಿಕ ಸಾಲಿನ ವಿಶೇಷ ಉಪನ್ಯಾಸ ಮಾಲಿಕೆ-1 ಅನ್ನು ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಉದ್ಘಾಟಿಸಿದರು. ವಿವಿ ಸಂಜೆ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಎನ್. ಯಶೋದಾ, ಲೇಖಕ ಡಾ.ಎಚ್.ಆರ್. ತಿಮ್ಮೇಗೌಡ, ಡಾ.ಎನ್. ಪ್ರಕಾಶ್, ಡಾ.ಕೆ. ಸೌಭಾಗ್ಯವತಿ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 4.2.2023

ಕುವೆಂಪು ಅನಿಕೇತನ ಪ್ರಜ್ಞೆಯೇ ನಮ್ಮೆಲ್ಲರ ಆದರ್ಶವಾಗಲಿ

ಮೈಸೂರು ವಿಶ್ವವಿದ್ಯಾನಿಲಯ ಪದವಿ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಎಚ್.ಆರ್.ತಿಮ್ಮೇಗೌಡ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಮೈಸೂರು

ರಾಷ್ಟ್ರಕವಿ ಕುವೆಂಪು ಅವರ ಅನಿಕೇತನ ಪ್ರಜ್ಞೆಯೇ ನಮ್ಮೆಲ್ಲರ ಆದರ್ಶ, ಅನುಕರಣೆ ಆಗಬೇಕು. ಆಗ ವಿಶಕ್ತಿಯೊಂದು ಹೊಸತನ ಪ್ರಾಪ್ತಿಯಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಪದವಿ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಎಚ್.ಆರ್.ತಿಮ್ಮೇಗೌಡ ತಿಳಿಸಿದರು.

ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು ಕನ್ನಡ ಸ್ನಾತಕೋತ್ತರ ವಿಭಾಗ ವಿಪರ್ಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕುವೆಂಪು ಅವರ ಸಾಹಿತ್ಯದಲ್ಲಿ ವಿಶ್ವಮಾನವ ಪರಿಕಲ್ಪನೆ ಕುರಿತು ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ವಿಶ್ವ ಪ್ರೇಮ, ವಿಶ್ವಭ್ರಾತೃತ್ವ ಬಹುಮುಖ್ಯವೂ ಅನಿವಾರ್ಯವೂ ಆಗಿದೆ ಎಂದರು.

ವಿಶ್ವಮಾನವ ಪ್ರಜ್ಞೆ ವಿಜೃಂಭಿಸ ಬೇಕಾದರೆ ನಿಸ್ವಾರ್ಥ, ತ್ಯಾಗ, ಹೃದಯ ವೈಶಾಲ್ಯ, ಸೇವೆ, ಕರುಣೆ ಅನಿಕೇತನ ಭಾವ ನಮ್ಮಲ್ಲಿ ಬೆಳೆಯಬೇಕಾಗುತ್ತದೆ ಎಂಬುದನ್ನು ಪ್ರತಿಪಾದಿಸಿದ ಕುವೆಂಪು



ಪ್ರೊ.ಎಚ್.ಆರ್. ತಿಮ್ಮೇಗೌಡ, ಡಾ.ಬಿ.ಆರ್. ಜಯಕುಮಾರಿ ದಂಪತಿಯನ್ನು ಮೈವಿವಿ ಸಂಜೆ ಕಾಲೇಜಿನಿಂದ ಸನ್ಮಾನಿಸಲಾಯಿತು. ಪ್ರಾಂಶುಪಾಲೆ ಪ್ರೊ.ಬಿ.ಎನ್. ಯಶೋದಾ, ಪ್ರೊ.ಕೆ. ಸೌಭಾಗ್ಯವತಿ, ಪ್ರೊ.ಸಿ.ಡಿ. ಪರಶುರಾಮ, ಡಾ.ಎನ್. ಪ್ರಕಾಶ್ ಇದ್ದರು.

ಅವರು, ತಮ್ಮ ಸಾಹಿತ್ಯದಲ್ಲಿ ಪ್ರೀತಿ, ಸ್ನೇಹ, ವಿಶ್ವಾಸವನ್ನು ಮಾನವ ಹೃದಯಗಳಲ್ಲಿ ಬಿತ್ತುವಂಥ ಕೃಷಿಯನ್ನೇ ಮಾಡಿದ್ದಾರೆ. ಅನಿಷ್ಟ ಪರಂಪರೆ ಅಳಿದು ಭಾವೈಕ್ಯ ಮೂಡಿಸುವಂಥ ಸಮೃದ್ಧವಾದ ಸಾಹಿತ್ಯವನ್ನು ನಾಡು-ನುಡಿಗೆ ನೀಡಿರುವ ಕುವೆಂಪು ವಿಶ್ವಮಾನವ ಪ್ರಜ್ಞೆ ಎಲ್ಲೆಡೆ ಹಬ್ಬಲು ತಮ್ಮದೇ ರೀತಿಯಲ್ಲಿ ಅವರು ಮಾನವತೆಯ ದೀಕ್ಷೆಗೆ ಒತ್ತು ನೀಡಿದ್ದಾರೆ ಎಂದು ವಿವರಿಸಿದರು.

ಈ ಕಾರ್ಯಕ್ರಮವನ್ನು ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಉದ್ಘಾಟಿಸಿ ಮಾತನಾಡಿದರು. ಇದೇ ವೇಳೆ ಕುವೆಂಪು ಕುರಿತ ಪ್ರಬಂಧಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಹಾಗೂ ಪ್ರಶಂಸನಾ ಪತ್ರ ವಿತರಿಸಲಾಯಿತು. ನಂತರ ಡಾ. ಎಚ್.ಆರ್. ತಿಮ್ಮೇಗೌಡ ಮತ್ತು ಡಾ.ಬಿ.ಆರ್. ಜಯಕುಮಾರಿ ಅವರನ್ನು ಸನ್ಮಾನಿಸಲಾಯಿತು.

ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಬಿ.ಎನ್.ಯಶೋದಾ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಕೆ. ಸೌಭಾಗ್ಯವತಿ, ಅಧ್ಯಾಪಕರ ಬಳಗದ ಕಾರ್ಯದರ್ಶಿ ಡಾ.ಎನ್. ಪ್ರಕಾಶ್, ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕ ಪ್ರೊ.ಸಿ.ಡಿ. ಪರಶುರಾಮ, ವಿಶ್ವಮಾನವ ವೇದಿಕೆ ಅಧ್ಯಕ್ಷ ಆರ್. ವಾಸುದೇವ, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ. ನಿಂಗರಾಜು, ಸಹಾಯಕ ಪ್ರಾಧ್ಯಾಪಕರಾದ ಡಾ. ರಾಚಯ್ಯ, ಡಾ.ಎಂ. ರಮೇಶ್, ಡಾ. ಆರ್. ನಾಗೇಶ್, ಡಾ.ಎಚ್.ಬಿ. ಪುಷ್ಪ, ವಿದ್ಯಾರ್ಥಿ ಪ್ರತಿನಿಧಿ ಕೋಮಲ ಇದ್ದರು. ವಿದ್ಯಾರ್ಥಿನಿ ರಕ್ಷಿ ನಿರೂಪಿಸಿದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ
ಬುಧವಾರ, 8 ಫೆಬ್ರವರಿ 2023

ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಉಪನ್ಯಾಸ
ಕಾರ್ಯಕ್ರಮದಲ್ಲಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಅಭಿಮತ

'ಗಾಂಧಿ ತತ್ವಕ್ಕೆ ಶರಣು; ಅಹಿಂಸಾವಾದಿಗಳ ಸಂಖ್ಯೆ ಹೆಚ್ಚಳ'



ಮೈಸೂರಿನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಪ್ರಯುಕ್ತ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಗಾಂಧೀಜಿ ಆಲೋಚನೆಗಳು ಕುರಿತು ನಾಡೋಜ ಡಾ.ವೂಡೇ ಪಿ.ಕೃಷ್ಣ, ಮಾತನಾಡಿದರು. ಜಿ.ಬಿ.ಶಿವರಾಜು, ಡಾ.ಎಂ.ಬಿ.ಸುರೇಶ್, ಸಂಯೋಜಕ ಡಾ.ಬಿ.ಚಂದ್ರಶೇಖರ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು: ಭಾರತ ಸೇರಿದಂತೆ ಜಗತ್ತಿನಲ್ಲಿ ಗಾಂಧಿ ವಿಚಾರಧಾರೆ, ತತ್ವಗಳಿಗೆ ಶರಣಾಗುತ್ತಿರುವ ಪರಿಣಾಮ ಅಹಿಂಸಾವಾದಿಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಗಾಂಧಿ ಎಂಬುದು ಹೆಸರಲ್ಲ. ಅದೊಂದು ಸಮಾಜಕ್ಕೆ ಅಹಿಂಸಾವಾದದ ಮಾರ್ಗ ತೋರುವ ಶಕ್ತಿ ಎಂದು ನಾಡೋಜ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ನಗರದ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಭಾವೈಕ್ಯತಾ ಶಿಬಿರದ ಪ್ರಯುಕ್ತ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಗಾಂಧೀಜಿ ಆಲೋಚನೆಗಳ' ಕುರಿತು ಅವರು ಮಾತನಾಡಿದರು.

ಗಾಂಧೀಜಿ ಅವರ ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ದೊರೆಯಿತು. ತ್ಯಾಗ, ಅಹಿಂಸೆ ಮತ್ತು ಮಾನವತಾವಾದಿಯ ಬಗ್ಗೆ ಗಾಂಧೀಜಿ ಬೆಳಕು ಚೆಲ್ಲಿದರು. ಗಾಂಧೀಜಿ ಇಂದು ಭಾರತಕ್ಕೆ ಸೀಮಿತವಾಗದೆ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಮುಖ್ಯವಾಗಿದ್ದಾರೆ. ಅವರ ತತ್ವಗಳನ್ನು ಪ್ರೀತಿಸುವವರು, ವಿಚಾರಧಾರೆಗಳನ್ನು ಅರಿಯುತ್ತಿರುವವರ ಪ್ರಮಾಣ ಜಾಸ್ತಿಯಾಗುತ್ತಿರುವ ಕಾರಣ ಅಹಿಂಸಾವಾದಿಗಳು ಹೆಚ್ಚಾಗುತ್ತಿದ್ದಾರೆ ಎಂದು ಹೇಳಿದರು.

ಗಾಂಧೀಜಿ ಅವರನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಯುವ ಜನಾಂಗದಲ್ಲಿ ನಾಯಕತ್ವವನ್ನು ಯಾವ ರೀತಿ ರೂಪಿಸಬೇಕು ಎಂಬುದನ್ನು ಗಾಂಧೀಜಿ ಅವರ ಮೂಲಕ ತಿಳಿಯಬಹುದಾಗಿದೆ. ಜಾತಿ, ಧರ್ಮ, ಭಾಷೆ, ವರ್ಣ ಸೇರಿದಂತೆ ಯಾವುದೇ ತಾರತಮ್ಯ ಇಲ್ಲದೆ ಎಲ್ಲರೂ ಭಾವೈಕ್ಯತೆಯಿಂದ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಹಾಗಾಗಿಯೇ, ಇಂದು ಗಾಂಧಿ ಅವರ ಬಗ್ಗೆ ಹಿಂದೆಂದಿಗಿಂತಲೂ ಹೆಚ್ಚು ಚರ್ಚೆಗಳಾಗುತ್ತಿವೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಜಿ.ಬಿ.ಶಿವರಾಜು, ಮೈಸೂರು ವಿವಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ಸಂಯೋಜಕ ಡಾ.ಬಿ.ಚಂದ್ರಶೇಖರ್ ಇನ್ನಿತರರು ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 1.2.2023

ಮಹಾಜನ ಕಾಲೇಜಿನಲ್ಲಿ ಸರ್ವೋದಯ ದಿನಾಚರಣೆ



ಮೈಸೂರು: ನಗರದ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಸರ್ವೋದಯ ದಿನವನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ನೆನೆಯುತ್ತಾ, ಹುತಾತ್ಮರಾದವರಿಗೆ ಮೌನ ಆಚರಣೆಯ ಮೂಲಕ ಗೌರವ ಸಲ್ಲಿಸಲಾಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್.ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಎನ್ನೆಸ್ಸೆಸ್ ಯೋಜನಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು ಇದ್ದರು.

MFGE In the Eyes of the Press.....

ಪ್ರಜಾವಾಣಿ
ಆತ್ಮಬಲ ನಿಷ್ಪಾಪಕ್ಷ ಕನ್ನಡ ದಿನಪತ್ರಿಕೆ
ಶುಕ್ರವಾರ • ಫೆಬ್ರುವರಿ 3, 2023



ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಸರ್ವೋದಯ ದಿನವನ್ನು ಆಚರಿಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಎನ್‌ಎಸ್‌ಎಸ್ ಅಧಿಕಾರಿಗಳಾದ ಡಾ.ಜೆ.ದೊಡ್ಡರಸಯ್ಯ, ಸಿ.ಎಸ್.ಸಿದ್ದರಾಜು ಇದ್ದಾರೆ

ಉದಯವಾಣಿ
ದಿನ ಪತ್ರಿಕೆ

ಶುಕ್ರವಾರ, 17 ಫೆಬ್ರುವರಿ 2023



ಸಂವಾದ... ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ಷ್ ಆರೋಗ್ಯ ಕೇಂದ್ರ, ಮಹಿಳಾ ಸಬಲೀಕರಣ ವೇದಿಕೆ ಹಾಗೂ ರೋಟರಿ ವೆಸ್ಟ್-318ರ ವತಿಯಿಂದ ಆಯೋಜಿಸಲಾಗಿದ್ದ 'ಅನಿಮೀಯಾ ಮುಕ್ತ ಭಾರತ' ಕುರಿತ ಕಾರ್ಯಾಗಾರ ಹಾಗೂ 'ಶೋಷಣೆಯ ವಿರುದ್ಧ ಮಹಿಳೆ' ಕುರಿತು ಸಂವಾದ ಕಾರ್ಯಕ್ರಮವನ್ನು ಡಾ.ಎ.ಸೋನಿಯಾ ಮಾದಪ್ಪ ಉದ್ಘಾಟಿಸಿದರು. ರೋಟರಿ ಸಂಸ್ಥೆ ಅಧ್ಯಕ್ಷೆ ಎಸ್.ರಶ್ಮಿ ಗೌಡ, ಮಹಾಜನ ಕಾಲೇಜಿನ ಗೌರವ ಕಾರ್ಯದರ್ಶಿ, ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶ್ರುತಿ ಪೂಣಚ್ಚ, ವಿದ್ಯಾರ್ಥಿಗಳಾದ ಮೇಖಲಾ ಶರ್ಮ, ಶಾರದಾ, ಸೃಷ್ಟಿ, ಅರ್ಚನಾ ಹೆಗ್ಡೆ ಚಿತ್ರದಲ್ಲಿದ್ದಾರೆ.

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಶುಕ್ರವಾರ 17.2.2023



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸ್ಪರ್ಶ ಮತ್ತು ಮಹಿಳಾ ಸಬಲೀಕರಣ ಘಟಕವು ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಮತ್ತು ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್‌ನ ಸಹಯೋಗದಲ್ಲಿ ಅನೆಮಿಯಾ ಫ್ರೀ ಇಂಡಿಯಾ ಕಾರ್ಯಕ್ರಮ ಆಯೋಜಿಸಿತ್ತು. ಈ ವೇಳೆ ಡಾ.ಎಂ. ಸೋನಿಯಾ ಮಾದಪ್ಪ, ಎಸ್. ರುಶ್ಮಿ ಗೌಡ, ಡಾ.ಟಿ. ವಿಜಯಲಕ್ಷ್ಮೀ, ಡಾ.ಬಿ.ಆರ್. ಜಯಕುಮಾರಿ, ಡಾ.ಎಸ್. ಪೂರ್ಣಿಮಾ, ಎಂ.ಸಿ. ಶಾರದಾ, ಸೃಷ್ಟಿ ಆರ್. ಜೋಯಿಸ್ ಮೊದಲಾದವರು ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಸೋಮವಾರ 27.2.2023

ಮಹಾಜನ ಕಾಲೇಜಿನಲ್ಲಿ ರಕ್ತಹೀನತೆ ಮುಕ್ತ ಭಾರತ ಕುರಿತು ಕಾರ್ಯಾಗಾರಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ವೆಲ್‌ನೆಸ್ ಸೆಂಟರ್, ಮಹಿಳಾ ಸಬಲೀಕರಣ ವೇದಿಕೆ ಮತ್ತು ಸ್ವರ್ಶ, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಹಾಗೂ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್-ಜಿಲ್ಲೆ 318ರ ಸಹಯೋಗದೊಂದಿಗೆ 'ರಕ್ತಹೀನತೆ ಮುಕ್ತ ಭಾರತ' ಕುರಿತು ಕಾರ್ಯಾಗಾರ ಮಹಿಳೆಯರ ಸಂವಾದ ನಡೆಯಿತು.



ಧೀರಾ, ವೈಲೆನ್ಸ್, ಎಗೈನ್ಸ್ಟ್ ವುಮೆನ್ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಪನ್ಮೂಲ ವ್ಯಕ್ತಿ ಆರ್‌ಟಿಎನ್ ಸಮಿತಿ ಅಧ್ಯಕ್ಷೆ ಡಾ. ಎ. ಸೋನಿಯಾ ಮಂದಪ್ಪ ಮಾತನಾಡಿ, ದೇಶವನ್ನು ರಕ್ತ ಹೀನತೆ ಮುಕ್ತ ಭಾರತವನ್ನಾಗಿ ಮಾಡಲು ಸರ್ಕಾರವು ಒದಗಿಸುತ್ತಿರುವ ಸೇವೆಗಳ ಬಗ್ಗೆ ವಿವರಿಸಿದರು. ಇದು ವೈದ್ಯರ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಡಿಸ್ಟ್ರಿಕ್ಟ್ 318ರ ಅಧ್ಯಕ್ಷೆ ಎಸ್. ರಶ್ಮಿಗೌಡ ಮಾತನಾಡಿ, ರಕ್ತಹೀನತೆ ಮುಕ್ತ ಭಾರತದ ಮಹತ್ವವನ್ನು ಕುರಿತು ಮಾಹಿತಿ ನೀಡಿದರು. ಎಂಕ್ಯೂರ್ ಫಾರ್ಮಾಸ್ಯುಟಿಕಲ್ಸ್ ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕ ಸದಸ್ಯರಲ್ಲಿ ಎಚ್‌ಬಿ ಕೌಂಟ್ ಅನ್ನು ಪತ್ತೆಹಚ್ಚಲು ತಮ್ಮ ಸೇವೆಗಳನ್ನು ಒದಗಿಸಿದರು.

ಮಹಾಜನ ಎಜುಕೇಶನ್ ಸೊಸೈಟಿಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ:ಬಿ.ಆರ್. ಜಯಕುಮಾರಿ, ಸಂಚಾಲಕ ಡಾ. ಎಸ್. ಪೂರ್ಣಿಮಾ, ಸ್ವರ್ಶ ಸಂಚಾಲಕಿ ಶ್ರುತಿ ಪೂಣಚ್ಚ ಹಾಗೂ ಎಲ್ಲ ವಿಭಾಗಗಳ ಸುಮಾರು 150 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿದ್ಯಾರ್ಥಿನಿ ಮೇಖಲಾ ಶರ್ಮಾ ಸ್ವಾಗತಿಸಿದರು. ಎಂ.ಸಿ. ಶಾರದಾ ನಿರೂಪಿಸಿದರು, ಸೃಷ್ಟಿ ಆರ್. ಜೋಯಿಸ್, ಆರಾಚನ್ ಪಿ ಹೆಗ್ಡೆ ಸ್ವಾಗತಿಸಿದರು.

MFGE In the Eyes of the Press.....

ಆರಾಧನಾ
ದಿನ ಪತ್ರಿಕೆ

ಬುಧವಾರ, 1 ಮಾರ್ಚ್ 2023



ವಿಜ್ಞಾನ ದಿನ ಆಚರಣೆ.... ಮೈಸೂರಿನ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ದೇಶದ ಖ್ಯಾತ ಭೌತಶಾಸ್ತ್ರ ವಿಜ್ಞಾನಿ ಡಾ.ಸಿ.ವಿ.ರಾಮನ್ ಅವರ ರಾಮನ್ ಎಫೆಕ್ಟ್ ಸಂಶೋಧನೆಗೆ ನೊಬೆಲ್ ಪ್ರಶಸ್ತಿ ದೊರೆತ ದಿನದ ನೆನಪಿನಲ್ಲಿ 'ವಿಜ್ಞಾನ ದಿನ'ವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಮಂಜುನಾಥ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ವಿಜ್ಞಾನ ವಿಭಾಗದ ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 17.4.2023

ಮಹಾಜನ ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್ ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿಯನ್ನು ಶುಕ್ರವಾರ ಆಚರಿಸಲಾಯಿತು.

ಈ ವೇಳೆ ಕಾಲೇಜಿನ ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಮಾತನಾಡಿ, ಡಾ. ಅಂಬೇಡ್ಕರ್ ಅವರ ಬಾಲ್ಯದ ದಿನಗಳು ಅತ್ಯಂತ ಕಷ್ಟದಾಯಕ ಹಾಗೂ ಕಠಿಣ ದಿನಗಳಾಗಿದ್ದು, ಅವರ ಬದುಕಿನ ಹಾದಿ ಕಲ್ಲು, ಮುಳ್ಳುಗಳ ಹಾದಿಯಾಗಿದ್ದು, ಹೂವಿನ ದಾರಿಯಾಗಿರಲಿಲ್ಲ. ಬಾಲ್ಯದ ದಿನಗಳಿಂದಲೂ ಸಾಮಾಜಿಕ ಶೋಷಣೆ, ಸಂಕಷ್ಟ, ಹಲವು ಅಡಚಣೆಗಳನ್ನು ಎದುರಿಸಿ ಕಠಿಣ ಸವಾಲುಗಳನ್ನು ತಮ್ಮ ಜೀವನದ ಯಶಸ್ಸಿನ ಮೆಟ್ಟಿಲುಗಳನ್ನಾಗಿ ಮಾಡಿಕೊಂಡರು ಎಂದರು.



ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ನಮ್ಮ ಸಂವಿಧಾನವು ಮೂಲಭೂತ ಹಕ್ಕು ಹಾಗೂ ಕರ್ತವ್ಯಗಳನ್ನು ಪ್ರಜೆಗಳಿಗೆ ಕೊಟ್ಟಿದೆ. ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವ ಜವಾಬ್ದಾರಿ ನಮ್ಮ ಮೇಲಿದೆ. ಪ್ರತಿಯೊಬ್ಬರಿಗೂ ಸಮಾನತೆ ಹಾಗೂ ಸ್ವಾತಂತ್ರ್ಯದ ಹಕ್ಕನ್ನು ನೀಡಿದೆ. ಇದು ಸಂವಿಧಾನದ ಪರಿಕಲ್ಪನೆಯಲ್ಲಿ ನಮ್ಮ ದೇಶ ಹೊರತುಪಡಿಸಿ ಬೇರೆ ಎಲ್ಲೂ ಕಾಣಲೂ ಸಾಧ್ಯವಿಲ್ಲ ಎಂದು ಹೇಳಿದರು.

ಕಾಲೇಜಿನ ಡಾ.ಎಚ್.ಆರ್. ತಿಮ್ಮೇಗೌಡ, ಪ್ರೊ. ಎಸ್. ಮಂಜುನಾಥ, ಅಧ್ಯಾಪಕರು ಹಾಗೂ ಅಧ್ಯಾಪಕೇತರ ಸಿಬ್ಬಂದಿ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 18.4.2023

ಮಹಾಜನ ವಿದ್ಯಾ ಸಂಸ್ಥೆ, ಅರಿವು ಪ್ರೊ ಜತೆ ಒಡಂಬಡಿಕೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ವಿದ್ಯಾ ಸಂಸ್ಥೆಯು ಮೈಸೂರಿನಲ್ಲಿ ಸಿಎ ಕೋಚಿಂಗ್ ಅನ್ನು ಅಭಿವೃದ್ಧಿಪಡಿಸಲು ಅರಿವು ಪ್ರೊ ಅಕಾಡೆಮಿಯೊಂದಿಗೆ ಒಡಂಬಡಿಕೆಗೆ ಸಹಿ ಮಾಡಿದೆ.

ಇತ್ತೀಚೆಗೆ ಮಹಾಜನ ವಿದ್ಯಾಸಂಸ್ಥೆಯು ಅರಿವು ಪ್ರೊ ಅಕಾಡೆಮಿಯೊಂದಿಗೆ ಆರ್‌ವಿಪಿಬಿ ಪ್ರಿ ಯೂನಿವರ್ಸಿಟಿ ಕಾಲೇಜು ಮತ್ತು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಸಿಎ ತರಬೇತಿಯನ್ನು ಅಭಿವೃದ್ಧಿಪಡಿಸಲು ಒಡಂಬಡಿಕೆಗೆ ಸಹಿ ಹಾಕಿದೆ.

ಅರಿವು ಪ್ರೊ ಅಕಾಡೆಮಿಯು ಬೆಂಗಳೂರು ಮೂಲದ ಸಂಸ್ಥೆಯಾಗಿದ್ದು, ವಾಣಿಜ್ಯ ವಿಭಾಗದಲ್ಲಿ ವಿವಿಧ ವೃತ್ತಿಪರ ಪರೀಕ್ಷೆಗಳಿಗೆ ಬೋಧನಾ ಸೇವೆಗಳನ್ನು ನೀಡುತ್ತದೆ. ಸಿಎ, ಸಿಎಸ್, ಸಿಎಂಎ ಮತ್ತು ಎಸಿಸಿಎ ಅಂತಹ ವೃತ್ತಿಪರ ಪರೀಕ್ಷೆಗಳ ತಯಾರಿಗಾಗಿ ಪಠ್ಯಕ್ರಮವನ್ನು ಸಂಯೋಜಿಸುವುದರ ಜೊತೆಗೆ ಬಿ.ಕಾಂ ವೃತ್ತಿಪರ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ



ಅಕಾಡೆಮಿ ಪರಿಣತಿ ಹೊಂದಿದೆ.

ಈ ವೇಳೆ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಟಿ. ಮುರಳೀಧರ್ ಅವರು, ಅರಿವು ಪ್ರೊ ಅಕಾಡೆಮಿಯ ಸಿಇಒ ಅರ್ಜುನ್, ನಿರ್ದೇಶಕ ಪ್ರದೀಪ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದರು. ವಾಣಿಜ್ಯ ವಿಭಾಗದ ಮುಖ್ಯಸ್ಥ ಬಿ.ಆರ್. ನಿಖಿಲ್, ಅರಿವು ಪ್ರೊ ಅಕಾಡೆಮಿಯ ಮಾನಸ, ಅಶೋಕ್ ರಾವ್, ಮಲ್ಯ ಇದ್ದರು.

ಆಂಜೋಲಿನ
ದಿನ ಪತ್ರಿಕೆ

ಗುರುವಾರ, 27 ಏಪ್ರಿಲ್ 2023

ಸೂರ್ಯನನ್ನು ದಿಟ್ಟಿಸಿ ನೋಡಿ ದಾಖಲೆ ಬರೆದ ಬದರಿ ನಾರಾಯಣ!

50 ನಿಮಿಷಗಳ ಕಾಲ ಸೂರ್ಯನನ್ನು ವೀಕ್ಷಿಸಿ ಇಂಡಿಯಾ ಬುಕ್ಸ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆ

ಮೈಸೂರು: ಸತತ 50 ನಿಮಿಷಗಳ ಕಾಲ ಸೂರ್ಯನನ್ನು ದಿಟ್ಟಿಸಿ ನೋಡಿದ ಸಾಫ್ಟ್ ವೇರ್ ಇಂಜಿನಿಯರ್ ಒಬ್ಬರು ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಬರೆದಿದ್ದಾರೆ.

ನಗರದ ಸಾಫ್ಟ್‌ವೇರ್ ಇಂಜಿನಿಯರ್ ಕೆ.ಎಸ್.ಬದರಿ ನಾರಾಯಣ ಅವರು ಸತತ 50 ನಿಮಿಷಗಳ ಕಾಲ ಸೂರ್ಯನನ್ನು ವೀಕ್ಷಿಸಿ ಇಂಡಿಯಾ ಬುಕ್ಸ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲೆಗೆ ಸೇರ್ಪಡೆಗೊಂಡವರು.

ಯಾವುದೇ ವ್ಯಕ್ತಿ ಸಾಮಾನ್ಯವಾಗಿ 30 ಸೆಕೆಂಡ್‌ಗಳಿಗಿಂತಲೂ ಹೆಚ್ಚು ಸಮಯದವರೆಗೆ ಸೂರ್ಯನನ್ನು ನೋಡಲು ಸಾಧ್ಯವಿಲ್ಲ. ಹಾಗೇನಾದರೂ ನೋಡಿದರೆ ಕಣ್ಣಿಗೆ ಹಾನಿಯಾಗುವುದು ಖಚಿತ ಎಂದು ವೈದ್ಯಕೀಯ ಲೋಕ ಹೇಳುತ್ತದೆ. ಆದರೆ, ಅವರು ಇದನ್ನು ಮೀರಿ ಸಾಧನೆ ಮಾಡಿದ್ದಾರೆ.

ನಗರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಪತ್ರಿಕೋದ್ಯಮ ವಿಭಾಗದ ವತಿಯಿಂದ ನಡೆದ ಸೂರ್ಯನನ್ನು ಬರಿಗಣ್ಣಿನಿಂದ





ವೀಕ್ಷಿಸುವ ಪ್ರಕ್ರಿಯೆಯಲ್ಲಿ ಕೆ.ಎಸ್.ಬದರಿ ನಾರಾಯಣ ಅವರು ತಮ್ಮ 50ನೇ ಜನ್ಮದಿನದ ಅಂಗವಾಗಿ ಕಣ್ಣು ಮಿಟುಕಿಸದೆ ಮಧ್ಯಾಹ್ನ 12 ಗಂಟೆಯಿಂದ 50 ನಿಮಿಷ ಗಳ ಕಾಲ ಸೂರ್ಯನತ್ತ ದೃಷ್ಟಿ ಹಾಯಿಸು ವುದರ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ತಮ್ಮ ಹೆಸರನ್ನು ದಾಖಲಿಸಿ ದರು.

ಕೆ.ಎಸ್.ಬದರಿ ನಾರಾಯಣರವರು ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಮಲೇಷ್ಯಾ ಮತ್ತು ಓಮಾನ್‌ನಲ್ಲಿನ ಟೊಯೋಟಾ ಮೋಟಾರ್ಸ್, ಏರೋಸ್ಪೇಸ್‌ನಲ್ಲಿ ಕೆಲಸವನ್ನು ನಿರ್ವಹಿಸಿ, ಮಲೇಷ್ಯಾದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಜಾಗತಿಕ ನಾಯಕರಾಗಿ ಹಾಗೂ ಅಲ್ಲಿನ ಈವೆಂಟ್ ಮ್ಯಾನೇಜ್‌ಮೆಂಟ್ ಕಂಪೆನಿಯಲ್ಲಿ ಕೆಲಸ ಮಾಡಿದ್ದಾರೆ. ಯೋಗದಲ್ಲಿ ಅವರು ಜಾಗ ತಿಕವಾಗಿ ಹಲವಾರು ವಿಶ್ವ ದಾಖಲೆಗಳನ್ನು ಬರೆದಿದ್ದಾರೆ. ತಮಿಳುನಾಡಿನಲ್ಲಿ ಒಂದು ದಿನದಲ್ಲಿ 108 ಸ್ಥಳಗಳಲ್ಲಿ ಯೋಗ ಪ್ರದರ್ಶನ ಮಾಡುವ ಮೂಲಕ ಹಲವ ರಿಗೆ ಮಾದರಿಯಾಗಿದ್ದಾರೆ.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 28.4.2023



ಸೂರ್ಯನನ್ನು ಬರಿ ಕಣ್ಣಲ್ಲಿ ನೋಡಿ ದಾಖಲೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಪತ್ರಿಕೋದ್ಯಮ ವಿಭಾಗ ವತಿಯಿಂದ ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಸೂರ್ಯನನ್ನು ಬರಿ ಕಣ್ಣಿನಿಂದ ನೋಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿಶ್ವದಾಖಲೆ ಹೊಂದಿರುವ ಕೆ. ಎಸ್. ಬದರಿ ನಾರಾಯಣ ಅವರು ತಮ್ಮ 50ನೇ ಜನ್ಮದಿನದ ಅಂಗವಾಗಿ ಕಣ್ಣು ಮಿಟುಕಿಸದೆ ಸೂರ್ಯನನ್ನು ನೋಡುವ ವಿಶಿಷ್ಟ ದಾಖಲೆಯನ್ನು ಮಧ್ಯಾಹ್ನ 12 ಗಂಟೆಯಿಂದ 50 ನಿಮಿಷಗಳ ಕಾಲ ತಮ್ಮ ಕಣ್ಣುಗಳನ್ನು ಮಿಟುಕಿಸದೆ ಸೂರ್ಯನತ್ತ ದೃಷ್ಟಿ ಆಯಿಸುವ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಪ್ರಮಾಣೀಕರಿಸಲಾಯಿತು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಗುರುವಾರ 27 ಏಪ್ರಿಲ್ 2023

ಮಿಟುಕಿಸದೆ ಬರಿಗಣ್ಣಿನಿಂದ ಸೂರ್ಯನ ನೋಡುವುದರಲ್ಲಿ ಬದರಿನಾರಾಯಣ ವಿಶಿಷ್ಟ ದಾಖಲೆ

ಮೈಸೂರು, ಏ.26–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ ಹಾಗೂ ಪತ್ರಿಕೋದ್ಯಮ ವಿಭಾಗದ ವತಿಯಿಂದ ಮೈಸೂರು ಅರಮನೆ ಮುಂಭಾಗ, ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸೂರ್ಯನನ್ನು ಬರಿ ಕಣ್ಣಿನಿಂದ ನೋಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ವಿಶ್ವದಾಖಲೆ ಹೊಂದಿರುವ ಕೆ. ಎಸ್. ಬದರಿ ನಾರಾಯಣ ಅವರು ತಮ್ಮ 50ನೇ ಜನ್ಮದಿನದ ಅಂಗವಾಗಿ ಕಣ್ಣು ಮಿಟುಕಿಸದೆ ಸೂರ್ಯನನ್ನು ನೋಡುವ ವಿಶಿಷ್ಟ ದಾಖಲೆಯನ್ನು ಮಧ್ಯಾಹ್ನ 12 ಗಂಟೆಯಿಂದ 50 ನಿಮಿಷಗಳ ಕಾಲ ತಮ್ಮ ಕಣ್ಣುಗಳನ್ನು ಮಿಟುಕಿಸದೆ ಸೂರ್ಯನತ್ತ ದೃಷ್ಟಿ ಹಾಯಿಸುವುದರ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಪ್ರಮಾಣೀಕರಿಸಲಾಯಿತು.

ಕೆ.ಎಸ್.ಬದರಿ ನಾರಾಯಣ್‌ರವರು ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಮಲೇಷಿಯಾ ಮತ್ತು ಓಮನ್‌ನಲ್ಲಿನ ಟೊಯೋಟಾ ಮೋಟಾರ್ಸ್, ಏರೋಸ್ಪೇಸ್‌ನಲ್ಲಿ ಕೆಲಸವನ್ನು ನಿರ್ವಹಿಸಿ, ಮಲೇಷ್ಯಾದ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಜಾಗತಿಕ ನಾಯಕರಾಗಿ ಹಾಗೂ ಅಲ್ಲಿನ ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ. ಇವರು 15 ವರ್ಷಗಳ ಹಿಂದೆ ರಾಷ್ಟ್ರದ ಸೇವೆಗಾಗಿ ಮೈಸೂರಿಗೆ ಮರಳಿದರು. ಪ್ಲಾಸ್ಟಿಕ್ ಬಾಟಲ್‌ಗಳ ಜಾಗೃತಿ, ಪಾರ್ಥೇನಿಯಂ ಸಸ್ಯಗಳ ನಿರ್ಮೂಲನೆಯಲ್ಲಿ





ತೊಡಗಿಸಿಕೊಂಡಿದ್ದರು. ನಿರ್ಗತಿಕರಿಗೆ ಮತ್ತು ವಯಸ್ಸಾದವರಿಗೆ ಸಹಾಯ ಮಾಡುವುದು, ವಾಹನ ದಟ್ಟಣೆಯನ್ನು ನಿವಾರಿಸುವ ಮೂಲಕ ಪೊಲೀಸ್ ಸಿಬ್ಬಂದಿಗೆ ಸಹಾಯ ಮಾಡುತ್ತ, ಚಾಮುಂಡಿಬೆಟ್ಟದ ಮೆಟ್ಟಿಲುಗಳ ಬಳಿ ಪ್ಲಾಸ್ಟಿಕ್‌ಗಳ ಸಂಗ್ರಹಣೆ ಮಾಡುವುದರೊಂದಿಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವುದು, ಮೈಸೂರು ನಗರದಲ್ಲಿ ಇವರು ಸ್ವಚ್ಛ ವಿತರಣಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದಾರೆ.

ಯೋಗಶಿರ್ಷಾಸನ ಪ್ರದರ್ಶನ ಹಾಗೂ ಯೋಗದ ಒಳ್ಳೆಯತನವನ್ನೂ, ಹರಡಿ, ಅಹಾಯಕಾರಿ ಪ್ಲಾಸ್ಟಿಕ್ ಬಾಟಲ್‌ಗಳನ್ನು ಸಂಗ್ರಹಿಸಿ ಮರುಬಳಕೆಯಲ್ಲಿ ತೊಡಗಿಸಿಕೊಳ್ಳುವಂತೆ ಯುವಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಬಾಟಲಿಗಳ ಸಂಗ್ರಹದೊಂದಿಗೆ ಚಿಂದಿ ಆಯುವವರಿಗೆ ಸಹಾಯ ಮಾಡುವುದನ್ನೂ ಪ್ರವೃತ್ತಿಯಾಗಿಸಿಕೊಂಡಿದ್ದಾರೆ. ಯೋಗದಲ್ಲಿ ಅವರು ಜಾಗತಿಕವಾಗಿ ಹಲವಾರು ವಿಶ್ವದಾಖಲೆಗಳನ್ನು ಹೊಂದಿದ್ದಾರೆ. ರಾಮೇಶ್ವರಂ, ತಮಿಳುನಾಡಿನಲ್ಲಿ ಒಂದು ದಿನದಲ್ಲಿ 108 ಸ್ಥಳಗಳಲ್ಲಿ ಯೋಗಪ್ರದರ್ಶನ ಮಾಡುವ ಮೂಲಕ ಹಲವಾರು ಜನರಿಗೆ ಮಾದರಿಯಾಗಿದ್ದಾರೆ. ಸೂರ್ಯನು ಎಲ್ಲಾ ಜೀವಿಗಳ ಶಕ್ತಿಯ ಮೂಲವಾಗಿದ್ದು, ಭೂಮಿಯು ಸೂರ್ಯನ ಮೇಲೆ ಅವಲಂಬಿತವಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಸೂರ್ಯನ ಶಕ್ತಿಯ ಕೊಡುಗೆಗಳು, ಶಕ್ತಿಯ ಸಮೃದ್ಧ ಮೂಲ ಮತ್ತು ಸರಿಯಾದ ರೀತಿಯಲ್ಲಿ ಬಳಸಿದಾಗ, ಇದು ಸಾಕಷ್ಟು ಪ್ರಯೋಜನಗಳನ್ನು ನೀಡಲು ಬದ್ಧವಾಗಿದೆ. ಸಾಮಾನ್ಯವಾಗಿ ಸೂರ್ಯನನ್ನು ಕಣ್ಣುಗಳ ಮೂಲಕ ನೇರವಾಗಿ ನೋಡಿದಾಗ ಪೀನಲ್ ಗ್ರಂಥಿಯು ಸಕ್ರಿಯಗೊಳ್ಳುತ್ತದೆ. ಇದನ್ನು ಮೂರನೇ ಕಣ್ಣು ಎಂದೂ ಕರೆಯುತ್ತಾರೆ. ಸೂರ್ಯಕ್ರಿಯೆ ನಮ್ಮ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಬಹಳಷ್ಟು ಉಪಯೋಗವಾಗುವುದು. ಸೂರ್ಯಕ್ರಿಯೆ ಮೆಲಟೋನಿನ್ ಹಾಗೂ ಸೆರಾಟೋನಿನ್ ದ್ರವಗಳ ಉತ್ಪಾದನೆಗೆ ಸಹಾಯವಾಗುವುದು. ಇದು ಮನಸ್ಸಿನ ಸ್ಥಿತಿಯನ್ನು ಉಲ್ಲಾಸಕರವಾಗಿಡಲು ಸಹಾಯವಾಗುವುದು. ದೇಹಕ್ಕೆ ಸೂರ್ಯನೊಬ್ಬನೇ ವಿಟಮಿನ್ ಡಿ ಪೂರೈಕೆ ಮಾಡುವ ಶಕ್ತಿವುಳ್ಳವನು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 28.5.2023

ಉತ್ತಮ ವಿಚಾರ ಮಹಾಜನ ಕಾಲೇಜಿನಲ್ಲಿ ಸಮಾರಂಭ ಆಯೋಜನೆ

ಉಪನ್ಯಾಸ, ಸಂವಾದ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಮರೆತು ಹೋದ ಮೈಸೂರಿನ ಇತಿಹಾಸ ಹಾಗೂ ಪ್ರಾತಸ್ಮರಣೀಯರು ಎಂಬ ವಿಷಯ ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಇತಿಹಾಸ ತಜ್ಞ ಎ.ಎಸ್.ಧರ್ಮೇಂದ್ರಕುಮಾರ್ ಅವರು ತಮ್ಮ ಉಪನ್ಯಾಸದಲ್ಲಿ ಮೈಸೂರು ಮಹಾರಾಜರ ಕಾಲದಲ್ಲಾದ ಇಂಗ್ಲಿಷ್ ಶಿಕ್ಷಣ ಪ್ರಚಾರ, ವಯಸ್ಕರ ಶಾಲೆಗಳು, ಅಂಧ ಶಾಲೆಗಳು, ಪಾರಂಪರಿಕ ಕಟ್ಟಡಗಳು ಹಾಗೂ ಐತಿಹಾಸಿಕ ನೆಲೆಗಳ ಮಹತ್ವವನ್ನು ಹಾಗೂ ಸದಾಕಾಲ ಪ್ರಜಾಕಲ್ಯಾಣವನ್ನೇ ಬಯಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಲವಾರು ಜನೋಪಯೋಗಿ ಕಾರ್ಯಗಳನ್ನು ಮಾಡುವ ಮೂಲಕ ಆಧುನಿಕ ಮೈಸೂರಿನ ಶಿಲ್ಪಿ ಎಂದು ಪ್ರಶಂಸಿಸಿದರು. ಜೊತೆಗೆ ಅಂದಿನ ದಿವಾನರಾದ ಸರ್.ಎಂ. ವಿಶ್ವೇಶ್ವರಯ್ಯ, ದಿವಾನ್ ಪೂರ್ಣಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಆಲಿಆಸ್ಕರ್ ಮುಂತಾದ ಪ್ರಾತಸ್ಮರಣೀಯರು ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸಿದರು. ಅಂದಿನ ದಸರಾ ಹಬ್ಬದ ನೆನಪುಗಳು, ಕೆಲವು ಐರೋಪ್ಯ ವಿದ್ವಾಂಸರು



ಮೈಸೂರು ಸಂಸ್ಥಾನದ ಇತಿಹಾಸ ಸಂಸ್ಕೃತಿ, ಭಾಷೆಗೆ ನೀಡಿದ ಕೊಡುಗೆಗಳನ್ನು ಶ್ಲಾಘಿಸಿದರು.

ವಿದೇಶಗಳಲ್ಲಿ ಕನ್ನಡಿಗರಿಗೆ ಸಿಗುವ ಮಹತ್ವ ಹಾಗೂ ಗೌರವವನ್ನು ಸ್ಮರಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಾ, ಸನಾತನ ನೈಜ ಇತಿಹಾಸ, ಸಂಸ್ಕೃತಿ, ಪರಂಪರೆಯ ರಕ್ಷಣೆಯಲ್ಲಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಟ್ಟು, ಅವರ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ನೀಡಿದರು. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಭಾಷೆ ಹಾಗೂ ಕೌಶಲ್ಯಗಳ ಅನಿವಾರ್ಯತೆಯ ಬಗ್ಗೆ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಡಾ.ಬಿ.ಆರ್.ಜಯಕುಮಾರಿ ವಿದ್ಯಾರ್ಥಿಗಳಿಗೆ ಶುಭ ಸಂದೇಶ ನೀಡಿದರು. ಕಾಲೇಜಿನ ಸಿಇಒ ಡಾ. ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಶಮಿಕಾ ಶ್ರೀಹರಿ ಮತ್ತು ವಿಭಾಗಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 28.5.2023

ಪ್ರೊ.ಜಿ.ಎಚ್.ನಾಯಕ ನವ್ಯ ವಿಮರ್ಶೆಯ ಹರಿಕಾರ: ಡಾ. ಜಯಕುಮಾರಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರೊ.ಜಿ.ಎಚ್. ನಾಯಕ ಅವರು ನಿಷ್ಠೂರವಾದ, ಸ್ಪಷ್ಟವಾದ, ನೇರ ನಡೆನುಡಿಗಳನ್ನು ಬದುಕಿನುದ್ದಕ್ಕೂ ಬೆಳೆಸಿಕೊಂಡು ಬಂದವರು. ವಸ್ತುನಿಷ್ಠ ವಿಮರ್ಶೆ ಹಾಗೂ ಖಚಿತ ವಿನಯ ವಿಮರ್ಶೆಗೆ ಹೆಸರಾದ ಅವರು ನವ್ಯ ವಿಮರ್ಶೆಯ ಹರಿಕಾರರಾಗಿದ್ದರು ಎಂದು ಮಹಾಜನ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.



ನಗರದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ವಾರದ ಸಮಾವೇಶದಲ್ಲಿ ಖ್ಯಾತ ವಿಮರ್ಶಕರಾದ ಪ್ರೊ.ಜಿ.ಎಚ್. ನಾಯಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಪ್ರೊ.ಜಿ.ಎಚ್. ನಾಯಕ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ವಿಮರ್ಶ ಕ್ಷೇತ್ರಕ್ಕೆ ಗುರುತರವಾದ ಹೆಜ್ಜೆಯನ್ನು ಮೂಡಿಸಿ, ತಮ್ಮದೇ ಆದಂತಹ ಛಾಪನ್ನು ಮೂಡಿಸಿದ್ದಾರೆ ಎಂದರು.

ವಿಮರ್ಶಾ ಲೋಕಕ್ಕೆ ಪ್ರವೇಶ ಮಾಡುವವರು ಅವರ ಸಾಹಿತ್ಯ ವಿಮರ್ಶೆಯನ್ನು ಅಧ್ಯಯನ ಮಾಡದೇ ಮುಂದೆ ಹೋಗಲು ಸಾಧ್ಯವಿಲ್ಲ. ಜಿ.ಎಚ್. ನಾಯಕ ಅವರು ಸಮಕಾಲೀನ, ಅನಿವಾರ್ಯ, ನಿರಪೇಕ್ಷೆ, ನಿಜದನಿ, ವಿನಯ ವಿಮರ್ಶೆ ಎಂಬ ಮೊದಲಾದ ಸುಮಾರು 18 ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ನೀಡಿ, ವಿನಯ ವಿಮರ್ಶಕ ಎಂಬ ಹೆಸರಿಗೆ ಖ್ಯಾತರಾದವರು ಎಂದು ಅವರು ಸ್ಮರಿಸಿದರು.

ಇತಿಹಾಸತಜ್ಞ ಎ.ಎಸ್.ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ವಿನೋದಮ್ಮ, ಎಂ. ನಾಗೇಶ, ಸಿ.ಎಂ. ಕಿರಣ್‌ಕುಮಾರ್, ಎಂ. ಮನೋಜ್‌ಕುಮಾರ್ ಇತರರು ಇದ್ದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 28 ಮೇ 2023

ಪ್ರೊ.ಜಿಎಚ್‌ಎನ್‌ರಿಗೆ ನುಡಿನಮನ



ಮೈಸೂರು, ಮೇ 27– ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತತೆ) ಕನ್ನಡ ವಿಭಾಗದ ವತಿಯಿಂದ ಖ್ಯಾತ ವಿಮರ್ಶಕರಾದ ಪ್ರೊ. ಜಿ.ಎಚ್. ನಾಯಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಈ ವೇಳೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಸೂರಿನ ಇತಿಹಾಸ ತಜ್ಞ ಎ.ಎಸ್. ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಶ್ರೀಧರ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಎಂ.ನಾಗೇಶ, ಸಿ.ಎಂ.ಕಿರಣ್ ಕುಮಾರ್, ಮನೋಜ್‌ಕುಮಾರ್ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರ 28 ಮೇ 2023



ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದಿಂದ ಪ್ರೊ.ಜಿ.ಎಚ್.ನಾಯಕ ಅವರಿಗೆ ಶನಿವಾರ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಇತಿಹಾಸ ತಜ್ಞ ಎ.ಎಸ್. ಧರ್ಮೇಂದ್ರಕುಮಾರ್ ಆರೇನಹಳ್ಳಿ, ಡಾ. ಶ್ರೀಧರ ಎಚ್., ಡಾ.ವಿನೋದಮ್ಮ, ಎಂ.ನಾಗೇಶ, ಸಿ.ಎಂ. ಕಿರಣ್‌ಕುಮಾರ್, ಮನೋಜ್‌ಕುಮಾರ್ ಎಂ. ಇದ್ದರು

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಮಂಗಳವಾರ 9.5.2023

ಮರೆಯದೇ ಮತನೀಡಿ | ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಪ್ರತಿಜ್ಞಾವಿಧಿ ಬೋಧನೆ

ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಮತದಾನ ಜಾಗೃತಿ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ಸಿಬ್ಬಂದಿ ಮುಂಬರುವ ಚುನಾವಣೆಯಲ್ಲಿ ತಮ್ಮ ಮತಗಳನ್ನು ಚಲಾಯಿಸುವಂತೆ ಪ್ರೇರೇಪಿಸಲು ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ಮತದಾನ ಜಾಗೃತಿ ಮೂಡಿಸಿದರು.

ನಂತರ ಮಾತನಾಡಿದ ಅವರು, ಮತದಾನಕ್ಕಿಂತ ಇನ್ನೊಂದು ಇಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ ಎಂಬ ಚುನಾವಣಾ ಆಯೋಗದ ಧ್ಯೇಯ ವಾಕ್ಯದಂತೆ ಪ್ರತಿಯೊಬ್ಬರೂ ತಮ್ಮ ಅಮೂಲ್ಯವಾದ ಮತಚಲಾಯಿಸಬೇಕು. 18 ವರ್ಷ ತುಂಬಿದ ಅರ್ಹ ಮತದಾರರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ಮತದಾನ ಮಾಡುವ ಮೂಲಕ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವನ್ನು ನಿರ್ಮಿಸಬೇಕು. ಆಮಿಷಗಳಿಗೆ



ಬಲಿಯಾಗಿ ಮತವನ್ನು ಮಾರಿಕೊಂಡರೆ ಸರ್ಕಾರವನ್ನು ಪ್ರಶ್ನಿಸುವ ಹಕ್ಕು ಕಳೆದುಕೊಳ್ಳುತ್ತೇವೆ. ಹಾಗಾಗಿ ಎಲ್ಲರೂ ಒಗ್ಗಟ್ಟಿನಿಂದ ಮತ ಚಲಾಯಿಸೋಣ, ಸುತ್ತಮುತ್ತಲಿನವರನ್ನೂ ಮತದಾನದ ಜಾಗೃತಿ ಮೂಡಿಸೋಣ ಎಂದು ಕರೆ ನೀಡಿದರು. ಇದೇ ವೇಳೆ ಕಾಲೇಜಿನ ಸಾಂಸ್ಕೃತಿಕ ರಂಗಕ್ಕೆ ತಂಡದ ವಿದ್ಯಾರ್ಥಿಗಳು ಮತದಾನದ ಜಾಗೃತಿ ಕುರಿತು ಕಿರು ನಾಟಕವನ್ನು ಪ್ರದರ್ಶಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಐಕ್ಯೂಎಸಿ ಸಂಚಾಲಕಿ ಡಿ. ಗೀತಾ ಇದ್ದರು.

ಎಸ್‌ಡಿಎಂ ವಿದ್ಯಾರ್ಥಿನಿಯರಿಂದ ಜಾಥಾ



ಮೈಸೂರು: ನಗರದ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜು ಲೀಗಲ್ ಲಿಟ್ರೆಸಿ ಕ್ಲಬ್ ಮತ್ತು ಎನ್‌ಎಸ್‌ಎಸ್ ಘಟಕವು ಮೈಸೂರು ಮಹಾನಗರ ಪಾಲಿಕೆ ಸ್ವೀಪ್ ಸಮಿತಿಯ ಸಹಯೋಗದೊಂದಿಗೆ ಸೋಮವಾರ ಮತದಾನ ಜಾಗೃತಿ ಜಾಥಾವನ್ನು ಆಯೋಜಿಸಿತ್ತು.

ಈ ಜಾಥಾಗೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದ ಕಾಲೇಜಿನ ಪ್ರಾಂಶುಪಾಲ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ಮತದಾನ ಸಂವಿಧಾನ ಬದ್ಧವಾದ ಹಕ್ಕು. ಇದನ್ನು ಅರ್ಹ ಮತದಾರರು ಮತದಾನ ಮಾಡುವುದರೊಂದಿಗೆ ಭವಿಷ್ಯದ ಸಮಾಜದ ಸದೃಢತೆಗೆ ಕಡ್ಡಾಯವಾಗಿ ಮತ ಚಲಾಯಿಸುವುದರೊಂದಿಗೆ ಪ್ರಜಾಪ್ರಭುತ್ವದ ಮೌಲ್ಯವನ್ನು ಪಾಲಿಸಬೇಕು ಎಂದು ಕರೆ ನೀಡಿದರು. ನಾವುಮಾಡುವಮತದಾನದಿಂದಅರ್ಹವ್ಯಕ್ತಿಯನ್ನು ಆಯ್ಕೆಮಾಡಿ, ಮತ ಚಲಾಯಿಸಬೇಕು ಎಂದು ಅವರು ಮನವಿ ಮಾಡಿದರು. ಈ ಜಾಥಾದಲ್ಲಿ 65 ವಿದ್ಯಾರ್ಥಿನಿಯರು ಭಾಗವಹಿಸಿ, ಮತದಾನ ನಮ್ಮ ಹಕ್ಕು ಕಡ್ಡಾಯವಾಗಿ ಮತ ಚಲಾಯಿಸಿ, ನಮ್ಮ ಮತದಾನ ನಾಡಿನ ಅಭ್ಯುದಯಕ್ಕೆ ಹಿತ ಎಂಬ ಘೋಷ ವಾಕ್ಯಗಳನ್ನು ಪ್ರದರ್ಶಿಸಿದರು. ಜಾಥಾವು ಕಾಲೇಜಿನಿಂದ ಆರಂಭವಾಗಿ ಬಲ್ಲಾಳ್ ವೃತ್ತ, ಆರ್‌ಟಿಓ ವೃತ್ತ, ರಾಮಸ್ವಾಮಿ ವೃತ್ತದಲ್ಲಿ ಅಂತ್ಯವಾಯಿತು.

ಇದೇ ವೇಳೆ ವಾಹನ ಸವಾರರಿಗೆ ಗುಲಾಬಿ ಹೂ ನೀಡುವುದರೊಂದಿಗೆ ಮತದಾನದ ಮಹತ್ವವನ್ನು ತಿಳಿಸಿ, ಕಡ್ಡಾಯವಾಗಿ ಮತದಾನ ಮಾಡುವಂತೆ ಕೋರಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಎಂ. ಆರ್. ನಿರಂತ್, ಮಾರುತಿಪ್ರಸನ್ನ, ವಿದ್ಯಾ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಶನಿವಾರ 27.5.2023

ಕಿವಿಮಾತು ಐಜಿಬಿಸಿ ಮೈಸೂರು ಅಧ್ಯಕ್ಷ ಡಿ.ಎಸ್. ರಾಮಕೃಷ್ಣ ರಾವ್ ಸಲಹೆ

ಸದಾ ಸಂರಕ್ಷಣಾ ಮನೋಭಾವ ಬೆಳೆಸಿಕೊಳ್ಳಿ

• ಕನ್ನಡಪ್ರಭ ವಾರ್ತೆ ಮೈಸೂರು

ಮಾನವ ತನ್ನ ಜೀವನದಲ್ಲಿ ಸಂರಕ್ಷಣಾ ಮನೋಭಾವವನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಐಜಿಬಿಸಿ ಮೈಸೂರು ಅಧ್ಯಕ್ಷ ಡಿ.ಎಸ್. ರಾಮಕೃಷ್ಣ ರಾವ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ಅಧ್ಯಯನ, ಭೂಗೋಳ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಭಾಗಗಳು, ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಇಂಧನ ದಕ್ಷತೆ ಮತ್ತು ಇಂಧನ ಸಂರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ, ಚಿತ್ರಕಲೆ/ ಪೋಸ್ಟರ್ ವಿನ್ಯಾಸ ಸ್ಪರ್ಧೆ ಮತ್ತು ವಸ್ತುಪ್ರದರ್ಶನವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಸೂರ್ಯಕಾಂತಿ ಗಿಡವು ಸೂರ್ಯನಿದ್ದಾಗ ಸೂರ್ಯನ ಕಡೆ ಮುಖ ಮಾಡಿ ನಿಲ್ಲುತ್ತದೆ, ಸೂರ್ಯನ ಕಿರಣಗಳು ಇಲ್ಲದಿರುವಾಗ ಅವು ಒಂದನ್ನೊಂದು ಆಕರ್ಷಿಸಿ ನಿಂತು ಶಕ್ತಿ ಸಂರಕ್ಷಣೆ ಮಾಡಿಕೊಳ್ಳುತ್ತವೆ ಎಂದರು.



ಕಾಲೇಜಿನ ಪ್ರಾಂಶಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಭಾರತ ಇಡೀ ಜಗತ್ತಿಗೆ ವಿಶ್ವಗುರು. 5000 ವರ್ಷಗಳ ಪ್ರಾಚೀನ ಜ್ಞಾನವನ್ನು ಹೊಂದಿದೆ. ಭಾರತದಲ್ಲಿರುವ ಕೆಲವು ನೈಸರ್ಗಿಕ ಸಂಪನ್ಮೂಲಗಳು ವೈವಿಧ್ಯತೆಯನ್ನು ಹೊಂದಿದೆ. ಆ ಸಂಪನ್ಮೂಲಗಳನ್ನು, ಶಕ್ತಿಯನ್ನು ಸಂರಕ್ಷಿಸಬೇಕು. ಸಂರಕ್ಷಣೆ ಮಾಡುವುದು ಮತ್ತು ದಕ್ಷತೆಯಿಂದ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಚಿತ್ರಕಲಾ ಹಾಗೂ ಭಿತ್ತಿ ಚಿತ್ರ ಸ್ಪರ್ಧೆಗಳಲ್ಲಿ ಸಿ.ವಿ. ಯಶಸ್ವಿನಿ ಪಂಡಿತ್(ಪ್ರಥಮ), ವಿ. ಸಹನಾ(ದ್ವಿತೀಯ), ಆಯೇಷಾ ಸುನೇಹಾ(ತೃತೀಯ), ಎಚ್.ಎಸ್. ಮಾನ್ಯ(ಸಮಾಧಾನಕರ) ಬಹುಮಾನ ಪಡೆದರು.

ರಚನಾ ಎನರ್ಕೆರ್ ಮುಖ್ಯಸ್ಥ ಅನಿಲ್‌ಕುಮಾರ್ ನಾಡಿಗೇರ್,ಕಾಲೇಜಿನಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ.ಎಸ್. ಆರ್. ರಮೇಶ್, ಸಂಪನ್ಮೂಲ ವ್ಯಕ್ತಿ ಅರಿಣಿ ಶ್ರೀನಿವಾಸ್, ಸೋಫಿಯಾ ರಂಜನಿ, ವಿಂದ್ಯಾ ಇದ್ದರು. ಎಂ.ಎಚ್. ಸುನೀತಾ ಸ್ವಾಗತಿಸಿದರು. ಡಾ.ಎಸ್. ಪೂರ್ಣಿಮಾ ವಂದಿಸಿದರು. ಸೈದಾ ಫಿಜಾ ನಿರೂಪಿಸಿದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಭಾನುವಾರ 28 ಮೇ 2023

ಮನುಷ್ಯ ಸದಾ ಸಂರಕ್ಷಣಾ ಮನೋಭಾವದಿಂದ ಬದುಕಬೇಕು

ಐಜಿಬಿಸಿಯ ಡಿ.ಎಸ್.ರಾಮಕೃಷ್ಣರಾವ್ ಅಭಿಮತ



ಮೈಸೂರು, ಮೇ 27–ಮಾನವ ತನ್ನ ಜೀವನದಲ್ಲಿ ಸಂರಕ್ಷಣಾ ಮನೋಭಾವವನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ (ಐಜಿಬಿಸಿ) ಅಧ್ಯಕ್ಷ ಡಿ.ಎಸ್. ರಾಮಕೃಷ್ಣ ರಾವ್ ಅಭಿಪ್ರಾಯಪಟ್ಟರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ಅಧ್ಯಯನ, ಭೂಗೋಳ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಭಾಗಗಳು, ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಸಹಭಾಗಿತ್ವದಲ್ಲಿ 'ಇಂಧನ ದಕ್ಷತೆ ಮತ್ತು ಇಂಧನ ಸಂರಕ್ಷಣೆ' ಕುರಿತು ಜಾಗೃತಿ ಕಾರ್ಯಕ್ರಮ, ಚಿತ್ರಕಲೆ/ಪೋಸ್ಟರ್ ವಿನ್ಯಾಸ ಸ್ಪರ್ಧೆ ಮತ್ತು ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಸೂರ್ಯಕಾಂತಿ ಗಿಡವು ಸೂರ್ಯ ನಿದ್ದಾಗ ಸೂರ್ಯನ ಕಡೆ ಮುಖ ಮಾಡಿ ನಿಲ್ಲುತ್ತದೆ, ಸೂರ್ಯನ ಕಿರಣಗಳು ಇಲ್ಲದಿರುವಾಗ ಅವು ಒಂದನ್ನೊಂದು ಆಕರ್ಷಿಸಿ ನಿಂತು ಶಕ್ತಿ ಸಂರಕ್ಷಣೆ ಮಾಡಿಕೊಳ್ಳುತ್ತವೆ ಎಂದರು.

ಸೌರ ಶಕ್ತಿ ಮತ್ತು ಅದರ ಬಳಕೆ ಬಗ್ಗೆ ತಿಳಿಸಿ, ನೀರಿನ ತರಂಗಗಳಿಂದ, ಭೂಶಾಖದಿಂದ ಮತ್ತು ಇತರ ನೈಸರ್ಗಿಕ ಉತ್ಪಾದನೆಯ ವಿಧಿಯನ್ನು ತಿಳಿಸಿದರು. ನಂತರ ಮಣ್ಣಿನ ಮಡಿಕೆಗಳ ಉದಾಹರಣೆಯನ್ನು ನೀಡುವ ಮೂಲಕ ವೈದಿಕ ಕಾಲದ ವಿಜ್ಞಾನ ಮತ್ತು ಹಳೆಯ ಕಾಲದಲ್ಲಿ ಶಕ್ತಿ ಸಂರಕ್ಷಣೆ ಹೇಗಾಗುತ್ತಿತ್ತು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಭಾಷಣದ ಕೊನೆಯಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಸಭೆಯಲ್ಲಿ ನೆರೆದಿದ್ದ ಎಲ್ಲರೊಂದಿಗೆ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶಪಾಲರಾದ ಡಾ. ಬಿ.ಆರ್.ಜಯಕುಮಾರಿ ಮಾತನಾಡಿ, ಭಾರತ ಇಡೀ ಜಗತ್ತಿಗೆ ವಿಶ್ವಗುರು. 5000 ವರ್ಷಗಳ ಪ್ರಾಚೀನ ಜ್ಞಾನವನ್ನು ಹೊಂದಿದೆ. ಭಾರತದಲ್ಲಿರುವ ಕೆಲವು ನೈಸರ್ಗಿಕ ಸಂಪನ್ಮೂಲಗಳು ವೈವಿಧ್ಯತೆಯನ್ನು ಹೊಂದಿದೆ ಆ ಸಂಪನ್ಮೂಲಗಳನ್ನು, ಶಕ್ತಿಯನ್ನು ಸಂರಕ್ಷಿಸಬೇಕು. ಸಂರಕ್ಷಣೆ ಮಾಡುವುದು ಮತ್ತು ದಕ್ಷತೆಯಿಂದ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಇಂಧನ ಉಳಿತಾಯ ಮಾಡಿ ಪರಿಸರ ಸಂರಕ್ಷಿಸಿ. ನೈಸರ್ಗಿಕ ಸಂಪತ್ತಿನ ಸದ್ಬಳಕೆಯ ಜೊತೆಗೆ ಸಂರಕ್ಷಣೆಯ ಹೊಣೆಯೂ ನಮ್ಮದಾಗಿರುತ್ತದೆ. ಸೌರಶಕ್ತಿ, ಗಾಳಿಚಕ್ರ, ಜಲಶಕ್ತಿಗಳ ಬಳಕೆಯಿಂದ ಇದನ್ನು ಸರಿದೂಗಿಸಬಹುದು, ವಿದ್ಯುತ್ ಅಮೂಲ್ಯವಾದ ಸಂಪತ್ತು ಅಗತ್ಯತೆ ಅರಿತು ಬಳಸಬೇಕು. ಬಿಡಿ ವಾಹನಗಳ ಬಳಕೆ, ಸೈಕಲ್ ಬಳಕೆಯನ್ನು ಹೆಚ್ಚಿಸಿಕೊಳ್ಳಬೇಕು ಇದರಿಂದ ದೇಹಕ್ಕೆ ಅದ್ಭುತವಾದ ವ್ಯಾಯಾಮವಾಗುತ್ತದೆ. ಬಲ್ಬ್‌ಗಳನ್ನೂ ಉಪಯೋಗಿಸಿ ಸೌರಶಕ್ತಿ ಆಧಾರಿತ ವಾಟರ್ ಹೀಟರ್‌ಗಳ ಬಳಕೆ, ದಕ್ಷತೆ ಹೊಂದಿರುವ ವಿದ್ಯುತ್ ಉಪಕರಣಗಳ ಬಳಕೆ, ಸಾಧ್ಯ–ಅಸಾಧ್ಯಗಳು ಮನಸ್ಸಿನ ಸದೃಢತೆಯನ್ನು ಅವಲಂಬಿಸಿರುತ್ತದೆ ಎಂದು ಕಿವಿಮಾತು ಹೇಳಿದರು.

ರಚನಾ ಎನರ್ಕೆರ್ ಮುಖ್ಯಸ್ಥ ಅನಿಲ್ ಕುಮಾರ್ ನಾಡಿಗೇರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ. ಎಸ್. ಆರ್. ರಮೇಶ್, ಸಂಪನ್ಮೂಲ ವ್ಯಕ್ತಿ ಅರಿಣಿ ಶ್ರೀನಿವಾಸ್ ಮಾತನಾಡಿದರು.

ನಂತರ ಚಿತ್ರಕಲೆ ಮತ್ತು ಭಿತ್ತಿ ಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳ ಪ್ರತಿಭೆಯಲ್ಲಿ ಅರಳಿದ ಪರಿಸರ ಸಂರಕ್ಷಣೆಯ ಜಾಗೃತಿ ಬಹಳ ವರ್ಣರಂಜಿತವಾಗಿತ್ತು. ಸ್ಪರ್ಧೆಗಳಲ್ಲಿ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಬುಧವಾರ, 28 ಜೂನ್ 2023

MAHAJANA EDUCATION SOCIETY (R)

Jayalakshmipuram, Mysuru – 570 012
Ph: 0821-2414060 Email: mes@mahajana.edu.in

APPOINTMENT NOTIFICATION

Applications are invited for the following posts as shown below. **The posts are purely temporary.**

Name of the Institution	Post Vacant (Designation)	No. of Post	Eligibility
SBRR MAHAJANA FIRST GRADE COLLEGE (AUTONOMOUS) Jayalakshmipuram, Mysuru-12	Superintendent	01	1. Any Graduate with Computer Knowledge 2. Experience will be added qualification. 3. Retired person from Aided Degree College / University is preferred.
	Office Assistant cum Computer Operator	01	1. Degree with Computer Knowledge (Ms.Office) and Typing (both Kannada & English). 2. Preference will be given to those who have knowledge of Tally with latest ERP version and knowledge of photo shop will be added qualification. 3. Minimum 3 years of experience.
	Lab Assistant	01	1. P.U.C (Science) / B.Sc. 2. Proficiency in handling Chemistry Lab Class. 3. Previous Experience will be considered.
	Attender	01	1. SSLC/PUC 2. Experience will be added Qualification
	Scavenger	02	1. Experience will be added Qualification
POOJA BHAGAVAT MEMORIAL MAHAJANA PG CENTRE, Metagalli, Mysuru	Accounts Assistant	01	1. Degree with Computer Knowledge (Ms.Office) and Typing (both Kannada & English). 2. Preference will be given to those who have knowledge of Accounts/Tally with latest ERP version
SBRR MAHAJANA P.U.COLLEGE	Computer Science Lecturer	01	1. M.Sc/MCA/M.Tech in Computer Science with 55% aggregate marks with B.Ed., Preferably having teaching experience in PU College.

Application along with supportive documents, Curriculum Vitae with a passport photograph mentioning therein the e-mail ID and contact phone number should be sent to **Hon.Secretary, Mahajana Education Society, Jayalakshmipuram, Mysuru-12**, so as to reach **on or before 07-07-2023.** The soft copy of the applications may be sent to **mes@mahajana.edu.in. For more details contact 0821-2414060.**

Sd/-
Dr. T. Vijayalakshmi Muralidhar
Hon. Secretary

Sd/-
Sri. T. Muralidhar Bhagavat
President

MFGE In the Eyes of the Press.....

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೋಮವಾರ • ಜೂನ್ 5, 2023



ನಗರದ ಜೆ.ಕೆ. ಮೈದಾನದಲ್ಲಿ ಭಾನುವಾರ ಸ್ವಯಂಸೇವಕರು ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿ ಸ್ವೀಕರಿಸಿದರು

ವರ್ತುಲ ರಸ್ತೆ: ಸ್ವಚ್ಛತಾ ಕಾರ್ಯ

ಪರಿಸರ ದಿನ: ಸಿಐಐ ಮೈಸೂರು ಘಟಕದಿಂದ ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಮೈಸೂರು: ನೂರಾರು ಸ್ವಯಂಸೇವಕರು ಭಾನುವಾರ ಮುಂಜಾನೆಯೇ ರಸ್ತೆಗೆ ಇಳಿದಿದ್ದರು. ಹೊರ ವರ್ತುಲ ರಸ್ತೆಯ ಪ್ರಮುಖ ವೃತ್ತಗಳಲ್ಲಿ ಪ್ಲಾಸ್ಟಿಕ್ ಹೆಕ್ಕಿ ತೆಗೆಯುತ್ತ ಸ್ವಚ್ಛತಾ ಕಾರ್ಯ ನಡೆಸಿದರು. ನೋಡುತ್ತಿದ್ದಂತೆಯೇ ರಾಶಿಗಟ್ಟಲೆ ತ್ಯಾಜ್ಯ ಸಂಗ್ರಹಿಸಿ ಸ್ವಚ್ಛತೆಯ ಪಾಠ ಹೇಳಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಸಿಐಐ ಮೈಸೂರು ಘಟಕವು ಭಾನುವಾರ ನಗರದಲ್ಲಿ ಮೆಗಾ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿದ್ದು, ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಹೊರ ವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್, ಮಣಿಪಾಲ್ ಆಸ್ಪತ್ರೆ ಜಂಕ್ಷನ್, ಎಚ್.ಡಿ.ಕೋಟೆ ರಸ್ತೆ ಜಂಕ್ಷನ್, ದೇವೇಗೌಡ ವೃತ್ತ ಸೇರಿದಂತೆ 28 ಸ್ಥಳಗಳಲ್ಲಿ ಸ್ವಯಂಸೇವಕರು ಬೆಳಿಗ್ಗೆ 7ರಿಂದ 9ರವರೆಗೆ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡರು.

ನಗರದ ಪ್ರಮುಖ ಕಾಲೇಜುಗಳಾದ ಜಿಎಸ್ಎಸ್ಎಸ್, ಕ್ರೈಸ್ಟ್, ಟೆರೇಶಿಯನ್, ಎನ್ಐಇ, ವಿದ್ಯಾವರ್ಧಕ, ಜೆಎಸ್ಎಸ್ ಮಹಾಜನ ಕಾಲೇಜುಗಳ ನೂರಾರು ವಿದ್ಯಾರ್ಥಿಗಳ ಜೊತೆಗೆ ನಗರದ ಪ್ರಮುಖ ಕಂಪನಿಗಳ ಉದ್ಯೋಗಿಗಳೂ ಈ ಅಭಿಯಾನದಲ್ಲಿ ಕೈ ಜೋಡಿಸಿದರು. ಹೀಗೆ ಸಂಗ್ರಹಗೊಂಡ ತ್ಯಾಜ್ಯವನ್ನು ಮಹಾನಗರ ಪಾಲಿಕೆ ಮೂಲಕ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ನೀಡಲಾಯಿತು.

ಜೆ.ಕೆ. ಮೈದಾನದಲ್ಲಿ ನಡೆದ ವೇದಿಕೆ ಸಮಾರಂಭದಲ್ಲಿ ಕಾರ್ಯಕ್ರಮದ ಸಂಚಾಲಕಿ ಸವಿತಾ ಮಾದಪ್ಪ ಹಾಗೂ ಧರ್ಮ ಪ್ರಸಾದ್ ಸ್ವಯಂ ಸೇವಕರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಬಿ.ಎಂ. ಪ್ರಕಾಶ್, ಸಿಐಐ ಮೈಸೂರು ಘಟಕದ ಅಧ್ಯಕ್ಷ ಸ್ಯಾಮ್ ಚೆರಿಯನ್, ಉಪಾಧ್ಯಕ್ಷ ವಿ.ಈಶ್ವರ ರಾವ್, ಸಿಐಐ ಮೈಸೂರು ನಿಕಟಪೂರ್ವ ಅಧ್ಯಕ್ಷ ಪವನ್ ರಂಗ ಇದ್ದರು.

ಸಿಐಐ ಸದಸ್ಯರಿಗೆ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ 'ಪ್ಲಾಸ್ಟಿಕ್‌ನ ಕಡಿಮೆ, ಮರುಬಳಕೆ' ಕುರಿತು ಐಡಿಯಾಥಾನ್ ಸ್ಪರ್ಧೆ ಆಯೋಜಿಸಿದ್ದು, ವಿಜೇತರಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಯಿತು.

MFGE In the Eyes of the Press.....

ಅಂಕೋಲಾ
ದಿನ ಪತ್ರಿಕೆ

ಶುಕ್ರವಾರ, 16 ಜೂನ್ 2023

ನಾಳೆ ಮಹಾಜನ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭವನ್ನು ಜೂ.17ರ ಬೆಳಿಗ್ಗೆ 11ಕ್ಕೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2021-22ನೇ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಟೂರಿಸ್ಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳಲ್ಲಿ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. ಈ ಪೈಕಿ 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 37 ವಿದ್ಯಾರ್ಥಿಗಳಿಗೆ ಚಿನ್ನದ ಪದಕದೊಂದಿಗೆ ನಗದು ಬಹುಮಾನ ನೀಡಲಾಗುವುದು ಎಂದು ತಿಳಿಸಿದರು.

ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ವಿಭಾಗದ ಎಂಬಿಎ, ಎಂಸಿಎ, ಎಂಕಾಂ, ಎಂಎಸ್ಸಿ ಕೆಮಿಸ್ಟ್ರಿ, ಎಂಎಸ್ಸಿ ಬಯೋಕೆಮಿಸ್ಟ್ರಿ, ಎಂಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ, ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಹಾಗೂ ಎಟಿಟಿಎಂ ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದು, ಈ ಪೈಕಿ 96 ವಿದ್ಯಾರ್ಥಿಗಳು ಉನ್ನತಶ್ರೇಣಿಯಲ್ಲಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳಿಗೆ ಚಿನ್ನದ ಪದಕದೊಂದಿಗೆ ನಗದು ಬಹುಮಾನವನ್ನು ನೀಡಲಾಗುವುದು. ನಾಲ್ವರು ವಿದ್ಯಾರ್ಥಿಗಳು ದತ್ತಿ ಬಹುಮಾನ ಪಡೆಯಲಿದ್ದಾರೆ ಎಂದರು.

ಡಾ.ಟಿ.ವಿಜಯಲಕ್ಷ್ಮಿ, ಪ್ರೊ.ಮಂಜುನಾಥ್, ಡಾ.ಎಚ್.ಶ್ರೀಧರ್, ಡಾ.ಎಚ್.ಆರ್.ತಿಮ್ಮೇಗೌಡ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.



MFGE In the Eyes of the Press.....

ಆಂದೋಲನ
ದಿನ ಪತ್ರಿಕೆ

ಭಾನುವಾರ, 18 ಜೂನ್ 2023

'ಮಾನವನ ಸಬಲೀಕರಣಕ್ಕೆ ಶಿಕ್ಷಣವೊಂದೇ ದಾರಿ'

ಮಹಾಜನ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ



ಮೈಸೂರು: ಮಾನವ ಇತಿಹಾಸದ ಆರಂಭ ದಿಂದಲೂ ಶಿಕ್ಷಣವು ನಿರಂತರವಾಗಿ ವಿಕಸನ ಗೊಳ್ಳುತ್ತಾ ಬಂದಿದ್ದು, ಮಾನವನ ಸಬಲೀಕರಣಕ್ಕೆ ಶಿಕ್ಷಣವೊಂದೇ ದಾರಿ ಎಂದು ಯುಜಿಸಿ ನಿಕಟಪೂರ್ವ ಅಧ್ಯಕ್ಷ ಪ್ರೊ.ವೇದ ಪ್ರಕಾಶ್ ಹೇಳಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣಿಕವಾಗಿ ಉನ್ನತ ಸಾಧನೆ ಮಾಡಿದ ವರಿಗೆ ಪ್ರಶಂಸಾ ಪತ್ರ ವಿತರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಕುತೂಹಲ, ಸ್ವಾಭಿಮಾನ, ಘನತೆಯ ಪ್ರಜ್ಞೆ, ವಿವೇಚನಾ ಶಕ್ತಿ, ಹೆಮ್ಮೆ, ತನ್ನ ಸಮಾಜ ಮತ್ತು ದೇಶದ ಬಗ್ಗೆ ಗೌರವ ಹುಟ್ಟಲು ಶಿಕ್ಷಣ ಕಾರಣ ಎಂದು ಹೇಳಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜು ಬಹಳ ವಿಭಿನ್ನವಾದ ಕಾಲೇಜು. ವಿದ್ಯಾರ್ಥಿ ವಿದ್ಯಾರ್ಥಿನಿ ಯರನ್ನು ಸಮಾಜದಲ್ಲಿ ಬದಲಾವಣೆ ತರುವ ರೀತಿಯಲ್ಲಿ ಸನ್ನದ್ಧರನ್ನಾಗಿಸುತ್ತಿದೆ. ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಿಲ್ಲದ ಸಾರ್ವತ್ರಿಕ ಗ್ರಹಿಕೆ ಮತ್ತು ಸಂವಿಧಾನಗಳ ಅಗತ್ಯತೆಗಳನ್ನೊಳಗೊಂಡ ಮೌಲ್ಯಗಳನ್ನು ಕಾಲೇಜಿನಲ್ಲಿ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡಿರುವುದನ್ನು ಕಾಣಬಹುದು ಎಂದರು.

ಕಾಲೇಜಿನಲ್ಲಿ ಉದಾರ ಶಿಕ್ಷಣವನ್ನು ಉತ್ತೇಜಿ ಸುತ್ತಾ ಬಂದಿರುವುದರಿಂದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮನೋಭಾವ, ಪರಸ್ಪರ ವಿಶ್ವಾಸ ಮತ್ತು ಭ್ರಾತೃತ್ವ ಬಲಗೊಳ್ಳುತ್ತಿದೆ. ಇದರಿಂದ ಮನುಕುಲಕ್ಕೆ ಅಗತ್ಯವಿರುವ ವಿಶ್ವಶಾಂತಿ ಮತ್ತು ಸಾಮರಸ್ಯ ಪರಿಕಲ್ಪನೆಗೆ ಸ್ಫೂರ್ತಿ ದೊರೆಯುತ್ತದೆ ಎಂದು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಖಜಾಂಚಿ ರವಿಕುಮಾರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್. ರಮೇಶ್, ಪ್ರಧಾನ ಸಂಚಾಲಕ ಡಾ.ಎಚ್.ಆರ್. ತಿಮ್ಮೇಗೌಡ, ವಿದ್ಯಾಸಂಸ್ಥೆಯ ಅಂಗಸಂಸ್ಥೆಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು, ಪೋಷಕರು ಸಮಾರಂಭದಲ್ಲಿ ಹಾಜರಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 16.6.2023

ಮಕ್ಕಳ ಸಾಧನೆ ನಾಳೆ ಮಹಾಜನ ಕಾಲೇಜಿನಲ್ಲಿ ಕಾರ್ಯಕ್ರಮ ಆಯೋಜನೆ

ಪದವಿ ಪ್ರದಾನ ಸಮಾರಂಭ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭವನ್ನು ಜೂ.17ರ ಬೆಳಗ್ಗೆ 11ಕ್ಕೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಾಂಶು ಪಾಲೆ ಡಾ.ಬಿ.ಆರ್. ಜಯಕುಮಾರಿ ತಿಳಿಸಿದರು.

ಯುಜಿಸಿ ಮಾಜಿ ಅಧ್ಯಕ್ಷ ಪ್ರೊ. ವೇದ್ ಪ್ರಕಾಶ್ ಪದವಿ ಪ್ರದಾನ ಭಾಷಣ ಮಾಡುವರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅತಿಥಿಯಾಗುವರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸುವರು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. 2021- 22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ., ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಹೊಂದಿದ್ದು, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. 37 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆ.

ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್ ನ್ಯೂ., ಎಂಎಸ್ಸಿ ಕೆಮಿಸ್ಟ್ರಿ, ಎಂ.ಎಸ್ಸಿ ಬಯೋಕೆಮಿಸ್ಟ್ರಿ ಎಂ.ಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ, ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಹಾಗೂ ಎಟಿಟಿಎಂ ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 96 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನವನ್ನು ಪಡೆಯುತ್ತಿದ್ದಾರೆ. ನಾಲ್ವರು ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯುತ್ತಿದ್ದಾರೆ ಎಂದರು. ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಆರ್. ಮಂಜುನಾಥ, ಡಾ.ಎಚ್. ಶ್ರೀಧರ, ಡಾ.ಎಚ್.ಆರ್. ತಿಮ್ಮೇಗೌಡ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಭಾನುವಾರ 18.6.2023

ಮಾನವನ ಸಬಲೀಕರಣಕ್ಕೆ ಶಿಕ್ಷಣವೊಂದೇ ದಾರಿ

ವಿವಿ ಧನಸಹಾಯ ಆಯೋಗದ ಮಾಜಿ ಅಧ್ಯಕ್ಷ ಪ್ರೊ. ವೇದ್‌ಪ್ರಕಾಶ್ | ಮಹಾಜನ ಕಾಲೇಜು 2ನೇ ಪದವಿ ಪ್ರದಾನ ಸಮಾರಂಭ

• ಕನ್ನಡಪ್ರಭ ವಾರ್ತೆ ಮೈಸೂರು

ಮಾನವನ ಸಬಲೀಕರಣಕ್ಕೆ ಶಿಕ್ಷಣವೊಂದೇ ದಾರಿ ಎಂದು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಮಾಜಿ ಅಧ್ಯಕ್ಷ ಪ್ರೊ. ವೇದ್‌ಪ್ರಕಾಶ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಶನಿವಾರ ನಡೆದ ಕಾಲೇಜಿನ ಎರಡನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣವು ಮಾನವ ಇತಿಹಾಸದ ಆರಂಭದಿಂದಲೂ ನಿರಂತರವಾಗಿ ವಿಕಸನಗೊಂಡಿದೆ. ವಿದ್ಯಾರ್ಥಿಗಳಿಗೆ ಬೌದ್ಧಿಕ ಕುತೂಹಲ, ಸ್ವಾಭಿಮಾನ, ಘನತೆಯ ಪ್ರಜ್ಞೆ, ವಿವೇಚನಾ ಶಕ್ತಿ, ಹೆಮ್ಮೆ, ತನ್ನ ಸಮಾಜ ಮತ್ತು ದೇಶ ಕುರಿತ ಗೌರವ ಹುಟ್ಟಲು ಶಿಕ್ಷಣವಿಂದ ಮಾತ್ರ ಸಾಧ್ಯ ಎಂದರು.

ದೇಶದಾದ್ಯಂತ 40 ಸಾವಿರ ಕಾಲೇಜುಗಳ ಪೈಕಿ ಕೆಲವೇ ಕೆಲವು ಕಾಲೇಜುಗಳಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜು ಗುರುತರವಾದ ಹಾಗೂ ತನ್ನದೇ ಆದ ವಿಶೇಷ ಸುಧಾರಣೆಗಳೊಂದಿಗೆ ವಿಭಿನ್ನವಾಗಿ ಬೆಳೆಯುತ್ತಿದೆ. ವಿದ್ಯಾರ್ಥಿಗಳು ಆನ್‌ಲೈನ್ ಸುರಕ್ಷಿತ ಕಲಿಕೆ ಮತ್ತು ನೈತಿಕತೆಯೊಂದಿಗೆ ಡಿಜಿಟಲ್ ತಂತ್ರಜ್ಞಾನ ಬಳಕೆಯಲ್ಲಿ ಮುಂದೆ ಸಾಗುತ್ತ ಡಿಜಿಟಲ್ ಪರಿಕರಗಳನ್ನು ಸಂವಹನ ಮತ್ತು





ಉತ್ಪಾದಕತೆಗೆ ಬಳಸುವಲ್ಲಿ ಕಾಲೇಜು ಜವಾಬ್ದಾರ ವಹಿಸಿದೆ ಎಂದರು.

ವಿದ್ಯಾರ್ಥಿಗಳಲ್ಲಿ ಸೃಜನಾತ್ಮಕತೆ, ಕಲ್ಪನಾಶಕ್ತಿ ಮತ್ತು ಹೊಸ ಚಿಂತನೆಗಳನ್ನು ಪೋಷಿಸುವ ಪ್ರಾಮುಖ್ಯತೆಯನ್ನು ಗುರುತಿಸಿದ. ಜೊತಗೆ ಅವರ ಸಮಸ್ಯೆ ಪರಿಹರಿಸಲು ಸಾಂಪ್ರಾದಾಯಕವಲ್ಲದ ವಿಧಾನಗಳನ್ನು ಅಳವಡಿಸಿಕೊಂಡು ಉದ್ಯಮಶೀಲತೆ ಕೌಶಲ್ಯಗಳನ್ನು ಪೋಷಣೆ ಮಾಡಲು ಅನೇಕ ಅವಕಾಶಗಳನ್ನು ಮಾಡಿಕೊಡುತ್ತಿದೆ ಎಂದು ಅವರು ಹೇಳಿದರು.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸಾಧನೆ ಮಾಡಲು ಸ್ಪರ್ಧಾತ್ಮಕ ಜಗತ್ತಿನಲ್ಲಿ ಉನ್ನತ ಶಿಕ್ಷಣವನ್ನು ಪಡೆದಿರಬೇಕು. ವಿದ್ಯಾರ್ಥಿಗಳುತಮ್ಮಜೀವನದಲ್ಲಿಯಶಸ್ವಿಯಾಗಲು ಪ್ರಾಮಾಣಿಕತೆ, ಶ್ರದ್ಧೆ ಹಾಗೂ ಕಠಿಣ ಶ್ರಮವು ಬಹಳ ಮುಖ್ಯ ಎಂದು ಹೇಳಿದರು.

2021-22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆದರು. 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 37 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನವನ್ನು ಪಡೆದರು. ಹಾಗೆಯೇ, ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್‌ಡಬ್ಲ್ಯೂ, ಎಂಎಸ್ಸಿ ಹಾಗೂ ಎಂಟಟಿಎಂ ಸೇರಿದಂತೆ 10 ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಪದವಿ ಪಡೆದರು. 96 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ, 4 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನವನ್ನು ಪಡೆದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸ್ನಾತಕೋತ್ತರ ಕೇಂದ್ರದ ಪ್ರಭಾರ ನಿರ್ದೇಶಕ ಹರೀಶ್ ಮಾಚಯ್ಯ ಕೋಡಂಡೇರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಆರ್. ಮಂಜುನಾಥ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಇದ್ದರು. ಡಿ. ಗೀತಾ ಮತ್ತು ಎನ್. ಸುನಿಲ್ ನಿರೂಪಿಸಿದರು.

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಶುಕ್ರವಾರ 16 ಜೂನ್ 2023

ನಾಳೆ ಮಹಾಜನ ಕಾಲೇಜಲ್ಲಿ ಪದವಿ ಪ್ರದಾನ ಸಮಾರಂಭ



ಮೈಸೂರು,ಜೂ.15(ಪಿಎಂ)– ಮಹಾಜನ ವಿದ್ಯಾಸಂಸ್ಥೆಯ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತತೆ) ಪದವಿ ಪ್ರದಾನ ಸಮಾರಂಭವನ್ನು ಜೂ.17ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಸಮಾರಂಭ ಆರಂಭವಾಗಲಿದೆ. ಯುಜಿಸಿ ನಿಕಟಪೂರ್ವ ಅಧ್ಯಕ್ಷ ಪ್ರೊ.ವೇದ್ ಪ್ರಕಾಶ್ ಪದವಿ ಪ್ರದಾನ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಮಾತನಾಡಿ, 2021–22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ., ಬಿಬಿಎ, ಬಿಸಿಎ, ಬಿಎಸ್ಸಿ ಮತ್ತು ಬಿಬಿಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳಲ್ಲಿ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ. ಈ ಪೈಕಿ 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 37 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ ಎಂದು ತಿಳಿಸಿದರು.

ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್‌ಡಬ್ಲ್ಯೂ, ಎಂಎಸ್ಸಿ ಕೆಮಿಸ್ಟ್ರಿ, ಎಂಎಸ್ಸಿ ಬಯೋಕೆಮಿಸ್ಟ್ರಿ, ಎಂಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ, ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಟಿಟಿಎಂ ಸೇರಿದಂತೆ 10 ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆಯಲಿದ್ದಾರೆ. ಈ ಪೈಕಿ 96 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ. 4 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯಲಿದ್ದಾರೆ ಎಂದು ವಿವರಿಸಿದರು.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶುಕ್ರವಾರ • ಜೂನ್ 16, 2023

ಮಹಾಜನ ಕಾಲೇಜು ಪದವಿ ಪ್ರದಾನ ಸಮಾರಂಭ ನಾಳೆ

ಪ್ರಜಾವಾಣಿ ವಾರ್ತೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಜೂನ್ 17ರಂದು ಬೆಳಿಗ್ಗೆ 11ಕ್ಕೆ ಪದವಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, 'ವಿವಿಧ ಕೋರ್ಸ್‌ಗಳ 488 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಗಳಿಸಿದ್ದು, 37 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆ' ಎಂದು ತಿಳಿಸಿದರು.

'ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಪದವಿ ಪ್ರದಾನವೂ ನಡೆಯಲಿದ್ದು, ಒಟ್ಟು 349 ವಿದ್ಯಾರ್ಥಿಗಳು ಪದವಿಯನ್ನು, ಅವರಲ್ಲಿ 23 ವಿದ್ಯಾರ್ಥಿಗಳು ಚಿನ್ನದ ಪದಕ, 4 ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯುತ್ತಿದ್ದಾರೆ' ಎಂದರು.

'ಪದವಿ ಪ್ರದಾನ ಸಮಾರಂಭದಲ್ಲಿ ಯುಜಿಸಿ ನಿಕಟ ಪೂರ್ವ ಅಧ್ಯಕ್ಷ ಪ್ರೊ. ವೇದ್ ಪ್ರಕಾಶ್, ಮೈಸೂರು ವಿವಿ ಕುಲಪತಿ ಪ್ರೊ.ಎಂ.ಕೆ.ಲೋಕನಾಥ್. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ ಭಾಗವತ್ ಭಾಗವಹಿಸುವರು' ಎಂದರು.

ಸುದ್ದಿಗೋಷ್ಠಿಯಲ್ಲಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಆರ್.ಮಂಜುನಾಥ್, ಎಚ್.ಆರ್. ತಿಮ್ಮೇಗೌಡ, ಶ್ರೀಧರ್ ಇದ್ದರು.

ವಿಜಯ ಕರ್ನಾಟಕ

ಶುಕ್ರವಾರ,16 ಜೂನ್ 2023

ಮಹಾಜನ ಕಾಲೇಜಿನಲ್ಲಿ ಪದವಿ ಪ್ರದಾನ ನಾಳೆ

ಮೈಸೂರು: ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭ ಜೂ.17ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆಯಲಿದೆ.

''2021-22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿ.ಎ, ಬಿ.ಕಾಂ., ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಟೂರಿಸಂ ಅಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳ ಒಟ್ಟು 488 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಹೊಂದಿದ್ದು, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. 37 ವಿದ್ಯಾರ್ಥಿ ಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆ,'' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್.ಜಯಕುಮಾರಿ ತಿಳಿಸಿದರು.

''ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂ.ಕಾಂ, ಎಂಎಸ್ ನ್ಯೂ, ಎಂಎಸ್ಸಿ ಕೆಮಿಸ್ಟ್ರಿ, ಎಂ.ಎಸ್ಸಿ ಬಯೋಕೆಮಿಸ್ಟ್ರಿ ಎಂ.ಎಸ್ಸಿ ಬಯೋಟೆಕ್ನಾಲಜಿ, ಎಂಎಸ್ಸಿ ಮೈಕ್ರೋಬಯಾಲಜಿ, ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಹಾಗೂ ಎಟಿಟಿಎಂ ಕೋರ್ಸ್‌ಗಳಲ್ಲಿ ಒಟ್ಟು 349 ವಿದ್ಯಾರ್ಥಿಗಳು ಪದವಿ ಪಡೆಯುತ್ತಿದ್ದಾರೆ. 96 ಉನ್ನತ ಶ್ರೇಣಿಯಲ್ಲಿ, 250 ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ, ನಾಲ್ವರು ವಿದ್ಯಾರ್ಥಿಗಳು ದತ್ತಿ ನಗದು ಬಹುಮಾನ ಪಡೆಯುತ್ತಿದ್ದಾರೆ,''ಎಂದರು. ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಪ್ರೊ.ಮಂಜುನಾಥ್, ಡಾ.ಎಚ್.ಶ್ರೀಧರ್, ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಪಿಸ್ಮೆ

ಭಾನುವಾರ,18 ಜೂನ್ 2023,

ಯುಜಿಸಿ ನಿಕಟಪೂರ್ವ ಅಧ್ಯಕ್ಷ ಪ್ರೊ .ವೇದಪ್ರಕಾಶ್

ಶಿಕ್ಷಣದಿಂದ ದೇಶದ ಗೌರವ ಹೆಚ್ಚಳ

■ **ವಿಕ ಸುದ್ದಿಲೋಕ** ಮೈಸೂರು

ಮಾನವ ಸಬಲೀಕರಣಕ್ಕೆ ಶಿಕ್ಷಣವೊಂದೇ ದಾರಿ, ಶಿಕ್ಷಣದಿಂದ ದೇಶದ ಮೇಲೆ ಗೌರವ ಹೆಚ್ಚಾಗಲಿದೆ ಎಂದು ಯುಜಿಸಿ ನಿಕಟಪೂರ್ವ ಅಧ್ಯಕ್ಷ ಪ್ರೊ, ವೇದ್ ಪ್ರಕಾಶ್ ಹೇಳಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆದ ಪದವಿ ಪ್ರದಾನ ಸಮಾರಂಭದಲ್ಲಿವಿದ್ಯಾರ್ಥಿಗಳಿಗೆ ಪದವಿ ಮತ್ತು ಶೈಕ್ಷಣಿಕವಾಗಿ ಉನ್ನತ ಸಾಧನೆ ಮಾಡಿದವರಿಗೆ ಪ್ರಶಂಸಾ ಪ್ರಮಾಣ ಪತ್ರವನ್ನು ನೀಡಿ ಗೌರವಿಸಿ ಅವರು ಮಾತನಾಡಿದರು.

''ಮಾನವನ ಇತಿಹಾಸದ ಆರಂಭದಿಂದಲೂ ಶಿಕ್ಷಣ ನಿರಂತರವಾಗಿ ವಿಕಸನಗೊಂಡಿದೆ. ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಕುತೂಹಲ, ಸ್ವಾಭಿಮಾನ, ಘನತೆ ಯ ಪ್ರಜ್ಞೆ, ವಿವೇಚನಾ ಶಕ್ತಿ ಇರಬೇಕು. ಶಿಕ್ಷಣದಿಂದ ಮನುಷ್ಯನ ಆಂತರಂಗ ಶಕ್ತಿ ಗೊತ್ತಾಗುವುದು,'' ಎಂದರು.

''ಮಹಾಜನ ಪ್ರಥಮ ದರ್ಜೆ ಕಾಲೇಜು ಬಹಳ ವಿಭಿನ್ನವಾದ ಕಾಲೇಜು, ಇಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಗಳು ಸಮಾಜದಲ್ಲಿ ಬದಲಾವಣೆ ತರುವ ರೀತಿಯಲ್ಲಿ ಸನ್ನದ್ಧರನ್ನಾಗಿಸುತ್ತಿದೆ. ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಲಭ್ಯವಿಲ್ಲದ ಸಾರ್ವತ್ರಿಕ ಗ್ರಹಿಕೆ ಮತ್ತು ಸಂವಿಧಾನಗಳ ಅಗತ್ಯತೆಗಳನ್ನೊಳಗೊಂಡ ಮೌಲ್ಯಗಳನ್ನು ಕಾಲೇಜು ಪ್ರಜ್ಞಾಪೂರ್ವಕವಾಗಿ ಪಠ್ಯಕ್ರ ಮದಲ್ಲಿ ಅಳವಡಿಸಿಕೊಂಡಿರುವುದನ್ನು ಕಾಣಬಹುದು,''ಎಂದು ಹೇಳಿದರು.

''ಕಾಲೇಜಿನ ದೊಡ್ಡ ಬಲವೆಂದರೆ ಅದು ಉದಾರ ಶಿಕ್ಷಣವನ್ನು ಉತ್ತೇಜಿಸುತ್ತಾ ಬಂದಿದೆ. ಇದರಿಂದ ವಿದ್ಯಾರ್ಥಿಗಳಲ್ಲಿಸಾಮಾಜಿಕ ಮನೋಭಾವ, ಪರಸ್ಪರ ವಿಶ್ವಾಸ ಮತ್ತು ಭಾತೃತ್ವವನ್ನು ಬಲಗೊಳಿಸುತ್ತಿದೆ. ಇದರಿಂದ ಮನುಕುಲಕ್ಕೆ ಅಗತ್ಯವಿರುವ ವಿಶ್ವಶಾಂತಿ ಮತ್ತುಸಾಮರಸ್ಯಪರಿಕಲ್ಪನೆಗೆಸ್ಫೂರ್ತಿದೊರೆಯುತ್ತದೆ,''ಎಂದರು.

ಖಜಾಂಚಿ ರವಿಕುಮಾರ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಕಾರ್ಯನಿರ್ವಹಣಾಧಿಕಾರಿ ಹಾಗೂ ಶೈಕ್ಷಣಿಕ ಸಲಹೆಗಾರರಾದ ಡಾ. ಎಸ್.ಆರ್. ರಮೇಶ್, ಕಾರ್ಯಕ್ರ ಮದ ಪ್ರಧಾನ ಸಂಚಾಲಕರಾದ ಡಾ. ಎಚ್.ಆರ್. ತಿಮ್ಮೇಗೌಡ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಶುಕ್ರವಾರ 16 ಜೂನ್ 2023
16 JUNE 2023

ನಾಳೆ ಮಹಾಜನ ಕಾಲೇಜಿನಲ್ಲಿ ಪದವಿ ಪ್ರದಾನ

ಮೈಸೂರು: ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪದವಿ ಪ್ರದಾನ ಸಮಾರಂಭವನ್ನು ಜೂ. 17ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಡಾ.ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಹೇಳಿದರು. 2021-22ರ ಶೈಕ್ಷಣಿಕ ವರ್ಷದ ಸ್ನಾತಕ ಪದವಿ ವಿಭಾಗದ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ ಹಾಗೂ ಬಿಬಿಎ (ಟೂರಿಸಂ ಆ್ಯಂಡ್ ಹಾಸ್ಪಿಟಾಲಿಟಿ) ಕೋರ್ಸ್‌ಗಳ ಒಟ್ಟು 488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. 188 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 291 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. 37 ವಿದ್ಯಾರ್ಥಿಗಳು ಪದಕದೊಂದಿಗೆ ನಗದು ಬಹುಮಾನ ಪಡೆಯುತ್ತಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಪೂಜಾ ಭಾಗವತ್ ಸ್ಮಾರಕ ಸ್ನಾತಕೋತ್ತರ ಪದವಿ ವಿಭಾಗದ ಎಂಬಿಎ, ಎಂಸಿಎ, ಎಂಕಾಂ, ಎಂಎಸ್‌ಡಬ್ಲ್ಯು, ಎಂಎಸ್ಸಿ ಕೆಮಿಸ್ಟ್ರಿ, ಎಂಎಸ್ಸಿ ಬಯೋಕೆಮಿಸ್ಟ್ರಿ, ಎಂಎಸ್ಸಿ ಬಯೋಟೆಕ್ನಾಲಜಿ ಸೇರಿದಂತೆ ವಿವಿಧ ಕೋರ್ಸ್‌ಗಳ ಒಟ್ಟು 349 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. 96 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 250 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 23 ವಿದ್ಯಾರ್ಥಿಗಳು ಚಿನ್ನದ ಪದಕದೊಂದಿಗೆ ನಗದು ಬಹುಮಾನ ಪಡೆಯಲಿದ್ದಾರೆ. ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗದ ನಿಕಟಪೂರ್ವ ಅಧ್ಯಕ್ಷ ಪ್ರೊ. ವೇದ್‌ಪ್ರಕಾಶ್ ಪದವಿ ಪ್ರದಾನ ಮಾಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್, ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಪ್ರೊ.ಆರ್.ಮಂಜುನಾಥ, ಡಾ.ಎಚ್. ಶ್ರೀಧರ್, ಕಾರ್ಯಕ್ರಮ ಸಂಚಾಲಕ ಡಾ.ಎಚ್.ಆರ್.ತಿಮ್ಮೇಗೌಡ ಇದ್ದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 1.6.2023

ಮೈಸೂರಿನ ಇತಿಹಾಸ, ಪ್ರಾತಃ ಸ್ಮರಣೀಯರು ಉಪನ್ಯಾಸ

ಮಹಾಜನ ಕಾಲೇಜಿನಲ್ಲಿ ಸಂವಾದ ಕಾರ್ಯಕ್ರಮ | ಇತಿಹಾಸ ತಜ್ಞ ಎ.ಎಸ್. ಧರ್ಮೇಂದ್ರಕುಮಾರ್ ಸೇರಿ ಹಲವರು ಭಾಗಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ ಮರೆತು ಹೋದ ಮೈಸೂರಿನ ಇತಿಹಾಸ ಹಾಗೂ ಪ್ರಾತಃ ಸ್ಮರಣೀಯರು ಎಂಬ ವಿಷಯ ಕುರಿತು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಇತಿಹಾಸ ತಜ್ಞ ಎ.ಎಸ್. ಧರ್ಮೇಂದ್ರಕುಮಾರ್ ಮಾತನಾಡಿ, ಮೈಸೂರು ಮಹಾರಾಜರ ಕಾಲದಲ್ಲಾದ ಇಂಗ್ಲಿಷ್ ಶಿಕ್ಷಣ ಪ್ರಚಾರ, ವಯಸ್ಕರ ಶಾಲೆ, ಅಂಧ ಶಾಲೆಗಳು, ಪಾರಂಪರಿಕ ಕಟ್ಟಡ ಹಾಗೂ ಐತಿಹಾಸಿಕ ನೆಲೆಗಳ ಮಹತ್ವವನ್ನು ಹಾಗೂ ಸದಾಕಾಲ ಪ್ರಜಾಕಲ್ಯಾಣವನ್ನೇ ಬಯಸಿದ್ದ ನಾಲ್ವಡಿಕೃಷ್ಣರಾಜ ಒಡೆಯರ್ ಅವರು ಹಲವು ಜನೋಪಯೋಗಿ ಕಾರ್ಯಗಳನ್ನು ಮಾಡುವ ಮೂಲಕ ಆಧುನಿಕ ಮೈಸೂರಿನ ಶಿಲ್ಪಿ ಎಂದು ಪ್ರಶಂಸಿಸಿದರು. ಜೊತೆಗೆ ಅಂದಿನ ದಿವಾನರಾದ ಸರ್.ಎಂ. ವಿಶ್ವೇಶ್ವರಯ್ಯ, ದಿವಾನ್ ಪೂರ್ಣಯ್ಯ, ಸರ್ ಮಿರ್ಜಾ ಇಸ್ಮಾಯಿಲ್, ಆಲಿಅಸ್ಕರ್ ಮುಂತಾದ



ಪ್ರಾತಸ್ಮರಣೀಯರುನೀಡಿದಅಮೂಲ್ಯಕೊಡುಗೆಯನ್ನು ಸ್ಮರಿಸಿದರು.

ಅಂದಿನ ದಸರಾ ಹಬ್ಬದ ನೆನಪು, ಕೆಲವು ಐರೋಪ್ಯ ವಿದ್ವಾಂಸರು ಮೈಸೂರು ಸಂಸ್ಥಾನದ ಇತಿಹಾಸ ಸಂಸ್ಕೃತಿ, ಭಾಷೆಗೆ ನೀಡಿದ ಕೊಡುಗೆಗಳನ್ನು ಶ್ಲಾಘಿಸಿದರು. ವಿದೇಶಗಳಲ್ಲಿ ಕನ್ನಡಿಗರಿಗೆ ಸಿಗುವ ಮಹತ್ವ ಹಾಗೂ ಗೌರವ ಸ್ಮರಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಸನಾತನನೈಜ ಇತಿಹಾಸ, ಸಂಸ್ಕೃತಿ, ಪರಂಪರೆಯ ರಕ್ಷಣೆಯಲ್ಲಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಟ್ಟು, ಅವರ ಪ್ರಶ್ನೆಗಳಿಗೆ ಉತ್ತರ ನೀಡಿದರು. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಭಾಷೆ ಹಾಗೂ ಕೌಶಲ್ಯಗಳ ಅನಿವಾರ್ಯತೆಯ ಬಗ್ಗೆ ವಿವರಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಶೈಕ್ಷಣಿಕ ಡೀನ್ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಶಮಿಕಾ ಶ್ರೀಹರಿ ಮತ್ತು ವಿಭಾಗಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 9.6.2023

ಗಣಿತ ಪ್ರಾಯೋಗಿಕವಾದ ವಸ್ತುವಾಗಬೇಕು

ಐಎಎಸ್– ಕೆಎಎಸ್ ಅಕಾಡೆಮಿಯ ಮಾಸ್ಟರ್ ಟ್ರೇನರ್ ರವಿ ಬ್ಯಾಹಟ್ಟಿ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ಗಣಿತವು ಬರೀ ಪುಸ್ತಕದ ಸಿದ್ಧಾಂತವಾಗಿರದೆ ಪ್ರಾಯೋಗಿಕ ವಸ್ತುವಾಗಬೇಕು ಎಂದು ಗುರುದೇವ ಐಎಎಸ್- ಕೆಎಎಸ್ ಅಕಾಡೆಮಿಯ ಮಾಸ್ಟರ್ ಟ್ರೇನರ್ ರವಿ ಬ್ಯಾಹಟ್ಟಿ ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ಇತಿಹಾಸ ವಿಭಾಗ, ವಾಣಿಜ್ಯಶಾಸ್ತ್ರ ವಿಭಾಗ, ಎಂಟ್ರಿ ಟು ಸರ್ವಿಸ್ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಬ್ಯಾಂಕಿಂಗ್ ಪರೀಕ್ಷೆಗಳನ್ನು ಹೇಗೆ ಯಶಸ್ವಿಯಾಗಿ ಎದುರಿಸುವುದು ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಾನವನಿಗೆ ಜೀವನದಲ್ಲಿ ಲೆಕ್ಕಾಚಾರ ಅತಿಮುಖ್ಯ. ಜೀವನದಲ್ಲಿ ಮನುಷ್ಯ ಏನೂ ಮಾಡದೇ ಇರುವುದಕ್ಕಿಂತ, ಏನನ್ನಾದರೂ ಸಾಧಿಸಬೇಕು. ಸ್ಥಿರತೆಯು ಯಶಸ್ಸಿನ ಕೀಲಿ ಕೈಯಾಗಿದೆ. ಆದರೆ ಈಗಿನ ವಿದ್ಯಾರ್ಥಿಗಳಿಗೆ ಸ್ಥಿರತೆಯು ಕಡಿಮೆಯಾಗಿರುವುದು ಕಂಡು ಬರುತ್ತಿರುವುದು ಬಹಳ ವಿಷಾದನಿಯ ಸಂಗತಿ ಎಂದು ಅವರು ಹೇಳಿದರು.

ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಮನುಷ್ಯ ಜೀವನದಲ್ಲಿ ಸಕರಾತ್ಮಕ ಯೋಚನೆ ಮಾಡುವದನ್ನು ಬೆಳೆಸಿಕೊಳ್ಳಬೇಕು. ಸಕರಾತ್ಮಕತೆಯ ಮನಸ್ಸು ಹೋಗುವ ಹಾಗೆ ಮಾಡಿಕೊಳ್ಳಬೇಕು. ಈಸಕರಾತ್ಮಕಯೋಚನೆಯಿಂದ ಮಾತ್ರ ದೊಡ್ಡದಾರಿ ಸಿಗುತ್ತದೆ. ಸಕರಾತ್ಮಕವಾಗಿದಲ್ಲಿ ದೊಡ್ಡ ಮಟ್ಟದ ಯಶಸ್ಸು ಸಿಗುತ್ತದೆ ಎಂದರು.

ಆದರೆ, ನಕಾರಾತ್ಮಕವಾಗಿದ್ದರೆ ಅಂತ್ಯದ ದಾರಿ ಹಿಡಿದಂತಾಗುತ್ತದೆ. ಸಕರಾತ್ಮಕ ಚಿಂತನೆಯಿಂದ ನಮ್ಮ ಗುರಿಗಳನ್ನು ಸಾಧಿಸಿದ್ದಲ್ಲಿ ಗೆಲುವು ಸಾಧ್ಯ. ಕೇವಲ ಹಣದಿಂದ ಕೆಲಸಗಳನ್ನು ಬಯಸುವುದು ಅಸಾಧ್ಯ. ಹಣವಿದ್ದರೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲ್ಯ ಇರಬೇಕು. ಅವಕಾಶಗಳಿಗೆ ಮುಕ್ತವಾಗಿರಬೇಕು. ಸಕರಾತ್ಮಕ ಛಲವಿರಬೇಕು. ಪಡೆಯುವುದಕ್ಕಿಂತ ಪಡೆದಿದ್ದನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಸಾಮರ್ಥ್ಯ ತೋರಬೇಕು. ಯಾವ ಮೂಲಗಳಿಂದ ವಿದ್ಯೆ ಹರಿದು ಬಂದರೂ ಅದನ್ನು ಪಡೆಯುವ ಹುರುಪು ವಿದ್ಯಾರ್ಥಿಗೆ ಇರಬೇಕು ಎಂದು ಅವರು ತಿಳಿಸಿದರು.



ಐಎಎಸ್– ಕೆಎಎಸ್ ಅಕಾಡೆಮಿಯ ಆಡಳಿತಾಧಿಕಾರಿ ಶಂಕರ್, ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ್, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಬಿ.ಆರ್. ನಿಖಿಲ್, ಐಕ್ಯೂಎಸಿ ಸಂಯೋಜಕಿ ಡಿ. ಗೀತಾ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 7.6.2023

ಮಹಾಜನ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅವರು ಸಸಿಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿ, ಪರಿಸರ ಸಂರಕ್ಷಣೆ ಮತ್ತು ಸದ್ಬಳಕೆ ಕುರಿತು ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದರು. ಎನ್ನೆಸ್ಸೆಸ್ ಘಟಕದ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ, ಸಿ.ಎಸ್. ಸಿದ್ದರಾಜು, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ ಇದ್ದರು.



ಆಂದೋಲನ
ದಿನ ಪತ್ರಿಕೆ

ಬುಧವಾರ, 7 ಜೂನ್ 2023

'ಅಂತಾರಾಷ್ಟ್ರೀಯ ಯೋಗ ದಿನ' ರಾಷ್ಟ್ರೀಯ ಯೋಗೋತ್ಸವ ಕಾರ್ಯಕ್ರಮದಲ್ಲಿ ಮೇಯರ್ ಅಭಿಮತ

'ದೈಹಿಕ ಮತ್ತು ಮಾನಸಿಕ ಸಮಸ್ಯೆ ನೀಗಿಸಲು ಯೋಗ ಸಹಕಾರಿ'





ಮೈಸೂರು: ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ನೀಗಿಸುವಲ್ಲಿ ಯೋಗ ಸಹಕಾರಿಯಾಗಿದೆ ಎಂದು ಮಹಾಪೌರ ಶಿವಕುಮಾರ್ ಹೇಳಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಎಪಿಜೆ ಅಬ್ದುಲ್ ಕಲಾಂ ಕ್ರೀಡಾಂಗಣದಲ್ಲಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಇನ್‌ಸ್ಟಿಟ್ಯೂಟ್ ಆಫ್ ಯೋಗ, ಮಹಾಜನ ವಿದ್ಯಾಸಂಸ್ಥೆ ಮತ್ತು ಎಸ್‌ಕೆಆರ್‌ಎಸ್ ಪಿಎಂ, ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ 'ಅಂತಾರಾಷ್ಟ್ರೀಯ ಯೋಗ ದಿನ-2023' ರಾಷ್ಟ್ರೀಯ ಯೋಗೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ಅರಮನೆ ನಗರಿ, ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿಯಾದಂತೆ ಯೋಗ ನಗರಿ ಎಂಬ ಮತ್ತೊಂದು ಹೆಗ್ಗಳಿಕೆಗೂ ಪಾತ್ರವಾಗಿದೆ. ಇದಕ್ಕೆ ಮೂಲ ಕಾರಣಕರ್ತರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಯೋಗವು ಒಂದಾಗಿದೆ. ಅವರು ಚಿತ್ರದುರ್ಗದ ಕೃಷ್ಣಮಾಚಾರ್ಯರನ್ನು ಆಹ್ವಾನಿಸಿ ಮೈಸೂರಿನಲ್ಲಿ ಯೋಗ ಪ್ರದರ್ಶನ ಮಾಡಿಸಿ, ಸಂಸ್ಕೃತ ಶಾಲೆಯನ್ನು ತೆರೆದು ಸಂಸ್ಥಾನದಲ್ಲಿದ್ದ ಶಾಲಾ ಮಕ್ಕಳಿಗೆ ಉಚಿತ ಯೋಗ ತರಬೇತಿ ನೀಡಿದ್ದು, ಇತಿಹಾಸ ಎಂದರು.

ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ರಾಘವೇಂದ್ರ ಪೈ ಮಾತನಾಡಿದರು. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಸ್ವಾಗತಿಸಿದರು. ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಯೋಗಿಕ್ ಸಂದೇಶ ನೀಡಿದರು. ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಸಿಇಒ ಡಾ.ಎಸ್.ಆರ್.ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಡೀನ್ ಡಾ.ಎಚ್.ಶ್ರೀಧರ ಹಾಗೂ ಅಂಗ ಸಂಸ್ಥೆಗಳ ಎಲ್ಲ ಮುಖ್ಯಸ್ಥರು ಹಾಜರಿದ್ದರು.

ಕಾರ್ಯಕ್ರಮದಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಎನ್‌ಸಿಸಿ, ಕೆಡೆಟ್ಸ್, ಎನ್‌ಎಸ್ ಎಸ್ ಸ್ವಯಂ ಸೇವಕರು, ಕಾಲೇಜಿನ ಸ್ವಯಂ ಸೇವಕರು ಇತರೆ ವಿಭಾಗದ ವಿದ್ಯಾರ್ಥಿಗಳು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತರರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 7.6.2023

ಸಮಾಧಾನ | ಮೇಯರ್ ಶಿವಕುಮಾರ್ ಅಭಿಮತ | ಅಂತಾರಾಷ್ಟ್ರೀಯ ಯೋಗ ದಿನ ಹಿನ್ನೆಲೆಯಲ್ಲಿ ಕಾರ್ಯಕ್ರಮ

ದೈಹಿಕ, ಮಾನಸಿಕ ಸಮಸ್ಯೆ ನೀಗಿಸುವಲ್ಲಿ ಯೋಗ ಪರಿಣಾಮಕಾರಿ

• ಕನ್ನಡಪ್ರಭ ವಾರ್ತೆ ಮೈಸೂರು

ಯೋಗ ಹಾಗೂ ಪ್ರಾಣಾಯಾಮ ಮಾಡುವುದರಿಂದ ಮಾನಸಿಕ ಮತ್ತು ದೈಹಿಕ ದೃಢತೆ ಹೆಚ್ಚುತ್ತದೆ. ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ನೀಗಿಸುವಲ್ಲಿ ಯೋಗ ಪರಿಣಾಮಕಾರಿ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಮಿನಿಸ್ಟ್ರಿ ಆಫ್ ಆಯುಷ್, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಇನ್‌ಸ್ಟಿಟ್ಯೂಟ್ ಆಫ್ ಯೋಗ, ಮಹಾಜನ ವಿದ್ಯಾಸಂಸ್ಥೆ ಮತ್ತು ಎಸ್‌ಕೆಆರ್‌ಎಸ್‌ಪಿಎಂ ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ ಸಂಯುಕ್ತವಾಗಿ ಅಂತಾರಾಷ್ಟ್ರೀಯ ಯೋಗ ದಿನ ಹಿನ್ನೆಲೆಯಲ್ಲಿ ಡಾ.ಎಪಿಜೆ ಅಬ್ದುಲ್ ಕಲಾಂ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ರಾಷ್ಟ್ರೀಯ ಯೋಗೋತ್ಸವವನ್ನು ಅವರು ಉದ್ಘಾಟಿಸಿ ಮಾತನಾಡಿದರು.



ಮೈಸೂರು ಜಿಲ್ಲೆ ಆರಮನೆ ನಗರಿ, ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿಯಾದ್ದಂತೆ ಯೋಗ ನಗರಿ ಎಂಬ ಮತ್ತೊಂದು ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಕ್ಕೆ ಮೂಲ ಕಾರಣಕರ್ತರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಅವರು ಮೈಸೂರಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಯೋಗ ತರಬೇತಿಯು ವಿಶ್ವವಿಖ್ಯಾತವಾಗಿದೆ ಎಂದರು.

ವಿದ್ಯಾರ್ಥಿಗಳು ತಮ್ಮ ಏಕಾಗ್ರತೆಯನ್ನು ವೃದ್ಧಿಸಿಕೊಳ್ಳಲು,ಮನಸ್ಸಿನಚಂಚಲತೆಯನ್ನು ನಿಗ್ರಹಿಸಲು ಯೋಗಾಭ್ಯಾಸ ಪೂರಕವಾಗಿದೆ. ವಿದ್ಯಾರ್ಥಿಗಳು ತಮಗೆ ಎದುರಾದ ಸನ್ನಿವೇಶಗಳನ್ನು ಸಮಚಿತ್ತವಾಗಿ ನಿಭಾಯಿಸಲು ಹಾಗೂ ಅವರ ಎಲ್ಲ ಯಶಸ್ಸಿಗೆ ಯೋಗಾಭ್ಯಾಸ ಅತ್ಯಗತ್ಯ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು, ಎನ್‌ಸಿಸಿ, ಕೆಡೆಟ್ಸ್, ಎನ್‌ಎಸ್‌ಎಸ್ ಸ್ವಯಂ ಸೇವಕರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಇತರರು ಪಾಲ್ಗೊಂಡು ಯೋಗಾಸನ ಮಾಡಿದರು.

ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ರಾಘವೇಂದ್ರ ಪೈ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ. ಸರೋಜಮ್ಮ, ಸಿಇಒ ಡಾ.ಎಸ್.ಆರ್. ರಮೇಶ್, ಮಹಾಜನ ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಡೀನ್ ಡಾ.ಎಚ್. ಶ್ರೀಧರ ಮೊದಲಾದವರು ಇದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಧವಾರ • ಜೂನ್ 7, 2023



ಮಹಾಜನ ಶಿಕ್ಷಣ ಸಂಸ್ಥೆ ಆವರಣದಲ್ಲಿ ಮಂಗಳವಾರ ನಡೆದ ಯೋಗೋತ್ಸವದಲ್ಲಿ ಪಾಲ್ಗೊಂಡ ಆಸಕ್ತರು

'ಒಡೆಯರ್‌ರಿಂದ ಯೋಗ ಪ್ರಸಿದ್ಧಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾಂಸ್ಕೃತಿಕ ನಗರಿಯು ಯೋಗ ನಗರಿಯಾಗಿ ಪ್ರಸಿದ್ಧಿಯಾಗಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣ. ಚಿತ್ರದುರ್ಗದ ಕೃಷ್ಣಮಾಚಾರ್ಯರನ್ನು ಆಹ್ವಾನಿಸಿ ಮೈಸೂರಿನ ಸಂಸ್ಥಾನದ ಶಾಲಾ ಮಕ್ಕಳಿಗೆ ಉಚಿತ ಯೋಗ ತರಬೇತಿ ನೀಡಿದ್ದು ಇತಿಹಾಸ' ಎಂದು ಮೇಯರ್ ಶಿವಕುಮಾರ್ ಹೇಳಿದರು.

ನಗರದ ಮಹಾಜನ ಶಿಕ್ಷಣ ಸಂಸ್ಥೆಯ ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಮಂಗಳವಾರ ಆಯುಷ್ ಇಲಾಖೆ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಇನ್‌ಸ್ಟಿಟ್ಯೂಟ್ ಆಫ್ ಯೋಗ, ಎಸ್‌ಕೆಆರ್‌ಎಸ್‌ಪಿಎಂ ವೇದವ್ಯಾಸ ಯೋಗ ಪ್ರತಿಷ್ಠಾನದಿಂದ ನಡೆದ ಯೋಗೋತ್ಸವದಲ್ಲಿ ಮಾತನಾಡಿದರು.

'ವಿದ್ಯಾರ್ಥಿಗಳು ತಮ್ಮ ಏಕಾಗ್ರತೆಯನ್ನು ವೃದ್ಧಿಸಿಕೊಳ್ಳಲು, ಮನಸ್ಸಿನ ಚಂಚಲತೆಯನ್ನು ನಿಗ್ರಹಿಸಲು ಯೋಗಾಭ್ಯಾಸ ಪೂರಕವಾಗಿದೆ' ಎಂದರು.

ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ರಾಘವೇಂದ್ರ ಪೈ, ಮಹಾಜನ ಪ್ರಥಮ ದರ್ಜೆ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್ ಯೋಗಿಕ್ ಸಂದೇಶ ನೀಡಿದರು. ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ಮುರಳೀಧರ್, ಆಡಳಿತಾಧಿಕಾರಿ ಪ್ರೊ. ಪಿ.ಸರೋಜಮ್ಮ, ಸಿಇಒ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಡೀನ್ ಡಾ.ಎಚ್.ಶ್ರೀಧರ ಪಾಲ್ಗೊಂಡಿದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

ಬುಧವಾರ, 7 ಜೂನ್ 2023

ದೈಹಿಕ, ಮಾನಸಿಕ ಸಮಸ್ಯೆ ನೀಗಿಸಲು ಯೋಗ ಪರಿಣಾಮಕಾರಿ

ರಾಷ್ಟ್ರೀಯ ಯೋಗೋತ್ಸವದಲ್ಲಿ ಮೇಯರ್ ಶಿವಕುಮಾರ್ ಹೇಳಿಕೆ

■ ವಿಕ ಸುದ್ದಿಲೋಕ ಮೈಸೂರು

ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ನೀಗಿಸುವಲ್ಲಿ ಯೋಗ ಪರಿಣಾಮಕಾರಿಯಾಗಿದೆ ಎಂದು ಮೇಯರ್ ಶಿವಕುಮಾರ್ ಹೇಳಿದರು.

ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನದ ಪೂರ್ವಭಾವಿ ಚಟುವಟಿಕೆಯಾಗಿ ಕೇಂದ್ರ ಸರಕಾರದ ಆಯುಷ್ ಮಂತ್ರಾಲಯ, ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಮಹಾಜನ ಶಿಕ್ಷಣ ಸಂಸ್ಥೆ ಹಾಗೂ ವೇದವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಯೋಗೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದರು.

''ಯೋಗ ಹಾಗೂ ಪ್ರಾಣಾಯಾಮ ಮಾಡುವುದರಿಂದ ಮಾನಸಿಕ ಮತ್ತು ದೈಹಿಕ ದೃಢತೆ ಹೆಚ್ಚುತ್ತದೆ. ವಿದ್ಯಾರ್ಥಿಗಳು ತಮಗೆ ಎದುರಾದ ಸನ್ನಿವೇಶಗಳನ್ನು ಸಮಚಿತ್ತವಾಗಿ ನಿಭಾಯಿಸಲು ಹಾಗೂ ಅವರ ಎಲ್ಲ ಯಶಸ್ಸಿಗೆ ಯೋಗಾಭ್ಯಾಸ ಅತ್ಯಗತ್ಯ,'' ಎಂದರು.

''ಮೈಸೂರು ಅರಮನೆ ನಗರಿ, ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿಯಾದ್ದಂತೆ ಯೋಗ ನಗರಿ ಎಂಬ ಮತ್ತೊಂದು ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಕ್ಕೆ ಮೂಲ ಕಾರಣಕರ್ತ ನಾಲ್ವಡಿ ಕೃಷ್ಣರಾಜ ಒಡೆಯರ್. ಅವರು ಮೈಸೂರಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಯೋಗ ತರಬೇತಿಯು ವಿಶ್ವವಿಖ್ಯಾತವಾಗಿದೆ,'' ಎಂದರು.



ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಯೋಗೋತ್ಸವ' ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಸೇರಿದಂತೆ ನೂರಾರು ಜನ ಯೋಗ ಪ್ರದರ್ಶಿಸಿದರು.

ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪ್ರಸಾದ ಮಾತನಾಡಿ, ''ಕಳೆದ ವರ್ಷ ನಡೆದ 8ನೇ ಅಂತಾರಾಷ್ಟ್ರೀಯ ಯೋಗ ದಿನದಂದು ಭಾರತದ ಪ್ರಧಾನಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸಿ ಅರಮನೆ ಆವರಣದಲ್ಲಿ ಯೋಗದ ವಿವಿಧ ಆಸನಗಳನ್ನು ಸಾರ್ವಜನಿಕರೊಂದಿಗೆ ಪ್ರದರ್ಶಿಸಿ ಇತಿಹಾಸ ಸೃಷ್ಟಿಸಿದರು. ಭಾರತದ 5 ಪ್ರಮುಖ ಯೋಗ ಕೇಂದ್ರಗಳಲ್ಲಿ ಮೈಸೂರು ಒಂದು ಎಂದು ಹೇಳಲು ಹೆಮ್ಮೆ ಎನ್ನಿಸುತ್ತದೆ,'' ಎಂದರು.

ಇದೇ ವೇಳೆ 'ಶಿಕ್ಷಣದಲ್ಲಿ ಯೋಗದ ಮಹತ್ವ' ಎನ್ನುವ ವಿಷಯ ಕುರಿತಂತೆ ವಿಶೇಷ ಉಪನ್ಯಾಸ ಮತ್ತು ಸಂವಾದ ನಡೆಯಿತು. ವಿದ್ಯಾರ್ಥಿ ಜೀವನದಲ್ಲಿ ಯೋಗದ ಮಹತ್ವ ಕುರಿತು ಸ್ವಾಮಿ ಮಹಮೇದಾನಂದಜೀ ಮಹಾರಾಜ್ ಮಾತನಾಡಿದರು. 'ಓದಿನಲ್ಲಿ ಎದುರಾಗುವ ಸವಾಲುಗಳಿಗೆ ಯೋಗೋಪಾಯಗಳು' ವಿಷಯ ಕುರಿತು ಯೋಗಾಚಾರ್ಯ ಡಾ. ಪಿ.ಎನ್.ಗಣೇಶ್ ಕುಮಾರ್ ಮಾತನಾಡಿದರು. 'ಉತ್ತಮ ವಿದ್ಯಾರ್ಥಿ ಜೀವನಕ್ಕೆ ಭಗವದ್ಗೀತೆಯ ಪಾಠಗಳು ವಿಷಯ' ಕುರಿತು ಪಿ.ಡಿ.ಜಿ.ರಂಗ ಕೃಷ್ಣ(ನಿವೃತ್ತ) ಅವರು ಉಪನ್ಯಾಸ ನೀಡಿದರು.

ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಚಾರ್ಯ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಡೀನ್ ಡಾ. ಶ್ರೀಧರ, ಪ್ರಾಧ್ಯಾಪಕಿ ಶಮಿಕಾ ಶ್ರೀಹರಿ ಇದ್ದರು.

ವಿಜಯವಾಣಿ
ಕನ್ನಡಿಗರ ಧ್ವನಿ

ಬುಧವಾರ 7 ಜೂನ್ 2023
7 JUNE 2023

ಮೇಯರ್ ಶಿವಕುಮಾರ್ ಅಭಿಮತ | ರಾಷ್ಟ್ರೀಯ ಯೋಗೋತ್ಸವ

ಯೋಗದಿಂದ ಚಂಚಲತೆ ದೂರ

■ ವಿಜಯವಾಣಿ ಸುದ್ದಿಜಾಲ ಮೈಸೂರು

ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಭಾಂಗಣದಲ್ಲಿ ಮಂಗಳವಾರ 'ರಾಷ್ಟ್ರೀಯ ಯೋಗೋತ್ಸವ' ಕಾರ್ಯಕ್ರಮ ನಡೆಯಿತು.

ಅಂತಾರಾಷ್ಟ್ರೀಯ ಯೋಗ ದಿನದ ಪೂರ್ವಭಾವಿ ಚಟುವಟಿಕೆಯಾಗಿ ಕೇಂದ್ರ ಸರ್ಕಾರದ ಆಯುಷ್ ಮಂತ್ರಾಲಯ, ಮುರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಮಹಾಜನ ಶಿಕ್ಷಣ ಸಂಸ್ಥೆ ಹಾಗೂ ವೇದವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಗರದ ನೂರಾರು ಯೋಗಪಟುಗಳು ಯೋಗ ಪ್ರದರ್ಶನ ನೀಡಿದರು.

ಮೇಯರ್ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ನೀಗಿಸುವಲ್ಲಿ ಯೋಗ ಪರಿಣಾಮಕಾರಿಯಾಗಿದೆ. ಮೈಸೂರು ಅರಮನೆ ನಗರಿ, ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿಯಾಗಿರುವಂತೆ 'ಯೋಗ ನಗರಿ' ಎಂಬ ಮತ್ತೊಂದು ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಕ್ಕೆ ಮೂಲ ಕಾರಣಕರ್ತರು ನಾಲ್ವಡಿ ಕೃಷ್ಣರಾಜ ಒಡೆಯರ್. ಅವರು ಮೈಸೂರಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಯೋಗ ತರಬೇತಿ ಕೂಡ ವಿಶ್ವವಿಖ್ಯಾತವಾಗಿದೆ. ಅವರು ಚಿತ್ರದುರ್ಗದ ಕೃಷ್ಣಮಾಚಾರ್ಯರನ್ನು ಆಹ್ವಾನಿಸಿ, ಮೈಸೂರಿನಲ್ಲಿ ಯೋಗ ಪ್ರದರ್ಶನ ಮಾಡಿಸಿ, ಸಂಸ್ಕೃತ ಶಾಲೆಯನ್ನು ತೆರೆದು ಸಂಸ್ಥಾನದಲ್ಲಿದ್ದ ಶಾಲಾ ಮಕ್ಕಳಿಗೆ ಉಚಿತ ಯೋಗ ತರಬೇತಿ ನೀಡಿದ್ದು ಇತಿಹಾಸ. ವಿದ್ಯಾರ್ಥಿಗಳು ತಮ್ಮ ಏಕಾಗ್ರತೆಯನ್ನು ವೃದ್ಧಿಸಿಕೊಳ್ಳಲು, ಮನಸ್ಸಿನ ಚಂಚಲತೆಯನ್ನು ನಿಗ್ರಹಿಸಲು ಯೋಗಾಭ್ಯಾಸ ಪೂರಕವಾಗಿದೆ ಎಂದರು.

ಯೋಗ ಹಾಗೂ ಪ್ರಾಣಾಯಾಮ ಮಾಡುವುದರಿಂದ ಮಾನಸಿಕ ಮತ್ತು ದೈಹಿಕ ದೃಢತೆ ಹೆಚ್ಚುತ್ತದೆ. ವಿದ್ಯಾರ್ಥಿಗಳು ತಮಗೆ ಎದುರಾದ ಸನ್ನಿವೇಶಗಳನ್ನು ಸಮಚಿತ್ತವಾಗಿ ನಿಭಾಯಿಸಲು ಹಾಗೂ ಅವರ ಎಲ್ಲ ಯಶಸ್ಸಿಗೆ ಯೋಗಾಭ್ಯಾಸ ಅತ್ಯಗತ್ಯ ಎಂದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಯೋಗೋತ್ಸವ'ದಲ್ಲಿ ಭಾಗಿಯಾಗಿದ್ದ ಯೋಗಪಟುಗಳು.



ವಿಜಯವಾಣಿ ಚಿತ್ರ

ನಗರದ ಜಯಲಕ್ಷ್ಮೀಪುರಂನ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ಯೋಗೋತ್ಸವ' ಕಾರ್ಯಕ್ರಮವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು. ಡಾ.ಕೆ.ರಾಘವೇಂದ್ರ ಪೈ, ಟಿ.ಮುರಳೀಧರ ಭಾಗವತ್, ಡಾ.ಬಿ.ಆರ್.ಜಯಕುಮಾರಿ ಇತರರಿದ್ದರು.

ಪ್ರಧಾನಿ ನರೇಂದ್ರ ಮೋದಿ ಪಾತ್ರ ದೊಡ್ಡದು

ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪೈ ಮಾತನಾಡಿ, ಭಾರತದ ಅನರ್ಘ್ಯ ಕೊಡುಗೆಗಳಲ್ಲಿ ಯೋಗ ಸಹ ಒಂದು. ಜೂನ್ 21ನೇ ದಿನವನ್ನು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪಾತ್ರ ದೊಡ್ಡದು. ಭಾರತದಲ್ಲಿ ಯೋಗಕ್ಕೆ ನೂರಾರು ವರ್ಷಗಳಷ್ಟು ಇತಿಹಾಸವಿದೆ. ಕಳೆದ ವರ್ಷ ನಡೆದ 8ನೇ ಅಂತಾರಾಷ್ಟ್ರೀಯ ಯೋಗ ದಿನದಂದು ಪ್ರಧಾನಿ ಮೋದಿ ಅವರು ಮೈಸೂರಿಗೆ ಆಗಮಿಸಿ ಅರಮನೆ ಆವರಣದಲ್ಲಿ ಯೋಗದ ವಿವಿಧ ಆಸನಗಳನ್ನು ಸಾರ್ವಜನಿಕರೊಂದಿಗೆ ಪ್ರದರ್ಶಿಸಿ ಇತಿಹಾಸ ಸೃಷ್ಟಿಸಿದರು. ಭಾರತದ 5 ಪ್ರಮುಖ ಯೋಗ ಕೇಂದ್ರಗಳಲ್ಲಿ ಮೈಸೂರೂ ಒಂದು ಎಂದು ಹೇಳಲು ಹೆಮ್ಮೆ ಎನ್ನಿಸುತ್ತದೆ ಎಂದರು. 'ಶಿಕ್ಷಣದಲ್ಲಿ ಯೋಗದ ಮಹತ್ವ' ಕುರಿತು ವಿಶೇಷ ಉಪನ್ಯಾಸ ಮತ್ತು ಸಂವಾದ ನಡೆಯಿತು. ವಿದ್ಯಾರ್ಥಿ ಜೀವನದಲ್ಲಿ ಯೋಗದ ಮಹತ್ವ ಕುರಿತು ಸ್ವಾಮಿ ಮಹ ಮೇದಾನಂದಜೀ ಮಹಾರಾಜ್ ಮಾತನಾಡಿದರು. 'ಓದಿನಲ್ಲಿ ಎದುರಾಗುವ ಸವಾಲುಗಳಿಗೆ ಯೋಗೋಪಾಯಗಳು' ಕುರಿತು ಯೋಗಾಚಾರ್ಯ ಡಾ. ಪಿ.ಎನ್.ಗಣೇಶ್ ಕುಮಾರ್ ಮಾತನಾಡಿದರು. 'ಉತ್ತಮ ವಿದ್ಯಾರ್ಥಿ ಜೀವನಕ್ಕೆ ಭಗವದ್ಗೀತೆಯ ಪಾಠಗಳು' ಕುರಿತು ನಿವೃತ್ತ ಉಪನ್ಯಾಸಕ ಪಿ.ಡಿ.ಜಿ.ರಂಗ ಕೃಷ್ಣ ಉಪನ್ಯಾಸ ನೀಡಿದರು. ಮಹಾಜನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮೀ ಮುರಳೀಧರ್, ಪ್ರಾಚಾರ್ಯೆ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ, ಡೀನ್ ಡಾ.ಶ್ರೀಧರ, ಪ್ರಾಧ್ಯಾಪಕಿ ಶಮಿಕಾ ಶ್ರೀಹರಿ ಇತರರಿದ್ದರು.1000ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಎನ್‌ಸಿಸಿ, ಕೆಡೆಟ್ಸ್, ಎನ್‌ಎಸ್‌ಎಸ್ ಸ್ವಯಂ ಸೇವಕರು, ಕಾಲೇಜಿನ ಸ್ವಯಂ ಸೇವಕರು ಇತರ ವಿಭಾಗದ ವಿದ್ಯಾರ್ಥಿಗಳು, ಅಧ್ಯಾಪಕರು, ಅಧ್ಯಾಪಕೇತರರು ಪಾಲ್ಗೊಂಡಿದ್ದರು.

MFGE In the Eyes of the Press.....

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಬುಧವಾರ 7.6.2023



ಕಾಲೇಜು ಶಿಕ್ಷಣ ಇಲಾಖೆಯ ನೂತನ ಜಂಟಿ ನಿರ್ದೇಶಕರಾಗಿ ನೇಮಕಗೊಂಡ ಡಾ.ಎಚ್. ಎಂ. ವಿಜಯಲಕ್ಷ್ಮಿ ಅವರನ್ನು ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ ಹಾಗೂ ಡಾ.ಎಚ್.ಆರ್. ತಿಮ್ಮೇಗೌಡ ಅಭಿನಂದಿಸಿದರು.

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಗುರುವಾರ 29.6.2023

ವಿದ್ಯಾರ್ಥಿಗಳೇ ಮಾನವೀಯತೆ ರೂಢಿಸಿಕೊಳ್ಳಿ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಾದದಲ್ಲಿ ನ್ಯಾ.ಸಂತೋಷ್ ಹೆಗ್ಡೆ ಸಲಹೆ





• ಕನ್ನಡಪ್ರಭ ವಾರ್ತೆ ಮೈಸೂರು

ವಿದ್ಯಾರ್ಥಿಗಳು ತಮ್ಮ ಜೀವನ ಪಥದಲ್ಲಿ ತೃಪ್ತಿ ಹಾಗೂ ಮಾನವೀಯತೆ ರೂಢಿಸಿಕೊಳ್ಳಬೇಕು ಎಂದು ನ್ಯಾ.ಎನ್. ಸಂತೋಷ್ ಹೆಗ್ಡೆ ಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗ ಎನ್‌ಸಿಸಿ ಘಟಕಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಾನವೀಯತೆಯ ಮೌಲ್ಯಗಳನ್ನು ಅಳವಡಿಸಿಕೊಂಡರೆ ಮಾತ್ರ ಸಮಾಜದಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಬಹುದು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಎರಡು ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಒಂದು ತೃಪ್ತಿ ಮತ್ತೊಂದು ಮಾನವೀಯತೆ. ತೃಪ್ತಿ ಇಲ್ಲದಿದ್ದರೆ ದುರಾಸೆ ಹೆಚ್ಚಾಗುತ್ತದೆ. ದುರಾಸೆಯಿಂದ ಸಾಮಾಜಿಕ ಅಸಮಾನತೆಗೆ ದಾರಿಯಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಜೀವನ ಪಥದಲ್ಲಿ ಮಾನವೀಯತೆಯ ಅಂಶವನ್ನು ರೂಢಿಸಿಕೊಂಡಾಗ ಮಾತ್ರ ಅವರು ಸತ್ಪಜೆಯಾಗಲು ಸಾಧ್ಯ ಎಂದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಉತ್ತಮವಾದ ಹಾಗೂ ಮೌಲ್ಯಯುತ ವಾದ ಬೋಧನೆಯನ್ನು ಬೋಧಿಸುತ್ತಾರೆ. ಅದನ್ನು ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವ ಹೊಣೆಗಾರಿಕೆ ವಿದ್ಯಾರ್ಥಿಗಳದ್ದು. ಇಂದು ಶ್ರೀಮಂತಿಗೆ ಮತ್ತು ಅಧಿಕಾರವನ್ನು ಪೂಜಿಸುವ ಸಮಾಜ ಸೃಷ್ಟಿಯಾಗಿದೆ. ಇದರಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಪ್ರತಿಯೊಬ್ಬ ನಾಗರೀಕರನು ಕಾನೂನಿನ ಚೌಕಟ್ಟಿನಲ್ಲಿ ಅಭಿವೃದ್ಧಿ ಹೊಂದಬೇಕೇ ಹೊರತು ಮತ್ತೊಬ್ಬರ ಜೀವನಕ್ಕೆ ಹಾನಿ ಮಾಡಬಾರದು. ಆಡಳಿತದಲ್ಲಿ ಆಗುವ ಅನ್ಯಾಯಕ್ಕೆ ಪರಿಹಾರ ಕೊಡಿಸಲು ಇರುವುದೇ ಲೋಕಾಯುಕ್ತ. ಅನ್ಯಾಯದ ವಿರುದ್ಧ ನಾಗರೀಕರು ಲೋಕಾಯುಕ್ತದ ಸದುಪಯೋಗವನ್ನು ಪಡೆದುಕೊಳ್ಳಬೇಕು. ಅಧಿಕಾರಿಗಳಿಗೆ ತತ್ವಪಾಲನೆಯಲ್ಲಿ ಪ್ರಾಮಾಣಿಕತೆ ಇರಬೇಕು. ನಾವು ಮಾಡಿದ ಉತ್ತಮ ಕೆಲಸದಿಂದ ಸಿಗುವ ಆತೃತೃಪ್ತಿಗಿಂತ ದೊಡ್ಡದಾದದ್ದು ಬದುಕಿನಲ್ಲಿ ಮತ್ತೇನೂ ಇಲ್ಲ. ಪ್ರತಿಯೊಬ್ಬ ರಾಜಕಾರಣಿಯು ತಾನು ಸಾರ್ವಜನಿಕ ಸೇವಕ ಎಂದು ಭಾವಿಸಿ ಪ್ರಾಮಾಣಿಕವಾಗಿ ಬದ್ಧತೆಯಿಂದ ಸಾಮಾಜಿಕ ಸುಧಾರಣೆ ಮಾಡಿದಾಗ ಮಾತ್ರ ಸರ್ವಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣವಾಗುತ್ತದೆ ಎಂದು ಅವರು ತಿಳಿಸಿದರು.

ಅಧಿಕ ಸಂಖ್ಯೆಯ ನ್ಯಾಯಾಲಯಗಳ ಜೊತೆಗೆ ಆಪಾರ ಸಂಖ್ಯೆಯ ಮೊಕದ್ದಮೆಗಳಿಂದಾಗಿ ತೀರ್ಪು ನಿಧಾನವಾಗುತ್ತಿರುವುದು ವಿಪರ್ಯಾಸ. 1973ರಲ್ಲಿ 500 ಮೊಕದ್ದಮೆಗಳು ಕಂಡು ಬಂದರೆ ಪ್ರಸ್ತುತ 5 ಲಕ್ಷ ಮೊಕದ್ದಮೆಗಳಿವೆ. ಭ್ರಷ್ಟತೆ ಇಲ್ಲದಿರುವ ಯಾವ ಕ್ಷೇತ್ರವೂ ಇಲ್ಲ. ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರ ಪ್ರಾಮಾಣಿಕ ಪ್ರಯತ್ನ, ಪರಿಶ್ರಮ ಅಗತ್ಯ ಎಂದರು. ವಿದ್ಯಾರ್ಥಿಗಳು ಸಂವಾದದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪ್ರಾಂಶುಪಾಲೆ ಡಾ. ಬಿ.ಆರ್. ಜಯ ಕುಮಾರಿ ಮಾತನಾಡಿ, ಯುವ ಸಮೂಹಕ್ಕೆ ನ್ಯಾಯಾಂಗದ ಪರಿಕಲ್ಪನೆಯ ಅರಿವು ಇರಬೇಕು. ವಿದ್ಯಾರ್ಥಿಗಳಿಗೆ ಪುಸ್ತಕಗಳ ಓದಿನ ಅರಿವಿನ ಜೊತೆಗೆ ಸಾಮಾಜಿಕ ವ್ಯವಸ್ಥೆಯ ಪ್ರಜ್ಞೆ ಅತ್ಯಗತ್ಯ. ಆಧುನಿಕತೆಯ ನಾಗಾಲೋಟದಲ್ಲಿ ತೇಲುತ್ತಿರುವ ಇಂದಿನ ವಿದ್ಯಾರ್ಥಿಗಳಿಗೆ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರ ಬದುಕು ಆದರ್ಶವಾಗಬೇಕು ಜೊತೆಗೆ ಉತ್ತಮ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌ. ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಸಿಇಒ ಹಾಗೂ ಶೈಕ್ಷಣಿಕ ಸಲಹೆಗಾರ ಡಾ. ಎಸ್. ಆರ್. ರಮೇಶ್, ಎನ್‌ಸಿಸಿ ಅಧಿಕಾರಿಗಳಾದ ಬಿ.ಆರ್. ನಿವಿಲ್, ಡಾ.ಪಿ.ಜಿ. ಪುಷ್ಪರಾಣಿ, ಡಾ. ಎಂ.ಆರ್. ಇಂದ್ರಾಣಿ ಇದ್ದರು. ಡಾ. ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ. ಎಚ್. ಶ್ರೀಧರ, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ. ಪ್ರಭುಸ್ವಾಮಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳು ಈ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

MFGE In the Eyes of the Press.....

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗುರುವಾರ • ಜೂನ್ 29, 2023

ಮಾನವೀಯ ಮೌಲ್ಯದಿಂದ ಸಮಾಜ ಸುಧಾರಣೆ

ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ.. ಎನ್. ಸಂತೋಷ್ ಹೆಗ್ಡೆ ಅಭಿಮತ

ಪ್ರಜಾವಾಣಿ ವಾರ್ತೆ

ಮೈಸೂರು: 'ಎಲ್ಲರೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡರೆ ಮಾತ್ರ ಸಮಾಜದಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸಬಹುದು ಹಾಗೂ ಸುಧಾರಣೆ ಕಾಣಬಹುದು' ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಹೇಳಿದರು.

ಇಲ್ಲಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗ, ಎನ್‌ಸಿಸಿ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಕಾನೂನು ಸುವ್ಯವಸ್ಥೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆ' ವಿಷಯದ ಬಗ್ಗೆ ಅವರು ಮಾತನಾಡಿದರು.

'ವಿದ್ಯಾರ್ಥಿಗಳು ಜೀವನದಲ್ಲಿ ಎರಡು ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಒಂದು ತೃಪ್ತಿ, ಮತ್ತೊಂದು ಮಾನವೀಯತೆ. ತೃಪ್ತಿ ಇಲ್ಲದಿದ್ದರೆ ದುರಾಸೆ ಹೆಚ್ಚಾಗುತ್ತದೆ. ದುರಾಸೆಯು ಸಾಮಾಜಿಕ ಅಸಮಾನತೆಗೆ ದಾರಿಯಾಗುತ್ತದೆ. ಮಾನವೀಯತೆ ರೂಢಿಸಿಕೊಂಡಾಗ ಮಾತ್ರ ಸತ್ಯ ಚೆಯಾಗಲು ಸಾಧ್ಯವಿದೆ. ಶಿಕ್ಷಕರು ಉತ್ತಮ ಹಾಗೂ ಮೌಲ್ಯಯುತ ಬೋಧನೆ ಮಾಡುತ್ತಾರೆ. ಅದನ್ನು ಆಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವ ಹೊಣೆಗಾರಿಕೆ ವಿದ್ಯಾರ್ಥಿಗಳದ್ದು' ಎಂದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ.ಎನ್.ಸಂತೋಷ್ ಹೆಗ್ಡೆ ಮಾತನಾಡಿದರು

ಕಾನೂನಿನ ಚೌಕಟ್ಟಿನಲ್ಲಿ: 'ಇಂದಿನ ಸಮಾಜದಲ್ಲಿ ಶ್ರೀಮಂತಿಕೆ ಮತ್ತು ಅಧಿಕಾರವನ್ನು ಪೂಜಿಸುವುದು ಕಂಡುಬರುತ್ತಿದೆ. ಇದರಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಪ್ರತಿಯೊಬ್ಬರೂ ಕಾನೂನಿನ ಚೌಕಟ್ಟಿನಲ್ಲಿ ಅಭಿವೃದ್ಧಿ ಹೊಂದಬೇಕೇ ಹೊರತು ಮತ್ತೊಬ್ಬರ ಜೀವನಕ್ಕೆ ಹಾನಿ ಮಾಡುವ ಮೂಲಕವಲ್ಲ' ಎಂದು ತಿಳಿಸಿದರು.

'ಆಡಳಿತದಲ್ಲಿ ಆಗುವ ಅನ್ಯಾಯಕ್ಕೆ ಪರಿಹಾರ ಕೊಡಿಸಲು ಇರುವುದೇ ಲೋಕಾಯುಕ್ತ. ಅನ್ಯಾಯದ ವಿರುದ್ಧ ನಾಗರಿಕರು ಸಿಡಿದೇಳಬೇಕು. ಲೋಕಾಯುಕ್ತದ ಸದುಪಯೋಗ ಪಡೆದುಕೊಳ್ಳಬೇಕು' ಎಂದರು.

> ಪ್ರತಿ ಕ್ಷೇತ್ರದಲ್ಲೂ ಭ್ರಷ್ಟಾಚಾರ ಇದೆ. ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರ ಪ್ರಾಮಾಣಿಕ ಪ್ರಯತ್ನ ಹಾಗೂ ಪರಿಶ್ರಮ ಅಗತ್ಯ
> **ನ್ಯಾ.ಸಂತೋಷ್ ಹೆಗ್ಡೆ,**
> ನಿವೃತ್ತ ಲೋಕಾಯುಕ್ತ

'ಮಾಡುವ ಉತ್ತಮ ಕೆಲಸದಿಂದ ಸಿಗುವ ಆತ್ಮತೃಪ್ತಿಗಿಂತ ದೊಡ್ಡದು ಇನ್ನೇನೂ ಇಲ್ಲ. ತಾನು ಸಾರ್ವಜನಿಕರ ಸೇವಕ ಎಂದು ಭಾವಿಸಿ ಪ್ರತಿ ರಾಜಕಾರಣಿಯೂ ಪ್ರಾಮಾಣಿಕ ಮತ್ತು ಬದ್ಧತೆಯಿಂದ ಕೆಲಸ ಮಾಡಿದಾಗ ಮಾತ್ರ ಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ತೀರ್ಪು ನಿಧಾನ: 'ಅಧಿಕ ಸಂಖ್ಯೆಯ ನ್ಯಾಯಾಲಯಗಳಿವೆ. ಆದರೆ, ಅಷ್ಟಾರ ಸಂಖ್ಯೆಯ ಮೊಕದ್ದಮೆಗಳಿಂದಾಗಿ ತೀರ್ಪು ನಿಧಾನವಾಗುತ್ತಿದೆ. 1973ರಲ್ಲಿ 500 ಮೊಕದ್ದಮೆಗಳು ಕಂಡು ಬಂದರೆ ಪ್ರಸ್ತುತ ಈ ಸಂಖ್ಯೆ 5 ಲಕ್ಷಕ್ಕೆ ಏರಿದೆ' ಎಂದು ತಿಳಿಸಿದರು.

ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, 'ಯುವ ಸಮೂಹಕ್ಕೆ ನ್ಯಾಯಾಂಗದ ಪರಿಕಲ್ಪನೆಯ ಅರಿವಿರಬೇಕು. ವಿದ್ಯಾರ್ಥಿಗಳು ಪಠ್ಯದೊಂದಿಗೆ ಸಾಮಾಜಿಕ ವ್ಯವಸ್ಥೆಯ ಪ್ರಜ್ಞೆಯನ್ನೂ ಹೊಂದಬೇಕು' ಎಂದು ಹೇಳಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಎನ್‌ಸಿಸಿ ಅಧಿಕಾರಿಗಳಾದ ಮೇಜರ್ ನಿಖಿಲ್ ಬಿ.ಆರ್, ಡಾ.ಪುಷ್ಪಾರಾಣಿ ಪಿ.ಜಿ., ಕ್ಯಾಪ್ಟನ್ ಇಂದ್ರಾಣಿ ಎಂ.ಆರ್., ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಹಾಗೂ ಮಹಾಜನ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ಪ್ರಭುಸ್ವಾಮಿ ಸಾಲ್ಕೊಂಡಿದ್ದರು.

MFGE In the Eyes of the Press.....

ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ
ಗುರುವಾರ,29 ಜೂನ್ 2023

ಮಾನವೀಯತೆ ರೂಢಿಸಿಕೊಳ್ಳಿ

■ **ವಿಕ ಸುದ್ದಿಲೋಕ** ಮೈಸೂರು

ವಿದ್ಯಾರ್ಥಿಗಳುತಮ್ಮಜೀವನಪಥದಲ್ಲಿಮಾನವೀಯತೆಯ ಅಂಶವನ್ನು ರೂಢಿಸಿಕೊಂಡಾಗ ಮಾತ್ರ ಅವರು ಸತ್ಪಜೆಯಾಗಲು ಸಾಧ್ಯ ಎಂದು ನಿವೃತ್ತ ನ್ಯಾ.ಎನ್. ಸಂತೋಷ್ ಹೆಗ್ಡೆಹೇಳಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಪತ್ರಿಕೋದ್ಯಮ ಹಾಗೂ ಸಂವಹನ ವಿಭಾಗ, ಎನ್‌ಸಿಸಿ ಘಟಕಗಳು ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

''ತೃಪ್ತಿ ಇಲ್ಲದಿದ್ದರೆ ದುರಾಸೆ ಹೆಚ್ಚಾಗುತ್ತದೆ. ದುರಾಸೆಯಿಂದ ಸಾಮಾಜಿಕ ಅಸಮಾನತೆಗೆ ದಾರಿಯಾಗುತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಉತ್ತಮವಾದ ಹಾಗೂ ಮೌಲ್ಯಯುತವಾದ ಬೋಧನೆಯನ್ನು ಬೋಧಿಸುತ್ತಾರೆ. ಅದನ್ನು ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವ ಹೊಣೆಗಾರಿಕೆ ವಿದ್ಯಾರ್ಥಿಗಳಿಗೆ ಇದೆ. ವಿದ್ಯಾರ್ಥಿಗಳು ತಮ್ಮ ಜೀವನ ಪಥದಲ್ಲಿ ತೃಪ್ತಿ ಹಾಗೂ ಮಾನವೀಯತೆಯನ್ನು ರೂಢಿಸಿಕೊಳ್ಳಬೇಕು,'' ಎಂದರು.

''ಅಧಿಕಾರಿಗಳಿಗೆ ತತ್ಪಾಲನೆಯಲ್ಲಿ ಪ್ರಾಮಾಣಿಕತೆ ಇರಬೇಕು. ನಾವು ಮಾಡಿದ ಉತ್ತಮ ಕೆಲಸದಿಂದ ಸಿಗುವ ಆತ್ಮತೃಪ್ತಿಗಿಂತ ದೊಡ್ಡದಾದದ್ದು ಬದುಕಿನಲ್ಲಿ ಮತ್ತೇನೂ ಇಲ್ಲ. ಪ್ರತಿಯೊಬ್ಬ ರಾಜಕಾರಣಿಯು ತಾನು ಸಾರ್ವಜನಿಕ ಸೇವಕ ಎಂದು ಭಾವಿಸಿ ಪ್ರಾಮಾಣಿಕವಾಗಿ ಬದ್ಧತೆಯಿಂದ ಸಾಮಾಜಿಕ ಸುಧಾರಣೆ ಮಾಡಿದಾಗ ಮಾತ್ರ ಸರ್ವ ಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣವಾಗುತ್ತದೆ,'' ಎಂದು ತಿಳಿಸಿದರು.

''ಅಧಿಕ ಸಂಖ್ಯೆಯ ನ್ಯಾಯಾಲಯಗಳ ಜತೆಗೆ ಅಪಾರ ಸಂಖ್ಯೆಯ ಮೊಕದ್ದಮೆಗಳಿಂದಾಗಿ ತೀರ್ಪು ನಿಧಾನವಾಗುತ್ತಿರುವುದು ವಿಪರ್ಯಾಸ. 1973ರಲ್ಲಿ 500 ಮೊಕದ್ದಮೆಗಳು ಕಂಡು ಬಂದರೆ ಪ್ರಸ್ತುತ 5 ಲಕ್ಷ ಮೊಕದ್ದಮೆಗಳಿವೆ. ಭ್ರಷ್ಟತೆ ಇಲ್ಲದಿರುವ ಯಾವ ಕ್ಷೇತ್ರವೂ ಇಲ್ಲ. ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬರ ಪ್ರಾಮಾಣಿಕ ಪ್ರಯತ್ನ ಪರಿಶ್ರಮ ಆಗಬೇಕು,'' ಎಂದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ.ವಿಜಯಲಕ್ಷ್ಮೀ ಮುರಳೀಧರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ. ಎಸ್.ಆರ್. ರಮೇಶ್, ಮೇಜರ್ ಬಿ.ಆರ್.ನಿಖಿಲ್, ಡಾ.ಪಿ.ಜಿ.ಪುಷ್ಪರಾಣಿ, ಡಾ.ಕ್ಯಾಪ್ಟನ್ ಎಂ.ಆರ್.ಇಂದ್ರಾಣಿ, ಡಾ. ಎಚ್.ಆರ್. ತಿಮ್ಮೇಗೌಡ, ಡಾ. ಎಚ್. ಶ್ರೀಧರ, ಪ್ರೊ. ಪ್ರಭುಸ್ವಾಮಿ ಮತ್ತಿತರರು ಇದ್ದರು.

ವಿದ್ಯಾರ್ಥಿಗಳಿಗೆ ನಿವೃತ್ತ ನ್ಯಾ .ಎನ್.ಸಂತೋಷ್ ಹೆಗ್ಡೆ ಸಲಹೆ



ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಸೋಮವಾರ 12.6.2023

ಮಹಾಮ್ ಫೆಸ್ಟ್ ಲೋಗೋ ಬಿಡುಗಡೆ

ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಜುಲೈನಲ್ಲಿ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಜುಲೈನಲ್ಲಿ ಆಯೋಜಿಸಿರುವ ಮಹಾಮ್ ಫೆಸ್ಟ್ ಲೋಗೋವನ್ನು ಕಾಲೇಜಿನ ಜಗದೀಶ್ ಪ್ರಸಾದ್‌ಕ್ರೀಡಾಂಗಣದಲ್ಲಿಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ ಭಾಗವತ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಈ ರೀತಿಯ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನುಸಕ್ರಿಯವಾಗಿತೊಡಗಿಸಿಕೊಂಡಿರುವುದು ಪ್ರಶಂಸನಿಯ. ಈ ರೀತಿಯ ಫೆಸ್ಟ್‌ಗಳು ವಿದ್ಯಾರ್ಥಿಗಳಲ್ಲಿರುವನಾಯಕತ್ವದ ಗುಣವನ್ನು ಮತ್ತಷ್ಟು ದ್ವಿಗುಣಗೊಳಿಸುವಲ್ಲಿ ಪ್ರಧಾನ ಪಾತ್ರವನ್ನು



ವಹಿಸುತ್ತವೆ ಎಂದರು.

ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಮಹಾಜನ ಸ್ವಾತ್ತ ಕೋತ್ತರಕೇಂದ್ರದ ಪ್ರಭಾರನಿರ್ದೇಶಕ ಡಾ. ಹರೀಶ್ ಮಾಚಯ್ಯ, ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಸಿಇಒ ಡಾ.ಎಸ್. ಆರ್. ರಮೇಶ್, ಮಹಾಮ್ ಫೆಸ್ಟ್‌ನ ಸಂಯೋಜನಾಧಿಕಾರಿ ಡಾ.ಎಚ್. ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ ಇದ್ದರು. ಸೃಷ್ಟಿ ಆರ್. ಜೋಯಿಸ್ ನಿರೂಪಿಸಿದರು. ಮೇಖಲ ಶರ್ಮ ವಂದಿಸಿದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಶುಕ್ರವಾರ 16.6.2023

ಚತುರ್ಭಾಷಾ ಸಂಚಿಕೆ ಸಂಚಿಕೆಗಳಿಂದ ವಿದ್ಯಾರ್ಥಿಗಳಿಗೆ ಓದು, ಬರಹದ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ: ಡಾ. ಸಿಪಿಕೆ

'ಮಂದಾರ' ವಾರ್ಷಿಕ ಸಂಚಿಕೆ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಕಾಲೇಜು ವಾರ್ಷಿಕ ಸಂಚಿಕೆಗಳಿಂದ ಸಾಹಿತ್ಯದ ಅನುಸಂಧಾನವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಓದು, ಬರಹದ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ 'ಮಂದಾರ' ವಾರ್ಷಿಕ ಸಂಚಿಕೆಯನ್ನು ಗುರುವಾರ ಬಿಡುಗಡೆಗೊಳಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಸುಂದರವಾದ ಮಂದಾರ ಉತ್ತಮವಾದ ಲೇಖನಗಳನ್ನು ಒಳಗೊಂಡಿದೆ. ಈ ಸಂಚಿಕೆ ಚತುರ್ಭಾಷಾ ಸಂಚಿಕೆಯಾಗಿದೆ. ಇಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೂಡ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ ಎಂದರು.

ಮಂದಾರ ಎಂದರೆ ಸ್ವರ್ಗದ ನಂದನ ವನದ ಹೂ. ಅಲ್ಲದೆ ಸ್ವರ್ಗಕ್ಕೆ ಮಂದಾರ ಎಂಬ ಹೆಸರಿದೆ. ನಾವಿರುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಯಂತೆ



ಪಠ್ಯೇತರ ಚಟುವಟಿಕೆಯು ಅಷ್ಟೇ ಮುಖ್ಯ. ವಿದ್ಯಾರ್ಥಿಗಳು ಮಹಾಪುರುಷರ ಹಾಗೂ ಮಹಾಮಹಿಳೆಯರ ಜೀವನ ಚರಿತ್ರೆಗಳನ್ನು ಓದಬೇಕು. ಆ ಮೂಲಕ ತಮ್ಮ ಜೀವನವನ್ನು ಉದಾತ್ತಗೊಳಿಸಿಕೊಳ್ಳಬೇಕು. ಯುವಜನಾಂಗಕ್ಕೆ ಸ್ವಾಮಿ ವಿವೇಕಾನಂದರಿಗಿಂತ ಮತ್ತೊಂದು ಆದರ್ಶವಿಲ್ಲ ಎಂದರು.

ಅಂತರಂಗದ ಪ್ರತಿನಿಧಿ: ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಮಂದಾರ ಸಂಚಿಕೆ ವಿದ್ಯಾರ್ಥಿಗಳ ಅಂತರಂಗದ ಪ್ರತಿನಿಧಿ. ವಿದ್ಯಾರ್ಥಿಗಳ ಪ್ರತಿಭೆಯನ್ನು ಅನಾವರಣ ಮಾಡಲಿಕ್ಕೆ ಹಾಗೂ ಅವರ ಬರವಣಿಗೆಯ ಅಭಿವ್ಯಕ್ತಿಯನ್ನ ಹೆಚ್ಚಿಸಲು ಮಾದರಿ ಅಧ್ಯಾಪಕರ ಅಗತ್ಯವಿದೆ. ಬರವಣಿಗೆ ಸುಲಭದ ಕೆಲಸವಲ್ಲ ಅದೊಂದು ತಪಸ್ಸು. ಶ್ರದ್ಧೆ, ಭಕ್ತಿ, ಪ್ರೀತಿ, ಬದ್ಧತೆ, ಏಕಾಗ್ರತೆ ಇದ್ದರೆ ಮಾತ್ರ ವಿದ್ಯಾರ್ಥಿಗಳ ಒಳಗಿರುವ ಬೆಳಕು ಹೊರಹೊಮ್ಮಲು ಸಾಧ್ಯ ಎಂದು ಹೇಳಿದರು.

ಕಾಲೇಜಿನ ಸಿಇಒ ಡಾ.ಎಸ್.ಆರ್. ರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ಮಂದಾರ ವಾರ್ಷಿಕ ಸಂಚಿಕೆಯ ಸಂಪಾದಕಿ ಎಂ. ವೀಣಾ ಇದ್ದರು. ಸಿ.ಎಂ. ಕಿರಣ್‌ಕುಮಾರ್ ನಿರೂಪಿಸಿದರು. ಸುಪ್ರೀತ್ ಎಂ. ಭಾರದ್ವಜ್ ಪ್ರಾರ್ಥಿಸಿದರು.

MFGE In the Eyes of the Press.....

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 19 ಜೂನ್ 2023

ಮಹಾಜನ ಕಾಲೇಜಲ್ಲಿ ಮಂದಾರ ಬಿಡುಗಡೆ; ಪಂಪ ಪ್ರಶಸ್ತಿ ಪುರಸ್ಕೃತ ಪ್ರೊ.ಸಿಪಿಕೆ ಅವರಿಗೆ ಸನ್ಮಾನ



ಮೈಸೂರು, ಜೂ.18– ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ನಾಡಿನ ಹಿರಿಯ ವಿದ್ವಾಂಸರು ಹಾಗೂ ಪಂಪ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಸಿ.ಪಿ.ಕೃಷ್ಣಕುಮಾರ್ ಕಾಲೇಜಿನ ವಾರ್ಷಿಕ ಸಂಚಿಕೆ 'ಮಂದಾರ'ವನ್ನು ಲೋಕಾರ್ಪಣೆ ಮಾಡಿದರು. ಇದೇ ವೇಳೆ ಪ್ರೊ. ಸಿ.ಪಿ.ಕೆ ಅವರನ್ನು ಸನ್ಮಾನಿಸಲಾಯಿತು.

ಪ್ರೊ. ಸಿ.ಪಿ.ಕೆ ಅವರು ಮಾತನಾಡುತ್ತಾ, ಈ ಸುಂದರವಾದ 'ಮಂದಾರ' ಉತ್ತಮವಾದ ಲೇಖನಗಳನ್ನು ಒಳಗೊಂಡಿದೆ. ಈ ಸಂಚಿಕೆ ಚತುರ್ಭಾಷಾ ಸಂಚಿಕೆಯಾಗಿದೆ. ಇಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೂಡ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಮಂದಾರ ಎಂದರೆ 'ಸ್ವರ್ಗದ ನಂದನವನದ ಹೂ'. ಅಲ್ಲದೆ, ಸ್ವರ್ಗಕ್ಕೆ ಮಂದಾರ ಎಂಬ ಹೆಸರಿದೆ. ನಾವಿರುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡಿಕೊಳ್ಳಬೇಕು. ಇಂತಹ ವಾರ್ಷಿಕ ಸಂಚಿಕೆಗಳ ಪ್ರಯೋಜನವೆಂದರೆ, ಸಾಹಿತ್ಯದ ಅನುಸಂಧಾನ. ಇದರಿಂದ ವಿದ್ಯಾರ್ಥಿಗಳಿಗೆ ಓದು, ಬರಹದ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಯಂತೆ ಪಠ್ಯೇತರ ಚಟುವಟಿಕೆಯು ಅಷ್ಟೇ ಮುಖ್ಯ ಎಂದರು.

ವಿದ್ಯಾರ್ಥಿಗಳು ಮಹಾಪುರುಷರ ಹಾಗೂ ಮಹಾ ಮಹಿಳೆಯರ ಜೀವನ ಚರಿತ್ರೆಗಳನ್ನು ಓದಬೇಕು. ಆ ಮೂಲಕ ತಮ್ಮ ಜೀವನವನ್ನು ಉದಾತ್ತಗೊಳಿಸಿ ಕೊಳ್ಳಬೇಕು. ಯುವಜನಾಂಗಕ್ಕೆ ಸ್ವಾಮಿ ವಿವೇಕಾನಂದರಿಗಿಂತ ಮತ್ತೊಂದು ಆದರ್ಶವಿಲ್ಲ. ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಮಾತನ್ನು ಉಲ್ಲೇಖಿಸುತ್ತಾ, ಕುವೆಂಪು ಅವರ ವಿಶ್ವ ಮಾನವ ಸಂದೇಶವನ್ನು ಪ್ರತಿಯೊಬ್ಬರು ಅನುಷ್ಠಾನಕ್ಕೆ ತರಬೇಕು ಎಂದರು. 'ನಭಕೇರಿದ ಅಪರಂಜಿ' ಶೀರ್ಷಿಕೆಯಲ್ಲಿ ನ.ಭದ್ರಯ್ಯನವರ ಕುರಿತ ಡಾ. ಎಚ್.ಆರ್. ತಿಮ್ಮೇಗೌಡರು ಬರೆದ ಲೇಖನ ಓದಿದ ಪ್ರೊ. ಸಿ.ಪಿ.ಕೆ ಅವರು ನ.ಭದ್ರಯ್ಯನವರು ತಮಗೆ ಮಾಡಿದ ಸಹಾಯವನ್ನು ಸ್ಮರಿಸಿದರು.

ವೇದಿಕೆಯಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಬ್, ಮಂದಾರ ವಾರ್ಷಿಕ ಸಂಚಿಕೆಯ ಸಂಪಾದಕರಾದ ವೀಣಾ .ಎಂ ಅವರು ಉಪಸ್ಥಿತರಿದ್ದರು.

ಪ್ರತಿನಿಧಿ
...ಇವ ನಮ್ಮವ

ಶುಕ್ರವಾರ
ಜೂನ್ 16, 2023

ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯ

ವಿವೇಕಾನಂದರಿಗಿಂತ ಮತ್ತೊಬ್ಬರು ಆದರ್ಶವಿಲ್ಲ

ಪ್ರತಿನಿಧಿ ವರದಿ ಮೈಸೂರು

ವಿದ್ಯಾರ್ಥಿಗಳು ಮಹಾಪುರುಷರ ಹಾಗೂ ಮಹಾಮಹಿಳೆಯರ ಜೀವನ ಚರಿತ್ರೆಗಳನ್ನು ಓದಬೇಕು. ಆ ಮೂಲಕ ತಮ್ಮ ಜೀವನವನ್ನು ಉದಾತ್ತಗೊಳಿಸಿಕೊಳ್ಳಬೇಕು ಎಂದು ಪದ್ಮಶ್ರೀ ಪುರಸ್ಕೃತ ಸಾಹಿತಿ ಕೃಷ್ಣಕುಮಾರ್ ವಿದ್ಯಾರ್ಥಿಗಳಿಗೆ ತಿಳಿಸಿದರು.

ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ಮಂದಾರ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಸಂಚಿಕೆಯು ಉತ್ತಮವಾದ ಲೇಖನಗಳನ್ನು ಒಳಗೊಂಡಿದೆ. ಈ ಸಂಚಿಕೆ ಚತುರ್ಭಾಷಾ ಸಂಚಿಕೆಯಾಗಿದ್ದು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೂಡ ತಮ್ಮ ಸೃಜನ ಶೀಲತೆಯನ್ನು ಮೆರೆದಿದ್ದಾರೆ. ಮಂದಾರ ಎಂದರೆ ಸ್ವರ್ಗದ ನಂದನವನದ ಹೂ ಅಲ್ಲದೆ ಸ್ವರ್ಗಕ್ಕೆ ಮಂದಾರ ಎಂಬ ಹೆಸರಿದೆ ಎಂದು ತಿಳಿಸಿದರು.

ನಭೂತೋ ಎಪರಂಜಿ ಎಂಬ ಶೀರ್ಷಿಕೆಯಲ್ಲಿ ನ.ಭದ್ರಯ್ಯ ನವರ ಕುರಿತ ಡಾ. ಎಚ್.ಆರ್. ತಿಮ್ಮೇಗೌಡರು ಬರೆದ ಲೇಖನ ಓದಿದ ಪ್ರೊ. ಸಿ.ಪಿ.ಕೆ ಅವರು ನ.ಭದ್ರಯ್ಯ ಅವರು ತಮಗೆ ಮಾಡಿದ ಸಹಾಯವನ್ನು ಸ್ಮರಿಸಿದರು.

ಮಹಾಜನ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಮಂದಾರ ಸಂಚಿಕೆ ವಿದ್ಯಾರ್ಥಿಗಳ ಅಂತರಂಗದ ಪ್ರತಿನಿಧಿ. ಪ್ರೊ.ಸಿ.ಪಿ.ಕೆ.ಅವರು ತುಂಬಿದ ಕೊಡದಂತೆ ನಿರಹಂಕಾರ ಪ್ರವೃತ್ತಿ ಉಳ್ಳವರು. ಜತೆಗೆ ಮಾದರಿ ಶಿಕ್ಷಕರಾಗಿದ್ದಾರೆ. ವಿದ್ಯಾರ್ಥಿಗಳ ಪ್ರತಿಭೆಯನ್ನು ಅನಾವರಣ ಮಾಡಲಿಕ್ಕೆ, ಅವರ ಬರವಣಿಗೆಯ ಅಭಿ ವ್ಯಕ್ತಿಯನ್ನು ಹೆಚ್ಚಿಸಲು ಮಾದರಿ ಅಧ್ಯಾಪಕರ ಅಗತ್ಯವಿದೆ ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ ಮಾತನಾಡಿ, ಗ್ರಾಮೀಣ ಪ್ರತಿಭೆ ಪ್ರೊ.ಸಿಪಿಕೆ ಅವರು ದೊಡ್ಡ ವಿದ್ವಾಂಸರ ಪರಂಪರೆಗೆ ಸೇರಿದವರು. ಕುವೆಂಪು, ಜಿಎಸ್‌ಎಸ್ ಪರಂಪರೆಯನ್ನು ಬಳಸಿಕೊಂಡು ನಡೆನುಡಿಯಲ್ಲಿ ಪರಿಶುದ್ಧತೆ ಉಳಿಸಿಕೊಂಡವರು. ಜಾತ್ಯತೀತ ಮನಸ್ಸು ಹೊಂದಿರುವ ಪ್ರೊ.ಸಿಪಿಕೆ ಅವರು ಹಾಸ್ಯ ಪ್ರಜ್ಞೆಯುಳ್ಳವರು. ಜೊತೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಇವರ ಕೆಲಸ ಅಪಾರ. ಅಲ್ಲದೆ, ಗೋಕಾಕ್ ಚಳವಳಿಯಲ್ಲಿ ಶಾಸ್ತ್ರೀಯ ಭಾಷೆಯ ಸ್ಥಾನಮಾನಕ್ಕಾಗಿ ಮಾಡಿದ ಹೋರಾಟದಲ್ಲಿ ಪ್ರೊ.ಸಿಪಿಕೆ ಅವರು ಪ್ರಮುಖಪಾತ್ರ ವಹಿಸಿದ್ದರು. ಇವರ ಸಾಧನೆಗೆ ಪಂಪ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳು ಸಂದಿವೆ ಎಂದರು.

ಕಾಲೇಜಿನ ಸಿಇಒ ಡಾ.ರಮೇಶ್, ಶೈಕ್ಷಣಿಕ ಡೀನ್ ಡಾ.ಶ್ರೀಧರ, ಮಂದಾರ ವಾರ್ಷಿಕ ಸಂಚಿಕೆಯ ಸಂಪಾದಕ ಎಂ.ವೀಣಾ, ವಿದ್ಯಾರ್ಥಿಗಳಾದ ಸುಪ್ರೀತ್ ಎಂ.ಭಾರದ್ವಜ್ ಇದ್ದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನ ಮಂದಾರ ವಾರ್ಷಿಕ ಸಂಚಿಕೆಯನ್ನು ಪದ್ಮಶ್ರೀ ಪುರಸ್ಕೃತ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಹಾಗೂ ಗಣ್ಯರು ಬಿಡುಗಡೆ ಮಾಡಿದರು.

MFGE In the Eyes of the Press.....

ಮೈಸೂರು ಮಿತ್ರ
ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೋಮವಾರ 5 ಜೂನ್ 2023

ನಾಳೆ ಮಹಾಜನ ಕಾಲೇಜಲ್ಲಿ ರಾಷ್ಟ್ರೀಯ ಯೋಗೋತ್ಸವ



ಮೈಸೂರು, ಜೂ.4 (ಸಿಎನ್)– ವಿಶ್ವ ಯೋಗ ದಿನಾಚರಣೆಯ ಪೂರ್ವಭಾವಿಯಾಗಿ 'ರಾಷ್ಟ್ರೀಯ ಯೋಗೋತ್ಸವ'ವನ್ನು ಜೂನ್ 6ರಂದು ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಆಯುಷ್ ಸಚಿವಾಲಯ, ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಮಹಾಜನ ಶಿಕ್ಷಣ ಸಂಸ್ಥೆ ಹಾಗೂ ಶ್ರೀ ವೇದ ವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಈ ಯೋಗೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್ ಜಯ ಕುಮಾರಿ ಮಾಹಿತಿ ನೀಡಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ 20 ದೇಶಗಳ ಸಾರಥ್ಯವನ್ನು ವಹಿಸಿರುವ ಭಾರತವು ಈ ವರ್ಷದ ಯೋಗೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸಲು ಯೋಜನೆ ರೂಪಿಸಿದೆ. ಪ್ರತಿ ಮನೆ, ಬೀದಿ, ನಗರ, ಶಾಲೆ ಹಾಗೂ ವಿವಿಧ ಸಂಸ್ಥೆಗಳಲ್ಲಿ ಎಲ್ಲರೂ ಯೋಗಾಭ್ಯಾಸ ಮಾಡಲು ಪ್ರೇರಣೆಯಾಗಲೆಂದು ಆಶಿಸಲಾಗಿದೆ ಎಂದರು.

ಮೈಸೂರು ನಗರಪಾಲಿಕೆ ಮಹಾಪೌರರಾದ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮೈಸೂರು-ಕೊಡಗು ಸಂಸದ ಪ್ರತಾಪ್‌ಸಿಂಹ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ. ಇನ್ನು ಯೋಗಾಭ್ಯಾಸದ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ವೇದವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪೈ ತಿಳಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಯೋಗೋತ್ಸವದ ಅಂಗವಾಗಿ 'ಮೈಸೂರಿನ ಯೋಗ ಪರಂಪರೆ ಮತ್ತು ಭಗವದ್ಗೀತೆಯಲ್ಲಿ ಯೋಗ' ಎನ್ನುವ ವಿಷಯಗಳ ಕುರಿತು ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ವಸ್ತು ಪ್ರದರ್ಶನವನ್ನು ಎಕ್ಸೆಪ್ ಸಾಫ್ಟ್ ಟೆಕ್ನಾಲಜೀಸ್‌ನ ಸಿ.ಇ.ಓ ಮತ್ತು ಸಂಸ್ಥಾಪಕ ಡಿ.ಸುಧನ್ವ ಉದ್ಘಾಟಿಸಲಿದ್ದಾರೆ. ಜೊತೆಗೆ 'ಶಿಕ್ಷಣದಲ್ಲಿ ಯೋಗದ ಮಹತ್ವ' ಕುರಿತು ಉಪನ್ಯಾಸ ಮತ್ತು ಸಂವಾದ ಆಯೋಜಿಸಲಾಗಿದೆ. ಇನ್ನು ಯೋಗದ ಬಗ್ಗೆ ವಿದ್ಯಾರ್ಥಿಗಳಿಗೆ ಸ್ವಾಮಿ ಮಹಮೇದಾನಂದಜೀ ಮಹಾರಾಜ್ ಉಪನ್ಯಾಸ ನೀಡಿದರೆ, ವಿದ್ಯಾರ್ಥಿಗಳಿಗೆ ಓದಿನಲ್ಲಿ ಎದುರಾಗುವ ಸವಾಲುಗಳಿಗೆ ಯೋಗೋಪಾಯಗಳ ಕುರಿತು ಯೋಗಾಚಾರ್ಯ ಡಾ.ಪಿ.ಎನ್. ಗಣೇಶ್ ಕುಮಾರ್ ಉಪನ್ಯಾಸ ನೀಡಲಿದ್ದಾರೆ ಎಂದು ತಿಳಿಸಿದರು. ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್ ಜಯ ಕುಮಾರಿ, ಮಹಾಜನ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ವೇದ ವ್ಯಾಸ ಯೋಗ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ.ಕೆ.ರಾಘವೇಂದ್ರ ಪೈ, ಕಾರ್ಯಕ್ರಮ ಸಂಚಾಲಕ ಡಾ.ಹೆಚ್. ಆರ್‌ತಿಮ್ಮೇಗೌಡ, ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಇದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ
ಮಂಗಳವಾರ 27.6.2023

ಕವಿಮಾತು ಮೈಸೂರು ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕ ಡಾ.ಸಿ. ವೆಂಕಟೇಶ್

ದೈಹಿಕ, ಮಾನಸಿಕ ಸ್ವಾಸ್ಥ್ಯ ಕಾಪಾಡಲು ಕ್ರೀಡೆ ಹೆಚ್ಚು ಸಹಕಾರಿ

• ಕನ್ನಡಪ್ರಭ ವಾರ್ತೆ ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನ ವಾರದ ಸಮಾವೇಶದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕರಾಗಿ ನೇಮಕಗೊಂಡ ಡಾ.ಸಿ. ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಅವರು, ಕಲೆ, ಸಾಹಿತ್ಯ, ಕ್ರೀಡೆ, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಮೊದಲಾದ ಘಟಕಗಳಲ್ಲಿ ಆಂತರ ಕಾಲೇಜು ಹಾಗೂ ವಿಶ್ವವಿದ್ಯಾನಿಲಯ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಪ್ರಶಂಸಿಸಿದರು. ಸಾಧಕ ಅಧ್ಯಾಪಕರುಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳಿಗೆ ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ಹೆಚ್ಚಿನ ಉತ್ತೇಜನ ನೀಡುತ್ತಾ ಬಂದಿರುವ ಆಡಳಿತ ಮಂಡಳಿ,



ಪ್ರಾಂಶುಪಾಲರು ಹಾಗೂ ಅಧ್ಯಾಪಕರ ಪರಿಶ್ರಮವನ್ನು ಶ್ಲಾಘಿಸಿದರು.

ಕಾಲೇಜಿನ ವಿದ್ಯಾರ್ಥಿಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯುನ್ನತ ಸಾಧನೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಈಗಿನ ಬಹುತೇಕ ಶಾಲಾ ಕಾಲೇಜುಗಳಲ್ಲಿ ಆಟದ ಮೈದಾನಗಳೇ ಕಡಿಮೆಯಾಗಿ ಮಕ್ಕಳಲ್ಲಿನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಕುಂದುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಮೈಸೂರು ವಿವಿ ಆಹಾರ ಮತ್ತು ಪೌಷ್ಟಿಕಾಂಶ ವಿಭಾಗದ ಪ್ರೊ. ವೀಣಾ ಮಾತನಾಡಿ, ಇತ್ತೀಚೆಗೆ ವಿದ್ಯಾರ್ಥಿಗಳು ಜಂಕ್‌ಫುಡ್ ಸೇವನೆಯಿಂದ ನಾನಾ ವಿಧವಾದ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಉತ್ತಮ ಪೌಷ್ಟಿಕತೆ ಇರುವ ಆಹಾರವನ್ನು ಸೇವಿಸಬೇಕು. ಬೇಕರಿ ತಿಂಡಿಗಳಿಂದ ದೂರವಿರಬೇಕು ಎಂದರು.

ಮೈಸೂರು ವಿವಿಯ ಆಹಾರ ಮತ್ತು ಪೌಷ್ಟಿಕಾಂಶ ವಿಭಾಗದ ವಿದ್ಯಾರ್ಥಿಗಳು ದೈಹಿಕ ಮತ್ತು ಮಾನಸಿಕ ಆರೋಗ್ಯ ಕುರಿತು ಎಚ್ಚರಿಸುವ ಕಿರುನಾಟಕ ಪ್ರದರ್ಶಿಸಿದರು.

ಕಾಲೇಜಿನ ವಾರಪತ್ರಿಕೆ ಆಚ್ಚೀವರ್, ಇತಿಹಾಸ ವಿಭಾಗದ ಮಾಸ ಪತ್ರಿಕೆ ಕದಂಬ ಹಾಗೂ ಅರ್ಥಶಾಸ್ತ್ರ ವಿಭಾಗದ ಮಾಸ ಪತ್ರಿಕೆ ಕೌಟಲ್ಯ ಪತ್ರಿಕೆಗಳನ್ನು ಬಿಡುಗಡೆ ಮಾಡಲಾಯಿತು.

ಸಮಾವೇಶದಲ್ಲಿ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಮೈಸೂರು ವಿವಿ ಆಹಾರ ಮತ್ತು ಪೌಷ್ಟಿಕಾಂಶ ವಿಭಾಗದ ಡಾ. ಕವಿತಾ, ಕನ್ನಡ ವಿಭಾಗ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್.ಎನ್. ಭಾಸ್ಕರ್, ಮಧುಸೂಧನ್, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಇದ್ದರು.

ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನೀಲ್ ನಿರೂಪಿಸಿದರು. ನಾಡಗೀತೆಯೊಂದಿಗೆ ಆರಂಭವಾದ ಸಮಾವೇಶ ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಯಿತು.

ಅಂಚೋಲನ
ದಿನ ಪತ್ರಿಕೆ

ಮಂಗಳವಾರ, 27 ಜೂನ್ 2023

ಕ್ರಿಕೆಟ್ ಪಂದ್ಯಾವಳಿಗೆ ಜೆಪಿ ಚಾಲನೆ

ಮೈಸೂರು: ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವದಲ್ಲೇ ಭಾರತ ದೇಶವು ಆರ್ಥಿಕವಾಗಿ ಐದನೇ ಸ್ಥಾನದಲ್ಲಿರುವ ಸಂದರ್ಭದಲ್ಲಿ ಕ್ರೀಡಾ ಕ್ಷೇತ್ರದಲ್ಲೂ ಭಾರತ ಮುಂದುವರಿಯಬೇಕು ಎಂದು ಬಿಜೆಪಿ ಮುಖಂಡ ಹಾಗೂ ಚಲನಚಿತ್ರ ನಾಯಕ ನಟ ಎಸ್.ಜಯಪ್ರಕಾಶ್(ಜೆಪಿ) ಕ್ರೀಡಾಪಟುಗಳಿಗೆ ಎಂದು ಕರೆ ನೀಡಿದರು.

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಪಟುಗಳು ಪರಿಶ್ರಮ ಪಡಬೇಕು. ಸತತ ಅಭ್ಯಾಸದಲ್ಲಿ ತೊಡಗಬೇಕು ಎಂದು ಹೇಳಿದರು.

ಮಹಾಜನ ಕಾಲೇಜಿನಿಂದ ಹೆಚ್ಚು ಹೆಚ್ಚು ಕ್ರೀಡಾಪಟುಗಳು ರಾಜ್ಯದ ತಂಡಗಳಿಗೆ, ದೇಶದ ತಂಡಗಳಿಗೆ ಆಯ್ಕೆಯಾಗಲು ಪರಿಶ್ರಮ ಪಡಬೇಕು ಎಂದು ತಿಳಿಸಿದರು.



ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಡೀನ್ ಶ್ರೀಧರ್, ಡಾ.ಎಚ್. ಆರ್.ತಿಮ್ಮೇಗೌಡ, ದೈಹಿಕ ಶಿಕ್ಷಣ ಶಿಕ್ಷಕ ಭಾಸ್ಕರ್ ಮತ್ತು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಮೇಜರ್ ನಿಖಿಲ್, ಚಲನಚಿತ್ರ ನಿರ್ಮಾಪಕ ಚೇತನ್ ರಮೇಶ್, ವಿದ್ಯಾರ್ಥಿ ಮುಖಂಡರಾದ ನವೀನ್, ರೂಪ, ಸುಹಾಸ್, ನಂದಿನಿ, ನಿತಿನ್, ಹೇಮಂತ್, ಕಿರಣ್ ಗೌಡ ಭಾಗವಹಿಸಿದ್ದರು.

MFGE In the Eyes of the Press.....

ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಬುಧವಾರ 28.6.2023

ಮಹಾಜನ ಕಾಲೇಜಿನಲ್ಲಿ ಕ್ರಿಕೆಟ್ ಪಂದ್ಯಾವಳಿ ಆರಂಭ

ಮೈಸೂರು: ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ವಿಭಾಗ ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಕ್ರಿಕೆಟ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿತ್ತು. ಈ ಪಂದ್ಯಾವಳಿಯನ್ನು ಉದ್ಘಾಟಿಸಿದ ಬಿಜೆಪಿ ಮುಖಂಡ ಹಾಗೂ ನಟ ಎಸ್. ಜಯಪ್ರಕಾಶ್ ಮಾತನಾಡಿ, ಕ್ರೀಡಾಪಟುಗಳು ಪರಿಶ್ರಮ ಪಡಬೇಕು. ಸತತ ಅಭ್ಯಾಸದಲ್ಲಿ ತೊಡಗಬೇಕು ಎಂದು ಹೇಳಿದರು. ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿದ್ದರು. ಡೀನ್ ಡಾ.ಎಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್. ಆರ್. ತಿಮ್ಮೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಚ್. ಎನ್. ಭಾಸ್ಕರ್, ವಾಣಿಜ್ಯ ವಿಭಾಗದ ಮುಖ್ಯಸ್ಥ ಬಿ.ಆರ್. ನಿಖಿಲ್, ನಿರ್ಮಾಪಕ ಚೇತನ್ ರಮೇಶ್ ಇತರರು ಇದ್ದರು.



ಕನ್ನಡಪ್ರಭ
ನೇರ.ದಿಟ್ಟ.ನಿರಂತರ

ಭಾನುವಾರ 4.6.2023



ಮಹಾಜನ ಕಾಲೇಜಿಗೆ ಸಮಗ್ರ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಅಮೃತ ವಿಶ್ವವಿದ್ಯಾಪೀಠಂ ಆಯೋಜಿಸಿದ್ದ ಸದ್ಗಮಯ ರಾಜ್ಯಮಟ್ಟದ ಮಲ್ಟಿಫೆಸ್ಟ್‌ನಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ, ನಿರ್ವಹಣಾಶಾಸ್ತ್ರ, ಮಾನವಿಕ ವಿಭಾಗ, ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಸತತವಾಗಿ 2ನೇ ಬಾರಿಯೂ ಸಮಗ್ರ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಮಹಾಜನ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್ ಅಭಿನಂದಿಸಿದರು. ಕಾಲೇಜು ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ, ಶೈಕ್ಷಣಿಕ ಡೀನ್ ಡಾ.ಎಚ್. ಶ್ರೀಧರ, ವಿವಿಧ ವಿಭಾಗಗಳ ಮುಖ್ಯಸ್ಥರು ಮತ್ತು ಸಂಚಾಲಕರು ಇದ್ದರು.

MFGE In the Eyes of the Press.....